ಶನಿವಾರ, ಮೇ 18, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಲನಚಿತ್ರೋತ್ಸವ
ಫ್ರಾನ್ಸ್‌ನಲ್ಲಿ ಶುಕ್ರವಾರ ನಡೆದ 77ನೇ ಕಾನ್ ಚಲನಚಿತ್ರೋತ್ಸವದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಐಶ್ವರ್ಯಾ ರೈ ಬಚ್ಚನ್

ಮಣ್ಣಿನ ಮಗ, ನೀರಾವರಿ ಹರಿಕಾರ
ಮಾಜಿ ಪ್ರಧಾನ ಮಂತ್ರಿ ಸನ್ಮಾನ್ಯ
ಶ್ರೀ ಹೆಚ್. ಡಿ. ದೇವೇಗೌಡರಿಗೆ
ಹುಟ್ಟುಹಬ್ಬದ ಶುಭಾಷಯಗಳು
ಕರ್ನಾಟಕದ ನಾಡ ದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಮತ್ತು ಅವರು ನಂಬಿರುವ ದೇವರ ಹಾಗೂ ಕರ್ನಾಟಕ ಜನತೆಯ ಆಶೀರ್ವಾದದಿಂದ ಶತಾಯುಷಿಯಾಗಿ ಈ ದೇಶದ ಮತ್ತು ನಾಡಿನ ಒಳಿತಿಗಾಗಿ ಇನ್ನು ಹೆಚ್ಚಿನ ಮಾರ್ಗದರ್ಶನ ನೀಡಲು ಈ ದಂಪತಿಗಳು ಶತಾಯುಷಿಗಳಾಗಿ ಬಾಳಿ ಬಧುಕಬೇಕೆಂದು ಕರ್ನಾಟಕದ ಜನತೆ ಶುಭಕೋರೋಣ
92ನೇ ಜನ್ಮದಿನದ ಶುಭಾಷಯಗಳು
ದಿನಾಂಕ : 18-05-2024 ಶನಿವಾರ
ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್.
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶುಭಕೋರುವವರು :
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿ.ಬಿ.ಎಂ.ಪಿ, ಮಾಜಿ ಗ್ರಾ. ಪಂ. ಮತ್ತು
ತಾ॥ ಪಂ. ಸದಸ್ಯರು ಉತ್ತರಹಳ್ಳಿ
ವಿಧಾನ ಸಭಾ ಕ್ಷೇತ್ರ
ಸನ್ಮಾನ್ಯ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೇಶ ಕಂಡ ಪ್ರಬುದ್ಧ ಮತ್ತು ಮುತ್ಸದ್ಧಿ ರಾಜಕಾರಣಿ ಸ್ವಾತಂತ್ರ್ಯ ಮತ್ತು ಸಮಾನತೆಯ ಹರಿಕಾರ 1975-76ರ ತುರ್ತು ಪರಿಸ್ಥಿತಿ ದಿನಗಳಲ್ಲಿ ಜೈಲು ವಾಸ ಅನುಭವಿಸಿದ ಧೀಮಂತ ನಾಯಕ ಮೇ 18, 1933ರಂದು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಗ್ರಾಮದ ಸರಳ ಕೃಷಿಕ ಕುಟುಂಬದ ಶ್ರೀ ದೊಡ್ಡೇಗೌಡ ಮತ್ತು ಶ್ರೀಮತಿ ದೇವಮ್ಮ ಪುತ್ರರಾಗಿ ಶ್ರೀದೇವೇಗೌಡರ ಜನನ ಶ್ರೀಮತಿ ಚೆನ್ನಮ್ಮ ಅವರೊಂದಿಗೆ ವಿವಾಹ ದೇವೇಗೌಡ ದಂಪತಿಗೆ ನಾಲ್ವರು ಪುತ್ರರು ಮತ್ತು ಇಬ್ಬರು ಪುತ್ರಿಯರು.
ಸಿವಿಲ್ ಎಂಜಿನಿಯರಿಂದ ಡಿಪ್ಲೊಮಾ ಶಿಕ್ಷಣ 20 ವರ್ಷದವರಿದ್ದಾಗಲೇ ಸಕ್ರಿಯ ರಾಜಕಾರಣಕ್ಕೆ ಧುಮುಕಿದ ಯುವ ದೇವೇಗೌಡರು ಕರ್ನಾಟಕ ವಿಧಾನ ಸಭೆಗೆ ಕೇವಲ 28 ವರ್ಷಗಳಿದ್ದಾಗ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು 1962ರಲ್ಲಿ ರಾಜ್ಯ ವಿಧಾನಸಭೆಗೆ ಪ್ರಥಮ ಬಾರಿಗೆ ಶಾಸಕರಾಗಿ ಪ್ರವೇಶದ ರೈತ ನಾಯಕ ಮಾರ್ಚ್ 1972 ರಿಂದ ಮಾರ್ಚ್ 1976 ಹಾಗೂ ನವೆಂಬರ್ 1976 ರಿಂದ ಡಿಸೆಂಬರ್ 1977ರವರೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶ್ರೀಯುತ ಹೆಚ್.ಡಿ. ದೇವೇಗೌಡರು 1994 ರಿಂದ 1996 ರವರೆಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಹಾಗೂ ಜೂನ್ 1996 ರಿಂದ ಏಪ್ರಿಲ್ 1997 ರವರೆಗೆ ಭಾರತದ ದೇಶದ 11ನೇ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.
ಯುನೈಟೆಡ್ ಫ್ರಂಟ್‌ನ ಸ್ಟೀರಿಂಗ್ ಕಮಿಟಿಯ ಅಧ್ಯಕ್ಷರಾಗಿದ್ದರು ದೆಹಲಿ ಮೆಟ್ರೋ ಯೋಜನೆಯ ಕೀರ್ತಿ ಸನ್ಮಾನ್ಯ ಹೆಚ್.ಡಿ. ದೇವೇಗೌಡರಿಗೆ ಸಲ್ಲುತ್ತದೆ. ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಸುಧಾರಕರು ಹಾಗೂ ಭಾರತದ ಭವ್ಯ ಸಂಸ್ಕತಿ ಪರಂಪರೆಯ ಪ್ರಶಂಸಕರು ಮಧ್ಯಮ ವರ್ಗದ ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದ ಗೌಡರಿಗೆ ರೈತನ ಬದುಕಿನ ಕಷ್ಟಗಳು ಚೆನ್ನಾಗಿ ತಿಳಿದಿದ್ದವು.
ಬಡ ರೈತರು, ಸೌಲಭ್ಯ ವಂಚಿತರು ಹಾಗೂ ಸಮಾಜದ ದುರ್ಬಲ ವರ್ಗಗಳ ಒಳಿತಿಗಾಗಿ ಶ್ರಮಿಸಿದ್ದಾರೆ. ಸಮಾಜದಲ್ಲಿನ ಅಸಮಾನತೆಗಳನ್ನು ಸರಿಪಡಿಸುವ ಆಶಯದ ಕನಸು ಕಾಣುತ್ತಿರುವ ಹಿರಿಯ ರಾಜಕಾರಣಿ ಕೇವಲ 28 ವರ್ಷಗಳಿದ್ದಾಗ ಯುವ ದೇವೇಗೌಡರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿದರು ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳು ಅನುಷ್ಠಾನಗೊಳಿಸಿದ ಕೀರ್ತಿ ರೈತರ ಬವಣೆ ಮತ್ತು ಸಂಕಷ್ಟಗಳ ಮೇಲೆ ಬೆಳಕು ಚೆಲ್ಲಿ ಕೃಷಿಕರ ದನಿಯಾಗಿರುವ ಹೆಚ್.ಡಿ. ದೇವೇಗೌಡರು
ರಾಜ್ಯ ಮಟ್ಟದಲ್ಲಿ ಎರಡು ಬಾರಿ ಜನತಾ ಪಕ್ಷದ ಅಧ್ಯಕ್ಷರು ಹಾಗೂ 1994ರಲ್ಲಿ ರಾಜ್ಯ ಜನತಾದಳದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1994ರಲ್ಲಿ ಜನತಾ ದಳ ಹುಟ್ಟುಹಾಕಿ ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದರು. ಡಿಸೆಂಬರ್ 11, 1994ರಂದು ಜನತಾದಳ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮೇ 30, 1996 ರಂದು ಕರ್ನಾಟಕದ 14ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭಾರಿ ಮತಗಳ ಅಂತರದಿಂದ ಗೆಲುವು ಹುಬ್ಬಳ್ಳಿಯ ಈದ್ಗಾ ಮೈದಾನ ವಿವಾದಕ್ಕೆ ಶಾಂತಿಯುತ ಪರಿಹಾರ ಕಂಡುಕೊಂಡ ಮುತ್ಸದ್ಧಿ ರಾಜಕಾರಣಿ ಮೇ 30, 1996 ರಂದು ಕರ್ನಾಟಕ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು
ಭಾರತದ 11ನೇ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ರಾಷ್ಟದ ಪ್ರಗತಿಗೆ ದೇವೇಗೌಡರ ಅನುಕರಣೀಯ ಕೊಡುಗೆಯನ್ನು ಭಾರತವು ಬಹಳ ಚೆನ್ನಾಗಿ ಗೌರವಿಸುತ್ತದೆ. ವೈವಿಧ್ಯಮಯ ನೀತಿ ವಿಷಯಗಳ ಕುರಿತು ಅವರ ಚಿಂತನೆಗಳು ಒಳನೋಟವುಳ್ಳವು ಮತ್ತು ಭವಿಷ್ಯದವುಗಳಾಗಿವೆ'.
ಪ್ರಧಾನ ಮಂತ್ರಿ ನರೇಂದ್ರ ಮೋದಿ

ಶನಿವಾರ, ಮೇ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 138 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ಮಳೆಗಾಲಕೆ ಈ ಛತ್ರಿ ಭಿನ್ನವಾಗೈತ್ರಿ!!

ಆಳ-ಅಗಲ ಭಾರತದ ಮಳೆ ಮಾರುತಗಳ ಪ್ರಭಾವಿಸುವ ಪೆಸಿಫಿಕ್ ಸಾಗರದ ಆಗುಹೋಗುಗಳು

'ಕೊಲೆ ಹೆಚ್ಚಳ: ವರದಿಗೆ ಸೂಚನೆ' 4

ಶಾಸಕ ರೇವಣ್ಣ ಜಾಮೀನು ಆದೇಶ 20ಕ್ಕೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,917	22,466	₹75,500 (ಬೆಂಗಳೂರು)	₹88,500 (ಬೆಂಗಳೂರು)	83.33

ದೆಹಲಿ ಅಬಕಾರಿ ನೀತಿಯ ಹಣ ಅಕ್ರಮ ವರ್ಗಾವಣೆ ಪ್ರಕರಣ: ಇ.ಡಿಯಿಂದ ಆರೋಪ ಪಟ್ಟಿ

ಆರೋಪಿಗಳಾಗಿ ಕೇಜ್ರಿವಾಲ್, ಎಎಪಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಅವರ ಆಮ್ ಆದ್ಮಿ ಪಕ್ಷವನ್ನು (ಎಎಪಿ) ಆರೋಪಿಗಳಾಗಿ ಹೆಸರಿಸಿ ಜಾರಿ ನಿರ್ದೇಶನಾಲಯವು (ಇ.ಡಿ) ಶುಕ್ರವಾರ ದೋಷಾರೋಪ ಪಟ್ಟಿಯನ್ನು ದಾಖಲಿಸಿತು.

ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಶೇಷ ಕೋರ್ಟ್‌ಗೆ ಇ.ಡಿ. 200 ಪುಟಗಳ ಹೊಸ ದೋಷಾರೋಪ ಪಟ್ಟಿ ದಾಖಲಿಸಿತು. ಈ ಮೂಲಕ ಇದೇ ಮೊದಲಿಗೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಹಾಲಿ ಮುಖ್ಯಮಂತ್ರಿ, ರಾಜಕೀಯ ಪಕ್ಷವೊಂದು ಆರೋಪಿಗಳಾದಂತಾಗಿದೆ.

ಪ್ರಕರಣದ ವಿಚಾರಣೆಯನ್ನು ನಡೆಸುತ್ತಿರುವ ವಿಶೇಷ ಕೋರ್ಟ್‌ನ ನ್ಯಾಯಾಧೀಶೆಯಾಗಿರುವ ಕಾವೇರಿ ಭವೇಜಾ ಅವರು ಬರುವ ದಿನಗಳಲ್ಲಿ ಹೊಸ ದೋಷಾರೋಪ ಪಟ್ಟಿಯನ್ನು ಪರಿಗಣಿಸುವ ಸಾಧ್ಯತೆಗಳಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ಕಾಯ್ದೆ ಅನ್ವಯ (ಪಿಎಂಎಲ್‌ಎ) ಆರೋಪಿಗಳ ವಿರುದ್ಧ ಪ್ರಕರಣವು ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ. ಎಎಪಿ ಸಂಚಾಲಕರೂ ಆದ, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಇ.ಡಿ ಮಾರ್ಚ್ 21ರಂದು ಬಂಧಿಸಿತ್ತು. ನ್ಯಾಯಾಂಗ ಬಂಧನದಲ್ಲಿದ್ದ ಅವರು, ಸದ್ಯ ಮಧ್ಯಂತರ ಜಾಮೀನು ಆಧಾರದಲ್ಲಿ ಬಿಡುಗಡೆಯಾಗಿದ್ದಾರೆ.

ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಅವರನ್ನು ಇದುವರೆಗೂ 'ಹಗರಣದ ರೂವಾರಿ, ಪ್ರಮುಖ ಸಂಚುಕೋರ' ಎಂದೇ ಇ.ಡಿ ಗುರುತಿಸುತ್ತಿತ್ತು. ದೆಹಲಿ ಸರ್ಕಾರ, ಸಚಿವರು, ಎಎಪಿ ನಾಯಕರ ಜೊತೆಗೂಡಿ ಸಂಚು ನಡೆಸಿದ್ದಾರೆ ಎಂದು ಹೇಳಲಾಗುತ್ತಿತ್ತು.

'ಈಗ ರದ್ದುಗೊಂಡಿರುವ, ದೆಹಲಿ ಅಬಕಾರಿ ನೀತಿಯನ್ನು 2021–22ನೇ ಸಾಲಿಗಾಗಿ ರೂಪಿಸುವಲ್ಲಿ ಕೇಜ್ರಿವಾಲ್ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಸುಪ್ರೀಂ ಕೋರ್ಟ್‌ಗೆ ಗುರುವಾರ ತಿಳಿಸಿದ್ದರು.

'ಕೇಜ್ರಿವಾಲ್ ಅವರು ಸಪ್ತತಾರಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಅದರ ವೆಚ್ಚವನ್ನು ಈ ಪ್ರಕರಣದ ಆರೋಪಿಯೊಬ್ಬರು ಭರಿಸಿದ್ದಾರೆ. ಈ ಬಗ್ಗೆ ಸಾಕ್ಷ್ಯ ಸಂಗ್ರಹಿಸಲಾಗಿದೆ. ಪಕ್ಷದ ರಾಷ್ಟ್ರೀಯ ಸಂಚಾಲಕರಾಗಿ ಕೇಜ್ರಿವಾಲ್ ಈ ಹಗರಣದ ಹೊಣೆಗಾರರು' ಎಂದು ತಿಳಿಸಿದರು.

ಜಾರಿ ನಿರ್ದೇಶನಾಲಯವು ಈ ಹಿಂದೆ, 'ಎಎಪಿ ಒಂದು ರಾಜಕೀಯ ಪಕ್ಷವಾಗಿ, ಜನಪ್ರಾತಿನಿಧ್ಯ ಕಾಯ್ದೆಯನುಸಾರ ಹಲವು ವ್ಯಕ್ತಿಗಳ ಸಮೂಹ ವಾಗಿದೆ. ಇದನ್ನು, ಪಿಎಂಎಲ್‌ಎ ಕಾಯ್ದೆಯ ಸೆಕ್ಷನ್ 70ರ ಅನುಸಾರ 'ಕಂಪನಿ' ಎಂದು ವರ್ಗೀಕರಿಸಬಹುದು ಎಂದು ವ್ಯಾಖ್ಯಾನಿಸಿತ್ತು.

'ಕೇಜ್ರಿವಾಲ್ ಅವರು ಈ 'ಕಂಪನಿ'ಯ ಉಸ್ತುವಾರಿಯಾಗಿದ್ದು, ಅಕ್ರಮದ ಹೊಣೆಗಾರರಾಗಿದ್ದಾರೆ. ಅವರು ಮತ್ತು ಅವರ ಪಕ್ಷವನ್ನು ದೋಷಿಗಳಾಗಿ ಪರಿಗಣಿಸಬೇಕು. ಕಾನೂನಿನ ಅನುಸಾರ ಶಿಕ್ಷೆಗೊಳಪಡಲು ಅವರು ಅರ್ಹರು' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಪ್ರತಿಪಾದಿಸಿದರು.

ದೆಹಲಿ ಸರ್ಕಾರಕ್ಕಾಗಿ 2021–22ರಲ್ಲಿ ರೂಪಿಸಲಾಗಿದ್ದ ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ತದನಂತರ, ಉಲ್ಲೇಖಿತ ಅಬಕಾರಿ ನೀತಿಯನ್ನು ರದ್ದುಪಡಿಸಲಾಗಿತ್ತು.

ಬಂಧನ ಪ್ರಶ್ನಿಸಿದ್ದ ಅರ್ಜಿ: ತೀರ್ಪು ಕಾಯ್ದಿರಿಸಿದ ಪೀಠ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) ತಮ್ಮನ್ನು ಬಂಧಿಸಿದ್ದ ಕ್ರಮವನ್ನು ಪ್ರಶ್ನಿಸಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ. ಅಲ್ಲದೆ, ಸಾಮಾನ್ಯ ಜಾಮೀನು ಕೋರಿ ಅರ್ಜಿದಾರರು ಕೆಳಹಂತದ ಕೋರ್ಟ್‌ಗೆ ಅರ್ಜಿಸಲ್ಲಿಸಬಹುದು ಎಂದೂ ಹೇಳಿದೆ.

ಕೇಜ್ರಿವಾಲ್ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಹಾಗೂ ಇ.ಡಿ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ವಾದವನ್ನು ಮಂಡಿಸಿದರು.

'ವಾದ ಆಲಿಸಿದ್ದು, ತೀರ್ಪು ಕಾಯ್ದಿರಿಸಿದೆ. ಕಾಯ್ದೆ ಪ್ರಕಾರ ಜಾಮೀನಿಗಾಗಿ ಅರ್ಜಿದಾರರು ವಿಚಾರಣಾ ಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ದೀಪಂಕರ್ ದತ್ತಾ ಅವರಿದ್ದ ಪೀಠ ತಿಳಿಸಿತು. ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿ ತಿರಸ್ಕರಿಸಲಾಗಿದ್ದ ಅ. 30, 2023ರ ನಂತರ ದಾಖಲಿಸಿದ್ದ ಸಾಕ್ಷಿಗಳು, ಆರೋಪಿಗಳ ಹೇಳಿಕೆಗಳಿಗೆ ಸಂಬಂಧಿಸಿದ ಕಡತಗಳನ್ನು ಪೀಠವು ಪರಿಶೀಲಿಸಿತು.

8ನೇ ಆರೋಪ ಪಟ್ಟಿ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ದಾಖಲಿಸುತ್ತಿರುವ 8ನೇ ಆರೋಪಪಟ್ಟಿ ಇದಾಗಿದೆ. ಇ.ಡಿ ಇದೇ ಮಾದರಿ ದೂರನ್ನು ಕಳೆದ ವಾರ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ವಿರುದ್ಧವೂ ದಾಖಲಿಸಿತ್ತು. ಈವರೆಗೆ ಒಟ್ಟು 18 ಜನರನ್ನು ಬಂಧಿಸಿದೆ. ದೆಹಲಿಯ ಉಪಮುಖ್ಯಮಂತ್ರಿಯಾಗಿದ್ದ ಮನೀಶ್ ಸಿಸೋಡಿಯಾ, ಸಂಸದ ಸಂಜಯ ಸಿಂಗ್ ಬಂಧಿತರಲ್ಲಿ ಸೇರಿದ್ದಾರೆ.

ಅಯೋಧ್ಯೆ: ಭಕ್ತರ ಸಂಖ್ಯೆ ವಿರಳ

• ಸಂಜಯ್ ಪಾಂಡೆ

ಅಯೋಧ್ಯೆ: ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯಿಂದಾಗಿ ದೇಶದ ಗಮನಸೆಳೆದಿದ್ದ, ಉತ್ತರ ಪ್ರದೇಶದ ಧಾರ್ಮಿಕ ನಗರ ಅಯೋಧ್ಯೆಯಲ್ಲಿನ ಸ್ಥಿತಿ ಈಗ ಬದಲಾಗಿದೆ. ಅಸಂಖ್ಯ ಭಕ್ತಗಣವನ್ನು ಸೂಜಿಗಲ್ಲಿನಂತೆ ಸೆಳೆದಿದ್ದ ನಗರ ಈಗ ಭಣಗುಡುತ್ತಿದೆ.

ಅಯೋಧ್ಯೆ ನಗರದ ರಸ್ತೆಗಳು ನಿರ್ಜನವಾಗಿವೆ. ಮುಖ್ಯವಾಗಿ ಹಗಲು ಹೊತ್ತಿನಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ಇದೆ. ಜನರು ಹೊರಗೆ ಬರಲಾಗದಷ್ಟು ಬಿಸಿಲಿನ ಪ್ರಖರತೆಯಿದೆ. ರಾಮಮಂದಿರದ ಆಸುಪಾಸಿನಲ್ಲಿ ಬೆರಳೆಣಿಕೆಯಷ್ಟೇ ಜನರು ಕಾಣಸಿಗುತ್ತಾರೆ.

ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದಲ್ಲಿ ಪ್ರಾಣಪ್ರತಿಷ್ಠಾಪನೆ ನಡೆದ ಸಂದರ್ಭದಲ್ಲಿ ದೇಶದ ವಿವಿಧೆಡೆಯಿಂದ ಲಕ್ಷಾಂತರ ಜನರನ್ನು ಆಕರ್ಷಿಸಿದ್ದು ಇದೇ ಸ್ಥಳವೇ ಎಂಬ ಅನುಮಾನ ಮೂಡಿಸುವ ಸ್ಥಿತಿ ಪ್ರಸ್ತುತ ಈ ನಗರದಲ್ಲಿದೆ.

ಈ ನಾಲ್ಕು ತಿಂಗಳಲ್ಲಿ ಪ್ರವಾಸಿಗರ ಸಂಖ್ಯೆಯು ಗಣನೀಯವಾಗಿ ಇಳಿಮುಖವಾದಂತೆ ಅಯೋಧ್ಯೆಗೆ ಸಂಪರ್ಕ ಕಲ್ಪಿಸಲು ಆರಂಭಿಸಿದ್ದ ವಿಮಾನಗಳ ಸಂಖ್ಯೆಯೂ ಕನಿಷ್ಠ ಶೇ 50ರಷ್ಟು ತಗ್ಗಿದೆ.

ಪ್ರಾಣಪ್ರತಿಷ್ಠಾಪನೆ ಸಂದರ್ಭದಲ್ಲಿ ಸೇರಿದ್ದ ಜನಸಮೂಹ, ಪ್ರಧಾನಿ ಸೇರಿದಂತೆ ಪ್ರಮುಖ ರಾಜಕಾರಣಿಗಳ ಭಾಷಣದಲ್ಲಿ ರಾಮಮಂದಿರದ ಉಲ್ಲೇಖವನ್ನು ಗಮನಿಸಿದ್ದ ಪ್ರತಿಯೊಬ್ಬರು, ಅಯೋಧ್ಯೆ ಒಳಗೊಂಡಿರುವ ಫೈಜಾಬಾದ್ ಲೋಕಸಭೆ ಕ್ಷೇತ್ರದ ಚುನಾವಣೆ ಮೇಲೆ ಪರಿಣಾಮ ಬೀರಬಹುದು ಎಂದೇ ಭಾವಿಸಿದ್ದರು.

ಸರ್ಕಾರವು ಫೈಜಾಬಾದ್ ಜಿಲ್ಲೆಗೆ ಅಯೋಧ್ಯೆ ಎಂದು ಮರುನಾಮಕರಣ ಮಾಡಿತ್ತು. ಆದರೆ, ಚುನಾವಣಾ ಆಯೋಗದ ದಾಖಲೆಗಳಲ್ಲಿ ಜಿಲ್ಲೆಯ ಹೆಸರು ಇನ್ನೂ ಫೈಜಾಬಾದ್ ಎಂದೇ ಉಳಿದುಕೊಂಡಿದೆ.

'ರಾಮಮಂದಿರ ಚುನಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಚಿಂತಿಸುವುದು ಮೂರ್ಖತನ ಆಗುತ್ತದೆ. ಲಕ್ಷಾಂತರ ಜನರು ಬಂದು ಭವ್ಯ ರಾಮಮಂದಿರವನ್ನು ಗಮನಿಸಿದ್ದಾರೆ' ಎನ್ನುತ್ತಾರೆ ಸ್ಥಳೀಯ ನಿವಾಸಿ ಸುಶೀಲ್ ಕುಮಾರ್ ಪಾಂಡೆ. ಆದರೆ, ಮತ್ತೊಬ್ಬ ನಿವಾಸಿ ಮಹೇಂದ್ರ ಯಾದವ್, 'ಸ್ಥಳೀಯರು ಈಗ ಅಗತ್ಯ ವಸ್ತುಗಳ ಬೆಲೆ ಏರಿಕೆ, ಮೀಸಲಾತಿ, ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಸೋರಿಕೆ ಇತ್ಯಾದಿ ವಿಷಯಗಳ ಕುರಿತು ಮಾತನಾಡುತ್ತಿದ್ದಾರೆ' ಎಂದು ಹೇಳುತ್ತಾರೆ.

ಬಿಜೆಪಿಯು ಈ ಕ್ಷೇತ್ರದಲ್ಲಿ ಜಯ ಗಳಿಸಲೇಬೇಕು. ಅಯೋಧ್ಯೆಯನ್ನು ಒಳಗೊಂಡ ಕ್ಷೇತ್ರದಲ್ಲಿಯೇ ಪಕ್ಷಕ್ಕೆ ಸೋಲುಂಟಾದರೆ ಅದು ಅತಿದೊಡ್ಡ ಅವಮಾನ ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ.

11ನೇ ಪುಟ ನೋಡಿ

ದೇಹದ ವಿವಿಧ ಭಾಗಕ್ಕೆ ಹೊಡೆದಿರುವ ಆರೋಪ: ಎಫ್‌ಐಆರ್‌ನಲ್ಲಿ ದಾಖಲು

ಬಲವಾಗಿ ಒದ್ದು ಹಿಂಸೆ: ಮಾಲಿವಾಲ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಭಿಭವ್ ಕುಮಾರ್ ನನಗೆ ಹಲವು ಬಾರಿ ಬಲವಾಗಿ ಒದ್ದಿದ್ದಲ್ಲದೇ, ಏಳೆಂಟು ಬಾರಿ ಕಪಾಳಕ್ಕೂ ಹೊಡೆದಿದ್ದಾನೆ' ಎಂದು ಎಎಪಿಯ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರು ಆರೋಪಿಸಿದ್ದಾರೆ. ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಇದು ನಡೆದಿದೆ ಎಂದು ಪೊಲೀಸರಿಗೆ ವಿವರಿಸಿದ್ದಾರೆ. ಈ ಅಂಶಗಳು ಎಫ್‌ಐಆರ್‌ನಲ್ಲಿ ದಾಖಲಾಗಿವೆ.

ನೀವು ಸಾಧ್ಯವಾದಷ್ಟು ನನ್ನ ಚಾರಿತ್ರ್ಯವಧೆ ಮಾಡಬಹುದು, ಆದರೆ ಸಮಯ ಬಂದಾಗ ಸತ್ಯ ಹೊರಬರುತ್ತದೆ

ಸ್ವಾತಿ ಮಾಲಿವಾಲ್, ಎಎಪಿ ಸಂಸದೆ

'ನೆರವಿಗಾಗಿ ಕಿರುಚಿದರೂ ಯಾರೊಬ್ಬರೂ ಬರಲಿಲ್ಲ. ಹೊಡೆಯುವುದನ್ನು ನಿಲ್ಲಿಸುವಂತೆ ಪರಿಪರಿಯಾಗಿ ಬೇಡಿಕೊಂಡರೂ ಎದೆ, ಹೊಟ್ಟೆ, ದೇಹದ ಕೆಳಗಿನ ಭಾಗಕ್ಕೆಲ್ಲ ಬಲವಾಗಿ ಪದೇ ಪದೇ ಒದ್ದಿದ್ದಾನೆ' ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

11ನೇ ಪುಟ ನೋಡಿ

ಬಿಜೆಪಿ ಪಿತೂರಿ: ಎಎಪಿ

ನವದೆಹಲಿ (ಪಿಟಿಐ): ಸ್ವಾತಿ ಮಾಲಿವಾಲ್ ಹಲ್ಲೆ ಪ್ರಕರಣವು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಬಿಜೆಪಿ ನಡೆಸಿರುವ ಪಿತೂರಿಯಾಗಿದ್ದು, ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿ ವಿರುದ್ಧದ ಆರೋಪಗಳು ಆಧಾರರಹಿತ ಎಂದು ಎಎಪಿ ಶುಕ್ರವಾರ ಆರೋಪಿಸಿದೆ.

11ನೇ ಪುಟ ನೋಡಿ

ಬೆಸ್ಕಾಂ ಸಹಾಯಕ ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಇನ್‌ಸ್ಪೆಕ್ಟರ್' ಹೆಸರಿನಲ್ಲಿ ಜನರನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದ ಆರೋಪದಡಿ ಬೆಸ್ಕಾಂನ ಸಹಾಯಕ ಎಂಜಿನಿಯರ್ ಗಂಗಾಧರ್ ಅವರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಗಂಗಾಧರ್, ಮಲ್ಲೇಶ್ವರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಇವರ ಕೃತ್ಯದ ವಿರುದ್ಧ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿ ಕಮಿಷನರ್ ಆದೇಶ ಹೊರಡಿಸಿದ್ದಾರೆ. ಹೀಗಾಗಿ, ಎಲ್ಲ ಕಡತಗಳನ್ನು ಸಿಸಿಬಿ ಅಧಿಕಾರಿಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ನಡೆದಿದೆ. ಆರೋಪಿಯನ್ನೂ ಸಿಸಿಬಿ ಅಧಿಕಾರಿಗಳು ಕಸ್ಟಡಿಗೆ ಪಡೆದು ತನಿಖೆ ಮುಂದುವರಿಸಲಿದ್ದಾರೆ' ಎಂದು ತಿಳಿಸಿದರು.

ಗಂಗಾಧರ್

ಇನ್‌ಸ್ಪೆಕ್ಟರ್ ಹೆಸರಲ್ಲಿ ಸುಲಿಗೆ

ಇನ್‌ಸ್ಪೆಕ್ಟರ್ ಗುರುತಿನ ಚೀಟಿ: 'ಬೆಸ್ಕಾಂ ನೀಡಿದ್ದ ವಾಕಿಟಾಕಿ ಇಟ್ಟುಕೊಂಡಿದ್ದ ಆರೋಪಿ, 'ಪೊಲೀಸ್ ಇನ್‌ಸ್ಪೆಕ್ಟರ್, ಕರ್ನಾಟಕ ಪೊಲೀಸ್ ಇಲಾಖೆ' ಎಂಬುದಾಗಿ ಗುರುತಿನ ಚೀಟಿ ಸಹ ಮಾಡಿಸಿಕೊಂಡಿದ್ದರು' ಎಂದು ಅಧಿಕಾರಿ ಹೇಳಿದರು.

5ನೇ ಪುಟ ನೋಡಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ: ಅಧಿಕಾರಿಗಳಿಗೆ ತರಾಟೆ

ಕೃಪಾಂಕಕ್ಕೆ ಸಿ.ಎಂ ಸಿಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಗಣನೀಯ ಕುಸಿತವಾಗಿರುವುದಕ್ಕೆ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಪಾಂಕ ನೀಡಿ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿರುವ ಕ್ರಮವನ್ನು ಕಟು ಮಾತುಗಳಲ್ಲಿ ಪ್ರಶ್ನಿಸಿದ್ದಾರೆ.

ವಿವಿಧ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ಜತೆ ವಿಧಾನಸೌಧದಲ್ಲಿ ಶುಕ್ರವಾರ ಅನೌಪಚಾರಿಕ ಸಭೆ ನಡೆಸಿದ ಅವರು, ಪ್ರಗತಿ ಪರಿಶೀಲನೆ ನಡೆಸಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ ಮತ್ತು ಕೃಪಾಂಕ ನೀಡಿ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿರುವ ಕ್ರಮದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿ, ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಈ ಆಕ್ಷೇಪಕ್ಕೆ ಏರಿದ ಧ್ವನಿಯಲ್ಲಿಯೇ ದನಿಗೂಡಿಸಿದರು ಎಂದು ಮೂಲಗಳು ತಿಳಿಸಿವೆ.

'ಕೃಪಾಂಕ ನೀಡಿ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವ ನಿರ್ಧಾರ ಕೈಗೊಂಡವರು ಯಾರು' ಎಂದು ಮುಖ್ಯಮಂತ್ರಿಯವರು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರನ್ನು ಪ್ರಶ್ನಿಸಿದರು. ಕೋವಿಡ್–19 ಸಂಕಷ್ಟದ ಅವಧಿಯಲ್ಲೂ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿದ್ದನ್ನು ಪ್ರಸ್ತಾಪಿಸಿ, ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಅಧಿಕಾರಿಗಳು ಯತ್ನಿಸಿದರು. ಇದರಿಂದ ಕೋಪಗೊಂಡ ಸಿದ್ದರಾಮಯ್ಯ ಅಧಿಕಾರಿಗಳನ್ನು ಗದರಿದರು ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ

'ಮುಂದಿನ ವರ್ಷದಿಂದ ಕೃಪಾಂಕ ಇಲ್ಲ'

'ಎಸ್‌ಎಸ್‌ಎಲ್‌ಸಿ ಪರೀಕ್ಷಾ ವಿಧಾನದಲ್ಲಿ ಕೆಲವು ಸುಧಾರಣೆ ತರಲಾಗಿದೆ. ಅದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಕೃಪಾಂಕ ನೀಡಲಾಗಿತ್ತು. ಮುಂದಿನ ವರ್ಷದಿಂದ ಕೃಪಾಂಕ ನೀಡುವ ವ್ಯವಸ್ಥೆ ಇರುವುದಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಪರಿಹಾರ ಬೋಧನೆ, ಪರೀಕ್ಷೆ ಮುಂದೂಡಿಕೆ

ಮಾರ್ಚ್ ತಿಂಗಳಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹಾಗೂ ಸಿ ಮತ್ತು ಸಿ ಪ್ಲಸ್ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಎರಡನೇ ಪರೀಕ್ಷೆಗೆ ಸಜ್ಜುಗೊಳಿಸಲು ಬುಧವಾರದಿಂದ ಆರಂಭವಾಗಿದ್ದ ಪರಿಹಾರ ಬೋಧನೆ ತರಗತಿಗಳನ್ನು ಮುಂದೂಡಿ ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕರು (ಪ್ರೌಢ ಶಿಕ್ಷಣ) ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಜೂನ್ 7ರಿಂದ ಆರಂಭವಾಗಬೇಕಿದ್ದ ಎಸ್‌ಎಸ್‌ಎಲ್‌ಸಿ–2 ಪರೀಕ್ಷೆಗಳು ಜೂನ್ 14ರಿಂದ ಆರಂಭವಾಗಲಿವೆ ಎಂದೂ ಆದೇಶ ತಿಳಿಸಿದೆ. ಆಯಾ ಶಾಲೆಗಳಲ್ಲಿ ಮೇ 15ರಿಂದ ಜೂನ್ 5ರವರೆಗೆ ಪರಿಹಾರ ಬೋಧನೆ ತರಗತಿ ನಡೆಸಲು ಸುತ್ತೋಲೆ ಹೊರಡಿಸಲಾಗಿತ್ತು. ಅದನ್ನು ಬದಲಿಸಿ, ಮೇ 29ರಿಂದ ಜೂನ್ 13ರವರೆಗೆ ಪರಿಹಾರ ಬೋಧನೆ ತರಗತಿ ನಡೆಸಲು ಸೂಚಿಸಲಾಗಿದೆ.

ಕೇಶ ಸಂರಕ್ಷಣೆ
ಮಂಜುಶ್ರೀ ಹೇರ್ ಆಯಿಲ್
ಆಯುರ್ವೇದ ರೀತ್ಯಾ ತೈಲಪಾಕ ವಿಧಿಯಿಂದ ತಯಾರಿಸಲಾಗಿದೆ.
SDM ತಯಾರಕರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
sdmaph@sdmayurvedacollegeudupi.in

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್‌ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ ಚಿನ್ನದ ದರ
₹6760/gm
ಬೆಳ್ಳಿ ದರ: ₹88/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಆಭರಣಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
Ph- 080-29909733/ 9513394070

'ರಾಮ ಮಂದಿರದ ಮೇಲೆ ಬುಲ್ಡೋಜರ್'

ಬಾರಾಬಂಕಿ/ಫತೇಪುರ (ಉತ್ತರ ಪ್ರದೇಶ) : ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದರೆ ರಾಮ ಮಂದಿರದ ಮೇಲೆ ಬುಲ್ಡೋಜರ್ ಹರಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆರೋಪಿಸಿದ್ದಾರೆ. 7

ಚುನಾವಣಾ ಆಯೋಗಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಲೋಕಸಭಾ ಚುನಾವಣೆಯ ಪ್ರತಿ ಹಂತದ ಮತದಾನ ಮುಗಿದ 48 ಗಂಟೆಗಳ ನಂತರ ಮತ ಪ್ರಮಾಣದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ನೀಡಿದೆ. 5

ಜಿಡಿಪಿ ಶೇ 6.9ರಷ್ಟು ಪ್ರಗತಿ: ವಿಶ್ವಸಂಸ್ಥೆ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಎನ್‌ಸಿಆರ್‌ಬಿ ಅಂಕಿ- ಅಂಶ • ಲೈಂಗಿಕ ದೌರ್ಜನ್ಯ, ಪೋಕ್ಸೊ ಪ್ರಕರಣ ಮಾಹಿತಿ

4 ತಿಂಗಳು; 430 ಕೊಲೆ, 198 ಅತ್ಯಾಚಾರ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷದ ಜನವರಿಯಿಂದ ಏಪ್ರಿಲ್ 30ರವರೆಗೆ ಸುಮಾರು 430 ಕೊಲೆಗಳು ಹಾಗೂ 198 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.

ಹುಬ್ಬಳ್ಳಿಯ ವಿದ್ಯಾರ್ಥಿನಿಯರಾದ ನೇಹಾ ಹಿರೇಮಠ, ಅಂಜಲಿ ಅಂಬಿಗೇರ, ಸೋಮವಾರಪೇಟೆ ತಾಲ್ಲೂಕಿನ ಬಾಲಕಿ ಮೀನಾ ಸೇರಿದಂತೆ ಹಲವು ಕೊಲೆ ಪ್ರಕರಣಗಳು ಈಚೆಗೆ ವರದಿಯಾಗಿವೆ. ನೇಹಾ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ನಡೆಸುತ್ತಿದ್ದು, ಉಳಿದ ಪ್ರಕರಣಗಳ ತನಿಖೆಯನ್ನು ಆಯಾ ಠಾಣೆ ಪೊಲೀಸರು ಮುಂದುವರಿಸಿದ್ದಾರೆ.

ಕೊಲೆ, ಅತ್ಯಾಚಾರ, ಮಹಿಳೆಯರು ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಸೈಬರ್ ಕ್ರೈಂ ಹಾಗೂ ಇತರೆ ಪ್ರಕಾರದ ಅಪರಾಧಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಅಂಕಿ–ಅಂಶಗಳಿಂದ ಗೊತ್ತಾಗುತ್ತಿದೆ.

11 ನೇ ಪುಟ ನೋಡಿ

ರಾಜ್ಯದ ಅಪರಾಧಗಳ ವಿವರ

ವರ್ಷ	ಅತ್ಯಾಚಾರ	ಮಹಿಳೆಯರ ಮೇಲೆ ದೌರ್ಜನ್ಯ	ಮಕ್ಕಳ ಮೇಲೆ ದೌರ್ಜನ್ಯ	ಹಲ್ಲೆ	ಸೈಬರ್ ಕ್ರೈಂ	ವಂಚನೆ	ಸುಲಿಗೆ
2022	537	5,862	3,192	15,372	12,557	6,411	1069
2023	609	6486	3,856	17,439	21,895	6,921	1,248
2024	198	2327	1,262	6,063	7,421	2,243	450*

*ಜನವರಿ–ಏಪ್ರಿಲ್‌ವರೆಗೆ

ಕೊಲೆ ಪ್ರಕರಣಗಳ ವಿವರ



*ಜನವರಿ–ಏಪ್ರಿಲ್‌ವರೆಗೆ

'ಅಪರಾಧಿಯ ಮನಃಸ್ಥಿತಿ ಪ್ರಶ್ನೆ'

'ಕಾನೂನು ಸುವ್ಯವಸ್ಥೆ ಹಾಗೂ ಅಪರಾಧಗಳು ಎರಡೂ ಬೇರೆ ಬೇರೆ. ವರ ನಟ ರಾಜಕುಮಾರ್ ಅವರು ತೀರಿಕೊಂಡಾಗ ನಡೆದ ಘಟನೆಗಳು, ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದ ಘಟನೆಗಳು ಎನ್ನಬಹುದು. ಆದರೆ, ಕೊಲೆ ಹಾಗೂ ಇತರೆ ಅಪರಾಧಗಳು ಆಯಾ ಆರೋಪಿಯ ಮನಃಸ್ಥಿತಿಗೆ ಸಂಬಂಧಪಟ್ಟವು. ಕೊಲೆಗಳು ನಡೆಯುತ್ತಿವೆ ಎಂಬ ಮಾತ್ರಕ್ಕೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಹೇಳಲಾಗದು. ಆದರೆ, ಅಪರಾಧದ ಬಗ್ಗೆ ಪೂರ್ವ ಮಾಹಿತಿ ಇದ್ದರೂ ಅದನ್ನು ತಡೆಯದಿದ್ದರೆ ಸಂಬಂಧಪಟ್ಟ ಪೊಲೀಸರ ಕರ್ತವ್ಯಲೋಪವಾಗುತ್ತದೆ

ಎಸ್.ಟಿ. ರಮೇಶ್, ರಾಜ್ಯ ಪೊಲೀಸ್ ಮಹಾನಿರ್ದೇಶಕ (ನಿವೃತ್ತ)

ಪದವೀಧರರ ಭರವಸೆಯ ನಾಯಕ ರಾಮೋಜಿಗೌಡ

ಪ್ರೌಢ ಶಾಲಾ ಶಿಕ್ಷರ ಪರಿಹಾರ ಬೋಧನೆ ರದ್ದು ವಿಧಾನ ಪರಿಷತ್ ಸದಸ್ಯರಾಗುವ ಮೊದಲೇ ಶಿಕ್ಷರ ಸಮಸ್ಯೆಗೆ ಸ್ಪಂದಿಸುತ್ತಿರುವ ರಾಮೋಜಿಗೌಡರು.

“ಬೆಂಗಳೂರು ಪದವೀಧರರ ಕ್ಷೇತ್ರದ ಅಭ್ಯರ್ಥಿ ರಾಮೋಜಿಗೌಡ ಅವರನ್ನು ಗೆಲ್ಲಿಸಲು ಪಕ್ಷದ ನಾಯಕರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಸರ್ಕಾರದ ಸಾಧನೆಗಳನ್ನು ಪ್ರಚುರಪಡಿಸಿ ಮತದಾರರ ಮನವೊಲಿಸಬೇಕು.

ಸಿದ್ದರಾಮಯ್ಯ ಮುಖ್ಯಮಂತ್ರಿ

ನಮ್ಮ ಸುತ್ತಮುತ್ತಲಿರುವ ಜನರ ಅನುಕೂಲಕ್ಕಾಗಿ ಪ್ರತಿಫಲವನ್ನು ಬಯಸದೆ ಮಾಡುವ ಕೆಲಸ, ಕಾರ್ಯಗಳೇ ಸಮಾಜ ಸೇವೆ ಎನಿಸಿಕೊಳ್ಳುತ್ತವೆ. ಅಂತಹ ಸಮಾಜ ಸೇವೆಯಲ್ಲಿ ನಿರತರಾಗಿರುವ ಎಲೆ ಮರೆಯ ಕಾಯಿ ಆನೇಕಲ್ ರಾಮೋಜಿಗೌಡ. ಶಿಕ್ಷಕರ ಮತ್ತು ಪದವೀಧರರ ಕಷ್ಟಗಳಿಗೆ ಸದಾ ಸ್ಪಂದಿಸುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ರಾಮೋಜಿಗೌಡ ಅವರು ಬಾಲ್ಯದಿಂದಲೇ ಹೋರಾಟ ಮನೋಭಾವನ್ನು ಬೆಳೆಸಿಕೊಂಡಿರುವ ವ್ಯಕ್ತಿ.

ಜನರ ಸಂಕಷ್ಟಗಳ ಪರಿಹಾರಕ್ಕಾಗಿ ದುಡಿಯುವಲ್ಲಿ ಛಾಪು ಮೂಡಿಸಿರುವ ಅವರು ಬೆಂಗಳೂರು ಪದವೀಧರರ ಕ್ಷೇತ್ರದ ವಿಧಾನ ಪರಿಷತ್ತಿನ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ.

ಜನರ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡಿರುವ ಸಮಾಜ ಸೇವಕ ರಾಮೋಜಿಗೌಡ ಪದವಿ, ಸ್ನಾತಕೋತ್ತರ ಪದವಿ ಪೂರೈಸಿಯೂ ನಿರುದ್ಯೋಗಿಗಳಾಗಿ ಕಂಗಾಲಾಗಿದ್ದ ಸಾವಿರಾರು ಯುವಜನತೆಗೆ ಉದ್ಯೋಗ ಕಲ್ಪಿಸುವಲ್ಲಿ ಶ್ರಮಿಸಿದ್ದಾರೆ. ತಮ್ಮ ಮಾಲೀಕತ್ವದ ನೆಕ್ಸ್‌ಪ್ಲೇಸ್ ಇನ್ಫೋ ಸಂಸ್ಥೆಯಿಂದ ಉದ್ಯೋಗ ಮೇಳಗಳನ್ನು ಆಯೋಜಿಸಿ 35 ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ದೊರಕಲು ಕಾರಣರಾಗಿದ್ದಾರೆ. ಇದು ರಾಮೋಜಿಗೌಡ ಅವರ ಸಮಾಜಸೇವೆಯ ವೈಖರಿಗಿಡಿದ ಕೈಗನ್ನಡಿ.

ಶಾಲೆ ದತ್ತು ಪಡೆದ ರಾಮೋಜಿಗೌಡ

ಬೆಂಗಳೂರು ನಗರದ ಕೋರಮಂಗಲದ ಜಕ್ಕಸಂದ್ರದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ರಾಮೋಜಿಗೌಡ ಅವರು ದತ್ತು ಪಡೆದು ಅಭಿವೃದ್ಧಿಪಡಿಸಿದ್ದಾರೆ. ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ₹80 ಲಕ್ಷ ವೆಚ್ಚದಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿದ್ದಾರೆ. ಶಾಲಾ ಕೊಠಡಿ, ಅಡುಗೆ ಕೋಣೆ, ಶೌಚಗೃಹ, ಟೈಲ್ಸ್ ಅಳವಡಿಕೆ, ಕುಡಿಯುವ ನೀರು ಸೌಲಭ್ಯ ಮುಂತಾದವನ್ನು ಕಲ್ಪಿಸಿದ್ದಾರೆ.

ಪರಿಷತ್ತಿಗೆ ಆಯ್ಕೆ ಬಯಸಿರುವ ಇವರು ಅಧಿಕಾರ ಇರಲಿ, ಇಲ್ಲದಿರಲಿ ನಿರಂತರ ಪದವೀಧರರು ಹಾಗೂ ಶಿಕ್ಷಕ ಸಮುದಾಯದ ಹಿತಕ್ಕಾಗಿ ದುಡಿದಿರುವ ಕ್ರಿಯಾಶೀಲ ವ್ಯಕ್ತಿ. 2012 ಮತ್ತು 2018ರಲ್ಲಿ ಬೆಂಗಳೂರು ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಅಲ್ಪಮತಗಳಿಂದ ಸೋಲನ್ನು ಕಂಡಿದ್ದರೂ, ಕುಗ್ಗದೆ ಶಿಕ್ಷಕರು ಮತ್ತು ಪದವೀಧರರ ಏಳಿಗೆಗಾಗಿ ದುಡಿಯುವತ್ತ ಗಮನಹರಿಸಿದ್ದು ವಿಶೇಷ.

ಒಂದು ಕಾಲದ ಸರ್ಕಾರಿ ಶಿಕ್ಷಕ

ಒಂದು ಕಾಲದಲ್ಲಿ ಸರ್ಕಾರಿ ಶಿಕ್ಷಕರಾಗಿದ್ದ ರಾಮೋಜಿಗೌಡ ಇಂದು ಉದ್ಯೋಗಕ್ಕಾಗಿ ಪರಿತಪಿಸುವ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗದ ದಾರಿ ತೋರುವ ಮಾರ್ಗದರ್ಶಿ ಎನಿಸಿದ್ದಾರೆ. ಅವಿಭಜಿತ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಣಿಗನಹಳ್ಳಿ ಗ್ರಾಮದ ನಾರಾಯಣಗೌಡ ಮತ್ತು ಅಂಕುಲಮ್ಮ ದಂಪತಿ ಮಗನಾದ ರಾಮೋಜಿಗೌಡ ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಪ್ರೌಢ, ಪಿಯುಸಿ ಮತ್ತು ಪದವಿ ಶಿಕ್ಷಣವನ್ನು ಚಿಂತಾಮಣಿಯಲ್ಲಿ ಪೂರೈಸಿದರು. ‘ಶಿಕ್ಷಕ ತರಬೇತಿ’ಯನ್ನು ಬೇತಮಂಗಲದಲ್ಲಿ ಮುಗಿಸಿ ದೂರಶಿಕ್ಷಣ ಮುಖೇನ ರಾಜ್ಯಶಾಸ್ತ್ರದಲ್ಲಿ ಎಂ.ಎ., ಮಾಡಿದ ಅವರು 1997ರಲ್ಲಿ ಶಿಕ್ಷಕ ಹುದ್ದೆಗೆ ಆಯ್ಕೆಯಾಗಿ, ಶ್ರೀನಿವಾಸಪುರ ತಾಲ್ಲೂಕಿನ ಪೇಗಳಪಲ್ಲಿ ಸರ್ಕಾರಿ ಶಾಲೆಯಲ್ಲಿ ವೃತ್ತಿ ಆರಂಭಿಸಿದರು. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಂಜುಳಾ ಅವರನ್ನು ವರಿಸಿದ ರಾಮೋಜಿಗೌಡ ದಂಪತಿಗೆ ಹರ್ಷಿತಾ ಮತ್ತು ಹರ್ಷ ಎಂಬ ಇಬ್ಬರು ಮಕ್ಕಳು. 2000ರಲ್ಲಿ ಪತಿ–ಪತ್ನಿಯ ವರ್ಗಾವಣೆ ಪ್ರಕರಣದಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು ಆನೇಕಲ್ ರಾಮೋಜಿಗೌಡ ಎಂದೇ ಖ್ಯಾತರಾಗಿರುವ ಇವರು ಸರ್ಕಾರಿ ಶಿಕ್ಷಕರಾಗಿ 14 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಶಿಕ್ಷಕ ವೃತ್ತಿಯಲ್ಲಿದ್ದಾಗಲೇ ಶಿಕ್ಷಕರು, ಪದವೀಧರರು ಸೇರಿದಂತೆ ಇತರ ಎಲ್ಲ ವಲಯದ ಉದ್ಯೋಗಿಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶ್ರಮಿಸಿದ್ದಾರೆ. ಶಿಕ್ಷಕ ಸಂಘದ ನಿರ್ದೇಶಕರಾಗಿ, ಬೆಂಗಳೂರು ನಗರ ದಕ್ಷಿಣ ಜಿಲ್ಲಾ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷರಾಗಿ, ರಾಜ್ಯ ಶಿಕ್ಷಕ ಸಂಘದ ಉಪಾಧ್ಯಕ್ಷರಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ರಾಜ್ಯ ಪದವೀಧರರ ಘಟಕದ ಉಪಾಧ್ಯಕ್ಷರಾಗಿ, ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ ಹಾಗೂ ಕರ್ನಾಟಕ ರಾಜ್ಯ ಪದವೀಧರರ ವೇದಿಕೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಂಘಟನಕಾರರಾಗಿ ಗುರುತಿಸಿಕೊಂಡು ಮುಂಚೂಣಿ ನಾಯಕರಾಗಿ ಹಲವು ಹೋರಾಟ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

“ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಂದ ಹಿಡಿದು ಎಲ್ಲ ಮುಖಂಡರೂ ಒಟ್ಟಾಗಿ ಕೆಲಸ ಮಾಡಬೇಕು. ರಾಮೋಜಿಗೌಡ ಅವರನ್ನು ಗೆಲ್ಲಿಸಿಕೊಂಡು ಬರಬೇಕು. ಲೋಕಸಭೆ ಚುನಾವಣೆ ಮಾದರಿಯಲ್ಲಿ ಸಂಘಟಿತ ಹೋರಾಟ ಮಾಡಬೇಕು.

ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ವಿಧಾನ ಪರಿಷತ್ ಸದಸ್ಯ ಪುಟ್ಟಣರೊಂದಿಗೆ ರಾಮೋಜಿಗೌಡ

ಉದ್ಯೋಗ ಮೇಳ ಆಯೋಜನೆ

ಹಲವಾರು ಸಂಘ, ಸಂಸ್ಥೆಗಳ ಜೊತೆಗೂಡಿ ಉದ್ಯೋಗ ಮೇಳ ಆಯೋಜಿಸಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸುವ ಕಾರ್ಯದಲ್ಲಿ ರಾಮೋಜಿಗೌಡ ಅವರ ನೆಕ್ಸ್‌ಪ್ಲೇಸ್ ಇನ್ಫೋ ಪ್ರೈ.ಲಿ., ನಿರತವಾಗಿದೆ. ಬಿಟಿಎಂ ಲೇಔಟ್, ಜಯನಗರ ಸೇರಿದಂತೆ ಇತರ ಕಡೆಗಳಲ್ಲಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ನೇತೃತ್ವದಲ್ಲಿ ಉದ್ಯೋಗ ಮೇಳ ಆಯೋಜಿಸಿ 35 ಸಾವಿರಕ್ಕೂ ಅಧಿಕ ಮಂದಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಕೊಡಿಸುವಲ್ಲಿ ಶ್ರಮಿಸಿದ್ದಾರೆ.

ಬಹು ದೊಡ್ಡ ಕ್ಷೇತ್ರ: ಪಕ್ಷದ ಅನನ್ಯ ಬೆಂಬಲ

36 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಬೆಂಗಳೂರು ಪದವೀಧರರ ಕ್ಷೇತ್ರವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳನ್ನು ಒಳಗೊಂಡಿರುವ ಬಹುದೊಡ್ಡ ಕ್ಷೇತ್ರವಾಗಿದೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಎರಡು ಬಾರಿ ಸೋತಿದ್ದರೂ ಪಕ್ಷದ ಹಿರಿಯರ ಆಶೀರ್ವಾದದಿಂದ ಮೂರನೇ ಬಾರಿ ಟಿಕೆಟ್ ಪಡೆದಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ರಾಮಲಿಂಗಾರೆಡ್ಡಿ, ಸಂಸದ ಡಿ.ಕೆ. ಸುರೇಶ್, ಸಚಿವ ಕೆ.ಎಚ್. ಮುನಿಯಪ್ಪ ಸೇರಿದಂತೆ ಅನೇಕ ನಾಯಕರ ಅನನ್ಯ ಪ್ರೋತ್ಸಾಹದಿಂದ ಇದು ಸಾಧ್ಯವಾಗಿದೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಚಿಂತಕರ ಚಾವಡಿ ಎಂದೇ ಕರೆಸಿಕೊಳ್ಳುವ ವಿಧಾನ ಪರಿಷತ್ತಿಗೆ ಪದವೀಧರರ ಕ್ಷೇತ್ರದ ಪ್ರತಿನಿಧಿಗಳು ನನ್ನನ್ನು ಗೆಲ್ಲಿಸಿ, ಕಳಿಸಿದರೆ ಅವರ ಶ್ರೇಯೋಭಿವೃದ್ಧಿಗೆ ದುಡಿಯಲಿದ್ದೇನೆ. ಶಿಕ್ಷಕರ ಹಾಗೂ ಪದವೀಧರರ ಆಶೋತ್ತರಗಳನ್ನು ಈಡೇರಿಸಲು ಮೊದಲ ಆದ್ಯತೆ ನೀಡುತ್ತೇನೆ. ನಿರುದ್ಯೋಗಿಗಳ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಲು ಶ್ರಮಿಸುತ್ತೇನೆ.

ರಾಮೋಜಿಗೌಡ ಆನೇಕಲ್

ಅದಮ್ಯ ಬಯಕೆಗೆ ಜನರ ಆಶೀರ್ವಾದ

ಕಳೆದ ಎರಡು ದಶಕಗಳಿಂದ ಬದ್ಧತೆ, ಪ್ರೀತಿ, ವಿಶ್ವಾಸದಿಂದ ಶಿಕ್ಷಕರ ಮತ್ತು ಪದವೀಧರರ ಸಮುದಾಯದ ಮನಗೆದ್ದಿರುವ ಆನೇಕಲ್ ರಾಮೋಜಿಗೌಡ ಎಲ್ಲರೊಂದಿಗೆ ಬೆರೆಯುವ ಸ್ನೇಹಜೀವಿ. ಇಂತಹ ಅಪರೂಪದ ವ್ಯಕ್ತಿಯ ಗೆಲುವು ಈ ಬಾರಿ ಶತಸಿದ್ಧ. ಪದವೀಧರರಿಗೆ ಸೇವೆ ಸಲ್ಲಿಸುವ ಅವರ ಅದಮ್ಯ ಬಯಕೆಗೆ ಜನರ ಆಶೀರ್ವಾದವಿದೆ. ಆನೇಕಲ್‌ನಲ್ಲಿ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಸಭೆ ಸೇರಿ ರಾಮೋಜಿಗೌಡ ಅವರನ್ನು ಬೆಂಬಲಿಸಿದ್ದಾರೆ. ಕ್ಷೇತ್ರದ ಪದವೀಧರರು, ನೌಕರರು, ಖಾಸಗಿ ವಿದ್ಯಾ ಸಂಸ್ಥೆಗಳ ಕುಂದುಕೊರತೆಗೆ ಸ್ಪಂದನೆ, ಸಮಸ್ಯೆ ಬಗೆಹರಿಸಲು ಶ್ರಮಿಸಿದ ಫಲವಾಗಿ ಬೆಂಬಲ ಗಳಿಸಿದ್ದಾರೆ. ಅರ್ಹರ ನೋಂದಣಿ, ಮತದಾರರರೊಂದಿಗೆ ನಿರಂತರ ಒಡನಾಟವಿದೆ ಎಂಬುದಕ್ಕೆ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ನಿರ್ಣಯವೇ ಸಾಕ್ಷಿ.

ರಾಮಲಿಂಗಾರೆಡ್ಡಿ ಸಚಿವ

ಭರವಸೆಯ ನಾಯಕ

ತಮ್ಮ ನಾಯಕತ್ವ ಗುಣಗಳಿಂದ ಹಂತ ಹಂತವಾಗಿ ಬೆಳೆದ ರಾಮೋಜಿಗೌಡ, ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದಾರೆ. ರಾಹುಲ್ ಗಾಂಧಿ ಅವರ ಭಾರತ ಜೋಡೋ ಯಾತ್ರೆಯ ಸಂಯೋಜಕರಾಗಿ ಕಾರ್ಯ ನಿರ್ವಹಿಸಿರುವುದು ಇತ್ತೀಚಿನ ಸಂಗತಿ. ಸಮಾಜ ಸೇವೆಯೇ ಪ್ರಮುಖವಾಗಿರಿಸಿಕೊಂಡು ಪದವೀಧರರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸುತ್ತಿದ್ದಾರೆ. ವಿಧಾನ ಪರಿಷತ್ತಿನ ಈ ಚುನಾವಣೆಯಲ್ಲಿ ಮತದಾರರಿಂದ ಅಭೂತಪೂರ್ವ ಬೆಂಬಲ ನಿರೀಕ್ಷಿಸುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಭರವಸೆಯ ನಾಯಕರಾಗಿದ್ದಾರೆ.

ಗೆಲುವಿನ ಆತ್ಮವಿಶ್ವಾಸ

ಕಳೆದ ಎರಡು ಚುನಾವಣೆಗಳಲ್ಲಿ ಪರಾಜಿತರಾದರೂ ಕ್ಷೇತ್ರದ ಜನರ, ಪದವೀಧರರ ಹಾಗೂ ಶಿಕ್ಷಕ ವರ್ಗದವರ ಪ್ರೀತಿ, ವಿಶ್ವಾಸಕ್ಕೆ ಕೊರತೆಯಿಲ್ಲ. ಜನರ ಸ್ಪಂದನೆ, ನಿರುದ್ಯೋಗಿಗಳಿಗೆ ಆತ್ಮವಿಶ್ವಾಸ ಹೆಚ್ಚಿಸುವ ಅವಕಾಶ ಕಲ್ಪಿಸುವ ಉದ್ಯೋಗ ಮೇಳ ಆಯೋಜನೆ ಹಾಗೂ ಇತರ ಸೇವಾ ಚಟುವಟಿಕೆಗಳಿಂದ ಕ್ಷೇತ್ರದ ಜನರು ರಾಮೋಜಿಗೌಡ ಅವರ ಮೇಲೆ ನಂಬಿಕೆ ಇಟ್ಟಿದ್ದಾರೆ. ಇದಕ್ಕೆ ಇವರಿಗೆ ಜನತೆ, ಖಾಸಗಿ ವಿದ್ಯಾಸಂಸ್ಥೆಗಳು ನೀಡಿರುವ ಒಕ್ಕೊರಲ ಬೆಂಬಲವೇ ಸಾಕ್ಷಿ. ಬೆಂಗಳೂರು ಪದವೀಧರರ ಕ್ಷೇತ್ರದ ಚಿಂತಕರು, ಪ್ರಜ್ಞಾವಂತರ ಕಾಳಜಿ ರಾಮೋಜಿಗೌಡ ಅವರ ಆತ್ಮವಿಶ್ವಾಸ ಹೆಚ್ಚಿದೆ. 2024ರ ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಮೋಜಿಗೌಡ ಸಾಧನೆ

- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ‘ಭಾರತ್ ಜೋಡೊ’ ಪಾದಯಾತ್ರೆಯ ಸಂಯೋಜಕ
- ಎಸ್ಸೆಸ್ಸೆಲ್ಸಿ, ಪಿಯುಸಿ, ಸಿಎಸಿಪಿಟಿ, ಮೆಡಿಕಲ್ ಫೌಂಡೇಷನ್, ಸಿಇಟಿ, ನೀಟ್ ಸೇರಿ ಹಲವು ಕೋರ್ಸ್‌ಗಳಿಗೆ ತರಬೇತಿ ನೀಡುವ ಉದ್ದೇಶದಿಂದ 25ಕ್ಕೂ ಹೆಚ್ಚು ಕೋಚಿಂಗ್ ಸೆಂಟರ್ ತೆರೆದು ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿ ಮಾಡುವ ಜೊತೆಗೆ ನೂರಾರು ನಿರುದ್ಯೋಗಿ ಶಿಕ್ಷಕರಿಗೆ ಉದ್ಯೋಗ ಕಲ್ಪಿಸಿದ್ದಾರೆ
- ಕೋಚಿಂಗ್ ಸೆಂಟರ್‌ಗಳಲ್ಲಿ ಶಿಕ್ಷಕರ ಮಕ್ಕಳಿಗೆ ರಿಯಾಯಿತಿ ದರದಲ್ಲಿ ತರಬೇತಿ ನೀಡುವ ವ್ಯವಸ್ಥೆ
- ಮಾಗಡಿ ರಸ್ತೆಯಲ್ಲಿ ಬ್ರಿಟನ್ ಇಂಟರ್‌ನ್ಯಾಷನಲ್ ಶಾಲೆ ಸ್ಥಾಪಿಸಿ ಹಲವು ಶಿಕ್ಷಕರಿಗೆ ಉದ್ಯೋಗ
- ಉದ್ಯಮಿ, ಬೆಂಗಳೂರು ರೈಸ್ ಮಾಲ್ ಮಾಲೀಕತ್ವ
- ಬೆಂಗಳೂರು ನಗರ ಜಿಲ್ಲೆ ಶಿಕ್ಷಕರ ಪತ್ತಿನ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷ
- ಸಂಘದ ಮೂಲಕ ಶಿಕ್ಷಕರು ಮತ್ತು ನೌಕರರಿಗೆ ರಿಯಾಯಿತಿ ದರದಲ್ಲಿ ನಿವೇಶನ ನೀಡುವುದರೊಂದಿಗೆ ನೆಲೆ ಕಂಡುಕೊಳ್ಳಲು ನೆರವು
- ಬಡವರಿಗಾಗಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಆಯೋಜಿಸಿ ಕನ್ನಡಕ, ಔಷಧ ವ್ಯವಸ್ಥೆ
- ಮಕ್ಕಳಿಗಾಗಿ ಬೇಸಿಗೆ ಶಿಬಿರ ಆಯೋಜನೆ
- ವಿಧಾನಸಭೆ ಚುನಾವಣೆ ಸೇರಿ ವಿವಿಧ ಚುನಾವಣೆಗಳಲ್ಲಿ ಪಕ್ಷ ನೀಡಿದ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಿ, ಅಭ್ಯರ್ಥಿಗಳ ಗೆಲುವಿಗೆ ಕಾರಣಕರ್ತ
- ಶಿಕ್ಷಕರ ಮತ್ತು ನೌಕರರ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ನಡುವೆ ಸೇತುವೆಯಾಗಿ ಕೆಲಸ
- ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿ ಬಡವರಿಗೆ ಆಹಾರ ಪೊಟ್ಟಣ ಪೂರೈಕೆ
- ಚಿಂತಾಮಣಿ ತಾಲ್ಲೂಕಿನ ಮಣಿಗನಹಳ್ಳಿ ಗ್ರಾಮದಲ್ಲಿ ದೇವಾಲಯಗಳ ನವೀಕರಣ

ಚುನಾವಣಾ ಪ್ರಣಾಳಿಕೆ

ಬೆಂಗಳೂರು ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿ ಗೌಡ ಅವರು ಹಾಕಿಕೊಂಡಿರುವ ಪ್ರಣಾಳಿಕೆಗಳು.

- ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು
- ಮೂರು ಜಿಲ್ಲೆಗಳಲ್ಲಿ ಅವಕಾಶಗಳನ್ನು ಹೆಚ್ಚಿಸುವುದು (ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ)
- ಮೂರು ಜಿಲ್ಲೆಗಳಲ್ಲಿ ಪ್ರತಿ ವರ್ಷ ಮೆಗಾ ಉದ್ಯೋಗಮೇಳ
- ಸರ್ಕಾರದ ಖಾಲಿ ಹುದ್ದೆಗಳ ಸಕಾಲಿಕ ಭರ್ತಿಗೆ ಶ್ರಮ ವಹಿಸುವುದು
- ಮೂರು ಜಿಲ್ಲೆಗಳಲ್ಲಿ ಪ್ರತ್ಯೇಕವಾದ ಕೌಶಲ್ಯ ತರಬೇತಿ ಕೇಂದ್ರಗಳು
- ಮಾಹಿತಿ ಕೇಂದ್ರಗಳ ಸ್ಥಾಪನೆ ಮತ್ತು ಅವುಗಳ ಪರಿಣಾಮಕಾರಿ ಕಾರ್ಯಯೋಜನೆಗೆ ಚಾಲನೆ
- ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆ
- ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮಗಳ ಆಯೋಜನೆ
- ಅನುದಾನ ರಹಿತ, ಅನುದಾನಿತ ಮತ್ತು ಸರ್ಕಾರಿ ಶಿಕ್ಷಕರು, ಉಪನ್ಯಾಸಕರ ವಿವಿಧ ಸಮಸ್ಯೆಗಳನ್ನು ಬಗೆಹರಿಸುವುದು
- ವೈದ್ಯಕೀಯ ಮತ್ತು ತಾಂತ್ರಿಕ ಪದವೀಧರರ ಅಭ್ಯುದಯ
- ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವೀಧರ ಬಂಧುಗಳ ಬೇಡಿಕೆಗಳನ್ನು ವ್ಯವಸ್ಥಿತವಾಗಿ ಪರಿಹರಿಸುವುದು
- ಪದವೀಧರರ ಹೌಸಿಂಗ್ ಕೋಆಪರೇಟೀವ್ ಸೊಸೈಟಿಗಳ ಸ್ಥಾಪನೆ
- ಪದವೀಧರರ ಕೋಆಪರೇಟೀವ್ ಬ್ಯಾಂಕ್ ಸ್ಥಾಪನೆ
- ಪದವೀದರರ, ಶಿಕ್ಷಕರ ಸಂಘಟನೆಗಳ ಬಲವರ್ಧನೆ

ಜಲಾವೃತ

ಶುಕ್ರವಾರ ಸುರಿದ ಮಳೆಯಿಂದಾಗಿ ಹೆಬ್ಬಾಳ ಮೇಲ್ಸೇತುವೆ ಸಮೀಪದ ವರ್ತುಲ ರಸ್ತೆಯು ನೀರಿನಿಂದ ಆವೃತವಾಗಿತ್ತು -ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ಧನ್

ಮಳೆ ಸುರಿದರೆ ನೀರು ನಿಂತು ಅವಾಂತರ • ಅವೈಜ್ಞಾನಿಕ ಕೆಲಸದಿಂದ ರಸ್ತೆಗಳಲ್ಲಿ ಗುಂಡಿ

ಕಾಮಗಾರಿ ನಿಧಾನ: ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ನಗರದ ಹಲವೆಡೆ ಕಾಮಗಾರಿಗಳು ನಿಧಾನ ಗತಿಯಲ್ಲಿ ನಡೆಯುತ್ತಿದ್ದು, ಇದರಿಂದಾಗಿ ಜನರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ.

'ಮೆಗ್ರಾತ್ ರಸ್ತೆ, ಜಯಮಹಲ್ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ಆರಂಭಿಸಿ ಹಲವು ತಿಂಗಳಾಗಿದೆ. ಆದರೆ, ಇದುವರೆಗೂ ಪೂರ್ಣಗೊಂಡಿಲ್ಲ. ಕಾಮಗಾರಿಗಾಗಿ ರಸ್ತೆಯನ್ನು ಅಗೆಯಲಾಗಿದ್ದು, ಕಾಮಗಾರಿ ಪೂರ್ಣಗೊಂಡ ಕೆಲ ಜಾಗವನ್ನು ಅವೈಜ್ಞಾನಿಕವಾಗಿ ಮುಚ್ಚಲಾಗಿದೆ. ಇದರಿಂದಾಗಿ ರಸ್ತೆಗಳಲ್ಲಿ ಗುಂಡಿಗಳಾಗಿವೆ' ಎಂದು ಸ್ಥಳೀಯರು ದೂರಿದರು.

'ಮಳೆ ಸುರಿದ ಸಂದರ್ಭದಲ್ಲಿ ಕಾಮಗಾರಿ ಸ್ಥಳದಲ್ಲಿ ನೀರು ನಿಲ್ಲುತ್ತಿದ್ದು, ರಸ್ತೆಗಳು ಹಾಳಾಗುತ್ತಿವೆ. ಎಲ್ಲೆಂದರಲ್ಲಿ ಗುಂಡಿಗಳು ಬಿದ್ದಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ಹಾಗೂ ಬೆಂಗಳೂರು ಜಲಮಂಡಳಿ(ಬಿಡಬ್ಲ್ಯುಎಸ್‌ಎಸ್‌ಬಿ) ಅಧಿಕಾರಿಗಳು, ಕಾಮಗಾರಿಯನ್ನು ಕೆಲ ಕಂಪನಿಗಳಿಗೆ ಗುತ್ತಿಗೆ ನೀಡಿದ್ದಾರೆ. ಆದರೆ, ಕಂಪನಿಯವರು ನಿಗದಿತ ಸಮಯಕ್ಕೆ ಕಾಮಗಾರಿ ಪೂರ್ಣಗೊಳಿಸುತ್ತಿಲ್ಲ. ಇದರಿಂದಾಗಿಯೇ ಮೆಗ್ರಾತ್ ರಸ್ತೆ ಹಾಗೂ ಜಯಮಹಲ್ ರಸ್ತೆಗಳಲ್ಲಿ ಜನರ ಓಡಾಟ ಕಷ್ಟವಾಗಿದೆ' ಎಂದು ಹೇಳಿದರು.

'ನಿಗದಿಯಂತೆ ಕಾಮಗಾರಿ ನಡೆಯುತ್ತಿದೆ. ಒಳಚರಂಡಿ ಪೈಪ್‌ಗಳನ್ನು ಬದಲಾಯಿಸಲಾಗಿದೆ. ಮಳೆಗಾಲದ ಆರಂಭಕ್ಕೂ ಮುನ್ನವೇ ಕಾಮಗಾರಿ ಮುಗಿಸುವ ಗುರಿ ಇಟ್ಟುಕೊಂಡಿದ್ದೇವೆ' ಎಂದು ಕಾಮಗಾರಿ ಕುರಿತು ಬಿಡಬ್ಲ್ಯುಎಸ್‌ಎಸ್‌ಬಿ ಎಂಜಿನಿಯರ್‌ವೊಬ್ಬರು ಮಾಹಿತಿ ನೀಡಿದರು.

ಸಂಚಾರ ದಟ್ಟಣೆ: 'ನಗರದಲ್ಲಿ ಇತ್ತೀಚೆಗೆ ಮಳೆ ಸುರಿದ ಸಂದರ್ಭದಲ್ಲಿ ಮೆಗ್ರಾತ್ ರಸ್ತೆ ಹಾಗೂ ಜಯಮಹಲ್ ರಸ್ತೆಯಲ್ಲಿ ನೀರು ಹರಿದಿತ್ತು. ಕಾಮಗಾರಿಗಾಗಿ ಅಗೆಯಲಾಗಿದ್ದ ಜಾಗದಲ್ಲಿ ನೀರು ನಿಂತುಕೊಂಡು, ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಇದರಿಂದಾಗಿ ಕಿ.ಮೀ.ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತು, ವಿಪರೀತ ದಟ್ಟಣೆ ಕಂಡುಬಂದಿತ್ತು' ಎಂದು ಸ್ಥಳೀಯರು ಹೇಳಿದರು.

'ನಿತ್ಯವೂ ಇದೇ ರಸ್ತೆಯಲ್ಲಿ ಓಡಾಡುತ್ತೇನೆ. ಕಾಮಗಾರಿ ಆರಂಭವಾದಾಗಿನಿಂದ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಆದಷ್ಟು ಬೇಗನೇ ಕಾಮಗಾರಿ ಮುಕ್ತಾಯಗೊಳಿಸಬೇಕು' ಎಂದು ಬೈಕ್ ಸವಾರರೊಬ್ಬರು ಆಗ್ರಹಿಸಿದರು.

'ಬೆಳಿಗ್ಗೆ ಹಾಗೂ ಸಂಜೆ ಸಂದರ್ಭದಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ. 300 ಮೀಟರ್ ಉದ್ದದ ಮೆಗ್ರಾತ್ ರಸ್ತೆಯಲ್ಲಿ ಸಂಚರಿಸಲು 2 ನಿಮಿಷದಿಂದ 30 ನಿಮಿಷ ಬೇಕಾಗುತ್ತಿದೆ' ಎಂದು ಹೇಳಿದರು.

'ರಸ್ತೆಯನ್ನು ಅಗೆದು ಒಳಚರಂಡಿ ನಿರ್ಮಾಣ ಮಾಡಲಾಗುತ್ತಿದೆ. ಮಳೆ ಬಂದ ಸಂದರ್ಭದಲ್ಲಿ, ಅಗೆದ ಸ್ಥಳದಲ್ಲಿ ನೀರು ತುಂಬಿಕೊಳ್ಳುತ್ತಿದೆ. ಅದೇ ನೀರು ರಸ್ತೆ ಮೇಲೆ ಹರಿದು ಜನರಿಗೆ ತೊಂದರೆ ಉಂಟಾಗುತ್ತಿದೆ. ಹೆಚ್ಚು ವಾಹನಗಳು ಸಂಚರಿಸುವ ಸಮಯದಲ್ಲಂತೂ ಜನರ ಗೋಳು ಹೇಳತೀರದು' ಎಂದು ಸ್ಥಳೀಯರು ಅಳಲು ತೋಡಿಕೊಂಡರು.

ಜಯಮಹಲ್ ರಸ್ತೆಯಲ್ಲಿ ನಡೆದಿರುವ ಒಳಚರಂಡಿ ನಿರ್ಮಾಣ ಕಾಮಗಾರಿ

ಮೆಗ್ರಾತ್ ರಸ್ತೆಯಲ್ಲಿ ನಡೆದಿರುವ ಒಳಚರಂಡಿ ನಿರ್ಮಾಣ ಕಾಮಗಾರಿ

ಮುಖ್ಯಾಂಶಗಳು

- ಹಲವು ತಿಂಗಳಿಂದ ಮಂದಗತಿಯಲ್ಲಿ ಸಾಗುತ್ತಿರುವ ಕಾಮಗಾರಿ
- ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಸ್ಥಳೀಯರ ಆಗ್ರಹ
- 300 ಮೀಟರ್ ಸಂಚರಿಸಲು 30 ನಿಮಿಷ ಬೇಕು: ಸವಾರರ ದೂರು

ಒಣಗಿದ ಮರ: ಮಾಹಿತಿ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ಒಣಗಿರುವ ಮರ, ಕೊಂಬೆಗಳ ಮಾಹಿತಿ ನೀಡಲು ಬಿಬಿಎಂಪಿ ಅರಣ್ಯ ವಿಭಾಗ ನಾಗರಿಕರಲ್ಲಿ ಮನವಿ ಮಾಡಿದೆ.

ಮಳೆ-ಗಾಳಿಯಿಂದ ನಗರದ ಹಲವೆಡೆ ಒಣಗಿರುವ ಮರ ಹಾಗೂ ಕೊಂಬೆಗಳು ಆಕಸ್ಮಿಕವಾಗಿ ಬೀಳುತ್ತಿವೆ. ಇದರಿಂದ ಸಾಕಷ್ಟು ಹಾನಿಯಾಗುತ್ತಿದೆ. ಆದ್ದರಿಂದ ನಾಗರಿಕರು ತಮ್ಮ ಸುತ್ತಮುತ್ತ ಕಂಡುಬರುವ ಒಣಗಿರುವ ಮರ ಹಾಗೂ ಕೊಂಬೆಗಳ ಮಾಹಿತಿಯನ್ನು ಅರಣ್ಯ ವಿಭಾಗದ ಅಧಿಕಾರಿಗಳ ಮೊಬೈಲ್‌ಗೆ ಕರೆ ಮಾಡಿ ಅಥವಾ ವಾಟ್ಸ್ ಆ್ಯಪ್‌ನಲ್ಲಿ ಚಿತ್ರಸಹಿತ ವಿಳಾಸವನ್ನು ಕಳುಹಿಸಬೇಕು. ಅಪಾಯಕಾರಿ ಮರ, ಕೊಂಬೆಗಳನ್ನು ತೆರವುಗೊಳಿಸಲಾಗುತ್ತದೆ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ. ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಣ್ಯ ಅಧಿಕಾರಿಗಳ ಸಂಪರ್ಕ: ಪೂರ್ವ ವಲಯ- 9380090027, ಪಶ್ಚಿಮ- 9449659252, ದಕ್ಷಿಣ- 94806885039, ದಾಸರಹಳ್ಳಿ- 9164042566, ಬೊಮ್ಮನಹಳ್ಳಿ- 9580685399, ಯಲಹಂಕ- 9164042566, ಆರ್.ಆರ್. ನಗರ- 7760553545, ಮಹದೇವಪುರ ವಲಯ- 8147276414.

ಉಚಿತ ಸಸಿ: ಬಿಬಿಎಂಪಿ ಅರಣ್ಯ ವಿಭಾಗದ ವತಿಯಿಂದ ಪರಿಸರ ಕಾಳಜಿ ಉತ್ತೇಜಿಸಲು ಸಸ್ಯ ಕ್ಷೇತ್ರಗಳಲ್ಲಿ ವಿವಿಧ ಜಾತಿಯ ಸಸಿಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ನಾಗರಿಕರು ಹಾಗೂ ಸಂಘ-ಸಂಸ್ಥೆಗಳು ಅರ್ಜಿ ಸಲ್ಲಿಸಿ ಸಸಿಗಳನ್ನು ಪಡೆಯಬಹುದು.

ಕೆಂಪಾಪುರ ಸಸ್ಯಕ್ಷೇತ್ರ- 9480685541, ಕೂಡ್ಲು ಸಸ್ಯಕ್ಷೇತ್ರ- 9480685539, ಅಟ್ಟೂರು ಸಸ್ಯಕ್ಷೇತ್ರ- 9483139438, ಜ್ಞಾನಭಾರತಿ ಸಸ್ಯಕ್ಷೇತ್ರ- 9880516322.

'ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಉಳಿಸಿ' ಅಭಿಯಾನ

ಬೆಂಗಳೂರು: ಕೆ.ಆರ್. ಪುರದ ಬಳಿಯಿರುವ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಲ್ಲಿ ತ್ಯಾಜ್ಯ ತುಂಬಿದ್ದು, ದಿನೇದಿನೇ ಹಾಳಾಗುತ್ತಿದೆ. ಈ ಕೆರೆಯ ಸ್ವಚ್ಛತಾ ಕಾರ್ಯವನ್ನು ಕೈಗೊಂಡಿರುವ ಸ್ಥಳೀಯ ನಾಗರಿಕರು, 'ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಉಳಿಸಿ' ಅಭಿಯಾನ ಆರಂಭಿಸಿದ್ದಾರೆ.

ಮೇಡಹಳ್ಳಿ ರೈಸಿಂಗ್, ದ ಇಂಡಿಯನ್ ಪ್ಲಾಗರ್ಸ್ ಆರ್ಮಿ, ಫ್ರೆಂಡ್ಸ್ ಆಫ್ ಲೇಕ್ಸ್ ಹಾಗೂ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಸ್ವಯಂಸೇವಕರ ವತಿಯಿಂದ ಮೇ 25ರಂದು ಸ್ವಚ್ಛತಾ ಕಾರ್ಯವನ್ನು ಆಯೋಜಿಸಲಾಗಿದೆ.

ಎಲೆ ಮಲ್ಲಪ್ಪ ಶೆಟ್ಟಿ ಕೆರೆಯನ್ನು ಪ್ಲಾಸ್ಟಿಕ್ ರಹಿತ, ಕಸರಹಿತವನ್ನಾಗಿ ಮಾಡಲು ಸ್ವಚ್ಛತಾ ಕಾರ್ಯ ಒಂದು ಹೆಜ್ಜೆಯಾಗಿದೆ ಎಂದು ಪ್ಲಾಗ್ ರಾಜ್, ಸುಭಾಜಿತ್, ಮಾಧುರಿ ತಿಳಿಸಿದ್ದಾರೆ.

'ಎನ್‌ಜಿಟಿ ಆದೇಶವಿದೆ, ಸ್ಥಳೀಯರೂ ಹೋರಾಟ ನಡೆಸುತ್ತಿದ್ದಾರೆ. ಇಷ್ಟಾದರೂ ಕೆರೆಯಲ್ಲಿ ಕಟ್ಟಡ ತ್ಯಾಜ್ಯವನ್ನು ಸುರಿಯಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಕ್ರಮ ಕೈಗೊಂಡಿಲ್ಲ. ಬಿಬಿಎಂಪಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇತ್ತ ಗಮನಹರಿಸುತ್ತಿಲ್ಲ. ನೂರಾರು ವರ್ಷಗಳ ಇತಿಹಾಸವಿರುವ 490 ಎಕರೆ ವಿಸ್ತೀರ್ಣದಲ್ಲಿರುವ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಒತ್ತುವರಿ, ಮಾಲಿನ್ಯದಿಂದ ನಲುಗುತ್ತಿದೆ. ಈ ಕೆರೆಯನ್ನು ಉಳಿಸಿ, ಸಂರಕ್ಷಿಸಲು ಸ್ಥಳೀಯ ಜನರು, ಸಂಘ–ಸಂಸ್ಥೆಗಳು ಹೋರಾಡುತ್ತಿವೆ' ಎಂದಿದ್ದಾರೆ. ಸಂಪರ್ಕ: 86184 95574

ಸಂಕ್ಷಿಪ್ತ ಸುದ್ದಿ

ದಾಬಸ್ ಪೇಟೆ ಸುತ್ತ ಉತ್ತಮ ಮಳೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ದಾಬಸ್ ಪೇಟೆ, ಶಿವಗಂಗೆ, ನರಸೀಪುರ ಭಾಗಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ.

ಮಧ್ಯಾಹ್ನ 12.50ರ ಸುಮಾರಿಗೆ ಆರಂಭವಾದ ಮಳೆಯು 1.50ರವರೆಗೆ ಜೋರಾಗಿ ಸುರಿಯಿತು. ಮತ್ತೆ ಸಂಜೆಯೂ ಕೆಲವು ಭಾಗಗಳಲ್ಲಿ ಮಳೆ ಆಯಿತು. ವಾರದ ಹಿಂದೆ ಸುರಿದ ಮಳೆಯಿಂದ ಭೂಮಿ ನೆನೆದು ತಂಪಾಗಿತ್ತು.

ಇಂದು ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಲಕ್ಕೂರು ಗ್ರಾಮದಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿ ಶನಿವಾರ 13ನೇ ವರ್ಷದ ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಹಾಗೂ ಶ್ರೀಮಹಾಲಕ್ಷ್ಮಿಯವರ ಪ್ರಾಕಾರೋತ್ಸವ ನಡೆಯಲಿದೆ.

ಮಧ್ಯಾಹ್ನ 1 ಗಂಟೆಗೆ ಮಹಾ ಮಂಗಳಾರತಿ ಶಾತ್ತುಮೊರೈ ತೀರ್ಥ ಪ್ರಸಾದ ವಿನಿಯೋಗವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಕ್ತ ವಿ.ವಿ ಕೇಂದ್ರಗಳಲ್ಲೂ ಸಂಗೀತ ಪರೀಕ್ಷೆ

ಮೈಸೂರು: ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪರೀಕ್ಷೆಗಳು ಇನ್ನು ಮುಂದೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳಲ್ಲಿಯೂ ನಡೆಯಲಿದೆ.

ಎರಡೂ ವಿ.ವಿಗಳು, ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಪರಸ್ಪರ ಸಹಕಾರದ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಿದವು. 'ರಾಜ್ಯದಾದ್ಯಂತ 50ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಹಾಗೂ 3,560 ಸಂಗೀತ– ನೃತ್ಯ ಶಿಕ್ಷಕರು, 17,560 ವಿದ್ಯಾರ್ಥಿಗಳಿಗೆ ಸಂಗೀತ ಹಾಗೂ ಪ್ರದರ್ಶಕ ಕಲೆಗಳನ್ನು ಬೋಧಿಸುತ್ತಿದ್ದಾರೆ' ಎಂದು ಸಂಗೀತ ವಿ.ವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಹೇಳಿದರು.

SANSERA ideas@work

SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105. Phone: 080 27839081/82/83; Fax: 080 27839309;
Email: rajesh.modi@sansera.in; Website: www.sansera.in

CONSOLIDATED FINANCIAL RESULTS FOR THE QUARTER AND YEAR ENDED 31 MARCH 2024

(Rs. in Million except EPS)

Sl. No.	Particulars	Quarter ended 31-03-2024 (Unaudited)	Quarter ended 31-03-2023 (Unaudited)	Year ended 31-03-2024 (Audited)	Year ended 31-03-2023 (Audited)
1	Revenue from Operations	7,458.45	6,185.79	28,114.32	23,460.44
2	Net Profit/(Loss) for the period (before Tax, Exceptional and/or Extraordinary items)	649.99	486.03	2,557.91	2,032.32
3	Net Profit/(Loss) for the period before Tax (after Exceptional and/or Extraordinary items)	649.99	486.03	2,557.91	2,032.32
4	Net Profit/(Loss) for the period after Tax (after Exceptional and/or Extraordinary items)	464.65	354.20	1,875.49	1,483.42
5	Total Comprehensive Income For the period [comprising Profit/(Loss) for the period (after tax) and other comprehensive Income (after tax)]	456.09	361.00	1,868.87	1,463.81
6	Equity Share Capital	107.23	105.86	107.23	105.86
7	Reserves (excluding Revaluation Reserve) as shown in the Audited balance Sheet of the previous year			13,366.73	11,573.48
8	Earnings per share (of Rs. 2/- each) 1. Basic:	8.60	6.64	34.83	27.74
	2. Diluted:	8.52	6.53	34.40	27.17

Note:
a. The above is an extract of the detailed format of quarterly and year ended financial results filed with the stock exchanges under Regulation 33 of the SEBI (Listing Obligations and Disclosure Requirements) Regulations, 2015. The full format of the unaudited quarterly and audited year ended financial results are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.
b. The above consolidated financial results of the group were reviewed by the Audit Committee and approved by the Board of Directors at their respective meeting held on May 16, 2024. The financial results for the year ended 31 March 2024 have been audited and for the quarter ended 31 March 2024 have been reviewed by the statutory auditors and have issued an unmodified report.
c. Standalone financial information of the Company pursuant to Regulation 47(1)(b) of SEBI (LODR) Regulations, 2015

(Rs. in Million)

Particulars	Quarter ended 31-03-2024 (Unaudited)	Quarter ended 31-03-2023 (Unaudited)	Year ended 31-03-2024 (Audited)	Year ended 31-03-2023 (Audited)
Revenue from Operations	6,858.87	5,498.32	25,481.95	20,991.69
Profit before Tax	681.08	500.91	2,563.20	2,026.31
Profit after Tax	501.71	372.87	1,899.60	1,502.00

For & on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: May 16, 2024
Place: Bengaluru

Adfactors 77

9 ಗ್ರಾಮಗಳ ರೈತರು ನೀಡಿದ ಅರ್ಜಿಗೆ ಕ್ರಮ ಕೈಗೊಳ್ಳದ ಅಧಿಕಾರಿ

ತಹಶೀಲ್ದಾರ್‌ಗೆ ನೋಟಿಸ್ ನೀಡಿದ ರೈತರು

ಚನ್ನಮ್ಮನ ಕಿತ್ತೂರು ತಹಶೀಲ್ದಾರ್ ರವೀಂದ್ರ ಹಾದಿಮನಿ ಅವರಿಗೆ ಕುಲವಳ್ಳಿ ಸೇರಿದಂತೆ ಒಂಬತ್ತು ಹಳ್ಳಿಗಳ ರೈತರು ನೋಟಿಸ್ ನೀಡಿದರು

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಕುಲವಳ್ಳಿ ಸೇರಿ ಒಂಬತ್ತು ಗ್ರಾಮಗಳ ರೈತರು ನೀಡಿದ ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳದ್ದರಿಂದ ಬೇಸತ್ತ ರೈತರು, ತಹಶೀಲ್ದಾರ್ ರವೀಂದ್ರ ಹಾದಿಮನಿ ಅವರಿಗೆ ಶುಕ್ರವಾರ ನೋಟಿಸ್ ನೀಡಿದ್ದಾರೆ.

'ಹೈಕೋರ್ಟ್‌ನಿಂದ ಸಾಗುವಳಿ ಹಕ್ಕಿನ ಆದೇಶವನ್ನು 60 ರೈತರು ಪಡೆದಿದ್ದಾರೆ. ಅವರ ಹೆಸರುಗಳನ್ನು ಗೇಣಿ ಮತ್ತು ಪಹಣಿ ಪತ್ರಿಕೆಯ ಸಾಗುವಳಿದಾರ ಕಾಲಂನಲ್ಲಿ ನೋಂದಣಿ ಮಾಡಬೇಕು' ಎಂದು ರೈತರು ಆಗ್ರಹಿಸಿದರು.

ರೈತ ಮುಖಂಡ ಬಿಷ್ಟಪ್ಪ ಶಿಂದೆ ಮಾತನಾಡಿ, 'ರಾಜ್ಯ ಸರ್ಕಾರ ಸರ್ವೆ ಮಾಡಿಸಿ ಎಲ್ಲಿ, ಯಾರು ಉಳುಮೆ ಮಾಡುತ್ತಾರೆ ಎಂಬುದರ ಜಮೀನು ನಕ್ಷೆ ಸಿದ್ಧಪಡಿಸಿದೆ. ಕೋರ್ಟ್‌ಗೆ ಹೋಗಿ ಉಳುಮೆ ಹಕ್ಕು ಪಡೆದು ಬಂದಿದ್ದೇವೆ. ಈ ಆದೇಶ ಪ್ರತಿ ನೀಡಿದರೂ ತಹಶೀಲ್ದಾರ್ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರು ಯಾರದೋ ಪರ ಇಲ್ಲಿ ಕೆಲಸ ಮಾಡುತ್ತಿರುವ ಸಂದೇಹ ರೈತರಲ್ಲಿ ಮೂಡಿದೆ' ಎಂದು ದೂರಿದರು.

'ರೈತರ ಪರವಾಗಿ ಆದೇಶ ನೀಡಿದ ಪ್ರತಿಗಳನ್ನು ನಿಮಗೆ ನೀಡುತ್ತಿದ್ದೇವೆ. ಕೋರ್ಟ್ ಆದೇಶ ಗೌರವಿಸಿ ರೈತರ ಉಳುಮೆ ಕಾಲಂನಲ್ಲಿ ಅಥವಾ ಸಂಬಂಧಿಸಿದ ಕಾಲಂನಲ್ಲಿ ಹೆಸರು ನಮೂದಿಸಿ ಉತಾರ ಪೂರೈಸಬೇಕು. ಇದಕ್ಕೂ ವಿಳಂಬ ಮಾಡಿದರೆ ರೈತರು ಮತ್ತೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ' ಎಂದು ಎಚ್ಚರಿಸಿದ ರೈತರು, ಕುಲವಳ್ಳಿ ಗುಡ್ಡದ ಜಮೀನುಗಳ ಸಂಪೂರ್ಣ ಮಾಹಿತಿ ಒಳಗೊಂಡ ಪ್ರತಿಯನ್ನು ತಹಶೀಲ್ದಾರ್‌ಗೆ ನೀಡಿದರು.

ಮುಖಂಡರಾದ ಅಪ್ಪೇಶ ದಳವಾಯಿ, ಮಡಿವಾಳಪ್ಪ ವರಗಣ್ಣವರ, ಅರ್ಜುನ ಮಡಿವಾಳರ, ದಶರಥ ಮಡಿವಾಳರ, ರಾಚಯ್ಯ ಒಕ್ಕುಂದಮಠ, ಕಾಶೀಂ ನೇಸರಗಿ ಸೇರಿ ಒಂಬತ್ತು ಹಳ್ಳಿಗಳ ರೈತರು, ಮಹಿಳೆಯರು ಇದ್ದರು.

ಲಂಚ: ಪಿಎಸ್‌ಐ, ಕಾನ್‌ಸ್ಟೆಬಲ್ ಬಂಧನ

ಶರಣಬಸಪ್ಪ ಕಾಂದೆ

ಸುರೇಶ ಮಾನೋಜಿ

ಹಾವೇರಿ: ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ತಡಸ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಜೂಜು (ಇಸ್ಪೀಟ್) ಆಡಿಸಲು ₹2 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ತಡಸ ಪೊಲೀಸ್ ಠಾಣೆಯ ಪಿಎಸ್‌ಐ ಶರಣಬಸಪ್ಪ ಕಾಂದೆ ಮತ್ತು ಕಾನ್‌ಸ್ಟೆಬಲ್ ಸುರೇಶ ಮಾನೋಜಿ ಎಂಬವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಜೂಜು ಆಡಿಸಲು ಪ್ರಭಾಕರ ಈರಪ್ಪ ಬೆಟ್ಟದೂರ ಅವರಿಗೆ ₹5 ಲಕ್ಷ ಲಂಚದ ಬೇಡಿಕೆ ಇಟ್ಟು, ಮಧ್ಯವರ್ತಿ ಕಿರಣ ವನಹಳ್ಳಿ ಮೂಲಕ ₹2 ಲಕ್ಷ ಮುಂಗಡ ಪಡೆಯುವಾಗ, ಕಾರ್ಯಾಚರಣೆ ಮಾಡಿದೆವು. ಲೋಕಾಯುಕ್ತ ಡಿವೈಎಸ್‌ಪಿ ಬಿ.ಪಿ.ಚಂದ್ರಶೇಖರ್ ನೇತೃತ್ವ ವಹಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

Dr.AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru – 560 056
Tel – 080- 23211232 & Mob No -9986003865

AIT/SS/239/2024-25 Date: 17-05-2024

TENDER NOTIFICATION

Sealed quotations are invited from Reputed/ Authorized firms for supply and Installation of **English Language Lab Software** Details and specification of requirements can be downloaded from college website **www.drait.edu.in**

The sealed quotation shall be attached with a DD of **Rs.500/-** and submit the sealed quotations on or before **07.06.2024** by **1.00 PM.** Quotations will be opened on the same day i.e. **07.06.2024** at **4.00 PM.**

Sd/- Principal Sd/- Secretary, PVPWT

ಹಿಮ ತೆರವು

ಹಿಮಾಚಲ ಪ್ರದೇಶದ ಮನಾಲಿ ಬಳಿಯ ರೋಹ್ತಂಗ್ ಪಾಸ್ ಮಾರ್ಗದಲ್ಲಿ ಬಿದ್ದಿದ್ದ ಹಿಮದ ರಾಶಿಯನ್ನು ಬಾರ್ಡರ್ ರೋಡ್ ಆರ್ಗನೈಜೇಶನ್ (ಬಿಆರ್‌ಒ) ಸಿಬ್ಬಂದಿ ಶುಕ್ರವಾರ ತೆರವುಗೊಳಿಸಿದರು –ಪಿಟಿಐ ಚಿತ್ರ

ರಾಮೋಹಳ್ಳಿ ಗ್ರಾ.ಪಂ ಅಧ್ಯಕ್ಷರ ಆಯ್ಕೆ

ರಾಜರಾಜೇಶ್ವರಿ ನಗರ: ರಾಮೋಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಬಿ.ಎಚ್. ಪ್ರಭು ಅವರು ಅವಿರೋಧವಾಗಿ ಆಯ್ಕೆಯಾದರು.

ಶಿಕಾರಿ ವೇಳೆ ಗುಂಡೇಟು: ಯುವಕ ಸಾವು

ಪ್ರಜಾವಾಣಿ ವಾರ್ತೆ



ಸಂಜಯ್

ಚಿಕ್ಕಮಗಳೂರು: ತಾಲ್ಲೂಕಿನ ಉಳುವಾಗಿಲು ಬಳಿ ಶಿಕಾರಿಗೆ ತೆರಳಿದ್ದ ಯುವಕನಿಗೆ ಗುಂಡು ತಗುಲಿ ಮೃತಪಟ್ಟಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ಕೆರೆಮಕ್ಕಿ ಗ್ರಾಮದ ಸಂಜಯ್ (33) ಮೃತ ಯುವಕ. ಕಾಡು ಹಂದಿ ಬೇಟೆಗೆ ತೆರಳಿದ್ದ ಮೂವರು ಯುವಕರ ಗುಂಪಿನಲ್ಲಿ ಒಬ್ಬರು ಹಾರಿಸಿದ ಗುಂಡು ಯುವಕನ ಎದೆಗೆ ತಗುಲಿದೆ. ಮೃತದೇಹ ಉಳುವಾಗಿಲು ಸಮೀಪ ಮುಖ್ಯರಸ್ತೆಯಲ್ಲಿ ಬಿದ್ದಿದೆ.

ಜೊತೆಯಲ್ಲಿದ್ದ ಇನ್ನಿಬ್ಬರ ಪೈಕಿ ಸುಮನ್ ಎಂಬವರು ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ನಿಸರ್ಗ ಎಂಬ ಯುವಕ ತಲೆಮರೆಸಿಕೊಂಡಿದ್ದಾರೆ. ಹತ್ಯೆಯೋ, ಆಕಸ್ಮಿಕ ಘಟನೆಯೋ ಎಂಬುದರ ಕುರಿತು ಪೊಲೀಸರು ಪರಿಶೀಲಿಸುತ್ತಿದ್ದಾರೆ. 'ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಕೂಡ ಸ್ಥಳಕ್ಕೆ ಬಂದು ತಪಾಸಣೆ ನಡೆಸಿದ್ದಾರೆ. ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹದ ಸಮೀಪವೇ ತೋಟದ ಬೇಲಿಯಲ್ಲಿ ತೋಟಕೋವಿಯೊಂದು ಪತ್ತೆಯಾಗಿದ್ದು, ಮೃತರ ಕುಟುಂಬಸ್ಥರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಸಂಜಯ್ ಅವರ ತಾಯಿ ನೀಡಿರುವ ದೂರು ಆಧರಿಸಿ ಮಲ್ಲಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ–122050.
Email: roc.cpace@mca.gov.in

सत्यमेव जयते

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ ಸಿ–ಪೇಸ್/ಎಸ್‌ಟಿಕೆ–2/248(2)/2024–25/81 ದಿನಾಂಕ: 07.05.2024

ಉಲ್ಲೇಖ:

(1) ಕರ್ನಾಟಕ ರಾಜ್ಯದ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ (65) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ಎಸ್‌ಆರ್‌ಎನ್	ಸಿಐಎನ್	ಕಂಪನಿ ಹೆಸರು
1	AA7443355	U62013KA2024PTC183129	ಪಿನ್‌ಸ್ಟಾರ್ 24 ಪ್ರೈವೇಟ್ ಲಿಮಿಟೆಡ್
2	AA7223242	U62013KA2023PTC174141	ಡಬಲ್ಡೋಪ್ ಪ್ರೈವೇಟ್ ಲಿಮಿಟೆಡ್
3	AA7137092	U45309KA2022FTC168304	ನೋವೆಲ್ ಬಿಟಿಪಿ ಪ್ರೈವೇಟ್ ಲಿಮಿಟೆಡ್
4	AA7461748	U74999KA2022PTC166923	ಹರೇಶನ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
5	AA7573629	U92490KA2022PTC161622	ಗ್ರೇಟ್‌ಬ್ರೋಸ್ ಸ್ಟುಡಿಯೋಸ್ ಪ್ರೈವೇಟ್ ಲಿಮಿಟೆಡ್
6	AA7426506	U01110KA2022PTC162712	ಪ್ರೊಟೀನ್ ಅಗ್ರಿ & ಅಲೈಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
7	AA7424026	U72900KA2022PTC164568	ಫ್ಲುಕೋ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
8	AA7174319	U72900KA2016OPC098411	ಸೆಲೆಸ್ಟಿಕಾ ಟೆಕ್ ಇಂಡಿಯಾ (ಒಪಿಸಿ) ಪ್ರೈವೇಟ್ ಲಿಮಿಟೆಡ್
9	AA7407947	U93000KA2019OPC121320	ಸೀಕೇಪ್ ಶಿಪ್ಪಿಂಗ್ ಮತ್ತು ಟ್ರೇಡಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
10	AA7340556	U15490KA2019PTC122267	ದಫೇದಾರ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
11	AA7538261	U72100KA2021FTC156054	ರೈಂಟೆಕ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್
12	AA7530364	U72200KA2021PTC152273	ಇ–ಸೆಲ್ಫ್ ಸರ್ವಿಸ್ ಕಾರ್ಟ್ ಪ್ರೈವೇಟ್ ಲಿಮಿಟೆಡ್
13	AA7183312	U23100KA2022PTC163730	ಮಿಗ್ ಬಯೋ ಫ್ಯುಯೆಲ್ ಪ್ರೈವೇಟ್ ಲಿಮಿಟೆಡ್
14	AA7519054	U17299KA2021PTC153807	ತಿರಂಗ್ ರಿಟೇಲ್ಸ್ ಪ್ರೈವೇಟ್ ಲಿಮಿಟೆಡ್
15	AA7408174	U72900KA2019PTC121792	ಮಾಸ್ಟರ್‌ಡೆನ್ ಸ್ಟುಡಿಯೋ ಪ್ರೈವೇಟ್ ಲಿಮಿಟೆಡ್
16	AA7437360	U72200KA2021PTC153880	ಸಿರಿಯಮ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
17	AA7425065	U40106KA2019PTC121824	ಸೂರ್ಯಾರ್ಥ್ ಎನರ್ಜಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
18	AA7505612	U72900KA2021PTC155215	ವೆಲಾಸಿಟಿ ಆಟೋಮೋಟಿವ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
19	AA7291141	U65990KA2022PLN157133	ಯಾಸೀನ್ ಖಾನ್ ನಿಧಿ ಲಿಮಿಟೆಡ್
20	AA7526650	U72900KA2021PTC151857	ಮಲ್ಟಿಟ್ಯೂಡ್ ಆಟೋಮೇಷನ್ ಪ್ರೈವೇಟ್ ಲಿಮಿಟೆಡ್
21	AA7199253	U34300KA2021PTC154613	ರಾಕ್‌ಹ್ಯಾಮರ್ ಹೆವಿ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
22	AA7204730	U74999KA2021PTC154689	ಓಪನ್‌ಹಬ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
23	AA7470797	U80900KA2021PTC145349	ಎಡ್ಯೂಲೀಡ್ ಲೈಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
24	AA7372047	U40105KA2021PTC151133	ಪ್ರೈಮೆಕೋ ಪವರ್ ಪ್ರೈವೇಟ್ ಲಿಮಿಟೆಡ್
25	AA7634280	U70100KA2016PTC095765	ಕ್ಲಿಚ್ಡ್ ಡೈನಿಂಗ್ ಪ್ರೈವೇಟ್ ಲಿಮಿಟೆಡ್
26	AA7507468	U72900KA2021PTC142846	ನಿವಯಂ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
27	AA7318536	U74999KA2020PTC141578	ಫ್ರಾಟರ್ನಿಟಿ ಲೈಫ್‌ಸ್ಟೈಲ್ ಪ್ರೈವೇಟ್ ಲಿಮಿಟೆಡ್
28	AA7167768	U74910KA2020PTC141934	ಡಾಲ್ಫಿನ್ ಹೆಚ್‌ಆರ್ ಸಲ್ಯೂಷನ್ಸ್ ಮತ್ತು ಸ್ಕಿಲ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್
29	AA7430057	U74110KA2020PTC140887	AEQUS ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
30	AA7634261	U15209KA2020PTC137172	ಮೈಟೊ ಫುಡ್ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್
31	AA7427160	U74999KA2020PTC137683	ಕಲಾತಪಸ್ಯ ಪ್ರೈವೇಟ್ ಲಿಮಿಟೆಡ್
32	AA7571286	U72900KA2020PTC138403	AVIRF ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
33	AA7583752	U72200KA1996PTC020444	ಎಫ್‌ಡಿಬಿ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್
34	AA7530823	U72900KA2019PTC128695	ನೂನ್‌ಟ್ಯೂಮ್ ಮೀಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
35	AA7232295	U28999KA2019PTC128728	ಉಲ್ಲಾಸ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
36	AA7623341	U24304KA2020PTC134675	ಸಾಂತಬೇ ಮೆಡಿಟೆಕ್ ಪ್ರೈವೇಟ್ ಲಿಮಿಟೆಡ್
37	AA7508555	U93000KA2020PTC131755	ಸೊಸೈಮಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
38	AA7580083	U72900KA2019PTC128824	ಪ್ರಗತಿಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
39	AA7185392	U65992KA2018PTC118070	ಕವಿರಾಮ್ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್
40	AA7362122	U01100KA2018PTC115395	ಬೆವಿ ಅಗ್ರೋಟೆಕ್ ಪ್ರೈವೇಟ್ ಲಿಮಿಟೆಡ್
41	AA7560404	U74999KA2018PTC117227	ಸೈನ್‌ಬೀಸ್ ಪ್ರೈವೇಟ್ ಲಿಮಿಟೆಡ್
42	AA7379397	U74999KA2018PTC111903	ವರ್ಟಿಯಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
43	AA7555385	U72900KA2018PTC112880	ಅಲ್ಟಾಪೀ ಇಂಡಿಯಾ ಪ್ರೈವೇಟ್ ಲಿಮಿಟೆಡ್
44	AA7207845	U74999KA2017PTC105096	ಕರೋಮ್ಸ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
45	AA7643809	U72900KA2017OPC108171	ಐಕ್ಯಾ ಮೆಡಿಕಲ್ ಸರ್ವೀಸಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
46	AA7509266	U74999KA2017PTC101214	ಬಂಪ್ಟಿ ಡ್ರಮ್ಸ್ ಮೀಡಿಯಾ ಮತ್ತು ಎಂಟರ್ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್
47	AA6971481	U45400KA2016PTC096088	ಹನಿ ಪ್ರಾಪರ್ಟೀಸ್ ಬಿಲ್ಡರ್ಸ್ &. ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್
48	AA7625364	U93090KA2017PTC102642	ಡಿಕ್ಟಮ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್
49	AA7361101	U74999KA2016PTC092598	ವೈನೆಟ್ರಾ ಆನ್‌ಲೈನ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್
50	AA7630404	U72200KA2016PTC085494	ಆಪ್ಟೆಸೊ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
51	AA7160495	U65992KA2016PTC086872	ರಿಸೋರ್ಸ್ ಚಿಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
52	AA7312210	U18109KA2015PTC082658	ಟೌರಿಯೋ ಫ್ಯಾಶನ್ ಪ್ರೈವೇಟ್ ಲಿಮಿಟೆಡ್
53	AA7657840	U80301KA2016PTC085478	ಎಡ್ಯೂಸಿಕ್ಸ್ ಎಜುಕೇಶನಲ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್
54	AA7527754	U60200KA2014PTC076081	ಮ್ಯಾರಥಾನ್ ಲಾಜಿಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್
55	AA7547293	U70101KA2009PTC050877	ಕೆಆರ್‌ಎಸ್ ಇನ್ಫ್ರಾ ಪ್ರೈವೇಟ್ ಲಿಮಿಟೆಡ್
56	AA7489468	U72200KA2011PTC057910	ಪಿಎನ್‌ಸಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
57	AA7262294	U74900KA2010PTC054430	ಡಿಕೆಆರ್ ಅಸೋಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್
58	AA7552572	U45300KA2008PTC048643	ಡೆಲ್ಟಾ ಬಿಲ್ಡ್‌ಪ್ರೊ ಇಂಡಿಯಾ ಪ್ರೈವೇಟ್ ಲಿಮಿಟೆಡ್
59	AA7137733	U35301KA2006PTC040450	ಶೋಭಾ ಏವಿಯೇಷನ್ ಮತ್ತು ಇಂಜಿನಿಯರಿಂಗ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್
60	AA7372669	U55101KA1992PTC012949	ಎಕ್ಸೈಟ್ ಕ್ಯೂಸಿನ್ಸ್ ಪ್ರೈವೇಟ್ ಲಿಮಿಟೆಡ್
61	AA7138402	U45201KA2008PTC047073	ಶೋಭಾ ಹೈಟೆಕ್ ಸಿಟಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್
62	AA7174156	U45202KA2007PTC042199	ಶೋಭಾ ಮ್ಯಾಪ್ಲೆಟ್ರೀ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್
63	AA7487262	U55101KA2006PTC041189	ಇಟಿಎ ಸ್ಟಾರ್ ಫೆಸಿಲಿಟೀಸ್ ಮ್ಯಾನೇಜ್‌ಮೆಂಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್
64	AA7578584	U27141KA2007PTC041762	ಶೋಭಾ ಜ್ಯುವೆಲರಿ ಪ್ರೈವೇಟ್ ಲಿಮಿಟೆಡ್
65	AA7365927	U47912KA2023PTC176684	ಕ್ರಿಯಾ ಪ್ರಾಡಕ್ಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

(ಇರ್‌ಕಾನ್ ಟಿರ್‌ಕೀ)
ಸಹಾಯಕ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0054/2425

ನೈಋತ್ಯ ರೈಲ್ವೆ G20

ಇ–ಟೆಂಡರ್ ಪ್ರಕಟಣೆ ಸಂ. 06 ಯುಬಿಎಲ್ 2024–25
ದಿನಾಂಕ : 10–05–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಸಹಾಯಕ ವಿಭಾಗೀಯ ಇಂಜಿನಿಯರ್ / ಬಳ್ಳಾರಿ ಸೆಕ್ಷನ್‌ನಲ್ಲಿ ವಾಟರ್‌ವೇ ಸೇತುವೆಗಳಿಗೆ ಪಿಚಿಂಗ್, ಫ್ಲೋರಿಂಗ್, ರೀಟೇನಿಂಗ್ ವಾಲ್ ಇತ್ಯಾದಿಗಳಂತಹ ಸುಧಾರಣೆಗಳು	ರೂ. 2,24,76,426/–
2	ಹುಬ್ಬಳ್ಳಿ ವಿಭಾಗ : ಸಹಾಯಕ ವಿಭಾಗೀಯ ಇಂಜಿನಿಯರ್ / ಗದಗ ಸೆಕ್ಷನ್‌ನಲ್ಲಿ ವಾಟರ್‌ವೇ ಸೇತುವೆಗಳಿಗೆ ಪಿಚಿಂಗ್, ಫ್ಲೋರಿಂಗ್, ರೀಟೇನಿಂಗ್ ವಾಲ್ ಇತ್ಯಾದಿಗಳಂತಹ ಸುಧಾರಣೆಗಳು	ರೂ. 1,97,28,270/–
3	ಹುಬ್ಬಳ್ಳಿ ವಿಭಾಗ : ಕರಂಜೋಲ್, ದೂಧ್‌ಸಾಗರ್ ಮತ್ತು ಸೊನಾಲಿಯಂ ಯಾರ್ಡ್‌ನಲ್ಲಿ 4.11 ಕಿಮೀ.ಗಳ ಒಟ್ಟು ಉದ್ದಕ್ಕಾಗಿ ಟಿಎಸ್‌ಆರ್(ಪಿ)	ರೂ. 1,31,54,655/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07–06–2024 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ
ಪಿಯುಬಿ/79/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY

ಮಯೂರ, ಸುಧಾ ಓದಿ...

ನೈಋತ್ಯ ರೈಲ್ವೆ G20

ಟೆಂಡರ್ ಪ್ರಕಟಣೆ ಸಂ. ಶಹಾಪುರ–ವಾಡಿ–ಟಿಇಎಲ್‌ಇ/2024–25–02
ದಿನಾಂಕ : 13–05–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಗದಗ (ತಳಕಲ್ಲ) – ವಾಡಿ ಸೆಕ್ಷನ್‌ನ ಹೊಸ ಮಾರ್ಗ ಕಾಮಗಾರಿಗೆ ಸಂಬಂಧಿಸಿದಂತೆ ಶಹಾಪುರ – ವಾಡಿ ಸೆಕ್ಷನ್ (47 ಕಿಮೀ) ನಲ್ಲಿ ಓಎಫ್‌ಸಿ ಮತ್ತು 6 ಕ್ವಾಡ್ ಆಧಾರಿತ ಸಂವಹನ ವ್ಯವಸ್ಥೆಯನ್ನು ಒದಗಿಸುವುದು.	ರೂ. 8,94,05,304/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03–06–2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ / ನಿರ್ಮಾಣ, ಹುಬ್ಬಳ್ಳಿ
ಪಿಯುಬಿ/82/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರಾದ **ಶ್ರೀಮತಿ ವಿಮಲಾ ಎಸ್. ಕೋಂ. ಶ್ರೀನಿವಾಸ್,** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ದಿವಂಗತ ಸಿದ್ದಪ್ಪನ ವಿರುದ್ಧ ದಾಖಲಾದ O.S. No. 33/2000 ದಾವೆಯ ರಾಜೀತೀರ್ಪಿನ ಮೂಲಕ ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿದ್ದಾರೆ. ಅದಲ್ಲದೆ ನನ್ನ ಕಕ್ಷಿದಾರರಾದ ಶ್ರೀಮತಿ ವಿಮಲಾ ಎಸ್. ರವರು ಮಾನ್ಯ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರುನಲ್ಲಿ O.S. No. 127/2018 ದಾವೆಯನ್ನು ದಿವಂಗತ ಸಿದ್ದಪ್ಪನವರ ವಾರಸುದಾರರ ವಿರುದ್ಧ ಸಲ್ಲಿಸಿದ್ದು, ಸದರಿ ದಾವೆಯಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ದಿವಂಗತ ಸಿದ್ದಪ್ಪನವರ ವಾರಸುದಾರರ ವಿರುದ್ಧ ಮಧ್ಯಂತರ ತಡೆಯಾಗಿ ನೀಡುವ ಮೂಲಕ ಮರ ಕಡಿಯುವುದು ಮತ್ತು ನನ್ನ ಕಕ್ಷಿದಾರರ ಸ್ವಾಧೀನಕ್ಕೆ ಮಧ್ಯ ಪ್ರವೇಶಿಸುವುದನ್ನು ನಿರ್ಬಂಧಿಸಿರುತ್ತದೆ. ಹೀಗಿರುವಾಗ, ಇತ್ತೀಚೆಗೆ, ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಅಥವಾ ಸ್ವಾಧೀನವನ್ನು ಹೊಂದಿರದ ದಿವಂಗತ ಸಿದ್ದಪ್ಪ ಅವರ ವಾರಸುದಾರರು ನಕಲಿ ದಾಖಲೆಗಳ ಆಧಾರದ ಮೇಲೆ ಬೇರೆಯವರಿಗೆ ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆಂದು ನನ್ನ ಕಕ್ಷಿದಾರರಿಗೆ ತಿಳಿದು ಬಂದಿದೆ. ಸದರಿ ದಿವಂಗತ ಸಿದ್ದಪ್ಪ ಅವರ ವಾರಸುದಾರರುಗಳಿಗಾಗಲಿ ಅಥವಾ ಅವರ ಮೂಲಕ ಯಾರೆ ಇದ್ದರೂ ಅವರುಗಳಿಗೆ ಕೆಳಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ **ದಿವಂಗತ ಸಿದ್ದಪ್ಪ ಅವರ ವಾರಸುದಾರರುಗಳಿಂದ** ಅಥವಾ ಅವರ ಮೂಲಕ ಯಾವುದೇ ವ್ಯಕ್ತಿಯಿಂದ ಷೆಡ್ಯೂಲ್ ಸ್ವತ್ತುಗಳನ್ನು ಯಾರೊಬ್ಬರೂ ಕ್ರಯ, ಕರಾರು, ಭೋಗ್ಯ ಇತ್ಯಾದಿಗಳನ್ನು ಮಾಡಿಸಿ ಕೊಳ್ಳಬಾರದು. ಒಂದು ಪಕ್ಷ ಕ್ರಯ, ಕರಾರು, ಭೋಗ್ಯ ಇತ್ಯಾದಿಗಳನ್ನು ಯಾರೇ ಷೆಡ್ಯೂಲ್ ಸ್ವತ್ತಿನ ಬಗ್ಗೆ ಮಾಡಿಸಿಕೊಂಡಲ್ಲಿ ಅಂತಹ ಕ್ರಯ, ಕರಾರು, ಭೋಗ್ಯ ಇತ್ಯಾದಿಗಳು ಊರ್ಜಿತವಾಗುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ.

ಷೆಡ್ಯೂಲ್ ಸ್ವತ್ತು

ಸೈ.ನಂ 46, ಪ್ರಸ್ತುತ 46/P153, ಕಗ್ಗಲಿಪುರ ಗ್ರಾಮ, ನೌಕೋಲ್ಪಾಳ್ಯ ರಸ್ತೆ, ಬೆಂಗಳೂರು ದಕ್ಷಿಣ ತಾಲೂಕು 2 ಎಕರೆ 20 ಗುಂಟಾಗಳ ಅಳತೆಯ ಆಸ್ತಿಯನ್ನು ಹೊಂದಿರುವ ಎಲ್ಲಾ ತುಂಡು ಮತ್ತು ಪಾರ್ಸೆಲ್: ಪೂರ್ವದಿಂದ: ರಸ್ತೆ, ಪಶ್ಚಿಮದಿಂದ: ರಸ್ತೆ, ದಿನ್ನೆ ಪಾಳ್ಯ ರಸ್ತೆ, ಉತ್ತರದಿಂದ: ರಾಜಕಾಲುವೆ ಮತ್ತು ಕುಂಟರಾಮಣ್ಣ, ಮುನಮ್ಮ, ವೀರಭದ್ರಯ್ಯ ಅವರ ಆಸ್ತಿ ಪ್ರಸ್ತುತ ನಾಗರಾಜು ಅವರು ಸ್ವಾಧೀನದಲ್ಲಿ ಇದ್ದಾರೆ, ಮಾಜಿ ಚೇರ್ಮನ್, ಕಗ್ಗಲಿಪುರ ಪಂಚಾಯಿತಿ, ದಕ್ಷಿಣದಿಂದ: ನೌಕೋಲ್ಪಾಳ್ಯ ರಸ್ತೆ.

Ravi .H.K, Advocate
Kantharaja & Associates,
No.201, 2nd Floor, Kurubara Sangha Building, Golden Jubilee Block,
1st Main, Gandhinagar,
Bengaluru-560009. Ph: 9964543939

OS NO. 53/2023
IN THE COURT OF THE SENIOR CIVIL JUDGE AND JMFC RAMDURG AT RAMDURG

1. **Smt. Neelabai W/o. Walappa Rathod @ Lamani** ..... Plaintiff
V/s
1. **Krishnappa S/o. Nandeppa Pammar @ Lamani and Others** ..... Defendants

To,
Defendant No. 7 : Smt. Laxmibai W/o. Banuprakash Pammar
Age: 60 Years Occ: Household work
Defendant No. 8 :
Shri. Kiran S/o. Banuprakash Pammar
Age: 38 Years Occ: Private Service
Defendant No. 9 :
Smt. Shama w/o. Santosh Naik
Age: 42 years Occ: Household work
Defendant No. 10:
Smt. Sushma w/o. Raghu
Age: 40 Years Occ: Household work
All are resident of 37, 1st A cross, mountzayi Layout, Gavipuram Badavane, Hanamantanagar, Bengaluru South, Bengaluru.

CITATION

WHEREAS, the above named plaintiff has filled a suit for partition and separate possession of her share in the suit scheduled properties against you and other Defendants, you are hereby summoned to appear before this court in person or through authorized agent on the day of 2/7/2024 at 10:30 am to answer the claim. Take notice that, in default of your appearance on the day above mentioned, the case will be heard and decided in your absence.

Given under my hand and the seal of the Court, on 16 day of May-2024

By order of the Court
Sd/-
Senior Sherishtedar
Senior Civil Judge and JMFC Court Ramdurg

Sd/-
(S.S. Konnur)
Advocate for Plaintiff

‘ಕನ್ನಡ ಉಳಿಸಲು ದ್ವಿಭಾಷಾ ನೀತಿ ಜಾರಿಗೊಳಿಸಿ’

ಎಎಪಿ ರಾಜ್ಯ ಉಪಾಧ್ಯಕ್ಷ ಡಾ. ರಮೇಶ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕನ್ನಡ ಉಳಿಯಬೇಕಾದರೆ ದ್ವಿಭಾಷಾ ನೀತಿ ಜಾರಿಗೊಳಿಸಬೇಕು. ರಾಜ್ಯದಲ್ಲಿ ಶಿಕ್ಷಣ, ಆಡಳಿತ ಮತ್ತು ಸಾಮಾನ್ಯ ಸಂವಹನದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಕಡ್ಡಾಯ ಭಾಷೆಗಳಾಬೇಕು. ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟ ಹೆಚ್ಚಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಡಾ. ರಮೇಶ್ ಬೆಳ್ಳಮ್ಕೊಂಡ, ‘ಕನ್ನಡ ಮಾಧ್ಯಮದಲ್ಲಿ ಓದಿದ ಸಾವಿರಾರೂ ವಿದ್ಯಾರ್ಥಿಗಳು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲೇ ಅನುತ್ತೀರ್ಣಗೊಂಡಿದ್ದಾರೆ. ಈ ವರ್ಷ ಕನ್ನಡ ಮಾಧ್ಯಮ ಶಾಲೆಗಳ ಫಲಿತಾಂಶ ಶೇ 52ರಷ್ಟು ದಾಖಲಾಗಿದೆ. ಶೇ 48ರಷ್ಟು ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ’ ಎಂದರು.

ಕೊಪ್ಪಳ ಜಿಲ್ಲೆಯೊಂದರಲ್ಲೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ 22 ಸಾವಿರ ವಿದ್ಯಾರ್ಥಿಗಳ ಪೈಕಿ 8 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಇದು ಕನ್ನಡ ಶಾಲೆಗಳ ಗುಣಮಟ್ಟ, ಶಿಕ್ಷಕರ ಬೋಧನಾ ಗುಣಮಟ್ಟಗಳ ಬಗ್ಗೆ ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕಿದೆ. ಕನ್ನಡ ಶಾಲೆಗಳ ಅಗತ್ಯತೆ ಬಗ್ಗೆ ಪೋಷಕರು ಪ್ರಶ್ನಿಸುವಂತಾಗಿದೆ. ರಾಜ್ಯ ಸರ್ಕಾರ ಸಮವಸ್ತ್ರ, ಶೂಗಳು, ಪುಸ್ತಕಗಳು, ಬಿಸಿಯೂಟ, ಮೊಟ್ಟೆ, ಚಿಕ್ಕಿ ಹೀಗೆ ಸಾಕಷ್ಟು ಉಚಿತ ಕೊಡುಗೆಗಳನ್ನು ನೀಡುತ್ತಲೇ ಬಂದಿದೆ. ಆದರೆ, ಏಕೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಕೇಂದ್ರ ಸರ್ಕಾರದ ಉದ್ಯೋಗಗಳು ಮತ್ತು ಇತರೆ ಅವಕಾಶಗಳು ಹಿಂದಿ ಭಾಷಿಕರಿಗೆ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ. ಸದ್ಯ ಯುಪಿಎಸ್‌ಸಿ, ಎಸ್‌ಎಸ್‌ಸಿ ಪರೀಕ್ಷೆಗಳು ಸೇರಿದಂತೆ ಬ್ಯಾಂಕಿಂಗ್, ರೈಲ್ವೆ ಪರೀಕ್ಷೆಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳ ಪರೀಕ್ಷೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ನಡೆಸಲಾಗುತ್ತಿದೆ’ ಎಂದರು.

ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್, ‘ಇಂಗ್ಲಿಷ್ ಅನ್ನು ದ್ವೇಷಿಸುವುದರಿಂದ ಹಿಂದಿ ಹೇರಿಕೆಯನ್ನು ಸುಗಮಗೊಳಿಸಿದಂತಾಗುತ್ತದೆ. ಹಿಂದಿಯೇತರ ಭಾರತೀಯರನ್ನು ಮತ್ತಷ್ಟು ಕಡೆಗಣಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂಬುದನ್ನು ಕನ್ನಡಿಗರು ಮನಗಾಣಬೇಕು’ ಎಂದು ಸಲಹೆ ನೀಡಿದರು.

ತೇಜಸ್ವಿ ವಿರುದ್ಧದ ಪ್ರಕರಣ ಅರ್ಜಿ ಪರಿಗಣನೆಗೆ ನಕಾರ

ಪ್ರಜಾವಾಣಿ ವಾರ್ತೆ

ತೇಜಸ್ವಿ ಸೂರ್ಯ

ನವದೆಹಲಿ: ಬಿಜೆಪಿ ಸಂಸದ ತೇಜಸ್ವಿ ಸೂರ್ಯ ವಿರುದ್ಧದ ದ್ವೇಷ ಭಾಷಣ ಪ್ರಕರಣದಲ್ಲಿ ತನಿಖೆಗೆ ತಡೆ ನೀಡಿರುವ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನಗರ್ತಪೇಟೆಯ ಮೊಬೈಲ್ ಅಂಗಡಿ ಮಾಲೀಕ ಮುಖೇಶ್ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗ ತಂದ ಆರೋಪದಡಿ ತೇಜಸ್ವಿ ಸೂರ್ಯ ವಿರುದ್ಧ ದಾಖಲಾಗಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿತ್ತು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರ ಪೀಠವು ಸಿಎಚ್‌ಎಸ್ (ದ್ವೇಷ ಭಾಷಣದ ವಿರುದ್ಧದ ಸಂಘಟನೆ) ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿತು.

‘ಕ್ಷಮಿಸಿ, ನಿಮ್ಮ ಮನವಿಯನ್ನು ಪರಿಗಣಿಸಲು ನಾವು ಒಲವು ತೋರುತ್ತಿಲ್ಲ. ನೀವು ಅರ್ಜಿ ಹಿಂಪಡೆಯಲು ಬಯಸಿದರೆ, ನೀವು ಹಾಗೆ ಮಾಡಬಹುದು’ ಎಂದು ಪೀಠ ಹೇಳಿತು. ಬಳಿಕ ಅರ್ಜಿದಾರರು ಅರ್ಜಿ ಹಿಂಪಡೆದರು. ಆದಾಗ್ಯೂ, ಆದೇಶವನ್ನು ಮಾರ್ಪಡಿಸುವಂತೆ ಕೋರಿ ಹೈಕೋರ್ಟ್‌ಗೆ ತೆರಳಲು ಅರ್ಜಿದಾರರಿಗೆ ಪೀಠವು ಸ್ವಾತಂತ್ರ್ಯ ನೀಡಿತು.

ಮಗು ಸುಪರ್ದಿ ಅರ್ಜಿ: ಸ್ಥಳೀಯ ಕೋರ್ಟ್‌ಗೆ ಸೀಮಿತ

ಬೆಂಗಳೂರು: ‘ಕೌಟುಂಬಿಕ ವ್ಯಾಜ್ಯಗಳಲ್ಲಿ ಮಗುವಿನ ಸುಪರ್ದಿ ಕೋರುವ ಅರ್ಜಿಗಳನ್ನು, ಅರ್ಜಿದಾರರು ವಾಸವಿರುವ ಪ್ರದೇಶಗಳ ವ್ಯಾಪ್ತಿಗೊಳಪಟ್ಟ ನ್ಯಾಯಾಲಯದಲ್ಲಿ ಮಾತ್ರವೇ ಸಲ್ಲಿಸಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಪ್ರಕರಣವೊಂದರಲ್ಲಿ ಚಾಮರಾಜನಗರ ಜಿಲ್ಲೆಯ ಸಮೀವುಲ್ಲಾ ಮತ್ತು ಮುಬೀನ್ ತಾಜ್ ದಂಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ವಿವರಿಸಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಮಗುವಿನ ಸುಪರ್ದಿ ಕೋರಿ ಎಲ್ಲೆಂದರಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಮಗು ನೆಲೆಸಿರುವ ವ್ಯಾಪ್ತಿಯ ಸ್ಥಳೀಯ ನ್ಯಾಯಾಲಯದಲ್ಲೇ ಅರ್ಜಿ ಸಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಉಚಿತ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ದೀನ ಸೇವಾ ಸಂಘ ವಿದ್ಯಾರ್ಥಿ ನಿಲಯವು ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ. 2024–25ನೇ ಸಾಲಿನಲ್ಲಿ 5ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಗ್ರಾಮೀಣ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ಇದೇ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ದೀನ ಸೇವಾ ಸಂಘ ವಿದ್ಯಾರ್ಥಿನಿಲಯ, ನಂ. 22, ರಿಸಲ್ದಾರ್ ರಸ್ತೆ, ಶೇಷಾದ್ರಿಪುರ, ಬೆಂಗಳೂರು–560020.
ಮೊ:9845435503

ಭೂಮಿಕಾ ಓದಿ...

ಕೆನರಾ ಬ್ಯಾಂಕ್ (ಭಾರತ ಸರ್ಕಾರದ ಒಂದು ಉದ್ಯಮ) ಸಿಂಡಿಕೇಟ್ Syndicate — **ಸರ್ಕಲ್ ಕಛೇರಿ : ಬೆಂಗಳೂರು**

ಗೃಹ ಸಾಲದ ನೇರ ಮಾರಾಟದ ಏಜೆಂಟ್‌ಗಳ ನೇಮಕಾತಿ

ಗೃಹಸಾಲದ ನೇರ ಮಾರಾಟದ ಪ್ರತಿನಿಧಿಗಳ ನೇಮಕಾತಿ
ಶಿಫಾರಸ್ಸು ಮಾಡಿ ಗೃಹಸಾಲಗಳ ಪ್ರಸ್ತಾವನೆಗಳ ಮೇಲೆ ಆಕರ್ಷಕ ಕಮಿಷನ್/ಸಂಭಾವನೆ ಗಳಿಸಿ
ಕೆನರಾಬ್ಯಾಂಕ್‌ನ ಗೃಹಸಾಲ ನೇರಮಾರಾಟ ಪ್ರತಿನಿಧಿಯಾಗಿ ಅಧಿಕೃತವಾಗಿ ಸೇರ್ಪಡೆಯಾಗಿ

ಅರ್ಹತೆ	ವ್ಯಯಕ್ತಿಕವಾಗಿ / ಪ್ರತ್ಯೇಕವಾಗಿ / ಏಕಸ್ವಾಮ್ಯದ ಸಂಸ್ಥೆ / ಆರ್ಥಿಕ ಉತ್ಪನ್ನಗಳು ಹಾಗೂ ಸೇವೆಗಳ ಮೂಲಭೂತ ಅರಿವು / ತಿಳಿವಳಿಕೆ ಇರುವ ಕಂಪೆನಿಗಳು (ಆರ್ಥಿಕ ಉತ್ಪನ್ನಗಳ ಮಾರಾಟದಲ್ಲಿ ಈ ಮುಂಚಿನ ಅನುಭವಕ್ಕೆ ಆದ್ಯತೆ ಇರುತ್ತದೆ
	ಈ ರೀತಿಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ತಮ್ಮದೇ ಆದ ಕಛೇರಿಯನ್ನು ಸ್ಥಾಪಿಸಿರುವ/ಹೊಂದಿರುವ ಹಾಗೂ ಅನುಭವ ಇರುವ ನೇರ ಮಾರಾಟ ಪ್ರತಿನಿಧಿಗಳಿಗೆ ಆದ್ಯತೆ ನೀಡಲಾಗುವುದು.
	ನಮ್ಮ ಬ್ಯಾಂಕಿನ / ಸಾರ್ವಜನಿಕ ಕ್ಷೇತ್ರದ ಬ್ಯಾಂಕಿನ ನಿವೃತ್ತ ಸಿಬ್ಬಂದಿ / ಮಾಜಿ ಸಿಬ್ಬಂದಿ / ಅವರ ಸಮೀಪವರ್ತಿ ಸಂಬಂಧಿಗಳು ನೇರ ಮಾರಾಟ ಪ್ರತಿನಿಧಿಯ ನೇಮಕಾತಿಗೆ ಅರ್ಹರಾಗಿರುವುದಿಲ್ಲ
ಪ್ರತಿಫಲದ ಪಾವತಿ (ಕಮಿಷನ್)	ಮಂಜೂರಾತಿಯಾದ ಸಾಲದ ಮೊತ್ತದ ಕನಿಷ್ಠ ಶೇ. 20% ವಿತರಣೆಗೊಂಡ ನಂತರ ಪಾವತಿ ಮಾಡಲಾಗುವುದು.

ಅಧಿಕೃತ ಸೇರ್ಪಡೆ ಸಂಬಂಧ ಮಾಹಿತಿ, ಷರತ್ತು ಹಾಗೂ ನಿಬಂಧನೆಗಳಿಗಾಗಿ ನಮ್ಮನ್ನು ಮೊಬೈಲ್ ಸಂಖ್ಯೆ 9481068984

ಕೆನರಾ ಬ್ಯಾಂಕ್ (ಭಾರತ ಸರ್ಕಾರದ ಒಂದು ಉದ್ಯಮ) ಸಿಂಡಿಕೇಟ್ Syndicate ಬೆಂಗಳೂರು
ವಿಳಾಸ: ವಸೂಲಾತಿ ಮತ್ತು ಕಾನೂನು ವಿಭಾಗ, 2ನೇ ಮಹಡಿ, ಸ್ಪೆನ್ಸರ್ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು – 560001. **ಇಮೇಲ್ ಐಡಿ:** blrsarfaesi@canarabank.com **ಸಂಪರ್ಕ ಸಂಖ್ಯೆ:** 8921102717 / 9538062689

ಬೆಂಗಳೂರಿನಲ್ಲಿ ಖಾಸಗಿ ಡಿಟೆಕ್ಟಿವ್/ತನಿಖಾ ಏಜೆನ್ಸಿಗಳು ಮತ್ತು ಸರ್ಫೇಸಿ ಏಜೆಂಟ್‌ಗಳ ಎಂಪನೆಲ್‌ಮೆಂಟ್‌ಗಾಗಿ ಪ್ರಕಟಣೆ : ಬೆಂಗಳೂರು ಮೆಟ್ರೋ, ಮೈಸೂರು, ಮಂಡ್ಯ ಮತ್ತು ತುಮಕೂರು ಪ್ರದೇಶದ ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ ಖಾಸಗಿ ಡಿಟೆಕ್ಟೀವ್/ತನಿಖಾ ಏಜೆನ್ಸಿಗಳು ಮತ್ತು ಸರ್ಫೇಸಿ ಏಜೆಂಟ್‌ಗಳು ಕಾಣೆಯಾದ ಸಾಲಗಾರನನ್ನು ಪತ್ತೆಹಚ್ಚಲು ಬ್ಯಾಂಕ್‌ನಿಂದ ಎಂಪನೆಲ್‌ಮೆಂಟ್‌ಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸುತ್ತಿದೆ, ಖಾಸಗಿ ಪತ್ತೇದಾರಿ ಏಜೆನ್ಸಿಗಳಿಗೆ ಮತ್ತು DM/CMM ನ್ಯಾಯಾಲಯಗಳ ಆದೇಶಗಳನ್ನು ತ್ವರಿತಗೊಳಿಸಲು ಎನ್‌ಪಿಎ ಸಾಲಗಾರರ ಶುಲ್ಕರಹಿತ ಆಸ್ತಿಗಳನ್ನು ಪತ್ತೆಹಚ್ಚಲು, ಸುರಕ್ಷಿತ ಸ್ವತ್ತುಗಳ ನಿಜವಾದ ಸ್ವಾಧೀನಕ್ಕೆ ಮತ್ತು ಸುರಕ್ಷಿತವಾಗಿರಿಸಲು/ವಾಚ್ ಮತ್ತು ವಾರ್ಡ್ ಇತ್ಯಾದಿ., ಸರ್ಫೇಸಿ ಏಜೆಂಟರಿಗೆ ಕ್ರಮವಾಗಿ ಕೆಳಗೆ ತಿಳಿಸಿದ ಅರ್ಹತಾ ಮಾನದಂಡಗಳ ನೆರವೇರಿಕೆಗೆ ಒಳಪಟ್ಟಿರುತ್ತದೆ ಮತ್ತು ಬ್ಯಾಂಕ್‌ನ ವೆಬ್‌ಸೈಟ್ www.canarabank.com ನಲ್ಲಿ ಜಾಹೀರಾತು ಅಪ್‌ಲೋಡ್ ಮಾಡಲಾಗಿದೆ.

ಪತ್ತೇದಾರಿ/ತನಿಖಾ ಏಜೆನ್ಸಿಗಳಾಗಿ ಎಂಪನೆಲಿಂಗ್ ಮಾಡಲು ಅರ್ಹತೆಯ ಮಾನದಂಡಗಳು:
- ಡಿಟೆಕ್ಟಿವ್ / ತನಿಖಾ ಏಜೆನ್ಸಿಗಳು ಚಟುವಟಿಕೆಯಲ್ಲಿ ಕನಿಷ್ಠ 3 ವರ್ಷಗಳ ಅನುಭವವನ್ನು ಹೊಂದಿರಬೇಕು ಮತ್ತು ಬ್ಯಾಂಕ್‌ಗಳು / ಹಣಕಾಸು ಸಂಸ್ಥೆಗಳೊಂದಿಗೆ ಸಾಬೀತಾದ ದಾಖಲೆಗಳನ್ನು ನಿರ್ವಹಿಸಬೇಕು ಮತ್ತು "APDI" ನ ಸದಸ್ಯರಾಗಿರಬೇಕು.
- ಇವರಿಂದ ನಡೆಸಲ್ಪಡುತ್ತಿರುವ/ಜೊತೆಗೆ ಸಿಬ್ಬಂದಿ ಇರುವ ಏಜೆನ್ಸಿಗಳಿಗೆ ಆದ್ಯತೆ ನೀಡಲಾಗುವುದು:
  ಎ) ಸರ್ಕಾರದ ನಿವೃತ್ತ ಕಂದಾಯ ಅಥವಾ ತೆರಿಗೆ ಅಥವಾ ಪೊಲೀಸ್ ಅಧಿಕಾರಿಗಳು. ಇಲಾಖೆಗಳು, ಆಸ್ತಿ ತನಿಖಾ ಸೇವೆಗಳನ್ನು ನೀಡುತ್ತಿವೆ.
  ಬಿ) ಸಿಬಿಐ / ಪೊಲೀಸ್ / ಅಪರಾಧ ವಿಭಾಗ ಮತ್ತು ಸರ್ಕಾರದ ಹಿರಿಯ ಮಾಜಿ ಅಧಿಕಾರಿಗಳು. ತನಿಖಾ ಸಂಸ್ಥೆಗಳು (ಕನಿಷ್ಠ ACP/DSP ಶ್ರೇಣಿ)

ಸರ್ಫೇಸಿ ಏಜೆಂಟ್‌ಗಳಾಗಿ ಎಂಪನೆಲಿಂಗ್‌ಗೆ ಅರ್ಹತೆಯ ಮಾನದಂಡಗಳು:
- ವಶಪಡಿಸಿಕೊಂಡ ಆಸ್ತಿಗಳ ಶೇಖರಣೆಗಾಗಿ ಮತ್ತು ಸಾಕಷ್ಟು ಸಿಬ್ಬಂದಿಗಳೊಂದಿಗೆ ಸರ್ಫೇಸಿ ಏಜೆಂಟ್‌ಗಳು ಅಗತ್ಯ ಮೂಲಸೌಕರ್ಯಗಳನ್ನು ಹೊಂದಿರಬೇಕು.
- ಈಗಾಗಲೇ ಇತರ ಬ್ಯಾಂಕ್‌ಗಳ ಪ್ಯಾನೆಲ್‌ನಲ್ಲಿರುವವರಿಗೆ ಆದ್ಯತೆ ನೀಡಲಾಗುವುದು.

ಬೆಂಗಳೂರು ಮೆಟ್ರೋ, ಮೈಸೂರು, ಮಂಡ್ಯ ಮತ್ತು ತುಮಕೂರಿನಂತಹ ಪ್ರದೇಶಗಳಲ್ಲಿ ಖಾಸಗಿ ಪತ್ತೇದಾರಿ/ತನಿಖಾ ಏಜೆನ್ಸಿಗಳ ಎಂಪನೆಲ್‌ಮೆಂಟ್‌ನ್ನು ಮಾಡಲಾಗುತ್ತದೆ. ಅರ್ಹತಾ ಮಾನದಂಡಗಳನ್ನು ಪೂರೈಸುವ ಆಸಕ್ತ ಖಾಸಗಿ ಪತ್ತೇದಾರಿ/ತನಿಖಾ ಏಜೆನ್ಸಿಗಳು ಮತ್ತು ಸರ್ಫೇಸಿ ಏಜೆಂಟ್‌ಗಳು ತಮ್ಮ ಸರಿಯಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಸಂಬಂಧಿತ ದಾಖಲೆಗಳೊಂದಿಗೆ ದಿನಾಂಕ : 20.05.2024 ರಿಂದ 05.06.2024 ರವರೆಗೆ ಸಂಬಂಧಿಸಿದ ವೃತ್ತ ಕಚೇರಿಗೆ ಸಲ್ಲಿಸಬಹುದು. ದಿನಾಂಕ : 05.06.2024 ರ ನಂತರ ಸ್ವೀಕರಿಸಿದ ಮತ್ತು ಸಂಬಂಧಿತ ಸಂಕ್ಷಿಪ್ತವಾಗಿ ವಿವರಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಈ ವಿಷಯದಲ್ಲಿ ಬ್ಯಾಂಕಿನ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಎಲ್ಲರಿಗೂ ಬದ್ಧವಾಗಿರುತ್ತದೆ ಮತ್ತು ಈ ವಿಷಯದಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಬ್ಯಾಂಕ್ ಸಂಪೂರ್ಣ ವಿವೇಚನೆಯನ್ನು ಹೊಂದಿರುತ್ತದೆ.

ಆತ್ಮಹತ್ಯೆ ತಡೆ: ಕಿರುಚಿತ್ರ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನರಲ್ಲಿ ಆತ್ಮಹತ್ಯೆ ತಡೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಎರಡನೇ ಆವೃತ್ತಿಯ ಕಿರುಚಿತ್ರ ಉತ್ಸವ ಹಮ್ಮಿಕೊಂಡಿದೆ.

ಸಂಸ್ಥೆಯ ಸೈಕಿಯಾಟ್ರಿಕ್ ಸೋಶಿಯಲ್ ವರ್ಕ್ ವಿಭಾಗವು ಈ ಉತ್ಸವ ಹಮ್ಮಿಕೊಂಡಿದೆ. ಈ ಉತ್ಸವಕ್ಕೆ ಪ್ರವೇಶ ಉಚಿತ ಇರಲಿದ್ದು, ವಿಜೇತರಿಗೆ ₹1 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ.

ಕಿರುಚಿತ್ರಕ್ಕೆ 6 ನಿಮಿಷ ಸಮಯ ನಿಗದಿಪಡಿಸಲಾಗಿದ್ದು, ಯಾವುದೇ ಭಾಷೆಯಲ್ಲಿ ಕಿರುಚಿತ್ರವನ್ನು ನಿರ್ಮಿಸಬಹುದಾಗಿದೆ. ಆದರೆ, ಕಿರುಚಿತ್ರವು ಇಂಗ್ಲಿಷ್ ಉಪ ಶೀರ್ಷಿಕೆಯನ್ನು (ಸಬ್ ಸೈಟಲ್) ಹೊಂದಿರಬೇಕು. ಅರ್ಜಿ ಸಲ್ಲಿಸುವವರು ಕಿರುಚಿತ್ರದ ನಿರ್ದೇಶಕರಾಗಿರಬೇಕು. ಕಿರುಚಿತ್ರ ಸಲ್ಲಿಕೆಗೆ ಆ.10 ಕಡೆಯ ದಿನಾಂಕವಾಗಿದೆ ಎಂದು ಸಂಸ್ಥೆ ತಿಳಿಸಿದೆ.

‘ಮೊದಲ ಆವೃತ್ತಿಯ ಕಿರುಚಿತ್ರ ಉತ್ಸವಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ಆತ್ಮಹತ್ಯೆ ತಡೆ ಹಾಗೂ ಈ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಕಿರುಚಿತ್ರ ಉತ್ಸವ ಹಮ್ಮಿಕೊಳ್ಳಲಾಗಿದೆ. ಮಾನಸಿಕ ಆರೋಗ್ಯ ಸುಧಾರಿಸುವುದು ನಮ್ಮ ಆದ್ಯತೆಯಾಗಿದೆ. ಈ ಉತ್ಸವದಲ್ಲಿ ಭಾಗವಹಿಸಲು ಮುಕ್ತ ಅವಕಾಶ ನೀಡಲಾಗಿದೆ. ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು’ ಎಂದು ಉತ್ಸವದ ಸಂಯೋಜಕ ಡಾ.ಅವಿನಾಶ್ ವಿ. ಚೆರಿಯನ್ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9901446798

ನಿಧನ ವಾರ್ತೆ

ಸುವರ್ಣಮ್ಮ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಗ್ರಾಮಪಂಚಾಯಿತಿ ಮಾಜಿ ಸದಸ್ಯ ಚೇತನ್ ಗೌಡ ಅವರ ತಾಯಿ ಸುವರ್ಣಮ್ಮ (58) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಅವರಿಗೆ ಪತಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಶನಿವಾರ ರಾಮೋಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಕೆನರಾ ಬ್ಯಾಂಕ್ (ಭಾರತ ಸರ್ಕಾರದ ಒಂದು ಉದ್ಯಮ) ಸಿಂಡಿಕೇಟ್ Syndicate ಬೆಂಗಳೂರು
ವಿಳಾಸ: ವಸೂಲಾತಿ ಮತ್ತು ಕಾನೂನು ವಿಭಾಗ, 2ನೇ ಮಹಡಿ, ಸ್ಪೆನ್ಸರ್ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು – 560001. **ಇಮೇಲ್ ಐಡಿ:** blrsarfaesi@canarabank.com **ಸಂಪರ್ಕ ಸಂಖ್ಯೆ:** 8921102717 / 9538062689

ಸರ್ಫೇಸಿ ಏಜೆಂಟ್‌ಗಳ ಎಂಪನೆಲ್‌ಮೆಂಟ್‌ಗಾಗಿ ಪ್ರಕಟಣೆ : ಬೆಂಗಳೂರು ಮೆಟ್ರೋ, ಮೈಸೂರು, ಮಂಡ್ಯ ಮತ್ತು ತುಮಕೂರು ಪ್ರದೇಶದ ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ ಸರ್ಕಲ್ ಕಚೇರಿ, ಬೆಂಗಳೂರು ಕರ್ನಾಟಕದಲ್ಲಿರುವ ತನ್ನ ಶಾಖೆಗಳಿಗೆ ಐದು ವರ್ಷಗಳ ಅವಧಿಗೆ ಸರ್ಫೇಸಿ ಮೌಲ್ಯಮಾಪಕರ ಎಂಪನೆಲ್‌ಮೆಂಟ್‌ಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ, ಈ ಕೆಳಗೆ ತಿಳಿಸಿರುವಂತೆ ಶೈಕ್ಷಣಿಕ ಅರ್ಹತೆಗಳು ಮತ್ತು ಅನುಭವಕ್ಕೆ ಸಂಬಂಧಿಸಿದ ಮಾನದಂಡಗಳ ನೆರವೇರಿಕೆಗೆ ಒಳಪಟ್ಟಿರುತ್ತದೆ:
- ಮೌಲ್ಯಮಾಪಕರ ಸಂಪತ್ತು ತೆರಿಗೆ ಕಾಯಿದೆ, 1957ರ ಸೆಕ್ಷನ್ 34AB ಅಡಿಯಲ್ಲಿ ಮಾನ್ಯವಾದ CCIT ನೋಂದಣಿಯನ್ನು ಹೊಂದಿರಬೇಕು, ವ್ಯಕ್ತಿಗಳು, ವ್ಯಕ್ತಿಗಳ ಗುಂಪು ಮತ್ತು ಪಾಲುದಾರಿಕೆ ಸಂಸ್ಥೆಗಳನ್ನು ಮಾತ್ರ ಆಸ್ತಿಗಳ ಮೌಲ್ಯಮಾಪನಕ್ಕಾಗಿ ಎಂಪನೆಲ್ ಮಾಡಲಾಗುತ್ತದೆ.
- ವೆಲ್ತ್ ಟ್ಯಾಕ್ಸ್ ಆಕ್ಟ್ 1957 ರ ಸೆಕ್ಷನ್ 34AB ರ ಪ್ರಕಾರ ಕಂಪನಿಯು ಮೌಲ್ಯಮಾಪಕರಾಗಿ ಎಂಪನೇಲ್ ಮಾಡಲಾಗುವುದಿಲ್ಲ. ಪಾಲುದಾರಿಕೆಯ ಕಾಳಜಿಯ ಸಂದರ್ಭದಲ್ಲಿ, ಎಲ್ಲಾ ಪಾಲುದಾರರು ಸಂಬಂಧಿತ ಅರ್ಹತೆ(ಗಳನ್ನು) ಪೂರೈಸಬೇಕು ಮತ್ತು ಹೊಂದಿರಬೇಕು.

ಕಡಿಮೆ ಸಾಲಗಳಿಗಾಗಿ: ಮೌಲ್ಯಮಾಪಕರು ಯಾವುದೇ ಬ್ಯಾಂಕ್ / ಸಾರ್ವಜನಿಕ ಹಣಕಾಸು ಸಂಸ್ಥೆ / ಹೌಸಿಂಗ್ ಫೈನಾನ್ಸ್ ಕಂಪನಿ / ಆರ್‌ಬಿಐನಲ್ಲಿ ನೋಂದಾಯಿಸಲಾದ ಎನ್‌ಬಿಎಫ್‌ಸಿಯೊಂದಿಗೆ ಸರ್ಫೇಸಿ ಮೌಲ್ಯಮಾಪಕರಾಗಿ ಎಂಪನೆಲ್ ಮಾಡಬೇಕು.

ಕಾರ್ಪೊರೇಟ್ ಸಾಲಗಳಿಗಾಗಿ:

(I) ಬ್ಯಾಂಕ್ ಅಥವಾ ಮೌಲ್ಯಮಾಪಕರು (ಅಥವಾ ಪಾಲುದಾರಿಕೆಯ ಕಾಳಜಿಯ ಪಾಲುದಾರರಲ್ಲಿ ಯಾರಾದರೂ) ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ ಮೌಲ್ಯಮಾಪಕರ ಸಂಸ್ಥೆಯ ನೋಂದಣಿಯು ಕನಿಷ್ಠ 3 ವರ್ಷ ಹಳೆಯದಾಗಿರಬೇಕು. ಯಾವುದೇ ಷೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್/ಸಾರ್ವಜನಿಕ ಹಣಕಾಸು ಸಂಸ್ಥೆ/ಹೌಸಿಂಗ್ ಫೈನಾನ್ಸ್ ಕಂಪನಿ/ಎನ್‌ಬಿಎಫ್‌ಸಿ ಅಥವಾ ಆರ್‌ಬಿಐನಲ್ಲಿ ನೋಂದಾಯಿತ ಸರ್ಫೇಸಿ ಮೌಲ್ಯಮಾಪಕರಾಗಿ ಕನಿಷ್ಠ 3 ವರ್ಷಗಳ ಅನುಭವವನ್ನು ಹೊಂದಿರಬೇಕು. ಮೌಲ್ಯಮಾಪಕರು / ಸಂಸ್ಥೆಯು ಮೇಲೆ ತಿಳಿಸಲಾದ ಹಣಕಾಸು ಸಂಸ್ಥೆಗಳೊಂದಿಗೆ ಕನಿಷ್ಠ 5 ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರಬೇಕು.

(ii) ಕಂಪನಿಗಳ ಕಾಯಿದೆ 2013 ರ ಅಡಿಯಲ್ಲಿ ಅಗತ್ಯವಿರುವ ಮೌಲ್ಯಮಾಪನಕ್ಕಾಗಿ, ದಿನಾಂಕ : 18.10.2017 ರಂದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಕಂಪನಿಗಳ (ನೋಂದಾಯಿತ ಮೌಲ್ಯಮಾಪಕರು ಮತ್ತು ಮೌಲ್ಯಮಾಪನ) ನಿಯಮಗಳು, 2017ರ ಪ್ರಕಾರ ಮೌಲ್ಯಮಾಪಕರು "ಇಂಡಿಯಾ ದಿವಾಳಿತನ ಮತ್ತು ದಿವಾಳಿತನ ಮಂಡಳಿ" ಯಲ್ಲಿ ನೋಂದಾಯಿಸಲ್ಪಡಬೇಕು.

ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ವಿದ್ಯಾರ್ಹತೆ ಮತ್ತು ಅನುಭವದ ಪುರಾವೆಗಳ ಪ್ರತಿಗಳೊಂದಿಗೆ ಸರ್ಕಲ್ ಆಫೀಸ್, ಬೆಂಗಳೂರು ಇವರಿಗೆ ಸಲ್ಲಿಸಬೇಕು.
ಪ್ರಸ್ತುತ ಎಂಪನೆಲ್‌ಮೆಂಟ್ ಪ್ರಕ್ರಿಯೆ FY 2024–2029 ಗಾಗಿ ಈ ಸೂಚನೆಯ ಪ್ರಕಟಣೆಯ ದಿನಾಂಕ 05.06.2024 ರವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.
ಇತರ ಬ್ಯಾಂಕ್/ಸಂಸ್ಥೆಗಳಲ್ಲಿ ವೃತ್ತಿಪರ ಸಾಮರ್ಥ್ಯದಲ್ಲಿ ಯಾವುದೇ ಮೌಲ್ಯಮಾಪಕರು ತಪ್ಪಿತಸ್ಥರೆಂದು ಕಂಡುಬಂದರೆ ಮತ್ತು ಅವರ ಹೆಸರನ್ನು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್(ಐಬಿಎ)/ಸಿಬಿಐ/ ಆರ್‌ಬಿಐ/ಯಾವುದೇ ಸರ್ಕಾರಿ ಏಜೆನ್ಸಿ, ಅವನ/ಅವಳ ಅರ್ಜಿ ಮೂಲಕ ಪ್ರಸಾರ/ವರದಿ ಮಾಡಿದ್ದರೆ ಎಂಪನೆಲ್‌ಮೆಂಟ್‌ಗೆ ಪರಿಗಣಿಸಲಾಗುವುದಿಲ್ಲ. ಯಾವುದೇ ಸೂಚನೆಯಿಲ್ಲದೆ ಯಾವುದೇ ಎಂಪನೆಲ್‌ಮೆಂಟ್ ನಿಯಮಗಳನ್ನು ತಿದ್ದುಪಡಿ/ಮಾರ್ಪಡಿಸುವ ಮತ್ತು ಜಾಹೀರಾತನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕೆನರಾ ಬ್ಯಾಂಕ್ ಸಿಂಡಿಕೇಟ್ Syndicate
(ಭಾರತ ಸರ್ಕಾರದ ಒಂದು ಉದ್ಯಮ)
ಕೆನರಾ ಬ್ಯಾಂಕ್, ಸರ್ಕಲ್ ಆಫೀಸ್ – ಬೆಂಗಳೂರು
ಚಿನ್ನದ ಮೌಲ್ಯಮಾಪಕರ ನೇಮಕಾತಿ
ಖಾಲಿ ಹುದ್ದೆಗಳ ಒಟ್ಟು ಸಂಖ್ಯೆ: 130
ಖಾಲಿ ಇರುವ ಸ್ಥಳಗಳ ಪ್ರದೇಶವಾರು ಪಟ್ಟಿಯನ್ನು ಟೇಬಲ್‌ನಲ್ಲಿ ನಮೂದಿಸಲಾಗಿದೆ

ಖಾಲಿ ಹುದ್ದೆಗಳ ಸ್ಥಳ	ಸಂಪರ್ಕ ವಿವರಗಳು
ರಾಜಾಜಿನಗರ, ವಿಜಯನಗರ, ಮಾಗಡಿ ರಸ್ತೆ ಮತ್ತು ಪೀಣ್ಯ ಮತ್ತು ಸುತ್ತಮುತ್ತಲಿನ ಶಾಖೆಗಳು	9900940688
ಸಂಜಯ್ ನಗರ, ಕಲ್ಯಾಣನಗರ, ಹೆಬ್ಬಾಳ, ಬಾಣಸವಾಡಿ, ರಾಮಮೂರ್ತಿ ನಗರ, ಸುಲ್ತಾನಪಾಳ್ಯ, ಗಂಗಾನಗರ, ಕೆ ಆರ್ ಪುರಂ ಮತ್ತು ಫ್ರೇಜರ್ ಟೌನ್ ಮತ್ತು ಸುತ್ತಮುತ್ತಲಿನ ಶಾಖೆಗಳು.	8698910626
ಶೇಷಾದ್ರಿಪುರಂ, ಜೆಪಿ ನಗರ, ಜಯ ನಗರ, ಪದ್ಮನಾಭನಗರ, ಲಾಲ್‌ಬಾಗ್, ರಾಜರಾಜೇಶ್ವರಿ ನಗರ, ಬಿಟಿಎಂ ಲೇಔಟ್, ಉತ್ತರಹಳ್ಳಿ, ವಿಲ್ಸನ್ ಗಾರ್ಡನ್ ಮತ್ತು ಸಾರಕ್ಕಿ ಲೇಔಟ್ ಮತ್ತು ಸುತ್ತಮುತ್ತಲಿನ ಶಾಖೆಗಳು	9037427012
ಆನೇಕಲ್ ತಾಲ್ಲೂಕು, ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿ, ಇಂದಿರಾನಗರ, ಸರ್ಜಾಪುರ, ಕೋರಮಂಗಲ, ವಿಮಾನಪುರ ಮತ್ತು ಬೆಳ್ಳಂದೂರು ಮತ್ತು ಸುತ್ತಮುತ್ತಲಿನ ಶಾಖೆಗಳು	9966994825
ಚಿಕ್ಕಪೇಟೆ, ಶಾಂತಿನಗರ, ವಸಂತ ನಗರ, ಎಂ ಜಿ ರಸ್ತೆ, ಕಂಟೋನ್‌ಮೆಂಟ್ ಮತ್ತು ಗಾಂಧಿನಗರ ಮತ್ತು ಸುತ್ತಮುತ್ತಲಿನ ಶಾಖೆಗಳು	9964202931
ದೇವನಹಳ್ಳಿ ಪ್ರದೇಶದ ಶಾಖೆಗಳು – ಆವತಿ, ದಾಬಸ್‌ಪೇಟೆ, ಘಾಟಿ ಸುಬ್ರಹ್ಮಣ್ಯ, ಗೊಲ್ಲಹಳ್ಳಿ ಗೇಟ್, ಹೊಸಕೋಟೆ II, ಕಲಾಲುಘಟ್ಟ, ಕುಳುವನಹಳ್ಳಿ, ನೆಲಮಂಗಲ II, ಎಸ್‌ಎಂಇ ಹೊಸಕೋಟೆ, ಟಿ ಬೇಗೂರು, ಯಲಿಯೂರು, ಯೆಂಟಗಾನಹಳ್ಳಿ.	8309840172
ಮಂಡ್ಯ ಪ್ರದೇಶದ ಶಾಖೆಗಳು – ಅಕ್ಕೂರು, ಚೂಡಹಳ್ಳಿ, ಶೇಷಗಿರಿಹಳ್ಳಿ, ಗಣಂಗೂರು, ಆನೆಗೋಳ, ರಾಯಸಮುದ್ರ, ಕಲ್ಯಾ, ವಿ ಜಿ ದೊಡ್ಡಿ	7093480460
ಮೈಸೂರು ಪ್ರದೇಶದ ಶಾಖೆಗಳು – ವಾಣಿವಿಲಾಸ್, ಸರಸ್ವತಿಪುರಂ, ಚಾಮುಂಡಿಪುರಂ, ಮರಿಮಲ್ಲಪ್ಪ ಜೆಎನ್‌ಆರ್ ಕಾಲೇಜು, ಕುವೆಂಪುನಗರ, ರಾಜರಾಜೇಶ್ವರಿನಗರ	8709888417
ಕೋಲಾರ ಪ್ರದೇಶದ ಶಾಖೆಗಳು – ಸಂಪಂಗೆರೆ, ಮಾಲೂರು ನೆಹರು ಎಕ್ಸ್‌ಟೆಂನ್ಷನ್ ದಾಡಿನಾಯಕನದೊಡ್ಡಿ, ಉತ್ತನೂರು	7019106709
ತುಮಕೂರು ಆರ್‌ಒ ಶಾಖೆಗಳು – ಮಾವಿನಕೆರೆ, ಎಸ್‌ಎಂವಿ ಅಂತರಸನಹಳ್ಳಿ, ಯಡವನ್ನೆ	8150839815

ಆಭರಣ ಮೌಲ್ಯ ಮಾಪಕರು ಈ ಕೆಳಗಿನ ಷರತ್ತುಗಳನ್ನು ಪೂರೈಸಬೇಕು.
1. ಚಿನ್ನಾಭರಣ ಮೌಲ್ಯಮಾಪನ / ನಿರ್ವಹಣೆಯಲ್ಲಿ ಚಿನ್ನಾಭರಣ ಮೌಲ್ಯಮಾಪಕರು 5 ವರ್ಷಗಳ ಪ್ರಾಯೋಗಿಕ ಅನುಭವ ಹೊಂದಿರುವುದು ಕಡ್ಡಾಯ.
2. ಮಾಪಕರ ಕನಿಷ್ಠ ವಯಸ್ಸು 30 ಮತ್ತು ಗರಿಷ್ಠ 65 ವರ್ಷ ಆಗಿರಬೇಕು.
3. ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣರಾಗಿರಬೇಕು.
4. ಜನ್ಮ ದಿನಾಂಕ ಪುರಾವೆ ಒದಗಿಸಬೇಕು.
5. ಪ್ರಾದೇಶಿಕ ಕಛೇರಿಯಲ್ಲಿ ರಚಿಸಲಾಗಿರುವ ಸಮಿತಿಯಿಂದ ಚಿನ್ನಾಭರಣ ಮೌಲ್ಯಮಾಪಕರನ್ನು ನಿಯುಕ್ತಿಗೊಳಿಸುವುದಕ್ಕೂ ಮುನ್ನವೇ ಪ್ರಾದೇಶಿಕ ಕಛೇರಿಯಲ್ಲಿ ಕೌಶಲ್ಯ ಪರೀಕ್ಷೆ ಕೈಗೊಳ್ಳಲಾಗುತ್ತದೆ.
6. ಚಿನ್ನಾಭರಣ ಮೌಲ್ಯಮಾಪಕರನ್ನು ಗುತ್ತಿಗೆ ಆಧಾರದಲ್ಲಿ 6 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು.
7. ಯಾವುದೇ ಹಣಕಾಸು ಸಂಸ್ಥೆ/ಬ್ಯಾಂಕ್‌ನಲ್ಲಿ ಡಿಫಾಲ್ಟರ್‌ರಾಗಿರಬಾರದು.

ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ **20.05.2024 ರಿಂದ 15.06.2024** ರೊಳಗೆ ಮೇಲೆ ತಿಳಿಸಿರುವ ನಮ್ಮ ಅಧಿಕಾರಿಗಳನ್ನು ಸಂಪರ್ಕಿಸಬಹುದು.
ಕೆನರಾ ಬ್ಯಾಂಕ್, ಸರ್ಕಲ್ ಕಛೇರಿ, #86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು – 560 001. ದೂರವಾಣಿ–080–25310073 / 9110623410

SOBHA LIMITED

SOBHA
PASSION AT WORK

CIN : L45201KA1995PLC018475
Regd. Office: 'SOBHA'
Sarjapur – Marathahalli Outer Ring Road (ORR), Devarabisanahalli, Bellandur Post
Bangalore - 560 103
Ph: +91-80-49320000
email: investors@sobha.com
www.sobha.com

STATEMENT OF CONSOLIDATED AUDITED FINANCIAL RESULTS FOR THE QUARTER AND YEAR ENDED 31 MARCH 2024

(₹ in Million)

PARTICULARS	3 months ended 31.03.2024 [Refer note 2(b)]	Preceeding 3 months ended 31.12.2023 [Unaudited]	Corresponding 3 months ended 31.03.2023 [Refer note 2(b)]	Year ended 31.03.2024 [Audited]	Year ended 31.03.2023 [Audited]
Total income from operations	7,912.50	7,137.48	12,401.45	32,178.82	34,024.33
Profit before tax	109.06	213.66	669.34	742.27	1,449.75
Profit after tax	70.29	150.82	485.75	491.13	1,042.05
Total comprehensive income for the period [comprising profit for the period (after tax) and other comprehensive income (after tax)]	71.67	152.64	470.82	478.57	1,002.12
Paid-up Equity Share Capital	948.00	948.00	948.46	948.00	948.00
Other equity				24,192.28	23,998.25
Earnings per Share (of ₹10/- each) (for continuing and discontinued operations) Basic and diluted EPS	0.74	1.59	5.13	5.18	10.99

Notes :
01. The figures of standalone financial results are as follow: (₹ in Million)

PARTICULARS	3 months ended 31.03.2024 [Refer note 2(b)]	Preceeding 3 months ended 31.12.2023 [Unaudited]	Corresponding 3 months ended 31.03.2023 [Refer note 2(b)]	Year ended 31.03.2024 [Audited]	Year ended 31.03.2023 [Audited]
Total income	7,946.50	7,262.24	12,524.75	32,226.45	34,258.65
Profit before tax	91.05	242.18	625.81	683.64	1,317.10
Profit after tax	59.79	177.81	439.49	465.69	952.89
Total comprehensive income	61.17	179.63	424.56	453.13	912.96

02. (a) The consolidated audited financial results of Sobha Limited ('the Holding Company') and its subsidiaries (the Holding Company, along with its subsidiaries referred to as 'the Group') and its associate and joint venture for the quarter and year ended 31 March 2024 have been prepared in accordance with the recognition and measurement principles laid down in the applicable Indian Accounting Standards (Ind AS) as prescribed under Section 133 of the Companies Act, 2013 ('The Act') read with relevant rules thereunder and in terms of Regulation 33 of the SEBI (Listing Obligations and Disclosure Requirements) Regulations, 2015. These consolidated audited financial results have been reviewed and recommended by the Audit Committee and approved by the Board of Directors at their meeting held on 17 May 2024.

(b) The figures for the quarter ended 31 March 2024 and 31 March 2023 are the balancing figures between the audited figures in respect of the full financial years and the published unaudited year to date figures upto third quarter of the respective financial years. Also the figures upto the end of the third quarter were only reviewed and not subject to audit.

03. The Statutory auditors of the Holding Company have carried out audit as required under Regulation 33 of SEBI (Listing Obligations and Disclosure Requirements) Regulations 2015 of the above consolidated audited financial results for the quarter and year ended 31 March 2024 and have issued an unmodified audit report.

04. The aforesaid consolidated audited financial results are available on the Holding Company's website www.sobha.com and on the website of BSE Limited (www.bseindia.com) and National Stock Exchange of India Limited (www.nseindia.com).

05. The Board of Directors, in their meeting held on 22 January 2024, have approved the issuance of equity shares of the Holding Company for an amount not exceeding ₹20,000 million by way of a rights issue to the eligible equity shareholders of the Holding Company as on the record date (to be determined and notified subsequently), in accordance with applicable laws, including the Securities and Exchange Board of India (Issue of Capital and Disclosure Requirements) Regulations, 2018, SEBI Listing Regulations, the Companies Act, 2013 and Rules made thereunder as amended from time to time, subject to such regulatory and statutory approvals, as may be required under the applicable laws.

For the purposes of giving effect to the rights issue, the detailed terms in relation to the rights issue, including but not limited to the issue price, rights entitlement ratio, record date, timing and terms of payment will be determined and disclosed to the exchange in due course by the Board and/ or the Rights Issue Committee of the Board of Directors authorised in this regard.

06. During the quarter ended 31 March 2024, the Holding Company has acquired 51% equity shares in C.V.S Tech Park Private Limited (an Associate Company) on 7 February 2024, which has resulted into 100% wholly owned subsidiary of the Holding Company.

07. The Board of Directors of the Holding Company have recommended a final dividend of ₹ 3 per equity share amounting to ₹ 284.54 millions for the year ended 31 March 2024, in their meeting held on 17 May 2024, which will be placed for approval of the shareholders in the ensuing Annual General Meeting of the Company.

08. Previous period's / year's figures have been regrouped or reclassified wherever necessary to conform with the current period figures. The impact of such reclassification / regrouping is not material to the consolidated financial results.

Bengaluru, India
17 May 2024

Jagadish Nangineni
Managing Director

ಇಂದಿನಿಂದ ಪ್ರಾರಂಭ

ನಿಮ್ಮ ಕಲ್ಪನೆಗೂ ಮೀರಿದಂತೆ
ಎಲ್ಲಾ ದಾಖಲೆಗಳನ್ನು ಮುರಿದು
ರಿಯಾಯಿತಿಯ ಮಾರಾಟ

UP TO 90% ವರೆಗೆ ಆಫರ್
ಹೆಚ್ಚು ವ್ಯಯಿಸಿ.. ಹೆಚ್ಚು ಉಳಿಸಿ

ಬೆಂಗಳೂರಿನಲ್ಲಿ ಮೊದಲ ಬಾರಿಗೆ @ ಶಿಲ್ಪ ಕಲಾ ಕಲ್ಯಾಣ ಮಂಟಪ

ಪೂಮಾ ಶೂಸ್
ಎಂಆರ್‌ಪಿ ರೂ. 2999 ರಿಂದ 9999
ಯಾವುದೇ ಖರೀದಿಸಿ@ ಫ್ಲ್ಯಾಟ್ ರೂ.999/-

ಮೆನ್ಸ್ ಬಾಕ್ಸರ್ ಷಾರ್ಟ್ಸ್, ವುಮೆನ್ಸ್ ವೆಸ್ಟರ್ನ್ ಟಾಪ್ಸ್ ಲೇಡೀಸ್ ಸ್ಯಾರೀ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 99/-

ಮೆನ್ಸ್ ಟಿ–ಷರ್ಟ್ಸ್ ಯಾವುದೇ ಖರೀದಿಸಿ @ ಕೇವಲ ರೂ. 149/-

ಕಿಡ್ಸ್ ಬಾಯ್ಸ್ ಮತ್ತು ಗರ್ಲ್ಸ್ ಯಾವುದೇ ಐಟಂ ಖರೀದಿಸಿ @ ಕೇವಲ ರೂ. 99/-

ಮೆನ್ಸ್ ಬ್ರಾಂಡೆಡ್ ಟಿ–ಷರ್ಟ್ಸ್ ಯಾವುದೇ ಖರೀದಿಸಿ @ ಕೇವಲ ರೂ. 249/-

ವುಮನ್ಸ್ ಕುರ್ತಿ, ಪ್ಲಾಜೊ, ಜೀನ್ಸ್, ಟ್ರ್ಯಾಕ್ ಪ್ಯಾಂಟ್, ಷಾರ್ಟ್ಸ್, ಲೆಗ್ಗಿನ್ಸ್, ಪಟಿಯಾಲಾ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 199/-

ವುಮನ್ಸ್ ಜಾಕೆಟ್ಸ್, ವುಡ್ಡೀಸ್, ಜಿಪ್ಪರ್, ಸ್ವೆಟ್ ಷರ್ಟ್ಸ್, ಸ್ವೆಟರ್ಸ್ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 299/-

ಮೆನ್ಸ್ ಜೀನ್ಸ್, ಪುಮಾ ಟ್ರ್ಯಾಕ್ ಪ್ಯಾಂಟ್, ಮೆನ್ಸ್ ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್ ಷರ್ಟ್ಸ್ — ಎಂಆರ್‌ಪಿ ರೂ.1999–4999 ಯಾವುದೇ ಐಟಂ ಖರೀದಿಸಿ @ ಕೇವಲ ರೂ. 499/-

ನಂಬಲಸಾಧ್ಯ ಬೆಲೆಗಳು. ಬನ್ನಿರಿ ಕಣ್ಣಾರೆ ಕಾಣಿರಿ ಮತ್ತು ಇಷ್ಟವಾದರೆ ಮಾತ್ರ ಖರೀದಿಸಿರಿ.

ಕಟ್ಟುನಿಟ್ಟಾಗಿ 3 ದಿನಗಳು ಮಾರಾಟ ಮಾತ್ರ
ಶನಿವಾರ 18 (12 ಗಂಟೆಗಳು) ಭಾನುವಾರ 19 (12 ಗಂಟೆಗಳು) ಸೋಮವಾರ 20 (12 ಗಂಟೆಗಳು) ಮೇ 2024

ಈಗ ಇಲ್ಲಿ ಮಾತ್ರ ಮಾರಾಟ
ಶಿಲ್ಪ ಕಲಾ ಕಲ್ಯಾಣ ಮಂಟಪ
ನಂ. 12, 9ನೇ ಕ್ರಾಸ್, ಬನ್ನೇರಘಟ್ಟ ಮುಖ್ಯ ರಸ್ತೆ, 3ನೇ ಫೇಸ್, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಹತ್ತಿರ, ಜೆ.ಪಿ.ನಗರ, ಬೆಂಗಳೂರು-560078

ಎಲ್ಲಾ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್ಸ್, ಆನ್‌ಲೈನ್ ಪೇಮೆಂಟ್ ಸ್ವೀಕರಿಸಲಾಗುತ್ತದೆ
ಸಮಯ: ಬೆಳಗ್ಗೆ 10 ರಿಂದ ರಾತ್ರಿ 10 ಗಂಟೆ
ಉಚಿತ ಪ್ರವೇಶ ಮತ್ತು ಪಾರ್ಕಿಂಗ್

S.I. Advertisers, Lucknow.

ಮಾಸಿಕ ಕವಾಯತಿನಲ್ಲಿ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿಕೆ

‘ಜುಲೈ 1ರಿಂದ ಹೊಸ ಕಾನೂನಿನಡಿ ಪ್ರಕರಣ’

ಪ್ರಜಾವಾಣಿ ವಾರ್ತೆ

ನಗರದಲ್ಲಿ ನಡೆದ ಪೊಲೀಸ್ ಪಡೆಗಳ ಪಥಸಂಚಲನದಲ್ಲಿ ಕಮಿಷನರ್ ಬಿ. ದಯಾನಂದ್ ಗೌರವ ವಂದನೆ ಸ್ವೀಕರಿಸಿದರು

ಬೆಂಗಳೂರು: ‘ಕೇಂದ್ರ ಸರ್ಕಾರ ಹೊಸದಾಗಿ ರೂಪಿಸಿರುವ ಮೂರು ಹೊಸ ಕಾನೂನುಗಳು ಜುಲೈ 1ರಿಂದ ಜಾರಿಗೆ ಬರಲಿದ್ದು, ಇವುಗಳ ಬಗ್ಗೆ ಪೊಲೀಸರು ಸಂಪೂರ್ಣ ಮಾಹಿತಿ ತಿಳಿದುಕೊಳ್ಳಬೇಕು. ಪೊಲೀಸರು ಜುಲೈ 1ರಿಂದ ಹೊಸ ಕಾನೂನು ಪ್ರಕಾರವೇ ಪ್ರಕರಣಗಳನ್ನು ದಾಖಲಿಸಿಕೊಳ್ಳಬೇಕು’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಪೊಲೀಸರಿಗೆ ಸೂಚನೆ ನೀಡಿದರು.

ಆಡುಗೋಡಿಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆಯ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಮಾಸಿಕ ಕವಾಯತಿನಲ್ಲಿ ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

‘ದೇಶದಲ್ಲಿ ಹಲವು ವರ್ಷಗಳಿಂದ ಜಾರಿಯಲ್ಲಿದ್ದ ಐಪಿಸಿ, ಸಿಆರ್‌ಪಿಸಿ ಹಾಗೂ ಸಾಕ್ಷ್ಯ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಬದಲಾವಣೆ ಮಾಡಿದೆ. ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷತಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಸಂಹಿತೆ ಎಂಬ ಮೂರು ಕಾನೂನುಗಳನ್ನು ರೂಪಿಸಿದೆ’ ಎಂದರು.

‘ಎಸಿಪಿ, ಇನ್‌ಸ್ಪೆಕ್ಟರ್, ತನಿಖಾಧಿಕಾರಿಗಳು, ಸಹಾಯಕರು, ಠಾಣೆ ಬರಹಗಾರರು ಹಾಗೂ ಇತರರು ಹೊಸ ಕಾನೂನುಗಳ ಬಗ್ಗೆ ತರಬೇತಿ ಪಡೆಯಬೇಕು’ ಎಂದು ದಯಾನಂದ್ ಹೇಳಿದರು.

‘ದೂರಿನ ಸಂಗತಿ ಪರಿಶೀಲಿಸಿ, ಅನ್ವಯವಾಗುವ ಕಾನೂನಿನಡಿ ಪೊಲೀಸರು ಪ್ರಕರಣ ದಾಖಲಿಸಬೇಕು. ಕಾನೂನುಗಳ ಬಗ್ಗೆ ಯಾವುದೇ ಗೊಂದಲ ಇರಬಾರದು. ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ತ್ವರಿತವಾಗಿ ಪ್ರಕರಣಗಳನ್ನು ದಾಖಲಿಸಿಕೊಳ್ಳಬೇಕು’ ಎಂದು ತಿಳಿಸಿದರು.

‘ಠಾಣೆಯಲ್ಲಿ ಜನರನ್ನು ಕಾಯಿಸಿದರೆ ಕ್ರಮ’

ಬೆಂಗಳೂರು: ‘ದೂರು ನೀಡಲು ಠಾಣೆಗೆ ಬರುವ ಜನರನ್ನು ಹೆಚ್ಚು ಕಾಯಿಸಬಾರದು. ಸುಖಾಸುಮ್ಮನೇ ಹೆಚ್ಚು ಹೊತ್ತು ಕೂರಿಸಿದ ಬಗ್ಗೆ ದೂರುಗಳು ಬಂದರೆ, ಅಂಥ ಠಾಣೆಯ ಪೊಲೀಸರ ವಿರುದ್ಧ ಕರ್ತವ್ಯಲೋಪದಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಮಾಸಿಕ ಕವಾಯತಿನಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಜನರು ಠಾಣೆಗೆ ಬಂದಾಗ ತ್ವರಿತವಾಗಿ ಸ್ಪಂದಿಸಬೇಕು. ಇನ್‌ಸ್ಪೆಕ್ಟರ್ ಇಲ್ಲವೆಂದು ಹೇಳಿ ಠಾಣೆಯಲ್ಲಿ ಕೂರಿಸಬಾರದು. ಪ್ರತಿ ಠಾಣೆಯಲ್ಲಿ 8ರಿಂದ 10 ಮಂದಿ ಸಬ್ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. ಅವರೆಲ್ಲರೂ ಜನರ ದೂರು ಆಲಿಸಬೇಕು’ ಎಂದು ಹೇಳಿದರು.

‘ತುರ್ತು ಸಂದರ್ಭ ಹಾಗೂ ರಕ್ಷಣೆಗಾಗಿ ಜನರು ಕರೆ ಮಾಡುತ್ತಾರೆ. ಇನ್‌ಸ್ಪೆಕ್ಟರ್, ಎಸಿಪಿ, ಡಿಸಿಪಿಗಳು ಪ್ರತಿಯೊಬ್ಬರ ಕರೆಗಳನ್ನು ಸ್ವೀಕರಿಸಬೇಕು. ಜನರ ಸಮಸ್ಯೆ ಆಲಿಸಿ, ಸೂಕ್ತ ಕ್ರಮ ಜರುಗಿಸಬೇಕು’ ಎಂದು ತಿಳಿಸಿದರು.

ರೌಡಿ ಚಟುವಟಿಕೆ ಹತ್ತಿಕ್ಕಲು ಸೂಚನೆ: ‘ನಗರದಲ್ಲಿ ರೌಡಿ ಚಟುವಟಿಕೆಗಳು ಹೆಚ್ಚಾಗಿದೆ. ರೌಡಿಗಳು ಜನರನ್ನು ಬೆದರಿಸುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ರೌಡಿಗಳ ಕೃತ್ಯಗಳನ್ನು ಹತ್ತಿಕ್ಕಲು ಪೊಲೀಸರು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ದಯಾನಂದ್ ಸೂಚನೆ ನೀಡಿದರು.

‘ರೌಡಿಗಳ ಬಗ್ಗೆ ಹೆಚ್ಚು ನಿಗಾ ವಹಿಸಿ, ಕಾನೂನು ಕ್ರಮಗಳನ್ನು ಜರುಗಿಸಬೇಕು. ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ಹೆಚ್ಚಿಸಬೇಕು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಮಹಿಳೆ ಚುಡಾಯಿಸಿದ ಅಪರಾಧಿಗೆ ಶಿಕ್ಷೆ ಕಾಯಂ

ಬೆಂಗಳೂರು: ಮಹಿಳೆಯೊಬ್ಬರನ್ನು ಚುಡಾಯಿಸಿದ್ದಲ್ಲದೇ, ಅದನ್ನು ಪ್ರಶ್ನಿಸಿದ್ದ ಆಕೆಯ ಪತಿಯ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ ಅಪರಾಧಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಮೂರು ವರ್ಷಗಳ ಶಿಕ್ಷೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಮಂಡ್ಯ ಜೆಎಂಎಫ್‌ಸಿ ಕೋರ್ಟ್ 2016ರ ಜುಲೈನಲ್ಲಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಬಸರಾಳು ಹೋಬಳಿಯ ಬೆಸ್ತರಕೊಪ್ಪಲು ಗ್ರಾಮದ ಎಚ್. ಸಿ.ಚಿಕ್ಕರಾಜು ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ.ವೆಂಕಟೇಶ್ ನಾಯಕ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆರೋಪಿಯು ಮಹಿಳೆಯನ್ನು ಬೆತ್ತಲೆಗೊಳಿಸಲು ಪ್ರಯತ್ನಿಸಿರುವುದು, ಪ್ರಾಣ ಬೆದರಿಕೆ ಹಾಕಿರುವುದು, ದೊಣ್ಣೆಯಿಂದ ಗಾಯಗೊಳಿಸಿರುವುದು, ಉದ್ದೇಶಪೂರ್ವಕವಾಗಿ ಅವಮಾನ ಮಾಡಿರುವ ಅಂಶಗಳು ಸಾಕ್ಷ್ಯಾಧಾರಗಳಿಂದ ದೃಢಪಟ್ಟಿದೆ. ಹೀಗಿರುವಾಗ ವಿಚಾರಣಾ ನ್ಯಾಯಾಲಯ ವಿಧಿಸಿರುವ ಶಿಕ್ಷೆಯಲ್ಲಿ ಯಾವುದೇ ದೋಷ ಕಂಡು ಬರುತ್ತಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಮುದ್ರಾಂಕ ಶುಲ್ಕ ವಂಚನೆ ದಾಖಲೆ ವಶಕ್ಕೆ ಆದೇಶ

ಬೆಂಗಳೂರು: ಎರಡು ನಿವೇಶನಗಳ ಮಾರಾಟ ವಿಚಾರಕ್ಕೆ ಸಂಬಂಧಿಸಿದಂತೆ ಕೋಲಾರದಲ್ಲಿ 13 ವರ್ಷಗಳ ಹಿಂದೆ ನಡೆದ ವಹಿವಾಟೊಂದರಲ್ಲಿ ಮುದ್ರಾಂಕ ಶುಲ್ಕ ಪಾವತಿಸದೇ ಇರುವ ಸಂಗತಿ ಬೆಳಕಿಗೆ ಬಂದಿದ್ದು, ಇದರ ದಾಖಲೆಗಳನ್ನು ವಶಕ್ಕೆ ಪಡೆಯುವಂತೆ ಹೈಕೋರ್ಟ್ ಆದೇಶಿಸಿದೆ.

ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮೆಹಬೂಬ್ ಮುನಾವರ್ ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ನಿವೇಶನ ಮಾರಾಟದ ಕ್ರಯಪತ್ರ ದಾಖಲೆಯನ್ನು ಕೇವಲ ₹ 2 ಮೌಲ್ಯದ ಕಾಗದದಲ್ಲಿ ಮುದ್ರಿಸಲಾಗಿದೆ. ಅದಕ್ಕೆ ಮುದ್ರಾಂಕ ಶುಲ್ಕ ಪಾವತಿಸಿಲ್ಲ ಎಂಬ ಸಂಗತಿ ಕಂಡು ಬಂದಿದೆ. ಹೀಗಾಗಿ, ಆ ದಾಖಲೆಯನ್ನು ವಶಕ್ಕೆ ಪಡೆದುಕೊಳ್ಳಬೇಕು. ಒಪ್ಪಂದವನ್ನು ಪರಿಶೀಲಿಸಿ ಅದಕ್ಕೆ ಎಷ್ಟು ಶುಲ್ಕ ಮತ್ತು ಎಷ್ಟು ದಂಡ ಪಾವತಿಸಬೇಕು ಎಂಬುದನ್ನು ಜಿಲ್ಲಾಧಿಕಾರಿ ನಿರ್ಧರಿಸಬೇಕು’ ಎಂದು ಆದೇಶಿಸಿದೆ.

ಕಲ್ಲು ಎತ್ತಿ ಹಾಕಿ ಕೊಲೆ

ಬೆಂಗಳೂರು: ಯಲಹಂಕ ನ್ಯೂಟೌನ್ ಬಳಿಯ ಡೇರಿ ವೃತ್ತದಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

‘ಕಲ್ಲು ಎತ್ತಿ ಹಾಕಿ ವ್ಯಕ್ತಿಯನ್ನು ಕೊಲೆ ಮಾಡಲಾಗಿದ್ದು, ಗುರುತು ಪತ್ತೆಯಾಗಿಲ್ಲ. 30ರಿಂದ 35 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮದ್ಯದ ಅಮಲಿನಲ್ಲಿದ್ದರು ಎನ್ನಲಾದ ವ್ಯಕ್ತಿ, ಡೇರಿ ವೃತ್ತದಲ್ಲಿ ಶುಕ್ರವಾರ ರಾತ್ರಿ ಓಡಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಗಲಾಟೆ ನಡೆದು, ಕೊಲೆ ಆಗಿರುವ ಅನುಮಾನವಿದೆ. ಕೃತ್ಯದ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದರು.

‘ಮೃತ ವ್ಯಕ್ತಿಯ ಫೋಟೊವನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿದೆ. ಜೊತೆಗೆ, ಆರೋಪಿಗಳನ್ನು ಪತ್ತೆ ಮಾಡಲು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಚಿನ್ನಸ್ವಾಮಿ ಕ್ರೀಡಾಂಗಣ ಸುತ್ತಮುತ್ತ ಬಿಗಿ ಭದ್ರತೆ

ಐಪಿಎಲ್: ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಪಂದ್ಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 18ರಂದು ಐಪಿಎಲ್ ಕ್ರಿಕೆಟ್ ಪಂದ್ಯ ನಡೆಯಲಿದ್ದು, ಕ್ರೀಡಾಂಗಣ ಸುತ್ತಮುತ್ತ ಬಿಗಿ ಭದ್ರತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡಗಳ ನಡುವೆ ಪಂದ್ಯ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಕ್ರೀಡಾಂಗಣಕ್ಕೆ ಬರುವ ನಿರೀಕ್ಷೆ ಇದೆ. ಕ್ರೀಡಾಂಗಣದ ಪ್ರವೇಶ ದ್ವಾರ ಹಾಗೂ ಅಕ್ಕ–ಪಕ್ಕದ ಸ್ಥಳಗಳಲ್ಲಿಯೂ ಪೊಲೀಸರು ಭದ್ರತೆ ಕೈಗೊಳ್ಳಲಿದ್ದಾರೆ.

ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಹಾಗೂ ಶ್ವಾನದಳದ ಸಿಬ್ಬಂದಿ, ಕ್ರೀಡಾಂಗಣ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದರು.

ಕ್ರೀಡಾಂಗಣ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ, ಸಂಚಾರ ಪೊಲೀಸರು ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ. ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ವಾಹನಗಳ ನಿಲುಗಡೆಯನ್ನು ನಿರ್ಬಂಧಿಸಿದ್ದಾರೆ.

‘ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಕಬ್ಬನ್ ರಸ್ತೆ, ಕ್ವೀನ್ಸ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಪಂದ್ಯ ವೀಕ್ಷಿಸಲು ಕ್ರೀಡಾಂಗಣಕ್ಕೆ ಬರುವ ಜನರು, ತಮ್ಮ ವಾಹನಗಳನ್ನು ಸೇಂಟ್ ಜೋಸೆಫ್ ಇಂಡಿಯಾ ಸ್ಕೂಲ್ ಮೈದಾನ, ಯು.ಬಿ ಸಿಟಿ, ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗ ಹಾಗೂ ಕಿಂಗ್ಸ್ ರಸ್ತೆಯಲ್ಲಿ ನಿಲ್ಲಿಸಬಹುದು. ಜನರು, ಮೆಟ್ರೊ ಹಾಗೂ ಬಸ್ ಬಳಸಬೇಕು’ ಎಂದು ಹೇಳಿದ್ದಾರೆ.

ನಗರದ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಶುಕ್ರವಾರ ತಪಾಸಣೆ ನಡೆಸಿದರು – ಪ್ರಜಾವಾಣಿ ಚಿತ್ರ

ಕುಡಿಯುವ ನೀರು ಪೂರೈಕೆಗೆ ಚಾಲನೆ

ರಾಜರಾಜೇಶ್ವರಿನಗರ: ನೀರಿನ ಸಮಸ್ಯೆ ಎದುರಿಸುತ್ತಿರುವ ವೆಂಕಟಾಪುರದ ಸನ್‌ವರ್ತ್ ಪ್ರಾವಿಡೆಂಟ್ ವಸತಿ ಸಮುಚ್ಚಯ, ಎಚ್. ಗೊಲ್ಲಹಳ್ಳಿ, ದೊಡ್ಡಬೆಲೆ, ಕೈಲಾಸ್ ನಗರ, ರಾಚನಮಡು, ನಾಗೇಗೌಡನಪಾಳ್ಯಕ್ಕೆ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಪೂರೈಸುವ ಯೋಜನೆಗೆ ಶಾಸಕ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು.

ಶಾಸಕರ ಅನುದಾನದಲ್ಲಿ ಏಳು ಕೊಳವೆಬಾವಿಗಳನ್ನು ಕೊರೆಸಲಾಗಿದ್ದು, ಎಚ್. ಗೊಲ್ಲಹಳ್ಳಿ ಪಂಚಾಯಿತಿಯಿಂದ ಮೋಟರ್ ಅಳವಡಿಸಲಾಗಿದೆ.

ಎಚ್.ಗೊಲ್ಲಹಳ್ಳಿ ಗ್ರಾ.ಪಂ. ಅಧ್ಯಕ್ಷ ಪಿ.ನಾಗೇಶ್, ಉಪಾಧ್ಯಕ್ಷೆ ರಾಧಿಕಾ, ಸದಸ್ಯರಾದ ಸಿ.ಆರ್.ಪ್ರಕಾಶ್, ಉಮೇಶ್, ಟಿ.ಮುನಿರಾಜು, ಪುಷ್ಪಲತಾ ಮಂಜುನಾಥ್, ಎಂ.ರಾಜಣ್ಣ ಇದ್ದರು.

ರಥೋತ್ಸವ...

ನಗರದಲ್ಲಿ ಕೋಟೆ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದ ಬ್ರಹ್ಮರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ಜರುಗಿತು –ಪ್ರಜಾವಾಣಿ ಚಿತ್ರ/ ರಂಜು ಪಿ

ವಿದ್ಯುತ್ ತಂತಿ ಮೇಲೆ ತಳ್ಳಿ ಕೊಲೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿರಾಮನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸತ್ಯ (20) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಒಡಿಶಾದ ರಂಜಿತ್ ಪ್ರಧಾನ್ (30) ಮತ್ತು ರಮೇಶ್ (32) ಬಂಧಿತರು. ಇವರಿಬ್ಬರು ಸೇರಿಕೊಂಡು, ಸತ್ಯ ಅವರನ್ನು ಮೇ 9ರಂದು ಕೊಂದು ಪರಾರಿಯಾಗಿದ್ದರು. ಕೊಲೆ ಬಗ್ಗೆ ಆರಂಭದಲ್ಲಿ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಪ್ರತ್ಯಕ್ಷದರ್ಶಿಗಳ ಹೇಳಿಕೆ ಹಾಗೂ ಇತರೆ ಮಾಹಿತಿ ಆಧರಿಸಿ ತನಿಖೆ ನಡೆಸಿದಾಗ, ಆರೋಪಿಗಳು ಸಿಕ್ಕಿಬಿದ್ದರು’ ಎಂದು ಪೊಲೀಸರು ಹೇಳಿದರು.

‘ಕೆ.ಎಸ್. ಗಾರ್ಡನ್‌ನ ಸತ್ಯ, ಬಾಲಕಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಗೆ ಬಂದಿದ್ದ’ ಎಂದರು.

‘ಆರೋಪಿಗಳಾದ ರಂಜಿತ್ ಹಾಗೂ ರಮೇಶ್, ಸಂಪಂಗಿರಾಮನಗರದ ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅದೇ ಕಟ್ಟಡದಲ್ಲಿ ವಾಸವಿದ್ದರು. ಮೇ 9ರಂದು ಮದ್ಯದ ಅಮಲಿನಲ್ಲಿದ್ದ ಸತ್ಯ, ಕಟ್ಟಡಕ್ಕೆ ಹೋಗಿದ್ದರು. ಅದನ್ನು ಪ್ರಶ್ನಿಸಿದ್ದ ಆರೋಪಿಗಳು, ‘ಯಾರು ನೀನು? ಇಲ್ಲಿಗೆ ಏಕೆ ಬಂದಿದ್ದಿಯಾ?’ ಎಂಬುದಾಗಿ ವಿಚಾರಿಸಿದ್ದರು.’

‘ಸತ್ಯ ಹಾಗೂ ಆರೋಪಿಗಳ ನಡುವೆ ಗಲಾಟೆ ಶುರುವಾಗಿತ್ತು. ಕಟ್ಟಡದ ಸಮೀಪದಲ್ಲಿಯೇ ವಿದ್ಯುತ್ ತಂತಿಯೊಂದು ತುಂಡರಿಸಿ ಬಿದ್ದಿತ್ತು. ಅದರಲ್ಲಿ ವಿದ್ಯುತ್ ಪ್ರವಹಿಸುತ್ತಿತ್ತು. ಸತ್ಯ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ವಿದ್ಯುತ್ ತಂತಿ ಮೇಲೆ ತಳ್ಳಿದ್ದರು. ತಂತಿ ತಗುಲುತ್ತಿದ್ದಂತೆ ವಿದ್ಯುತ್ ಪ್ರವಹಿಸಿ ಸತ್ಯ ಮೃತಪಟ್ಟಿದ್ದರು. ನಂತರ, ಆರೋಪಿಗಳು ಮೃತದೇಹವನ್ನು ಬೇರೊಂದು ಕಟ್ಟಡದಲ್ಲಿ ಎಸೆದು ಸ್ಥಳದಿಂದ ಪರಾರಿಯಾಗಿದ್ದರು’ ಎಂದು ಪೊಲೀಸರು ತಿಳಿಸಿದರು.

ಬಾರ್‌ನಲ್ಲಿ ಪರಿಶೀಲನೆ: ಸಿಕ್ಕಿಬಿದ್ದ ಆರೋಪಿ

ಬೆಂಗಳೂರು: ಕೊಲೆ ಯತ್ನ ಪ್ರಕರಣದಲ್ಲಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿ ಚೇತನ್ (24) ಎಂಬುವವರನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಹೊಸಕೋಟೆಯ ಚೇತನ್ ಎರಡು ವರ್ಷಗಳಿಂದ ತಲೆಮರೆಸಿಕೊಂಡಿದ್ದ. ಈತನ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಸಹ ಜಾರಿಯಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಅಪರಾಧ ಹಿನ್ನೆಲೆಯುಳ್ಳವರ ಪತ್ತೆಗಾಗಿ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ನಗರದ ಬಾರ್‌ಗಳಿಗೆ ತೆರಳಿ, ಉಪಕರಣ ಸಹಾಯದಿಂದ ಅಲ್ಲಿದ್ದವರ ಬೆರಳಚ್ಚು ಪಡೆದು ಪರಿಶೀಲಿಸಲಾಗಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಚೇತನ್ ಬಗ್ಗೆ ಮಾಹಿತಿ ಲಭ್ಯವಾಯಿತು. ವಶಕ್ಕೆ ಪಡೆದು ವಿಚಾರಿಸಿದಾಗ, ಕೊಲೆ ಯತ್ನ ಪ್ರಕರಣದ ಆರೋಪಿ ಎಂಬುದು ತಿಳಿಯಿತು’ ಎಂದು ಪೊಲೀಸರು ವಿವರಿಸಿದರು.

ಅಪಘಾತ: ಕಂಪನಿ ವ್ಯವಸ್ಥಾಪಕ ಸಾವು

ಬೆಂಗಳೂರು: ಜ್ಞಾನಭಾರತಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರ ವರುಣ್ (25) ಎಂಬುವವರು ಮೃತಪಟ್ಟಿದ್ದಾರೆ.

‘ಮೂಡಲಪಾಳ್ಯದ ವರುಣ್, ಕಂಪನಿಯೊಂದರ ವ್ಯವಸ್ಥಾಪಕ. ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ವರುಣ್ ಅವರು ಹೊರವರ್ತುಲ ರಸ್ತೆಯ ಸುಮನಹಳ್ಳಿ ವೃತ್ತದಿಂದ ನಾಗರಬಾವಿ ವೃತ್ತದ ಕಡೆಗೆ ಹೊರಟಿದ್ದರು. ಮಾರ್ಗಮಧ್ಯೆ ಸರ್ವೀಸ್ ರಸ್ತೆಯಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ, ರಸ್ತೆ ವಿಭಜಕಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ವರುಣ್ ಅವರು ವಾಹನ ಸಮೇತ ಉರುಳಿಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿಟ್ಟು ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ಮನೆಗೆ ನುಗ್ಗಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಸಂಬಂಧ ಬಾಲಕನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ₹ 9 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

‘5ನೇ ಬ್ಲಾಕ್‌ನಲ್ಲಿರುವ ಮನೆಯಲ್ಲಿ ಏ. 29ರಂದು ಕಳ್ಳತನ ನಡೆದಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡು, ಬಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಒಂದು ಅಂತಸ್ತಿನ ಮನೆಯಲ್ಲಿ ದಂಪತಿ ಮಾತ್ರ ವಾಸವಿದ್ದಾರೆ. ಸೆಕೆ ಹೆಚ್ಚಿದ್ದರಿಂದ ಅವರಿಬ್ಬರು ನೆಲಮಹಡಿಗೆ ಹೋಗಿದ್ದರು. ಮೊದಲ ಮಹಡಿಯ ಬಾಗಿಲು ತೆರೆದಿಟ್ಟಿದ್ದರು. ಇದೇ ಬಾಗಿಲು ಮೂಲಕ ಒಳಗೆ ನುಗ್ಗಿದ್ದ ಆರೋಪಿ, ಚಿನ್ನಾಭರಣ ಹಾಗೂ ವಜ್ರದ ಆಭರಣ ಕದ್ದುಕೊಂಡು ಪರಾರಿಯಾಗಿದ್ದ’ ಎಂದರು.

ಹೊಸಕೆರೆಗೆ ತೇಲಿ ಬಂದ ನಾಯಿಗಳ ಕಳೇಬರ: ದೂರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸ್ಥಳೀಯರಿಗೆ ನರಕಯಾತನೆ
- ನಿರ್ವಹಣೆ ಕೊರತೆ
- ಕೆರೆ ಸೇರುತ್ತಿರುವ ಕೊಳಚೆ

ಕೆಂಗೇರಿ: ಕಳೆದ ವಾರ ಸುರಿದ ಒಂದೇ ಮಳೆಗೆ ತ್ಯಾಜ್ಯದ ಆಗರವಾಗಿದ್ದ ಕೆಂಗೇರಿ ಉಪನಗರ ಬಳಿಯ ಹೊಸಕೆರೆಯಲ್ಲಿ ಈಗ ನಾಯಿಗಳ ಕಳೇಬರ ತೇಲುತ್ತಿವೆ.

ಮಳೆಯಿಂದ ಕೆರೆಯಲ್ಲಿ ನೀರಿಗಿಂತ ಹೆಚ್ಚು ತ್ಯಾಜ್ಯವೇ ಸಂಗ್ರಹವಾಗಿತ್ತು. ಕೆರೆ ಸುತ್ತಮುತ್ತ ಜನರು ಮೂಗು ಮುಚ್ಚಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಕೆರೆಯಲ್ಲಿ ನಾಯಿಗಳ ಕಳೇಬರ ತೇಲಾಡುತ್ತಿದ್ದು, ನರಕ ಯಾತನೆ ಅನುಭವಿಸುವಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಶುಕ್ರವಾರ ಮುಂಜಾನೆ ಕೆರೆಯಲ್ಲಿ ನಾಯಿಗಳ ನಾಲ್ಕು ಶವ ಕಂಡು ಬಂದಿದೆ. ಇದನ್ನು ಗಮನಿಸಿದ ಕೆರೆಯ ಗಾರ್ಡ್‌ಗಳು ಅವುಗಳನ್ನು ಕೆರೆಯಿಂದ ತೆಗೆದು ಹೊರಗೆ ಹಾಕಿದ್ದಾರೆ.

‘ನಿರ್ವಹಣೆ ಕೊರತೆಯಿಂದ ಕೊಳಚೆ ನೀರು ನಿರಂತರವಾಗಿ ಕೆರೆ ಅಂಗಳವನ್ನು ಸೇರುತ್ತಿದೆ. ಅಕ್ಕಪಕ್ಕದ ನಿವಾಸಿಗಳು ಕಸ ಕಡ್ಡಿಗಳನ್ನು, ಸತ್ತ ಸಾಕು ಪ್ರಾಣಿಗಳನ್ನು ಕೆರೆಯ ಬಳಿ ಬಿಸಾಡಿ ಹೋಗುತ್ತಿದ್ದಾರೆ. ಕೆರೆಗೆ ತ್ಯಾಜ್ಯ ಹರಿಯುವುದನ್ನು ತಡೆಯಲು ಕೊಳವೆಗಳಿಗೆ ಜಾಲರಿಗಳನ್ನೂ ಅಳವಡಿಸಿಲ್ಲ. ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ಅವೈಜ್ಞಾನಿಕ ಕಾಮಗಾರಿಯಿಂದ ಕೆರೆ ಅವಸಾನದ ಅಂಚು ತಲುಪುತ್ತಿದೆ’ ಎಂದು ಸ್ಥಳೀಯ ನಿವಾಸಿ ಗುರು ಬೇಸರ ವ್ಯಕ್ತಪಡಿಸಿದರು.

‘ಕೆರೆ ಅಭಿವೃದ್ಧಿಗೆ ಕಳೆದ ಹತ್ತು ವರ್ಷಗಳಲ್ಲಿ ಸುಮಾರು ₹15 ಕೋಟಿಗೂ ಹೆಚ್ಚು ಹಣ ವ್ಯಯ ಮಾಡಲಾಗಿದೆ. ಆದರೂ ಕೊಳಚೆ ನೀರು ಕೆರೆ ಒಡಲನ್ನು ಸೇರುವುದು ತಪ್ಪಿಲ್ಲ. ಕೆರೆ ಅಭಿವೃದ್ಧಿ ಮರೀಚಿಕೆಯಾಗಿದೆ’ ಎಂದು ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಎನ್. ಕದರಪ್ಪ ದೂರಿದರು.

ಬಿಬಿಎಂಪಿ ಕೆರೆ ವಿಭಾಗದ ಎಇಇ ಮಹೇಶ್ ಮಾತನಾಡಿ, ‘ಜಾಲರಿ ಹಾಗೂ ತಂತಿ ಬೇಲಿ ಅಳವಡಿಕೆಗೆ ಪ್ರತ್ಯೇಕ ಟೆಂಡರ್ ಕರೆಯಲಾಗಿದೆ. ಚುನಾವಣೆ ಮುಗಿದ ಬಳಿಕ ಕಾಮಗಾರಿಗೆ ಚಾಲನೆ ನೀಡಲಾಗುವುದು. ಕೆರೆ ಸಂರಕ್ಷಣೆ ಹಾಗೂ ಶುಚಿತ್ವಕ್ಕೆ ಇಲಾಖೆಯ ಜವಾಬ್ದಾರಿ ಜೊತೆಗೆ ನಾಗರಿಕರ ಸಹಕಾರವೂ ಬೇಕಾಗಿರುತ್ತದೆ’ ಎಂದರು.

ಹೊಸಕೆರೆಯಲ್ಲಿ ತೇಲುತ್ತಿರುವ ನಾಯಿಯ ಕಳೇಬರ

ಪರಪ್ಪನ ಅಗ್ರಹಾರ ಸುತ್ತಲಿನ ಪ್ರದೇಶದಲ್ಲಿ ನೆಟ್‌ವರ್ಕ್ ಸಮಸ್ಯೆ: ನಿವಾಸಿಗಳ ದೂರು

‘ಜಾಮರ್’ ವ್ಯಾಪ್ತಿ ಕಡಿತಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿರುವ ಹೈ ಫೈ ಮೊಬೈಲ್ ಜಾಮರ್‌ನಿಂದಾಗಿ ಸುತ್ತಲಿನ 2 ಕಿ.ಮೀ. ಪ್ರದೇಶಗಳಲ್ಲಿ ಮೊಬೈಲ್ ನೆಟ್‌ವರ್ಕ್ ಸಿಗುತ್ತಿಲ್ಲ, ಇದರಿಂದ ಜನರ ದೈನಂದಿನ ಜೀವನಕ್ಕೆ ತೊಂದರೆಯಾಗಿದೆ ಎಂದು ಆರೋಪಿಸಿ ಪರಪ್ಪನ ಅಗ್ರಹಾರದ ಸುತ್ತಮುತ್ತಲಿನ ನಿವಾಸಿಗಳು ಗುರುವಾರ ಪ್ರತಿಭಟನೆ ನಡೆಸಿದರು.

‘ಡಿಜಿಟಲ್ ಯುಗದಲ್ಲಿ ಬಹುತೇಕ ವ್ಯಾಪಾರ–ವಹಿವಾಟು ಆನ್‌ಲೈನ್ ಮೂಲಕವೇ ನಡೆಯುತ್ತಿದೆ, ನಗದು ವ್ಯವಹಾರ ಕಡಿಮೆ ಆಗಿದೆ. ಜಾಮರ್ ಅಳವಡಿಕೆಯಿಂದ ಎರಡು ತಿಂಗಳಿನಿಂದ ನೆಟ್‌ವರ್ಕ್ ಸಮಸ್ಯೆಯಾಗಿದ್ದು, ನಿತ್ಯದ ಕೆಲಸಗಳಿಗೆ ತೊಂದರೆಯಾಗಿದೆ. ಈ ಬಗ್ಗೆ ಜೈಲಿನ ಅಧಿಕಾರಿಗಳಿಗೆ, ಎಡಿಜಿಪಿ ಮತ್ತು ಡಿಐಜಿ ಅವರಿಗೆ ಪತ್ರ ಮುಖೇನ ಮನವಿ ಮಾಡಲಾಗಿದ್ದರೂ ಈವರೆಗೂ ಕ್ರಮ ಕೈಗೊಂಡಿಲ್ಲ’ ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಲಕ್ಷ್ಮಣ್ ದೂರಿದರು.

‘ಟ್ಯಾಕ್ಸಿ ಬುಕ್ ಮಾಡಲು ಆಗುತ್ತಿಲ್ಲ. ಆಧಾರ್, ಸೇವಾಸಿಂಧು ಮತ್ತು ಇತರೆ ಆನ್‌ಲೈನ್ ಮೂಲಕ ಪಡೆಯುವ ಸರ್ಕಾರಿ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಲು ಒಟಿಪಿ ಕಡ್ಡಾಯವಿದೆ. ನೆಟ್‌ವರ್ಕ್ ಸಮಸ್ಯೆಯಿಂದ ಒಟಿಪಿಯೂ ಬರುತ್ತಿಲ್ಲ. ಇದರಿಂದ ರೋಸಿ ಹೋಗಿದ್ದೇವೆ. ಜೈಲಿನ ಒಳಗೆ ಸಂಪರ್ಕ ನಿಯಂತ್ರಿಸುವಂತೆ ಜಾಮರ್ ಅಳವಡಿಸಿಕೊಂಡರೆ ನಮ್ಮ ಅಭ್ಯಂತರವಿಲ್ಲ. ಆದರೆ ಕೈದಿಗಳ ಕಾರಣಕ್ಕಾಗಿ ಸಾರ್ವಜನಿಕರಿಗೆ ತೊಂದರೆ ಕೊಡುವುದು ಎಷ್ಟು ಸರಿ?’ ಎಂದು ಭುವನೇಶ್ವರಿ ನಗರ ನಿವಾಸಿ ಶೇಖರ್ ರೆಡ್ಡಿ ಪ್ರಶ್ನಿಸಿದರು.

ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿರುವ ಮೊಬೈಲ್ ಜಾಮರ್ ವ್ಯಾಪ್ತಿಯ ಮಿತಿಯನ್ನು ಕಡಿತಗೊಳಿಸುವಂತೆ ಆಗ್ರಹಿಸಿ ಸುತ್ತಮುತ್ತಲ ನಿವಾಸಿಗಳು ಪ್ರತಿಭಟನೆ ನಡೆಸಿದರು.

‘ಜೈಲಿನ ಒಳಗೆ ಕೈದಿಗಳಿಗೆ ಮೊಬೈಲ್ ಮತ್ತು ಸಿಮ್ ಸಿಗದಂತೆ ಮಾಡಲು ಅಧಿಕಾರಿಗಳು ಕ್ರಮವಹಿಸಬೇಕು, ಬದಲಾಗಿ, ಹೀಗೆ ಸಾರ್ವಜನಿಕರಿಗೆ ತೊಂದರೆ ಕೊಡುವುದು ಯಾವ ನ್ಯಾಯ’ ಎನ್ನುತ್ತಾರೆ ನೀರಿನ ವ್ಯಾಪಾರಿ ಗೌರಮ್ಮ.

ವಿದ್ಯಾರ್ಥಿನಿ ಸಾವು: ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎ ವಿದ್ಯಾರ್ಥಿನಿ ಪ್ರಭುಧ್ಯಾ (21) ಅನುಮಾನಾಸ್ಪದ ಸಾವಿನ ಬಗ್ಗೆ ತನಿಖೆ ಮುಂದುವರಿಸಿರುವ ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು, ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸುತ್ತಿದ್ದಾರೆ.

ಪ್ರಭುಧ್ಯಾ ಅವರ ಸಹಪಾಠಿಗಳು ಹಾಗೂ ಸ್ನೇಹಿತರನ್ನು ವಿಚಾರಣೆಗೆ ಒಳಪಡಿಸುತ್ತಿದ್ದಾರೆ.

‘ಠಾಣೆ ವ್ಯಾಪ್ತಿಯ ಬೃಂದಾವನ ಬಡಾವಣೆಯ ಮನೆಯೊಂದರ ಸ್ನಾನದ ಕೊಠಡಿಯಲ್ಲಿ ಪ್ರಭುಧ್ಯಾ ಅವರ ಮೃತದೇಹ ಪತ್ತೆಯಾಗಿತ್ತು. ಕೈ ಹಾಗೂ ಕತ್ತಿನಲ್ಲಿ ಗಾಯವಾಗಿತ್ತು. ಈ ಸಾವಿನ ಬಗ್ಗೆ ಹಲವು ಅನುಮಾನಗಳು ಹುಟ್ಟಿಕೊಂಡಿವೆ. ಹೀಗಾಗಿ, ಐಪಿಸಿ 174 (ಸಿ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮನೆಯ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿದ್ದು, ಯಾವುದೇ ಅನುಮಾನಾಸ್ಪದ ವ್ಯಕ್ತಿಗಳು ಓಡಾಡಿದ್ದ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಾಗಿಲ್ಲ. ಮೊಬೈಲ್ ಕರೆಗಳ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

‘ಕ್ಷಮಿಸಿ ಅಮ್ಮ...’ ಎಂಬುದಾಗಿ ಬರೆದಿರುವ ಎರಡು ಪತ್ರಗಳು ಮನೆಯಲ್ಲಿ ಸಿಕ್ಕಿವೆ. ಇವು ಯಾರ ಹಸ್ತಾಕ್ಷರ ಎಂಬುದನ್ನು ತಿಳಿಯಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಸದ್ಯದಲ್ಲೇ ಕೈ ಸೇರಲಿದ್ದು, ಸಾವಿನ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ಮೂಲಗಳು ತಿಳಿಸಿವೆ.

ಶೇಖ್ ವಿರುದ್ಧ ಆರೋಪಪಟ್ಟಿ

ನವದೆಹಲಿ(ಪಿಟಿಐ): ರಕ್ಷಣಾ ವ್ಯವಸ್ಥೆಗಳ ರಹಸ್ಯ ಮಾಹಿತಿ ಸಂಗ್ರಹಿಸುವುದಕ್ಕಾಗಿ ನೌಕಾಪಡೆ ಸಿಬ್ಬಂದಿಯ ‘ಹನಿ ಟ್ರ್ಯಾಪ್’ಗೆ ಪಾಕಿಸ್ತಾನ ಗುಪ್ತಚರ ಸಂಸ್ಥೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ, ಮುಂಬೈ ನಿವಾಸಿ ಅಮಾನ್ ಸಲೀಂ ಶೇಖ್ ವಿರುದ್ಧ ಎನ್‌ಐಎ ಆರೋಪಪಟ್ಟಿ ದಾಖಲಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘ಪಿವಿ ಬ್ರ್ಯಾಂಡ್ ಸ್ಪಾಟ್’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ

ಆದೇಶಕ್ಕೆ ಜೂನ್ ಅಂತ್ಯದ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಮಾಡಿರುವ ಎಲ್ಲ ಘೋಷಣೆಗಳ ಅನುಷ್ಠಾನಕ್ಕೆ ಜೂನ್ ಅಂತ್ಯದೊಳಗೆ ಆದೇಶಗಳನ್ನು ಹೊರಡಿಸುವಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ನಿರ್ದೇಶನ ನೀಡಿದರು.

ವಿಧಾನಸೌಧದಲ್ಲಿ ವಿವಿಧ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ಜತೆ ಸಭೆ ನಡೆಸಿದ ಅವರು, ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ನಡೆಸಿರುವ ಸಿದ್ಧತೆ ಕುರಿತು ಪರಿಶೀಲಿಸಿದರು. ಅಧಿಕಾರಿಗಳಿಂದ ಇಲಾಖಾವಾರು ಮಾಹಿತಿ ಪಡೆದರು. 'ಬಜೆಟ್‌ನಲ್ಲಿ ಮಾಡಿರುವ ಎಲ್ಲ ಘೋಷಣೆಗಳ ಅನುಷ್ಠಾನಕ್ಕೆ ಜೂನ್ ಅಂತ್ಯದೊಳಕ್ಕೆ ಆದೇಶ ಹೊರಡಿಸಲೇಬೇಕು. ಬಜೆಟ್ ಘೋಷಣೆಗಳಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳಿಗೆ ತ್ವರಿತವಾಗಿ ಅನುಮೋದನೆ ನೀಡಿ, ಜೂನ್ ಅಂತ್ಯದೊಳಗೆ ಟೆಂಡರ್ ಪ್ರಕ್ರಿಯೆ ಆರಂಭಿಸಬೇಕು ಎಂಬ ನಿರ್ದೇಶನವನ್ನು ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿಪತ್ತು ನಿರ್ವಹಣೆಗೆ ಸಿದ್ಧತೆ: 'ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಈ ಬಾರಿ ಅತಿವೃಷ್ಟಿಯಾಗುವ ಸಾಧ್ಯತೆಗಳಿವೆ. ಹೆಚ್ಚು ಮಳೆ ಬಿದ್ದರೆ ಸಂಭವಿಸಬಹುದಾದ ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಸಂಬಂಧಿಸಿದ ಇಲಾಖೆಗಳು ತಕ್ಷಣದಿಂದಲೇ ಸಿದ್ಧತೆ ಆರಂಭಿಸಬೇಕು' ಎಂಬ ಸೂಚನೆಯನ್ನು ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಸಂಭವನೀಯ ಪ್ರವಾಹ ಪ್ರದೇಶಗಳನ್ನು ಗುರುತಿಸಬೇಕು. ತಗ್ಗು ಪ್ರದೇಶಗಳಲ್ಲಿ ಜನವಸತಿಗಳನ್ನೂ ಗುರುತು ಮಾಡಬೇಕು. ಭೂ ಕುಸಿತ ಸಂಭವಿಸಬಹುದಾದ ಪ್ರದೇಶಗಳನ್ನು ಗುರುತಿಸಿ, ಅಪಾಯ ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಮುಂಗಾರು ಹಂಗಾಮಿನಲ್ಲಿ ಕೃಷಿ ಚಟುವಟಿಕೆಗೆ ತೊಂದರೆಯಾಗದಂತೆ ಕೃಷಿ ಇಲಾಖೆ ಸಿದ್ಧತೆ ನಡೆಸಬೇಕು. ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಉದ್ಭವಿಸಬಾರದು. ಮುಖ್ಯಮಂತ್ರಿಯವರ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕರಿಸಿರುವ ಅಹವಾಲುಗಳನ್ನು ಎಲ್ಲ ಇಲಾಖೆಗಳೂ ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂದು ಸಿದ್ದರಾಮಯ್ಯ ಸೂಚಿಸಿದ್ದಾರೆ.

ಬಜೆಟ್ ಘೋಷಣೆ

ಕೇಂದ್ರಕ್ಕೆ ಪತ್ರ: ಬಿತ್ತನೆ ಮಾಡಿದ್ದು, ಬೆಳೆ ಚಿಗುರೊಡೆಯದ ಜಮೀನುಗಳ ಮಾಲೀಕರಿಗೂ ಬರ ಪರಿಹಾರ ನೀಡುವಂತೆ ಕೆಲವು ಶಾಸಕರು ಬೇಡಿಕೆ ಇಟ್ಟಿರುವ ಕುರಿತು ಕಂದಾಯ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ಆ ರೀತಿ ಪರಿಹಾರ ನೀಡಲು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಗಳಲ್ಲಿ ಅವಕಾಶ ಇಲ್ಲ ಎಂಬುದನ್ನೂ ಗಮನಕ್ಕೆ ತಂದರು.

'ಬಿತ್ತನೆ ಮಾಡಿದ್ದು, ಮೊಳಕೆಯೊಡೆಯದೇ ಇದ್ದರೂ ಅಂತಹ ಪ್ರಕರಣಗಳಲ್ಲಿ ಪರಿಹಾರ ವಿತರಿಸಲು ಅವಕಾಶವಾಗುವಂತೆ ಎನ್‌ಡಿಆರ್‌ಎಫ್ ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡುವಂತೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಮುಖ್ಯಮಂತ್ರಿ ಸೂಚಿಸಿದರು' ಎಂದು ಮೂಲಗಳು ತಿಳಿಸಿವೆ.

ಕೆರೆ ಭರ್ತಿಗೆ ಮನವಿ

ಬೆಂಗಳೂರಿನಲ್ಲಿ 6,900 ಕೊಳವೆ ಬಾವಿಗಳು ಬತ್ತಿ ಹೋಗಿರುವ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ನಗರದ ಕರೆಗಳಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಭರ್ತಿ ಮಾಡುವಂತೆ ಹಾಗೂ ಮಳೆ ನೀರು ಸರಾಗವಾಗಿ ಕೆರೆ ತಲುಪಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅವರು ಸಭೆಯಲ್ಲಿ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಿಂಚಣಿ ಹಣ ಸಾಲಕ್ಕೆ ಜಮೆ ಮಾಡುವುದು ನಿಲ್ಲಿಸಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು, ಕೂಲಿ-ಕಾರ್ಮಿಕರಿಗೆ ಪಾವತಿಸಬೇಕಾದ ನರೇಗಾ ಹಣ, ಪಿಂಚಣಿ ಹಣವನ್ನು ರೈತರ ಸಾಲಕ್ಕೆ ಜಮೆ ಮಾಡಲಾಗುತ್ತಿದೆ. ಈ ಹಣವನ್ನು ರೈತರ ಸಾಲ ಚುಕ್ತಾಗೆ ಬಳಸಿಕೊಳ್ಳದಿರಲು ಬ್ಯಾಂಕ್‌ಗಳಿಗೆ ಸ್ಪಷ್ಟ ಸೂಚನೆ ನೀಡಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಮುಖ್ಯಮಂತ್ರಿಯವರನ್ನು ಆಗ್ರಹಿಸಿದರು.

ಒಂದು ವೇಳೆ ಬ್ಯಾಂಕ್‌ಗಳು ಒಪ್ಪದಿದ್ದರೆ ಸರ್ಕಾರವೇ ರೈತರ ಸಾಲ ಮನ್ನಾ ಮಾಡಲಿ ಎಂದು ಅವರು ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು. ಕೇಂದ್ರ ಸರ್ಕಾರ ರಾಜ್ಯದ ರೈತರಿಗಾಗಿ ₹3,454 ಕೋಟಿ ಬರಪರಿಹಾರವನ್ನು ಬಿಡುಗಡೆ ಮಾಡಿದೆ. ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಿಲ್ಲ. ಕೇಂದ್ರ ಸರ್ಕಾರ ನೀಡಿದ ಹಣವನ್ನು ಕೂಡಾ ರೈತರಿಗೆ ಸರಿಯಾಗಿ ತಲುಪಿಸಿಲ್ಲ. ಈ ಪರಿಹಾರದ ಹಣವನ್ನು ಹಳೆ ಬಾಕಿಗಳಿಗೆ ಬ್ಯಾಂಕುಗಳು ಜಮೆ ಮಾಡುತ್ತಿದ್ದರೂ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳದೇ ಕೈಕಟ್ಟಿ ಕುಳಿತಿತ್ತು. ಈಗ ಪಿಂಚಣಿ, ನರೇಗಾ ಹಣವೂ ರೈತರ ಕೈಗೆ ಸಿಗುತ್ತಿಲ್ಲ. ಈ ಮೂಲಕ ಅನ್ನದಾತರ ಹೊಟ್ಟೆಗೆ ಹೊಡೆಯುವ ಪಾಪದ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದರು.

'ಪರಿಹಾರದ ಹಣ ಬ್ಯಾಂಕ್ ಪಡೆಯುವಂತಿಲ್ಲ'

ಬೆಂಗಳೂರು: ಬರ ಪರಹಾರದ ಭಾಗ ವಾಗಿ ರೈತರ ಖಾತೆಗಳಿಗೆ ಪಾವತಿಸಿರುವ ನೆರವಿನ ಮೊತ್ತವನ್ನು ಬ್ಯಾಂಕ್‌ಗಳು ಸಾಲದ ಬಾಬ್ತು ಜಮೆ ಮಾಡಿಕೊಳ್ಳುವಂತಿಲ್ಲ ಎಂದು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಶನಿವಾರ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬರ ಪರಿಹಾರದ ಮೊತ್ತವನ್ನು ಸಾಲದ ಬಾಕಿಗೆ ಹೊಂದಾಣಿಕೆ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ರಾಜ್ಯ ಸರ್ಕಾರ ಹಿಂದೆಯೇ ನಿರ್ದೇಶನ ನೀಡಿದೆ. ಯಾವುದಾದರೂ ಬ್ಯಾಂಕ್‌ಗಳು ಆ ರೀತಿಯ ತಪ್ಪು ಮಾಡಿದ್ದರೆ, ಸರಿಪಡಿಸಬೇಕಾಗುತ್ತದೆ' ಎಂದರು. ಸಭೆಯಲ್ಲಿ ಮುಖ್ಯಮಂತ್ರಿಯವರು ಕೂಡ ಈ ವಿಷಯ ಪ್ರಸ್ತಾಪಿಸಿದರು. ರೈತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು ಎಂದು ಹೇಳಿದರು.

ಪ್ರೊ.ಎಲ್‌.ಎಸ್‌. ಶೇಷಗಿರಿ ರಾವ್ ಭಾವಚಿತ್ರಕ್ಕೆ ಎನ್‌.ಎಸ್‌.ಶ್ರೀಧರ ಮೂರ್ತಿ (ಎಡದಿಂದ ಮೂರನೆಯವರು) ಕನ್ನಡ ಸಂಘದ ಕಾರ್ಯದರ್ಶಿ ರುದ್ರೇಶ್ ಅದರಂಗಿ, ಬಿ.ಸಿ. ನಾಗೇಂದ್ರಕುಮಾರ್, ಕನ್ನಡ ಗೆಳೆಯರ ಬಳಗದ ಅಧ್ಯಕ್ಷ ರಾ.ನಂ. ಚಂದ್ರಶೇಖರ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪಿ.ಟಿ. ಶ್ರೀನಿವಾಸ ನಾಯಕ, ಭಾರತಿ ಶೇಷಗಿರಿ ರಾವ್ ಅವರು ಪುಷ್ಪ ನಮನ ಸಲ್ಲಿಸಿದರು.

ಕನ್ಹಯ್ಯಕುಮಾರ್ ಮೇಲೆ ಹಲ್ಲೆ: ಆರೋಪ

ನವದೆಹಲಿ(ಪಿಟಿಐ): ಈಶಾನ್ಯ ದೆಹಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕನ್ಹಯ್ಯ ಕುಮಾರ್ ಮೇಲೆ ಶುಕ್ರವಾರ ಹಲ್ಲೆ ನಡೆಸಿ, ಶಾಯಿ ಎರಚಲಾಗಿದೆ ಎಂದು ಆರೋಪಿಸಲಾಗಿದೆ.

ಉಸ್ಮಾನ್‌ಪುರದಲ್ಲಿರುವ ಆಮ್ ಆದ್ಮಿ ಪಕ್ಷದ ಕಚೇರಿ ಹೊರಗೆ ಈ ಘಟನೆ ನಡೆದಿದೆ. ಪಾಲಿಕೆ ಸದಸ್ಯೆ ಛಾಯಾ ಶರ್ಮಾ ಅವರೊಂದಿಗೆ ಸಭೆ ನಡೆಸಿ, ಕಚೇರಿಯಿಂದ ಹೊರಗೆ ಬಂದ ವೇಳೆ ಕೆಲವರು ಹಲ್ಲೆ ನಡೆಸಿ, ಶಾಯಿ ಎರಚಿದ್ದಾರೆ ಎಂದು ಹೇಳಲಾಗಿದೆ.

ಕನ್ಹಯ್ಯ ಕುಮಾರ್

'ಕೆಲವರು ಸ್ಥಳಕ್ಕೆ ಬಂದು, ಕನ್ಹಯ್ಯ ಕುಮಾರ್ ಅವರಿಗೆ ಹೂ ಮಾಲೆ ಹಾಕಿದರು. ನಂತರ, ಕೆಲವರು ಅವರ ಮೇಲೆ ಶಾಯಿ ಎರಚಿ, ಹಲ್ಲೆ ನಡೆಸಲು ಯತ್ನಿಸಿದರು. ನಾನು ಮಧ್ಯಪ್ರವೇಶಿಸಿ ಹಲ್ಲೆ ತಡೆಯಲು ಯತ್ನಿಸಿದಾಗ ಕಿಡಿಗೇಡಿಗಳು ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದರು' ಎಂದು ಛಾಯಾ ಶರ್ಮಾ ಅವರು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಈ ಘಟನೆ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಕನ್ಹಯ್ಯ ಕುಮಾರ್, 'ಕ್ಷೇತ್ರದಲ್ಲಿ ನನ್ನ ಪ್ರತಿಸ್ಪರ್ಧಿಯಾಗಿರುವ ಬಿಜೆಪಿಯ ಮನೋಜ್ ತಿವಾರಿ ಅವರೇ ಈ ದಾಳಿ ನಡೆಸುವಂತೆ ಕುಮ್ಮಕ್ಕು ನೀಡಿದ್ದಾರೆ' ಎಂದು ತಿಳಿಸಿದ್ದಾರೆ. 'ಈ ರೀತಿಯ ಹಿಂಸಾ ಪ್ರವೃತ್ತಿಗೆ ಮೇ 25ರಂದು ಜನರು ಮತದಾನದ ಮೂಲಕ ಉತ್ತರ ನೀಡುವರು' ಎಂದಿದ್ದಾರೆ.

ಎಂಎಸ್‌ಆರ್‌ಐಟಿಯಲ್ಲಿ ಪ್ರಾಜೆಕ್ಟ್ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ 'ಪ್ರಾಜೆಕ್ಟ್ ಪ್ರದರ್ಶನ –2024'ಕ್ಕೆ ಗುರುವಾರ ಚಾಲನೆ ದೊರೆಯಿತು.

ಸ್ಯಾಮ್ ಸಂಗ್ ಇಂಡಸ್ಟ್ರಿ (ಆರ್ ಆ್ಯಂಡ್ ಡಿ) ವಿಭಾಗದ ಮುಖ್ಯ ನಿರ್ದೇಶಕ ಲೋಕೇಶ್ ಆರ್. ಬೋರೇಗೌಡ ಮತ್ತು ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಡಾ.ಎಂ.ಆರ್. ಸೀತಾರಾಂ ಪ್ರದರ್ಶನ ಉದ್ಘಾಟಿಸಿದರು.

ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು. ಒಟ್ಟು 1400 ಪ್ರಾಜೆಕ್ಟ್ ಗಳು ಬಂದಿದ್ದು, ಈ ಪೈಕಿ 13 ಎಂಜಿನಿಯರಿಂಗ್ ವಿಭಾಗದಿಂದ 387 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. ಲೋಕೇಶ್ ಆರ್.ಬೋರೇಗೌಡ ಮಾತನಾಡಿ, 'ವಿದ್ಯಾರ್ಥಿಗಳಿಗೆ ತಮ್ಮ ಪರಿಕಲ್ಪನೆಗಳ ಆವಿಷ್ಕಾರ ಗಳನ್ನು ಪ್ರದರ್ಶಿಸಲು 'ಪ್ರಾಜೆಕ್ಟ್ ಪ್ರದರ್ಶನ' ಉತ್ತಮ ವೇದಿಕೆ ಒದಗಿಸಿದೆ' ಎಂದು ಹೇಳಿದರು. ಡಾ.ಎಂ.ಆರ್. ಸೀತಾರಾಂ ಮಾತನಾಡಿ, 'ಪ್ರತಿ ವರ್ಷ ಈ ಪ್ರದರ್ಶನ ಆಯೋಜಿಸುತ್ತೇವೆ. ವಿದ್ಯಾರ್ಥಿಗಳು ತಾವು ತಯಾರಿಸಿದ ಪ್ರಾಜೆಕ್ಟ್‌ಗಳನ್ನು ಇಲ್ಲಿ ಪ್ರದರ್ಶಿಸುತ್ತಾರೆ. ಪ್ರದರ್ಶನದಲ್ಲಿ ಒಂದಕ್ಕಿಂತ ಒಂದು ವಿಭಿನ್ನ ಪ್ರಾಜೆಕ್ಟ್‌ಗಳಿವೆ' ಎಂದರು. ಗೋಕುಲ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಂ. ಆರ್.ಜಯರಾಮ್, ಗೋಕುಲ ಶಿಕ್ಷಣ ಸಂಸ್ಥೆ ನಿರ್ದೇಶಕ ಎಂ.ಆರ್. ರಾಮಯ್ಯ, ಕಾರ್ಯದರ್ಶಿ ಬಿ.ಎಸ್. ರಾಮಪ್ರಸಾದ್, ಪ್ರಾಚಾರ್ಯ ಎನ್.ವಿ.ಆರ್. ನಾಯ್ಡು ಇದ್ದರು.

ಎಂಎಸ್‌ಆರ್‌ಐಟಿಯಲ್ಲಿ ಗುರುವಾರ ನಡೆದ 'ಪ್ರಾಜೆಕ್ಟ್ ಪ್ರದರ್ಶನ 2024'ರಲ್ಲಿ ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಡಾ. ಎಂ.ಆರ್. ಸೀತಾರಾಂ ಪ್ರದರ್ಶನದಲ್ಲಿಟ್ಟಿದ್ದ ಪ್ರಾಜೆಕ್ಟ್ ಕುರಿತು ವಿದ್ಯಾರ್ಥಿನಿಯೊಬ್ಬರಿಂದ ಮಾಹಿತಿ ಪಡೆದರು.

ನ್ಯಾ. ಬೋಪಣ್ಣಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅವರು ಶುಕ್ರವಾರ ವೃತ್ತಿ ಜೀವನಕ್ಕೆ ವಿದಾಯ ಹೇಳಿದರು. ಅವರು ಮೇ 19ರಂದು ಅಧಿಕೃತವಾಗಿ ನಿವೃತ್ತರಾಗಲಿದ್ದಾರೆ.

ಶುಕ್ರವಾರ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಯಾರನ್ನೂ ದ್ವೇಷ ಮಾಡದಂತಹ ಹೃದಯವಂತಿಕೆ ಬೆಳೆಸಿಕೊಳ್ಳಬೇಕು. ಎಂದೂ ಮಾಸದ ಮುಗುಳ್ನಗೆ ಹಾಗೂ ಯಾರಿಗೂ ನೋವನ್ನುಂಟು ಮಾಡದ ನಡೆ ನಿಮ್ಮದಾಗಿರಬೇಕು' ಎಂದು ವಕೀಲರಿಗೆ ಹೇಳಿದರು.

'ಎಲ್‌ಎಲ್‌ಬಿ ಅಧ್ಯಯನ ಮಾಡುವಾಗ ವಕೀಲಿ ವೃತ್ತಿ ಕೈಗೊಳ್ಳುವೆ ಅಂದುಕೊಂಡಿರಲಿಲ್ಲ. ವಕೀಲಿಕೆ ಆರಂಭಿಸಿದ ನಂತರ, ನ್ಯಾಯಾಧೀಶನಾಗಿ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಊಹಿಸದ ನಾನು ಸಣ್ಣ ನ್ಯಾಯಾಲಯದಿಂದ ಆರಂಭಿಸಿ,ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೇರಿದೆ' ಎಂದು ಮೆಲುಕು ಹಾಕಿದರು.

ನ್ಯಾಯಮೂರ್ತಿ ಎ.ಎಸ್‌.ಬೋಪಣ್ಣ

ಕೊಡಗಿನವರಾದ ನ್ಯಾಯಮೂರ್ತಿ ಬೋಪಣ್ಣ, 1984ರ ನವೆಂಬರ್ 21ರಂದು ಅಡ್ವೊಕೇಟ್ ಆಗಿ ವೃತ್ತಿ ಜೀವನ ಆರಂಭಿಸಿದರು. ಸಿವಿಲ್, ಸಾಂವಿಧಾನಿಕ, ಕಂಪನಿ ಹಾಗೂ ಸೇವಾ ವಿಷಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ವಕಾಲತ್ತು ನಿರ್ವಹಿಸಿದ ಅವರಿಗೆ 2006ರಲ್ಲಿ ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಯಾಗಿ ಬಡ್ತಿ ನೀಡಲಾಯಿತು. 2007ರ ಮಾರ್ಚ್ 1ರಂದು ಅವರು ಹೈಕೋರ್ಟ್ ಕಾಯಂ ನ್ಯಾಯಮೂರ್ತಿ ಆಗಿ ನೇಮಕಗೊಂಡರು. 2018ರ ಅಕ್ಟೋಬರ್ 29ರಂದು ಗುವಾಹಟಿ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿ, ಅದೇ ವರ್ಷ ಮೇ 24ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದರು.

ದೆಹಲಿಯಲ್ಲಿ ವಿಮಾನ ತುರ್ತು ಭೂಸ್ಪರ್ಶ

ನವದೆಹಲಿ (ಪಿಟಿಐ): ಬೆಂಗಳೂರಿನತ್ತ ಹೊರಟಿದ್ದ ಏರ್ ಇಂಡಿಯಾ ವಿಮಾನದ ಹವಾನಿಯಂತ್ರಣ ಘಟಕದಲ್ಲಿ (ಎ.ಸಿ) ಬೆಂಕಿ ಕಾಣಿಸಿಕೊಂಡ ಕಾರಣ ವಿಮಾನವು ಶುಕ್ರವಾರ ಸಂಜೆ ದೆಹಲಿಯ ವಿಮಾನ ನಿಲ್ದಾಣಕ್ಕೆ ಮರಳಿ ತುರ್ತು ಭೂಸ್ಪರ್ಶ ಮಾಡಿತು ಎಂದು ಮೂಲಗಳು ತಿಳಿಸಿವೆ.

ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮರಳಿ ಭೂಸ್ಪರ್ಶ ಮಾಡಿತು. ಈ ವೇಳೆ 175 ಮಂದಿ ಪ್ರಯಾಣಿಕರಿದ್ದರು. ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ವಿಮಾನಯಾನ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ.

ಉದಕಮಂಡಲ ರೇಸ್

ಡೈಮಂಡ್ ಅಂಡ್ ಪರ್ಲ್ಸ್ ಗೆಲ್ಲುವ ನಿರೀಕ್ಷೆ

ಗ್ರೇ ಗ್ಯಾಸ್ಟನ್ ಹ್ಯಾಂಡಿಕ್ಯಾಪ್ ರೇಸ್ ಮೊದಲನೇ ಡಿವಿಷನ್ ನಲ್ಲಿ ಡೈಮಂಡ್ ಅಂಡ್ ಪರ್ಲ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00 ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿಡ್‌ನೈಟ್ ಸ್ಪಾರ್ಕ್ಲ್ 2, ಅರೋರ ಬೊರಿಯಾಲಿಸ್ 3, ಆಟ್ರಿಡೆಸ್ 1
2ನೇ ರೇಸ್: ಅಕಂಥ 1, ವಿಸಾಕ 2, ಅಕ್ವಿಲಾ 7
3ನೇ ರೇಸ್: ಡೈಮಂಡ್ ಅಂಡ್ ಪರ್ಲ್ಸ್ 1, ವಿಂಡ್ಸರ್ ವಾಕ್ 5, ಚಾಯ್ಸ್ 8
4ನೇ ರೇಸ್: ಪ್ರಿನಸ್ ಪರ್ಪ್ಲ್ 3, ಆಫ್ ಶೋರ್ ಬ್ರೀಝ್ 2, ಪ್ರೈಸ್‌ಲೆಸ್ ಬ್ಯೂಟಿ 9
5ನೇ ರೇಸ್: ಜೂಲಿಯೆಟ್ ರೋಸ್ 5, ರಾಯಲ್ ಚಿವಾಲ್ರಿ 2, ಸೀಕೊ ಕಾಟ್ಸ್ 6
6ನೇ ರೇಸ್: ಸೇಫ್ಟಿ 6, ಸಂತಮರಿನಾ ಸ್ಟಾರ್ 9. ವೈಲ್ಡ್ ಫ್ರಾಂಕ್ 8

ಉತ್ತಮ ಬೆಟ್: ಸೇಫ್ಟಿ

ಜಾಕ್‌ಪಾಟ್	ಟ್ರಿಬಲ್
2, 3, 4, 5, 6	4, 5, 6

11 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳ ಚುನಾವಣೆಯಲ್ಲಿ ಐದು ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಶುಕ್ರವಾರ ಪೂರ್ಣಗೊಂಡಿದ್ದು, 12 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತಗೊಂಡಿವೆ. ಈ ಐದು ಕ್ಷೇತ್ರಗಳಲ್ಲಿ ಒಟ್ಟು 76 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಪರಿಷತ್ ಚುನಾವಣೆ

ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಅವರ ನಾಮಪತ್ರವನ್ನು ತಿರಸ್ಕರಿಸುವಂತೆ ಕೋರಿ ವಕೀಲರೊಬ್ಬರು ತಕರಾರು ಅರ್ಜಿ ಸಲ್ಲಿಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಶ್ರೀನಿವಾಸ್ ಅವರಿಗೆ ನೋಟಿಸ್ ಜಾರಿ ಮಾಡಿರುವ ಚುನಾವಣಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್, ನಾಮಪತ್ರ ಪರಿಶೀಲನೆಯನ್ನು ಶನಿವಾರಕ್ಕೆ ಮುಂದೂಡಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಮೂವರು, ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಎಂಟು ಅಭ್ಯರ್ಥಿಗಳು ಮತ್ತು ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯ ನಾಮಪತ್ರ ತಿರಸ್ಕೃತಗೊಂಡಿವೆ. ನೈರುತ್ಯ ಪದವೀಧರರು ಮತ್ತು ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಎಲ್ಲ ಅಭ್ಯರ್ಥಿಗಳ ನಾಮಪತ್ರಗಳು ಸ್ವೀಕೃತವಾಗಿವೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ 26, ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ 16, ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ 9, ನೈರುತ್ಯ ಪದವೀಧರರ ಕ್ಷೇತ್ರದಲ್ಲಿ 12 ಮತ್ತು ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 13 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈ ಪೈಕಿ ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಮಾತ್ರ ಒಬ್ಬ ಮಹಿಳಾ ಅಭ್ಯರ್ಥಿ ಇದ್ದಾರೆ.

ಈ ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯಲು ಸೋಮವಾರ ದವರೆಗೂ(ಮೇ 20) ಅವಕಾಶವಿದೆ.

'ಸಂಕಷ್ಟಗಳಿಗೆ ಸ್ಪಂದಿಸುವವರ ಆಯ್ಕೆಮಾಡಿ'

ಯಲಹಂಕ: 'ಪದವೀಧರ ಮತದಾರರು ಪದವೀಧರರ ಸಂಕಷ್ಟಗಳನ್ನು ಅರಿತಿರುವ ಹಾಗೂ ಪರಿಹರಿಸಲು ಕಾಳಜಿ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕು' ಎಂದು ಬೆಂಗಳೂರು ಪದವೀಧರರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಆರ್.ಎಸ್.ಉದಯ್ ಸಿಂಗ್ ಮನವಿ ಮಾಡಿದರು.

ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರಿನ ವಿಜಯಜ್ಯೋತಿ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ವಿಧಾನ ಪರಿಷತ್ ಪದವೀಧರರ ಚುನಾವಣೆಯ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇಪ್ಪತ್ತು ವರ್ಷಗಳಿಂದ ನಿರಂತರವಾಗಿ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳೇ ಆಯ್ಕೆಯಾಗುತ್ತಿದ್ದಾರೆ. ಆದರೆ ಇವರಿಂದ ಪದವೀಧರರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಆರು ವರ್ಷಗಳಿಗೊಮ್ಮೆ ಚುನಾವಣೆ ಸಂದರ್ಭದಲ್ಲಿ ಕಾಣಿಸುವ ಈ ಅಭ್ಯರ್ಥಿಗಳು, ಮತ್ತೆ ಜನರ ಕೈಗೆ ಸಿಗುವುದೇ ಇಲ್ಲ' ಎಂದು ಟೀಕಿಸಿದರು.

'ಹಲವು ವರ್ಷಗಳಿಂದ ಪದವೀಧರರ ಸಂಕಷ್ಟಗಳ ಬಗ್ಗೆ ಧ್ವನಿಯೆತ್ತುತ್ತಾ ಬಂದಿದ್ದೇನೆ. ಪದವೀಧರರ ಬದುಕು ಬದಲಿಸಲು ನನ್ನದೇ ಆದ ವಿಭಿನ್ನ ಚಿಂತನೆಗಳನ್ನು ಹೊಂದಿದ್ದು, ಅವುಗಳನ್ನು ಸಾಕಾರಗೊಳಿಸಲು ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ' ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್, ಕರ್ನಾಟಕ ರಾಜ್ಯ ಖಾಸಗಿ ಶಾಲಾ–ಕಾಲೇಜುಗಳ ಆಡಳಿತ ಮಂಡಳಿ ಅಧ್ಯಕ್ಷ ಶ್ರೀರಾಮಚಂದ್ರ, ಪ್ರಧಾನ ಕಾರ್ಯದರ್ಶಿ ವಿ.ಸುರೇಶ್, ಕಾರ್ಯದರ್ಶಿ ಚಿಕ್ಕಹನುಮಂತೇಗೌಡ, ಬಾಗಲೂರು ಗ್ರಾಮಪಂಚಾಯಿತಿ ಸದಸ್ಯರಾದ ಅನಿಲ್ ಕುಮಾರ್, ಪ್ರಭುಸ್ವಾಮಿ, ಚಂದ್ರು, ಬೈರೇಗೌಡ, ವಿಜಯಜ್ಯೋತಿ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಎಸ್.ಮಧುಕುಮಾರ್, ಗೋಪಾಲಪುರದ ಡೈರಿ ಮುನಿರಾಜು ಮತ್ತಿತರರು ಉಪಸ್ಥಿತರಿದ್ದರು.

ಸ್ವಾತಿ ಮಾಲಿವಾಲ್ ವಿರುದ್ಧ ಬಿಭವ್ ಕುಮಾರ್ ದೂರು

ನವದೆಹಲಿ(ಪಿಟಿಐ): 'ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರು ಮೇ 13ರಂದು ಮುಖ್ಯಮಂತ್ರಿಗಳ ನಿವಾಸವನ್ನು ಅಕ್ರಮವಾಗಿ ಪ್ರವೇಶಿಸುವುದಕ್ಕಾಗಿ ಸಿ.ಎಂ ನಿವಾಸಕ್ಕೆ ಒದಗಿಸಿದ್ದ ಭದ್ರತೆಯನ್ನು ಭೇದಿಸಿದ್ದರು' ಎಂದು ಆರೋಪಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರು ಪೊಲೀಸರಿಗೆ ಶುಕ್ರವಾರ ದೂರು ನೀಡಿದ್ದಾರೆ.

'ಮುಖ್ಯಮಂತ್ರಿಗಳ ನಿವಾಸವನ್ನು ಅಕ್ರಮವಾಗಿ ಪ್ರವೇಶಿಸಿದ್ದ ಅವರನ್ನು ತಡೆಯಲು ನಾನು ಯತ್ನಿಸಿದಾಗ, ಸ್ವಾತಿ ಅವರು ಗದ್ದಲ ಮಾಡಿದರಲ್ಲದೇ, ನನ್ನನ್ನು ನಿಂದಿಸಿದರು' ಎಂದೂ ಬಿಭವ್ ಕುಮಾರ್ ದೂರಿನಲ್ಲಿ ಹೇಳಿದ್ದಾರೆ.

ಸ್ವಾತಿ ಮಾಲಿವಾಲ್

ದೆಹಲಿಯ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಗೆ ಅವರು ಇ–ಮೇಲ್ ಮೂಲಕ ದೂರು ಕಳುಹಿಸಿದ್ದಾರೆ.

'ಕೇಜ್ರಿವಾಲ್ ಅವರನ್ನು ಭೇಟಿ ಮಾಡಲು ಮುಖ್ಯಮಂತ್ರಿಗಳ ನಿವಾಸಕ್ಕೆ ತೆರಳಿದ್ದ ಅವರ ಮೇಲೆ ನಾನು ಹಲ್ಲೆ ಮಾಡಿದೆ ಎಂಬುದಾಗಿ ಸುಳ್ಳು ಆರೋಪ ಹೊರಿಸಿ ನನ್ನನ್ನು ಸಿಲುಕಿಸಲು ಸ್ವಾತಿ ಮಾಲಿವಾಲ್ ಯತ್ನಿಸುತ್ತಿದ್ದಾರೆ' ಎಂದೂ ದೂರಿನಲ್ಲಿ ಹೇಳಿದ್ದಾರೆ. ದೂರಿನ ಪ್ರತಿಯನ್ನು ಅವರು ಡಿಸಿಪಿ (ಉತ್ತರ) ಅವರಿಗೂ ಕಳುಹಿಸಿದ್ದಾರೆ.

'ಸರ್ಕಾರಿ ಶಾಲೆ ವಿದ್ಯಾರ್ಥಿಗಳ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಂತ ವೈಜ್ಞಾನಿಕವಾಗಿ ರೂಪುಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ತಿಲಾಂಜಲಿ ಕೊಟ್ಟು, ರಾಜ್ಯ ಶಿಕ್ಷಣ ನೀತಿ ಜಾರಿ ಮಾಡುವುದಾಗಿ ಹೇಳಿ ವಿದ್ಯಾರ್ಥಿಗಳನ್ನು ಗೊಂದಲಕ್ಕೆ ತಳ್ಳಿರುವುದು ಮತ್ತು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳನ್ನು ನಿರ್ಲಕ್ಷಿಸಿರುವುದೇ ಸಿದ್ದರಾಮಯ್ಯ ಸರ್ಕಾರದ ಸಾಧನೆ ಎಂದು ಬಿಜೆಪಿ ಶಾಸಕ ಎಸ್. ಸುರೇಶ್‌ಕುಮಾರ್ ಹೇಳಿದರು.

ರಾಜ್ಯ ಶಿಕ್ಷಣ ನೀತಿ ಜಾರಿ ಮಾಡುವುದಾಗಿ ತಿಳಿಸಿದ ಸರ್ಕಾರ ಇವತ್ತಿನವರೆಗೂ ಯಾವುದೇ ಪ್ರಗತಿ ಮಾಡದೇ ಇರುವುದೇ ಒಂದು ದೊಡ್ಡ ಸಾಧನೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಈ ಸರ್ಕಾರ ವಿದ್ಯಾರ್ಥಿಗಳ ಜತೆ ಚೆಲ್ಲಾಟವಾಡುತ್ತಿದೆ. ಪ್ರಾಥಮಿಕ, ಪ್ರೌಢ ಶಾಲಾ ವಿದ್ಯಾರ್ಥಿಗಳ ಭವಿಷ್ಯವನ್ನೇ ಮಸುಕು ಮಾಡುತ್ತಿದೆ. ನಮ್ಮಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮದ ಶಾಲೆಗಳು, ಜೊತೆಗೆ ಸ್ವಾಯತ್ತ ವಿಶ್ವವಿದ್ಯಾಲಯಗಳು ಇವೆ. ಆ ವಿದ್ಯಾರ್ಥಿಗಳಿಗೆ ಒಂದು ನೀತಿ, ಸರ್ಕಾರಿ ಶಾಲೆಗೆ ಇನ್ನೊಂದು ನೀತಿ ಅನುಸರಿಸುತ್ತಿದೆ' ಎಂದು ಟೀಕಿಸಿದರು.

'ರಾಜ್ಯ ಸರ್ಕಾರದಲ್ಲಿ ಪೂರ್ಣಾವಧಿ ಶಿಕ್ಷಣ ಸಚಿವರು ಇಲ್ಲದಿರುವುದೇ ಎಲ್ಲ ಸಮಸ್ಯೆಗೂ ಕಾರಣ. ಶಿಕ್ಷಣ ಸಚಿವರು ತಮ್ಮ ಕುಟುಂಬದ ಸದಸ್ಯರನ್ನು ರಾಜಕಾರಣಕ್ಕೆ ತರಲು ತಮ್ಮ ಪೂರ್ತಿ ಸಮಯ ಮೀಸಲಿಟ್ಟಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನ ಹಾಳಾಗಿದೆ. ಹೀಗಾಗಿ ಪೂರ್ಣ ಪ್ರಮಾಣದ ಸಚಿವರನ್ನು ನೇಮಿಸಬೇಕು' ಎಂದು ಆಗ್ರಹಿಸಿದರು.

'ರಾಜ್ಯದ ಸಿಇಟಿ ಚೆನ್ನಾಗಿದೆ ಎಂದು ಹಿಂದೆ ಹೆಸರು ಪಡೆದಿತ್ತು. ಸಿಇಟಿಯನ್ನು ಹಾಳುಗೆಡವಿದ ಕೀರ್ತಿ ಈ ಸರ್ಕಾರಕ್ಕೆ ಸಲ್ಲುತ್ತದೆ. ಸರ್ವರ್ ಡೌನ್ ಕಾರಣಕ್ಕೆ ಪ್ರವೇಶ ಪತ್ರ ಪಡೆಯಲು ವಿದ್ಯಾರ್ಥಿಗಳಿಗೆ ಆಗಲಿಲ್ಲ. ಅದೆಷ್ಟೋ ವಿದ್ಯಾರ್ಥಿಗಳು ನನಗೂ ಫೋನ್ ಮಾಡಿದ್ದು, ನಾನು ಸಚಿವರ ಗಮನಕ್ಕೆ ತಂದಿದ್ದೆ. ಏನೂ ಪ್ರಯೋಜನ ಆಗಲಿಲ್ಲ. ಪರೀಕ್ಷಾ ಅಕ್ರಮ ತಡೆಯುವ ನೆಪವೊಡ್ಡಿ, ಒಂದು ಜಿಲ್ಲೆಯ ಹುಡುಗ ಇನ್ನೊಂದು ಜಿಲ್ಲೆಯಲ್ಲಿ ಪರೀಕ್ಷೆ ಬರೆಯುವಂತೆ ಮಾಡಿದರು. ಮಕ್ಕಳ ಕನಸುಗಳಿಗೆ ಕಲ್ಲು ಹಾಕುವ ಕೆಲಸ ಮಾಡಿದ್ದಾರೆ' ಎಂದು ಸುರೇಶ್ ಕುಮಾರ್ ದೂರಿದರು.

ನಗರದಲ್ಲಿ ಇಂದು

ಸುರೇಶ್ ಹೆಬ್ಳೀಕರ್

'ಬೆಂಗಳೂರಿಗೆ ನೀರಿನ ಭದ್ರತೆ: ಸಮಸ್ಯೆಗಳು ಮತ್ತು ಕಾಳಜಿಗಳು' ರಾಷ್ಟ್ರೀಯ ವಿಚಾರಸಂಕಿರಣ: ಅತಿಥಿಗಳು: ತುಷಾರ್ ಗಿರಿನಾಥ್, ಸುರೇಶ್ ಹೆಬ್ಳೀಕರ್, ಅಧ್ಯಕ್ಷತೆ: ಎಂ.ಆರ್. ಜಯರಾಂ, ಪಿ.ಎಂ. ಕುಲಕರ್ಣಿ, ಆಯೋಜನೆ: ಸ್ಕೂಲ್ ಆಫ್ ಲಾ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಸ್ಥಳ: ಕೌನ್ಸಿಲ್ ಹಾಲ್, ರಾಮಯ್ಯ ಮೆಡಿಕಲ್ ಕಾಲೇಜು, ಬೆಳಿಗ್ಗೆ 9ರಿಂದ

'ದಶಕೋಟಿ ಧನ್ವಂತರಿ ಲೇಖನಜಪ ಮಹಾಯಜ್ಞ'ದ ಪುಸ್ತಕ ಅನಾವರಣ ಸಮಾರಂಭ: ಗಣಪತಿ ಪೂಜೆ, ಸಹಸ್ರ ಮೋದಕ ಗಣಪತಿ ಹೋಮ ಬೆಳಿಗ್ಗೆ 7ಕ್ಕೆ, ಪುಸ್ತಕ ಅನಾವರಣ 8ಕ್ಕೆ, ಲಕ್ಷ್ಮೀನಾರಾಯಣ ಹೃದಯಹೋಮ, ಸಾಮೂಹಿಕ ಲಲಿತಾಸಹಸ್ರನಾಮ 8.30ಕ್ಕೆ, ಮಹಾಮೃತ್ಯುಂಜಯ ಹೋಮ 10.15ಕ್ಕೆ, ಪವಮಾನ ಹೋಮ 10.45ಕ್ಕೆ, ಧನ್ವಂತರಿ ಮಹಾಯಾಗ 11.15ಕ್ಕೆ, ಪೂರ್ಣಾಹುತಿ ಮಧ್ಯಾಹ್ನ 12ಕ್ಕೆ, ಆಯೋಜನೆ: ಧನ್ವಂತರಿ ಸೇವಾ ಪ್ರತಿಷ್ಠಾನ, ಸ್ಥಳ: ಶೃಂಗೇರಿ ಶಂಕರ ಮಠದ ಆವರಣ, ಶೃಂಗೇರಿ ಶಂಕರ ಮಠ, ಶಂಕರಪುರ

ಅಣ್ಣಮ್ಮ ದೇವಿಯ ವಾರ್ಷಿಕೋತ್ಸವ: ದುರ್ಗಾ ಹೋಮ ಬೆಳಿಗ್ಗೆ 9ಕ್ಕೆ, ಪೂರ್ಣಾಹುತಿ ಮಧ್ಯಾಹ್ನ 12.30ಕ್ಕೆ, ಮಹಾಮಂಗಳಾರತಿ ಅನ್ನಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ನವಭಾರತ ಯುವಕರ ಸಂಘ, ನಂ. 487, 8ನೇ ಮುಖ್ಯರಸ್ತೆ, ಕುಮಾರಸ್ವಾಮಿ ದೇವಸ್ಥಾನ ರಸ್ತೆ, ಹನುಮಂತನಗರ

ನಿಮಿಷಾಂಬಾದೇವಿ ಜಯಂತ್ಯುತ್ಸವ: ನಿಮಿಷಾಂಬಾದೇವಿಯ ಉತ್ಸವ ಮೂರ್ತಿ ಆಗಮನ, ಕುಂಕುಮಾರ್ಚನೆ, ಮಹಾಮಂಗಳಾರತಿ, ಅನ್ನಸಂತರ್ಪಣೆ ಮಧ್ಯಾಹ್ನ 2, ಲಲಿತಾ ಸಹಸ್ರನಾಮ ಪಾರಾಯಣ: ಸೋಮವಂಶ ಆರ್ಯಕ್ಷತ್ರಿಯ ಸಂಘ, ಆಯೋಜನೆ: ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ, ಸ್ಥಳ: ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿಗುಡಿ ರಸ್ತೆ, ಸಂಜೆ 7

'ವಿದ್ಯಾರ್ಥಿ ಹೋರಾಟದ ಐತಿಹಾಸಿಕ ವಿಜಯ' ವಿದ್ಯಾರ್ಥಿಗಳ ಸಮಾವೇಶ: ಅತಿಥಿಗಳು: ಎ. ಮುರಿಗೆಪ್ಪ, ವಿ.ಎನ್. ರಾಜಶೇಖರ್, ಆಯೋಜನೆ: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಪಿ. ಶ್ರೀಹರಿ ಶಾಸ್ತ್ರಿ, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಉಪಸ್ಥಿತಿ: ಎನ್.ವಿ.ಆರ್. ನಾಯ್ಡು, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11

ಅಭಿನಂದನಾ ಸಮಾರಂಭ, 'ರಾಜಪಥ' ಗೌರವ ಗ್ರಂಥ ಬಿಡುಗಡೆ: ಅತಿಥಿಗಳು: ವೀರೇಶಾನಂದ ಸರಸ್ವತೀ ಸ್ವಾಮೀಜಿ, ವೂಡೇ ಪಿ. ಕೃಷ್ಣ, ಎನ್. ತಿಪ್ಪೇಸ್ವಾಮಿ, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಡಾ.ಟಿ.ವಿ. ರಾಜು ಅಭಿನಂದನಾ ಸಮಿತಿ, ಸ್ಥಳ: ಮಂಗಳ ಮಂಟಪ, ಎನ್.ಎಮ್.ಕೆ.ಆರ್. ವಿ ಕಾಲೇಜು ಆವರಣ, 3ನೇ ಬ್ಲಾಕ್, ಜಯನಗರ, ಸಂಜೆ 4.30

ಡಾ. ಶರಣ ಶ್ರೀನಿವಾಸನ್, ಡಾ. ಪ್ರತಿಭಾ ಶರಣ್ ಅವರ 'ರಿಬೋಟಿಂಗ್ ದಿ ಬ್ರೇನ್' ಪುಸ್ತಕ ಬಿಡುಗಡೆ: ಆಯೋಜನೆ: ಪಿಆರ್‌ಎಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಸಂಜೆ 5

'ರೋಟರಿ ಕಲಾ ಹಬ್ಬ' ಗ್ರ್ಯಾಂಡ್ ಫೈನಲ್: ಅತಿಥಿ: ಮಯೂರಿ ಉಪಾಧ್ಯಾಯ, ಸಂಗೀತ ಕಛೇರಿ: ಪ್ರವೀಣ್ ಡಿ. ರಾವ್, ಗಿಟಾರ್: ಶ್ರೀನಿವಾಸ್ ಆಚಾರ್, ನೃತ್ಯ ಪ್ರದರ್ಶನ: ಪ್ರಭಾತ ಟೆಂಪಲ್ ಆಫ್ ಆರ್ಟ್ಸ್, ಬೊಂಬೆಯಾಟ: ಗುಂಡುರಾಜ್, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3192, ಕ್ರಿಯೇಟ್ ಹೋಪ್ ಇನ್ ದಿ ವರ್ಲ್ಡ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ತುಷಾರಾ ಕೆ.ಎ., ಆಯೋಜನೆ: ಚಿಗುರು ನೃತ್ಯಾಲಯ, ಸ್ಥಳ: ಜೆಎಸ್‌ಎಸ್ ಸಭಾಂಗಣ, 8ನೇ ಬ್ಲಾಕ್, ಜಯನಗರ, ಸಂಜೆ 5

ವಾದ್ಯವೈಭವ– 2024: ಸಂಗೀತ ಕಛೇರಿ: ಜಲತರಂಗ: ಶಶಿಕಲಾ ದಾನಿ, ತಬಲಾ: ಗುರುಮೂರ್ತಿ ವೈದ್ಯ, ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಖಂಜಿರ: ಅನಿಲ್ ಪಾರಶಾರ ಎಂ., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 6ರಿಂದ

ಧಾರ್ಮಿಕ ಗೀತೆಗಳ ಗಾಯನ: ವಿದ್ಯಾಭೂಷಣ, ಮೃದಂಗ: ಪಿಟೀಲು: ಕಾರ್ತಿಕೇಯ ಆರ್., ತಬಲಾ: ಜಗದೀಶ ಡಿ. ಕುರ್ತುಕೋಟಿ, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜಿನ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಬೇಸಿಗೆ ಶಿಬಿರದ ಸಮಾರೋಪ: ಅತಿಥಿಗಳು: ಎ.ಆರ್. ಗೋವಿಂದಸ್ವಾಮಿ, ಎಚ್.ಎನ್. ಆರತಿ, 'ಅಭಿರುಚಿ' ನಾಟಕ ಪ್ರದರ್ಶನ: ರಚನೆ: ಮಧುರ ಪ್ರಿಯ, ನಿರ್ದೇಶನ: ಜಯಲಿಗೋರಿ, ಆಯೋಜನೆ: ರಂಗಾಭರಣ ಕಲಾಕೇಂದ್ರ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ರಂಗಾಭರಣ ಕಲಾಕೇಂದ್ರದ ಆವರಣ, ಕೆಇಬಿ ಬಡಾವಣೆ, ಸಂಜಯನಗರ, ಸಂಜೆ 6.30

ಹಾರ್ಮೋನಿಯಂ ವಾದನ: ಸಿ. ರಾಮದಾಸ್, ಪಿಟೀಲು: ಶಂಕರ್ ರಾಜನ್, ಮೃದಂಗ: ಕೆ.ವಿ. ರವಿಶಂಕರ್ ಶರ್ಮಾ, ಖಂಜಿರ: ಆರ್. ಕಾರ್ತಿಕ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಅಶ್ವವಾಹನೋತ್ಸವ ನಿವೇದನ ಕೈಂಕರ್ಯ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

'ಬಾಯ್ ತುಂಬ ನಕ್ಕಿಡಿ' ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ವನಿತಾ ರಂಗಾಯಣ, ತಂಡ: ಅಂತರಂಗ ಬಹಿರಂಗ ಸಂಜೆ 4.30ಕ್ಕೆ, 'ಅನುಮಾನದ ಅವಾಂತರ' ನಾಟಕ ಪ್ರದರ್ಶನ: ಮೂಲ: ಮೋಲಿಯರ್, ಅನುವಾದ: ಎಂ. ರಾಮರಾವ್, ನಿರ್ದೇಶನ: ವಿಕಾಸ್ ಎಸ್., ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 7.30

'ಇಂದ್ರಪ್ರಸ್ಥ' ಯಕ್ಷಗಾನ ಪ್ರದರ್ಶನ: ಆಯೋಜನೆ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ಕ್ಷೇತ್ರ ಹನುಮಗಿರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10.30

ಸಾರಿಕ ಶೋಭ ವಿನಾಯಕ ಅವರ ಪುಸ್ತಕಗಳ ಬಿಡುಗಡೆ, 'ಸವಿನಾಡು ಫೌಂಡೇಷನ್ ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಸುಕನ್ಯಾ ಮಾರುತಿ, ಪುಸ್ತಕಗಳ ಕುರಿತು: ಎಚ್. ಆರ್. ಸುಜಾತ, ಎಸ್.ಎನ್. ಮಂಜುನಾಥ, ಮಾಸ್ತಿ, ಪ್ರಶಸ್ತಿ ಪುರಸ್ಕೃತರು: ಕೆ.ಎಸ್. ಮೋಹನ್ ಕುಮಾರ್, ವಿಶ್ವೇಶ್ ಭಟ್, ಮಂಜುಳಾ ಹುಲಿಕುಂಟೆ, ಭರತ ಡಿಂಗ್ರಿ, ದೀಪಿಕ ಟಿ., ಎನ್.ಎಸ್. ಆದರ್ಶ್, ಅಯೋಜನೆ: ಸವಿನಾಡು ಫೌಂಡೇಷನ್, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

ಬರಗೂರು ರಾಮಚಂದ್ರಪ್ಪ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

'ತಲ್ಲಣಗೊಳಿಸುತ್ತಿದೆ ಯುವತಿಯರ ಹತ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದುಕು ಅರಳಬೇಕಾದ ಸಂದರ್ಭದಲ್ಲಿ ಪ್ರೀತಿಗಾಗಿ ನಡೆಯುತ್ತಿರುವ ದಾರುಣ ಹತ್ಯೆಗಳು ಸಮಾಜವನ್ನು ತಲ್ಲಣಗೊಳಿಸುತ್ತಿವೆ. ಹೆಣ್ಣು ಮಕ್ಕಳ ರಕ್ಷಣೆ ಪ್ರಶ್ನೆಯಾಗಿದೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಕಳವಳ ವ್ಯಕ್ತಪಡಿಸಿದರು.

ಅನುಪಮಾ ನಿರಂಜನ ಅವರ ಜನ್ಮದಿನದ ಪ್ರಯುಕ್ತ ಕನ್ನಡ ಸಂಘರ್ಷ ಸಮಿತಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಮಾರಂಭದಲ್ಲಿ ಲೇಖಕಿ ಬಾ.ಹ. ರಮಾಕುಮಾರಿ ಅವರಿಗೆ 'ಡಾ. ಅನುಪಮಾ ನಿರಂಜನ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು. ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ.

'ಎಲ್ಲರ ಮನೆಯಲ್ಲಿ ಹೆಣ್ಣು ಮಕ್ಕಳಿದ್ದಾರೆ. ಬದಲಾದ ಕಾಲಘಟ್ಟದಲ್ಲಿ ಅವರಿಗೆ ಪ್ರೀತಿಸಬೇಕೆಂದು ಒತ್ತಡ ಹೇರಿ, ಪ್ರೀತಿಸಿಲ್ಲ ಎಂದರೆ ಕೊಲ್ಲಲಾಗುತ್ತಿದೆ. ಓದಿದ, ಬದುಕನ್ನು ರೂಪಿಸಿಕೊಳ್ಳಬೇಕಾದ ಹುಡುಗಿಯರು ಪ್ರೀತಿಯ ಕಾರಣ ಹತ್ಯೆಗೆ ಒಳಗಾಗುತ್ತಿದ್ದಾರೆ. ಇಲ್ಲಿ ತಪ್ಪು ಯಾರದ್ದು ಎಂಬ ಪ್ರಶ್ನೆ ಕಾಡುತ್ತದೆ. ಹೆಣ್ಣು ಮಕ್ಕಳು ಹೊರಗಡೆ ಹೋಗದಂತೆ ಮನೆಯಲ್ಲಿಯೇ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಹತಾಶೆ, ನಿರಾಶೆಯ ಈ ಸಂದರ್ಭದಲ್ಲಿ ಅನುಪಮಾ ನಿರಂಜನ ಅವರ ಸಾಹಿತ್ಯದ ಓದು ಅಗತ್ಯ' ಎಂದು ಹೇಳಿದರು.

'ಅನುಪಮಾ ನಿರಂಜನ ಅವರು ತಮ್ಮ ಬದುಕಿನ ಎರಡನೇ ಕಾಲಘಟ್ಟದಲ್ಲಿ ಗಂಭೀರ ಕಾದಂಬರಿಗಳನ್ನು ರಚಿಸಿದರು. ಅವರ ಬದುಕು ಹೋರಾಟದಿಂದ ಕೂಡಿರುವುದೇ ಇದಕ್ಕೆ ಕಾರಣ. ಅವರು ವೈದ್ಯಕೀಯಕ್ಕೆ ಸಂಬಂಧಿಸಿದ ಸಾಹಿತ್ಯವನ್ನೂ ಸೃಷ್ಟಿಸಿ, ಕನ್ನಡದಲ್ಲಿನ ವೈದ್ಯಕೀಯ ವಿಜ್ಞಾನದ ಮಾಹಿತಿ ಕೊರತೆ ನೀಗಿಸಿದರು. ತಾಯಿ–ಮಗುವಿನ ಸ್ವಾಸ್ಥ್ಯ, ಯುವತಿಯರ ಆರೋಗ್ಯ ಸೇರಿ ವಿವಿಧ ವಿಷಯಗಳ ಬಗ್ಗೆ ತಿಳಿಸಿಕೊಟ್ಟರು' ಎಂದು ಸ್ಮರಿಸಿಕೊಂಡರು.

ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ, 'ಅನುಪಮಾ ಅವರು ಕಾದಂಬರಿ, ಕಥಾಸಂಕಲನ, ಶಿಶುಸಾಹಿತ್ಯ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿ, ಜನಪ್ರಿಯರಾಗಿದ್ದಾರೆ. ಅವರ ಸಾಹಿತ್ಯದಿಂದ ಪ್ರಭಾವಿತನಾಗಿದ್ದು, ಪ್ರತಿ ವರ್ಷ ಅವರ ಜನ್ಮದಿನದಂದೇ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುತ್ತಿದೆ' ಎಂದರು.

ಇದೇ ವೇಳೆ ಅನುಪಮಾ ನಿರಂಜನ ಜನ್ಮ ದಿನದ ಅಂಗವಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆಯ ವಿಜೇತರಾದ ಮಂಗಳೂರಿನ ಕೊಳಚಪ್ಪುವಿನ ಬಿ.ಸತ್ಯವತಿ ಭಟ್, ಹೊಸಕೋಟೆಯ ಗಾಯತ್ರಿ ಕುಲಕರ್ಣಿ ಹಾಗೂ ಮಡಿಕೇರಿಯ ರಾಧಿಕಾ ವಿಶ್ವನಾಥ್ ಅವರಿಗೆ ಬಹುಮಾನ ವಿತರಿಸಲಾಯಿತು.

ಸಮಾರಂಭದಲ್ಲಿ ಬಾ.ಹ.ರಮಾಕುಮಾರಿ ಅವರಿಗೆ 'ಡಾ. ಅನುಪಮಾ ನಿರಂಜನ ಪ್ರಶಸ್ತಿ'ಯನ್ನು ಎಚ್‌ಎಲ್‌ಪುಷ್ಪ ಪ್ರದಾನ ಮಾಡಿದರು. (ಎಡದಿಂದ) ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್‌. ನಾಗರಾಜಸ್ವಾಮಿ, ಲೇಖಕಿ ವರದಾ ಶ್ರೀನಿವಾಸ, ಸಮಿತಿಯ ಉಪಾಧ್ಯಕ್ಷ ಬಿ.ಸಿ. ರಾಜಕುಮಾರ್, ರಾಮಣ್ಣ ಎಚ್‌. ಕೋಡಿಹೊಸಹಳ್ಳಿ, ಸಮಿತಿಯ ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ ಹಾಗೂ ಸಮಿತಿಯ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮನೆಗೆಲಸದ ಮಹಿಳೆ ಮೇಲಿನ ಅತ್ಯಾಚಾರ ಆರೋಪ • ವಿಶೇಷ ನ್ಯಾಯಾಲಯದಲ್ಲಿ ತುರುಸಿನ ವಾದ – ಪ್ರತಿವಾದ

ಶಾಸಕ ರೇವಣ್ಣ ಜಾಮೀನು ಆದೇಶ 20ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮನೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಮಧ್ಯ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಪ್ರಕರಣದಲ್ಲಿ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ನೀಡಲಾಗಿರುವ ಮಧ್ಯಂತರ ಜಾಮೀನು ಅರ್ಜಿಯ, 'ಪರಿಶೀಲನೆಗೆ ಅರ್ಹವಾದ ಅಲ್ಲ' (ಮೆಂಟೇನೆಬಲಿಟಿ) ಎಂಬ ಆಕ್ಷೇಪದ ಮೇಲಿನ ಆದೇಶವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 20ಕ್ಕೆ ಪ್ರಕಟಿಸಲಿದೆ. ಅಲ್ಲಿಯವರೆಗೂ ರೇವಣ್ಣ ಅವರಿಗೆ ನೀಡಲಾಗಿರುವ ಮಧ್ಯಂತರ ಜಾಮೀನು ಮುಂದುವರಿಯಲಿದೆ.

ರೇವಣ್ಣ ವಿರುದ್ಧ ದಾಖಲಾಗಿರುವ ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪದ ಪ್ರಕರಣ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ (42ನೇ ಎಸಿಎಂಎಂ ಕೋರ್ಟ್) ವಿಶೇಷ ನ್ಯಾಯಾಲಯದಲ್ಲಿ ಶುಕ್ರವಾರಕ್ಕೆ (ಮೇ 17) ವಿಚಾರಣೆಗೆ ನಿಗದಿಯಾಗಿತ್ತು. ಈ ಹಿನ್ನೆಲೆಯಲ್ಲಿ ರೇವಣ್ಣ ಗುರುವಾರವೇ (ಮೇ 16) ನ್ಯಾಯಾಲಯಕ್ಕೆ ಶರಣಾಗಿ ಅಪರಾಧ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 436 ಅಡಿಯಲ್ಲಿ (ಜಾಮೀನು ಕೊಡಬಹುದಾದ ಅಪರಾಧಗಳಲ್ಲಿ, ಆರೋಪಿಯು ಸಲ್ಲಿಸುವ ಜಾಮೀನು ಅರ್ಜಿ) ಮಧ್ಯಂತರ ಜಾಮೀನು ಕೋರಿದ್ದರು.

ಈ ಅರ್ಜಿ ಸಲ್ಲಿಸಿದ ಕೂಡಲೇ ಪ್ರಾಸಿಕ್ಯೂಷನ್ ತಕರಾರು ತೆಗೆದಿತ್ತು. 'ಈ ಜಾಮೀನು ಅರ್ಜಿಯನ್ನು ಪರಿಶೀಲಿಸಿ ಜಾಮೀನು ಮಂಜೂರು ಮಾಡುವ ಅಧಿಕಾರವನ್ನು ಈ ಕೋರ್ಟ್ ಹೊಂದಿಲ್ಲ. ಇದನ್ನು ಸೆಷನ್ಸ್ ಕೋರ್ಟ್‌ಗೆ (ಸಿಸಿಎಚ್–82) ಕಳುಹಿಸಬೇಕು' ಎಂದು ಪ್ರತಿಪಾದಿಸಿತ್ತು. ಅಂತಿಮವಾಗಿ ನ್ಯಾಯಾಧೀಶೆ ಜೆ.ಪ್ರೀತ್ ಗುರುವಾರ (ಮೇ 16) ಸಂಜೆಯೇ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದರು.

ರೇವಣ್ಣ ಪರ ವಕೀಲರು ಪ್ರಾಸಿಕ್ಯೂಷನ್ ಆಕ್ಷೇಪಣೆಯನ್ನು ಬಲವಾಗಿ ತಳ್ಳಿ ಹಾಕಿದ್ದ ಪರಿಣಾಮ ಜಾಮೀನು ಅರ್ಜಿಯ ಪರಿಶೀಲನಾ ತಕರಾರಿಗೆ ಸಂಬಂಧಿಸಿದಂತೆ ನ್ಯಾಯಾಧೀಶೆ ಜೆ.ಪ್ರೀತ್ ಶುಕ್ರವಾರ ಉಭಯತರ ವಾದ-ಪ್ರತಿವಾದವನ್ನು ಸುದೀರ್ಘವಾಗಿ ಆಲಿಸಿ ಇದೇ 20ಕ್ಕೆ ಆದೇಶ ಕಾಯ್ದಿರಿಸಿದರು.

ತಕರಾರು ಏನು?: ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ 2024ರ ಏಪ್ರಿಲ್ 28ರಂದು ದಾಖಲಾಗಿರುವ ಎಫ್‌ಐಆರ್‌ನಲ್ಲಿ, ಮೊದಲಿಗೆ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 354ಎ (ಲೈಂಗಿಕ ಕಿರುಕುಳ), 354ಡಿ (ಮಹಿಳೆಯನ್ನು ಹಿಂಬಾಲಿಸುವುದು), 506 (ಕ್ರಿಮಿನಲ್ ಬೆದರಿಕೆ) ಮತ್ತು 509ರ (ಮಹಿಳೆಯ ನಮ್ರತೆಯನ್ನು ಅವಮಾನಿಸುವುದು) ಅಡಿಯಲ್ಲಿ ಅಪರಾಧ ಪ್ರಕರಣ ದಾಖಲಿಸಲಾಗಿತ್ತು. ಇದರಲ್ಲಿ ರೇವಣ್ಣ ಮೊದಲ ಆರೋಪಿಯಾಗಿದ್ದರೆ ಸಂಸದ ಪ್ರಜ್ವಲ್ ರೇವಣ್ಣ ಎರಡನೇ ಆರೋಪಿ.

ಈ ಎಫ್‌ಐಆರ್‌ನಲ್ಲಿರುವ ಅಪರಾಧಿಕ ಕಲಂಗಳ ಅನುಸಾರ ಆರೋಪಿ ಜಾಮೀನು ಪಡೆಯಬಹುದಾದ ಗುನ್ಹೆ ಎಂಬ ರೇವಣ್ಣ ಪರ ವಕೀಲರ ವಾದಕ್ಕೆ ಪ್ರಾಸಿಕ್ಯೂಷನ್ ಈ ಮೊದಲು ಸಮ್ಮತಿಸಿತ್ತು. ಆದರೆ, ಸೆಷನ್ಸ್ ನ್ಯಾಯಾಲಯದಲ್ಲಿ ಈ ರೀತಿಯ ಹೇಳಿಕೆ ನೀಡಿದ್ದ ಬೆನ್ನಲ್ಲೇ ಆವತ್ತೇ ರೇವಣ್ಣ ವಿರುದ್ಧ ಐಪಿಸಿ ಕಲಂ 376 ಅನ್ನು ಎಫ್‌ಐಆರ್‌ಗೆ ಸೇರ್ಪಡೆ ಮಾಡಲಾಗಿತ್ತು.

ಇದೇ ವೇಳೆ ಮೂಲ ಪ್ರಕರಣದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ, 'ಸಂತ್ರಸ್ತ ಮಹಿಳೆಯನ್ನು ಅಪಹರಣ ಮಾಡಲಾಗಿದೆ' ಎಂದು ಆರೋಪಿಸಲಾದ ಪ್ರಕರಣದಲ್ಲಿ ರೇವಣ್ಣ ಅವರನ್ನು ವಿಶೇಷ ತನಿಖಾ ತಂಡ ಬಂಧಿಸಿತ್ತು.

'ಆರೋಪಿಯ ವಿರುದ್ಧ ಐಪಿಸಿ ಕಲಂ 376 (ಅತ್ಯಾಚಾರ) ಆರೋಪ ಕೂಡಾ ದಾಖಲಾಗಿದೆ. ಈ ಕಾರಣಕ್ಕಾಗಿ ಈ ಕೋರ್ಟ್ (42ನೇ ಎಸಿಎಂಎಂ) ಜಾಮೀನು ಅರ್ಜಿ ಪರಿಶೀಲನಾ ವ್ಯಾಪ್ತಿಯನ್ನು ಹೊಂದಿಲ್ಲ. ಅತ್ಯಾಚಾರದ ಆರೋಪ ಇರುವ ಕಾರಣ ಸೆಷನ್ಸ್ ಕೋರ್ಟ್‌ನಲ್ಲಿ (ಸಿಸಿಎಚ್ 82ನೇ ಕೋರ್ಟ್) ಇದು ಇತ್ಯರ್ಥವಾಗಬೇಕು. 42ನೇ ಎಸಿಎಂಎಂ ಕೇವಲ 'ಕಮಿಟಲ್ ಕೋರ್ಟ್' (ಪ್ರಕರಣವನ್ನು ವಿಚಾರಣೆಗಾಗಿ ಮೇಲಿನ ಕೋರ್ಟ್‌ಗೆ ಒಪ್ಪಿಸುವ ಕರ್ತವ್ಯ ನಿರ್ವಹಿಸುವ ಮ್ಯಾಜಿಸ್ಟ್ರೇಟ್ ಕೋರ್ಟ್)' ಎಂಬ ವಾದವನ್ನು ಪ್ರಾಸಿಕ್ಯೂಷನ್ ಮಂಡಿಸಿತ್ತು.

ಜಾಮೀನು ನೀಡಿದರೆ ಸಾಕ್ಷ್ಯ ನಾಶ: ಪ್ರಾಸಿಕ್ಯೂಷನ್ ವಾದ

ಎಚ್.ಡಿ.ರೇವಣ್ಣ

'ಎಚ್.ಡಿ.ರೇವಣ್ಣ ಶಾಸಕರು, ಮಂತ್ರಿಯಾಗಿದ್ದವರು. ಮತಗಟ್ಟೆ ವಶಪಡಿಸಿಕೊಂಡ ಹಿನ್ನೆಲೆಯವರು, ದಾದಾಗಿರಿ, ತೋಳ್ಬಲ ಉಪಯೋಗಿಸುವವರು. (ಅಪ್ಪ-ಮಗ; ರೇವಣ್ಣ-ಪ್ರಜ್ವಲ್ ರೇವಣ್ಣ) ಒಂದೇ ಮನೆಯಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ. 'ಇಂತಹವರನ್ನು ಜಾಮೀನಿನ ಮೇಲೆ ಹೊರಗೆ ಬಿಟ್ಟರೆ ಪ್ರಕರಣದ ಸಾಕ್ಷ್ಯ ನಾಶ ಮಾಡಬಹುದು' ಎಂದು ಪ್ರಾಸಿಕ್ಯೂಷನ್ ತೀವ್ರ ಆತಂಕ ವ್ಯಕ್ತಪಡಿಸಿತು.

ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಮೊದಲ ಆರೋಪಿ ಶಾಸಕ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯ ಪರಿಶೀಲನಾ ವಿಚಾರವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ (42ನೇ ಎಸಿಎಂಎಂ) ನ್ಯಾಯಾಧೀಶೆ ಜೆ.ಪ್ರೀತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ಅಶೋಕ್ ನಾಯಕ್, 'ಆರೋಪಿಯು ಈ ಕೋರ್ಟ್‌ನಲ್ಲಿ ಜಾಮೀನು ಅರ್ಜಿ ಸಲ್ಲಿಸುವ ಮೂಲಕ ತಪ್ಪು ಹೆಜ್ಜೆ ಇರಿಸಿದ್ದಾರೆ. ಈ ಪ್ರಕರಣದಲ್ಲಿ ತಂದೆ-ಮಗ ಒಬ್ಬ ಮಹಿಳೆಯನ್ನು ಬಳಸಿಕೊಂಡಿದ್ದಾರೆ. ಆಕೆಗೆ ಪದೇ ಪದೇ ಲೈಂಗಿಕ ಹಿಂಸೆ ನೀಡಿ ದೌರ್ಜನ್ಯ ಎಸಗಿದ್ದಾರೆ. ಹೀಗಾಗಿ, ಈ ಜಾಮೀನು ಅರ್ಜಿಯನ್ನು ಸೆಷನ್ಸ್ ಕೋರ್ಟ್ ಪರಿಶೀಲಿಸಬೇಕು' ಎಂದು ಮನವಿ ಮಾಡಿದರು.

ರೇವಣ್ಣ ಪರ ಹಾಜರಿದ್ದ ಹೈಕೋರ್ಟ್‌ನ ಹಿರಿಯ ವಕೀಲರಾದ ಸಿ.ವಿ.ನಾಗೇಶ್, 'ಘಟನೆ ನಡೆದು ನಾಲ್ಕೂವರೆ ವರ್ಷಗಳಾಗಿವೆ ಎಂದು ದೂರಿನಲ್ಲಿ ಹೇಳಲಾಗಿದೆ. ವಾಸ್ತವದಲ್ಲಿ ಸಂತ್ರಸ್ತೆಗೆ ಲೈಂಗಿಕ ದೌರ್ಜನ್ಯ ಎಂದರೇನು ಎಂಬುದೇ ಗೊತ್ತಿಲ್ಲ. ಆಕೆಗೆ ಪೂರ್ವ ತಯಾರಿ ನೀಡಿ ರಾಜಕೀಯ ಪರಿಣಾಮಗಳಿಗಾಗಿ ದುರುದ್ದೇಶದಿಂದ ದೂರು ದಾಖಲಿಸಲಾಗಿದೆ' ಎಂದು ಪ್ರತಿವಾದ ಮಂಡಿಸಿದರು.

ವಕೀಲರಿಗೆ ಪ್ರಸಾದ ಹಂಚಿದ ರೇವಣ್ಣ

ಬೆಂಗಳೂರು: ಭಯಭಕ್ತಿಗಳನ್ನು ಪ್ರದರ್ಶಿಸುತ್ತಲೇ ಕೋರ್ಟ್ ರೂಮ್ ಪ್ರವೇಶಿಸಿದ ಆರೋಪಿ ರೇವಣ್ಣ ನ್ಯಾಯಾಧೀಶರಿಗೆ ಕೈಮುಗಿದು ನಿಂತರು. ನ್ಯಾಯಾಧೀಶರು ಕುಳಿತುಕೊಳ್ಳುವಂತೆ ಸೂಚಿಸಿದ ನಂತರ ಕುರ್ಚಿಯಲ್ಲಿ ಆಸೀನರಾದರು. ತಮ್ಮ ಪರ ವಕೀಲ ಸಿ.ವಿ. ನಾಗೇಶ್ ಕೋರ್ಟ್ ರೂಮ್‌ಗೆ ಬರುತ್ತಿದ್ದಂತೆ ಯೇ ಕುರ್ಚಿಯಿಂದ ಮೇಲೆದ್ದು ಎರಡೂ ಕಣ್ಮುಚ್ಚಿ ನಮಿಸಿದರು. ಕೋರ್ಟ್ ಹಾಲ್‌ನಿಂದ ಹೊರ ಹೋಗುವ ತನಕ ಬಾರಿಬಾರಿಗೂ ವಿನೀತ ಭಾವದಿಂದ ಎದೆಯ ಮೇಲೆ ಕೈಯಿರಿಸಿಕೊಂಡೇ ಸುದೀರ್ಘ ವಿಚಾರಣೆಯನ್ನು ಆಲಿಸಿದರು.

ಹೊರಗೆ ಬಂದ ನಂತರ ತಮ್ಮ ಕಾರಿನ ಡಿಕ್ಕಿಯಲ್ಲಿ ತುಂಬಿದ್ದ ವಿವಿಧ ದೇವಸ್ಥಾನಗಳ ಪ್ರಸಾದ ರೂಪದ ಹಣ್ಣುಗಳನ್ನು ಆಪ್ತ ವಕೀಲರಿಗೆ ಹಂಚಿದರು. 'ಏ ಬಾರೋ, ತಗೊಳ್ಳೊ' ಎನ್ನುತ್ತಾ ನಿರುಮ್ಮಳ ಭಾವದಿಂದ ಸ್ಥಳದಲ್ಲಿದ್ದವರಿಗೆ ಒಂದೊಂದೇ ಹಣ್ಣನ್ನು ಎರಡೂ ಕೈಗಳಲ್ಲಿ ನೀಡಿ ನಂತರ ಕಾರಿನಲ್ಲಿ ತೆರಳಿದರು.

'₹5 ಕೋಟಿ ಮುಂಗಡ ಕಳುಹಿಸಿದ್ದ ಡಿಕೆಶಿ'

ಎಚ್‌ಡಿಕೆ ಹೆಸರು ಹೇಳಿದರೆ ₹100 ಕೋಟಿ ಕೊಡುವುದಾಗಿ ಹೇಳಿದ್ದರು: ದೇವರಾಜೇಗೌಡ

ಪ್ರಜಾವಾಣಿ ವಾರ್ತೆ

ಹಾಸನ: 'ಸಂಸದ ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೊ ಹಂಚಿಕೆ ಪ್ರಕರಣದ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನಾಲ್ವರು ಸಚಿವರಿದ್ದಾರೆ' ಎಂದು ಅತ್ಯಾಚಾರ ಪ್ರಕರಣದ ಆರೋಪಿ, ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಆರೋಪಿಸಿದರು.

ಪೊಲೀಸ್ ಕಸ್ಟಡಿ ಕೊನೆಗೊಂಡ ನಂತರ ಶುಕ್ರವಾರ ಮತ್ತೆ ಜಿಲ್ಲಾ ಕಾರಾಗೃಹಕ್ಕೆ ಹಸ್ತಾಂತರಗೊಳ್ಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಶ್ಲೀಲ ವಿಡಿಯೊ ಪ್ರಕರಣದಲ್ಲಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿಯವರೇ ಪೆನ್‌ಡ್ರೈವ್ ಸೃಷ್ಟಿಕರ್ತ ಎಂದು ಹೇಳಲು ಡಿ.ಕೆ.ಶಿವಕುಮಾರ್ ನನಗೆ ₹100 ಕೋಟಿ ಆಮಿಷವೊಡ್ಡಿದ್ದರು' ಎಂದು ಹೇಳಿದರು.

ನಾಲ್ವರು ಸಚಿವರಿಂದ ಆಮಿಷ: 'ಸಚಿವರಾದ ಎನ್. ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಪ್ರಿಯಾಂಕ ಖರ್ಗೆ ಹಾಗೂ ಇನ್ನೊಬ್ಬ ಸಚಿವರ ಮೂಲಕ ಶಿವಕುಮಾರ್ ಆಮಿಷ ಒಡ್ಡಿದ್ದರು. ಮುಂಗಡವಾಗಿ ₹5 ಕೋಟಿಯನ್ನು ಬೌರಿಂಗ್ ಕ್ಲಬ್‌ನ ಕೊಠಡಿ ಸಂಖ್ಯೆ 110ಕ್ಕೆ ಕಳಿಸಿದ್ದರು. ಆದರೆ, ಒಪ್ಪದೇ ಇದ್ದುದಕ್ಕೆ ನನ್ನನ್ನು ಮಟ್ಟಹಾಕಲು ಸಂಚು ಮಾಡಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ಅವರನ್ನು ಕರೆಸಿಕೊಂಡು, ಸಂಪೂರ್ಣ ಮಾಹಿತಿ ಪಡೆದು, ಪೆನ್‌ಡ್ರೈವ್ ಸಿದ್ಧಪಡಿಸಿದ್ದೇ ಡಿ.ಕೆ.ಶಿವಕುಮಾರ್. ಅದರ ನಿರ್ವಹಣೆಗೆಂದೇ ಸಚಿವರ ತಂಡ ರಚಿಸಿದ್ದರು. ನಾನು ಒಪ್ಪದೇ ಇದ್ದಾಗ, ಈಗಾಗಲೇ ದೊಡ್ಡ ಹಗರಣವಾಗಿರುವುದರಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಬಿಜೆಪಿಗೆ, ಕುಮಾರಸ್ವಾಮಿ ಅವರಿಗೆ ಕೆಟ್ಟ ಹೆಸರು ತರಲು ಪ್ರಯತ್ನಿಸಿದರು' ಎಂದು ದೂರಿದರು.

ಜಿ.ದೇವರಾಜೇಗೌಡ ಅವರನ್ನು ಹೊಳೆನರಸೀಪುರ ಪೊಲೀಸರು ಶುಕ್ರವಾರ ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದರು.

'ವಿಧಾನಪರಿಷತ್ ಮಾಜಿ ಸದಸ್ಯ, ಚನ್ನರಾಯಪಟ್ಟಣದ ಎಂ.ಎ.ಗೋಪಾಲಸ್ವಾಮಿ ಅವರನ್ನು ಸಂಧಾನಕ್ಕೆ ಕಳಿಸಿದ್ದರು. ದೇಶದಲ್ಲಿ ಮೋದಿಯವರಿಗೆ ಕಳಂಕ ತರಬೇಕು. ಹಗರಣದಲ್ಲಿ ಅವರನ್ನು ಬಿಂಬಿಸಿ ಬಿಜೆಪಿಗೆ ಕೆಟ್ಟ ಹೆಸರು ತರಬೇಕೆಂಬುದು ಶಿವಕುಮಾರ್ ಅವರ ಮುಖ್ಯ ಉದ್ದೇಶವಾಗಿತ್ತು. ಜೊತೆಗೆ, ಎಚ್.ಡಿ.ಕುಮಾರಸ್ವಾಮಿ ನಾಯಕತ್ವವನ್ನು ರಾಜ್ಯದಲ್ಲಿ ಹಾಳು ಮಾಡುವುದು ಮತ್ತೊಂದು ಉದ್ದೇಶ' ಎಂದು ದೂರಿದರು.

'ನನ್ನ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಿಸಿದರು. ಪುರಾವೆ ಸಿಗಲಿಲ್ಲ. ಅತ್ಯಾಚಾರ ಪ್ರಕರಣ ದಾಖಲಿಸಿದರು. ಸಾಕ್ಷ್ಯ ಸಿಗಲಿಲ್ಲ. ಈಗ ಪೆನ್‌ಡ್ರೈವ್ ಪ್ರಕರಣ ದಾಖಲಿಸಿದ್ದಾರೆ. ಎಲ್ಲ ಸತ್ಯ ಹೊರಗೆ ಬರಲಿದ್ದು, ಸತ್ಯ- ಧರ್ಮದ ಪರ ಹೋರಾಡುವ ನಾಯಕ ನಾನು. ಯಾವ ಷಡ್ಯಂತ್ರವಿದ್ದರೂ ನನ್ನನ್ನು ಏನೂ ಮಾಡಲಾಗದು. ಕಾನೂನಿಗೆ ಎಲ್ಲರೂ ತಲೆ ಬಾಗಲೇಬೇಕು. ಸತ್ಯ ಹೊರಗೆ ಬಂದೇ ಬರುತ್ತದೆ. ಸತ್ಯಕ್ಕೇ ಜಯ' ಎಂದರು.

ಕಸ್ಟಡಿ ಅವಧಿ ಅಂತ್ಯ, ಮತ್ತೆ ಜೈಲಿಗೆ

ಜಿ.ದೇವರಾಜೇಗೌಡರ ಪೊಲೀಸ್ ಕಸ್ಟಡಿ ಅವಧಿ ಗುರುವಾರಕ್ಕೆ ಅಂತ್ಯವಾಗಿದ್ದು, ಶುಕ್ರವಾರ ಅವರನ್ನು ಹೊಳೆನರಸೀಪುರ ನಗರ ಠಾಣೆ ಪೊಲೀಸರು ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಿದರು. ಮೇ 24ರ ವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ಜೆಎಂಎಫ್‌ಸಿ ನ್ಯಾಯಾಲಯ ಆದೇಶಿಸಿದೆ.

ವಿಚಾರಣೆ ಸಲುವಾಗಿ ದೇವರಾಜೇಗೌಡರನ್ನು ಕಸ್ಟಡಿಗೆ ನೀಡಬೇಕೆಂದು ಪೊಲೀಸರು ಮೇ 13 ರಂದು ಅರ್ಜಿ ಸಲ್ಲಿಸಿದ್ದ ಮೇರೆಗೆ ನ್ಯಾಯಾಲಯವು ಎರಡು ದಿನ ಕಸ್ಟಡಿಗೆ ನೀಡಿತ್ತು. ಒಂದು ದಿನ ವಿಸ್ತರಣೆ ಮನವಿ ಸಲ್ಲಿಸಿ ಪೊಲೀಸರು ಕಸ್ಟಡಿಗೆ ಪಡೆದಿದ್ದರು.

ಸುದ್ದಿ 2 ನಿಮಿಷ

'ಹೆಣ್ಣು ಮಕ್ಕಳಿಗೆ 'ಕೊಲೆ ಭಾಗ್ಯ' ಕರುಣಿಸಿದ ಕಾಂಗ್ರೆಸ್ ಸರ್ಕಾರ'

ಬೆಂಗಳೂರು: ರಾಜ್ಯದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಮನೆಯಿಂದ ಆಚೆ ಬರಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ದುಷ್ಟ ಹಂತಕರಿಗೆ ಯಾರ ಭಯವೂ ಇಲ್ಲದಂತಾಗಿದ್ದು, ಕೊಲೆ, ದಾಂಧಲೆ, ದರೋಡೆ ಪ್ರಕರಣಗಳು ವಿಪರೀತ ಪ್ರಮಾಣದಲ್ಲಿ ಏರಿಕೆ ಆಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದ್ದಾರೆ.

'ಎಕ್ಸ್' ಮೂಲಕ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ಸಾಮಾಜಿಕ ಭದ್ರತೆ ಕಲ್ಪಿಸಿ ಜನರಿಗೆ ಅಭಯ ತುಂಬಬೇಕಾದ ಗೃಹ ಇಲಾಖೆ ಈ ನಿಟ್ಟಿನಲ್ಲಿ ಯಾವುದೇ ಹೆಜ್ಜೆ ಇಡದ ಕಾರಣ ನಾಗರಿಕ ಸಮಾಜದ ವಿಶ್ವಾಸವನ್ನು ಕಳೆದುಕೊಂಡಿದೆ' ಎಂದು ಹೇಳಿದ್ದಾರೆ.

'ಕರ್ನಾಟಕದಲ್ಲಿ ಹೆಣ್ಣು ಮಕ್ಕಳು 'ಕೊಲೆ ಭಾಗ್ಯ' ಕಾಣುವಂತಾಗಿದೆ. ಸಾಮಾಜಿಕ ಭದ್ರತೆಗೆ ಹೆಸರಾಗಿದ್ದ ನಮ್ಮ ಹೆಮ್ಮೆಯ ಕರ್ನಾಟಕ ಕಾಂಗ್ರೆಸ್ ಆಡಳಿತದ ಒಂದು ವರ್ಷದಲ್ಲಿ ಕ್ರಿಮಿನಲ್, ಕೊಲೆಗಡುಕರ ತಾಣವಾಗುತ್ತಿರುವುದು. 'ಗ್ಯಾರಂಟಿ', 'ಗೃಹಜ್ಯೋತಿ' ಯೋಜನೆಗಳನ್ನು ಜಾರಿ ತಂದಿರುವುದಾಗಿ ಬೀಗುವ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಅಮಾಯಕ ಹೆಣ್ಣು ಮಕ್ಕಳನ್ನು ಭೀಕರವಾಗಿ ಹತ್ಯೆಗೈಯಲಾಗುತ್ತಿದೆ. ಮನೆಗಳಿಗೆ ನುಗ್ಗಿ 'ಗೃಹಲಕ್ಷ್ಮಿ'ಯರನ್ನು ಚಾಕುವಿನಿಂದ ಇರಿದು ಕೊಲ್ಲಲಾಗುತ್ತಿದೆ. ಭಾಗ್ಯಲಕ್ಷ್ಮಿಯರನ್ನು ಕಳೆದುಕೊಂಡ ಹೆತ್ತವರ ಆಕ್ರಂದನ ಅರಣ್ಯರೋದನವಾಗುತ್ತಿದೆ' ಎಂದು ಹೇಳಿದ್ದಾರೆ.

ಪ್ರತ್ಯೇಕ ಘಟನೆ: ಐವರ ಸಾವು

ರಾಮನಗರ/ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ರಾಮನಗರ ತಾಲ್ಲೂಕಿನ ಅಚ್ಚಲು ಗ್ರಾಮದ ಹೊರವಲಯದಲ್ಲಿನ ಬೃಹತ್ ಬಂಡೆ ಮೇಲಿರುವ ಹೊಂಡದಲ್ಲಿ ಈಜಲು ಹೋಗಿದ್ದ ಮೂವರು ಬಾಲಕರು ಹಾಗೂ ಭಟ್ಕಳದ ಕಡವಿನಕಟ್ಟಾ ನದಿಯಲ್ಲಿ ಈಜಲು ಹೋಗಿದ್ದ ಬಾಲಕ ಮತ್ತು ಆತನ ರಕ್ಷಣೆಗೆ ಮುಂದಾದ ಮಹಿಳೆ ನೀರಿನಲ್ಲಿ ಮುಳುಗಿ ಶುಕ್ರವಾರ ಮೃತಪಟ್ಟಿದ್ದಾರೆ.

ರಾಮನಗರ ಮಹಬೂಬನಗರ ಹೊಸಳ್ಳಿ ಬೀದಿಯ ಫೂಲ್‌ಭಾಗ್ ಮೊಹಲ್ಲಾದ ಮುಬೀನ್ ಅವರ ಪುತ್ರ ಸಯ್ಯದ್ ಶಾಹಿದ್ (14), ಸರ್ದಾರ್ ಖಾನ್ ಅವರ ಪುತ್ರರಾದ ರಿಹಾನ್ ಖಾನ್ (16) ಹಾಗೂ ಶಹಬಾಜ್ ಖಾನ್ (13) ಹಾಗೂ ಭಟ್ಕಳದ ಕಂಡೆಕೊಡ್ಲು ಹುರುಳಿಸಾಲ ನಿವಾಸಿ ಸೂರಜ್ ಪಾಂಡು ನಾಯ್ಕ (17) ಮತ್ತು ಪಾರ್ವತಿ ಶಂಕರ ನಾಯ್ಕ (39) ಮೃತರು.

ಸ್ಥಳೀಯ ಸರ್ಕಾರಿ ಶಾಲೆಯಲ್ಲಿ ಸಯ್ಯದ್ 6ನೇ ತರಗತಿ ಮತ್ತು ಶಹಬಾಜ್ 8ನೇ ತರಗತಿಯಲ್ಲಿ ಓದುತ್ತಿದ್ದರು. ಬಿಜಾಪುರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದ ರಿಹಾನ್, ಈ ಬಾರಿ 9ನೇ ತರಗತಿ ಮುಗಿಸಿ 10ನೇ ತರಗತಿಗೆ ಕಾಲಿಟ್ಟಿದ್ದ.

ಮಹಬೂಬನಗರದ ಮಸೀದಿಯಲ್ಲಿ ಮೂವರು ಮಧ್ಯಾಹ್ನ ನಮಾಜ್ ಮುಗಿಸಿ, ಅಚ್ಚಲು ಬಳಿ ಸಣ್ಣ ನೀರಿನ ಹೊಂಡದಲ್ಲಿ ಈಜಾಡಲು ಧುಮುಕಿದ್ದಾರೆ. ಹೊಂಡ ಆಳವಾಗಿದ್ದರಿಂದ ಮೂವರೂ ನಿಯಂತ್ರಣ ಸಿಗದೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಡವಿನಕಟ್ಟಾ ನದಿಯಲ್ಲಿ ಈಜಲು ಅಕ್ಕಪಕ್ಕದ ಕುಟುಂಬದ ಐವರು ಬಾಲಕರು ತೆರಳಿದ್ದರು. ಈ ಬಾಲಕರಿಗೆ ತಮ್ಮ ಮಗನೂ ಇದ್ದ ಕಾರಣಕ್ಕೆ ಪಾರ್ವತಿಯೂ ಅವರ ಜೊತೆ ಹೋಗಿದ್ದರು. ನೀರಿನಲ್ಲಿ ಈಜುವಾಗ, ಸೂರಜ್ ಎಂಬ ಬಾಲಕ ಮುಳುಗುತ್ತಿರುವುದು ಕಂಡು, ಆತನ ರಕ್ಷಣೆಗೆ ಮುಂದಾದರು. ಆಗ ಇಬ್ಬರೂ ಮುಳುಗಿ ಮೃತಪಟ್ಟರು' ಎಂದು ಶಹರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ,
ಬಳ್ಳಾರಿ

ದೂರವಾಣಿ ಸಂಖ್ಯೆ: 08392-273479 /278168
ವೆಬ್‌ಸೈಟ್: www.ballaricity.mrc.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ –583101

ಸಂ:ಮನಪಾಬ/ಆಶಾ/ಘ.ವ.ನಿ/ಪಾರಂಪರಿಕ/03/2024–25 ದಿನಾಂಕ: 17.05.2024

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಬಳ್ಳಾರಿ ಮಹಾನಗರಪಾಲಿಕೆಯ ಹರಗಿನದೋಣಿ ಸರ್ವೆ ನಂ.158ರ ನೆಲಭರ್ತಿ ಜಾಗದಲ್ಲಿ ಮತ್ತು ರೂಪನಗುಡಿ ರಸ್ತೆಯ ಹಳೆ ಕಾಂಪೋಸ್ಟ್ ಯಾರ್ಡ್‌ನಲ್ಲಿ ಸಂಗ್ರಹವಾಗಿರುವ ಪಾರಂಪರಿಕ ಘನತ್ಯಾಜ್ಯವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿರುವ ಮಾರ್ಗಸೂಚಿಗಳನ್ವಯ ವಿಲೇವಾರಿ ಮಾಡುವ ಟೆಂಡರ್ ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT33/Call-3 ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:01.06.2024 ಸಂಜೆ 05.00 ಗಂಟೆ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಟೆಂಡರ್ ಸ್ಪಷ್ಟೀಕರಣದ ಕೊನೆಯ ದಿನಾಂಕ:22.05.2024.ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಮತ್ತು ಹೆಚ್ಚಿನ ವಿವರಗಳಿಗೆ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ ನಂ.08392–273479/278168ಗೆ ಕರೆಮಾಡಿ ಪಡೆಯಬಹುದು ಹಾಗೂ ವೆಬ್‌ಸೈಟ್: http://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಬಿಎಂಆರ್‌ಸಿಎಲ್‌ನ ರೀಚ್ 5 ರ ಸೆಕ್ಷನ್‌ನ **ಬಿಟಿಎಂ ಲೇಔಟ್ ನಿಲ್ದಾಣದ ಪ್ಲಾಟ್‌ಫಾರಂನಿಂದ ಆರ್‌ವಿ ರಸ್ತೆ ನಿಲ್ದಾಣದ ಬಫರ್ ಕೊನೆಯವರೆಗೆ ಬಿಎಂಆರ್‌ಸಿಎಲ್ ವಯಾಡಕ್ಟ್ ಜೊತೆಗೆ(ಬಿಟಿಎಂ ಲೇಔಟ್ ನಿಲ್ದಾಣದ ಪ್ಲಾಟ್‌ಫಾರಂ, ಜಯದೇವ ನಿಲ್ದಾಣ, ರಾಗಿಗುಡ್ಡ ನಿಲ್ದಾಣ ಮತ್ತು ಆರ್ ವಿ ರಸ್ತೆ ನಿಲ್ದಾಣದ ಬಫರ್ ಕೊನೆಯವರೆಗೆ)** ಹಾದುಹೋಗಿರುವ 33 ಕೆವಿ ಕೇಬಲ್‌ಗಳು ಮತ್ತು ವಯಾಡಕ್ಟ್‌ನ 750 ವೋಲ್ಟ್ ಡಿಸಿ ಥರ್ಡ್ ರೈಲ್ ಭಾಗಗಳಲ್ಲಿ **ದಿನಾಂಕ 18.05.2024 ರಿಂದ ಪರೀಕ್ಷಾರ್ಥ** ವಿದ್ಯುತ್ ಹರಿಸಲಾಗುವುದು.

ಇದರ ಜೊತೆಗೆ ರೀಚ್ 5ಸೆಕ್ಷನ್‌ನಲ್ಲಿ ಹೆಬ್ಬಗೋಡಿ ಡಿಪೋ/ಆರ್‌ಎಸ್‌ಎಸ್ (ವಯಾಡಕ್ಟ್) ಭಾಗದಿಂದ ಬೊಮ್ಮಸಂದ್ರ ನಿಲ್ದಾಣದ ವರೆಗೆ ಹಾಗೂ **ಆರ್‌ವಿ ರಸ್ತೆ ನಿಲ್ದಾಣದ ಬಫರ್ ಕೊನೆಯವರೆಗೆ,** 16 ನಿಲ್ದಾಣಗಳು ಮತ್ತು ವಯಾಡಕ್ಟ್ (ಹೆಬ್ಬಗೋಡಿ ಡಿಪೋ/ಆರ್‌ಎಸ್‌ಎಸ್, ಬೊಮ್ಮಸಂದ್ರ ನಿಲ್ದಾಣ, ಹೆಬ್ಬಗೋಡಿ ನಿಲ್ದಾಣ, ಹುಸ್ಕೂರು ರಸ್ತೆ ನಿಲ್ದಾಣ, ಇನ್‌ಫೋಸಿಸ್ ನಿಲ್ದಾಣ, ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ, ಬೆರಟೇನ ಅಗ್ರಹಾರ ನಿಲ್ದಾಣ, ಹೊಸ ರಸ್ತೆ ನಿಲ್ದಾಣ, ಸಿಂಗಸಂದ್ರ ನಿಲ್ದಾಣ, ಕೂಡ್ಲು ಗೇಟ್ ನಿಲ್ದಾಣ, ಹೊಂಗಸಂದ್ರ ನಿಲ್ದಾಣ, ಬೊಮ್ಮನಹಳ್ಳಿ ನಿಲ್ದಾಣ, ಸೆಂಟ್ರಲ್ ಸಿಲ್ಕ್ ಬೋರ್ಡ್ ನಿಲ್ದಾಣ, ಬಿಟಿಎಂ ನಿಲ್ದಾಣ, ಜಯದೇವ ನಿಲ್ದಾಣ, ರಾಗಿಗುಡ್ಡ ನಿಲ್ದಾಣ ಮತ್ತು ಆರ್ ವಿ ರಸ್ತೆ ನಿಲ್ದಾಣ ಬಫರ್ ಕೊನೆ) ವಿದ್ಯುದೀಕರಣ ಸ್ಥಿತಿಯಲ್ಲಿರುವುದು.

750 ವೋಲ್ಟ್ ಡಿಸಿ ಥರ್ಡ್ ರೈಲ್‌ನ್ನು ಅಥವಾ 33 ಕೆವಿ ಕೇಬಲ್‌ಗಳನ್ನು ಯಾವುದೇ ರೀತಿಯಲ್ಲಿ ನೇರವಾಗಿ ಸಂಪರ್ಕಿಸಿದಲ್ಲಿ ಅದು ಮಾರಣಾಂತಿಕ ಅಪಾಯ ಉಂಟು ಮಾಡಬಹುದಾಗಿರುತ್ತದೆ. ಆದ್ದರಿಂದ, ಅನುಮತಿ ಇಲ್ಲದೇ ಈ ಪ್ರದೇಶದಲ್ಲಿರುವ ವಯಾಡಕ್ಟ್‌ಗೆ ಪ್ರವೇಶ ಮಾಡಬಾರದಾಗಿ ಸಮಸ್ತ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಗಿದೆ. ಸದರಿ ಅನಧಿಕೃತ ಕೃತ್ಯದಿಂದ ಉಂಟಾಗುವ ಗಾಯಗಳು ಅಥವಾ ಅವಘಡಗಳಿಗೆ ಬಿಎಂಆರ್‌ಸಿಎಲ್ ಜವಾಬ್ದಾರಿಯಾಗಿರುವುದಿಲ್ಲ.

ಸಾರ್ವಜನಿಕರ ಸುರಕ್ಷತೆಯ ಹಿತದೃಷ್ಟಿಯಿಂದ ಈ ಪ್ರಕಟಣೆ ನೀಡಲಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಟ್ರಾಕ್ಷನ್),ಬಿಎಂಆರ್‌ಸಿಎಲ್

ಹೂತಿದ್ದ ಶವ ಹೊರತೆಗೆದು ಸುಟ್ಟರು!

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಅಜ್ಜಂಪುರ ತಾಲ್ಲೂಕಿನ ಶಿವನಿ ಹೋಬಳಿಯಲ್ಲಿ ಮಳೆ ಬಾರದೆ ಅಡಿಕೆ ಬೆಳೆ ಹಾಳಾಗುತ್ತಿದ್ದು, ಅಡಿಕೆ ತೋಟ ಉಳಿಸಿಕೊಳ್ಳಲು ರೈತರು ಶತ ಪ್ರಯತ್ನ ನಡೆಸುತ್ತಿದ್ದಾರೆ. ದೇವರ ಪೂಜೆ, ಪರಿಷೆಗಳನ್ನು ಮಾಡಿದರೂ ಮಳೆ ಬಾರದಿರುವುದರಿಂದ ಸ್ಮಶಾನದಲ್ಲಿ ಹೂತಿದ್ದ ಶವಗಳನ್ನು ಗುಂಡಿಯಿಂದ ಹೊರತೆಗೆದು ಸುಟ್ಟಿದ್ದಾರೆ.

'ಸೀಮೆ ಕೆಟ್ಟರೂ ಶಿವನಿ ಕೆಡದು' ಎಂಬ ಮಾತು ಈ ಭಾಗದಲ್ಲಿ ಜನಜನಿತವಾಗಿದೆ. ಇದೇ ಮೊದಲ ಬಾರಿಗೆ ಹೋಬಳಿಗೆ ಬರಗಾಲ ಅಪ್ಪಳಿಸಿದೆ.

ಹೊಲ ಗದ್ದೆಗಳೆಲ್ಲವೂ ಅಡಿಕೆ ತೋಟವಾಗಿ ಪರಿವರ್ತನೆಗೊಂಡಿದ್ದು, ಪ್ರತಿ ಜಮೀನಿಗೆ ಎರಡು–ಮೂರರಂತೆ ಕೊಳವೆ ಬಾವಿಗಳಿವೆ. ಸುತ್ತಮುತ್ತ ಇರುವ ಕೆರೆ–ಕಟ್ಟೆಗಳು ಬರಿದಾದ ಬಳಿಕ ಕೊಳವೆ ಬಾವಿಗಳೂ ಬರಿದಾದವು. ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಸಂಪೂರ್ಣ ಬಿಸಿಲು ಮತ್ತು ಬಿಸಿಗಾಳಿಯಿಂದ ಜನ ಕಂಗೆಟ್ಟಿದ್ದರು. ಅಡಿಕೆ ತೋಟಗಳು ಕಂದು ಬಣ್ಣಕ್ಕೆ ತಿರುಗಿವೆ.

ಶಿವನಿ ಗ್ರಾಮದ ಹೊರ ವಲಯದಲ್ಲಿ ಹೂತಿದ್ದ ಶವ ಮೇಲೆತ್ತಿ ಸುಡಲಾಗಿದೆ

ಕೊಳವೆ ಬಾವಿಗಳನ್ನು ಕೊರೆಸಿ ಹೈರಾಣಾದ ಬಳಿಕ ತೋಟಗಳಿಗೆ ಟ್ಯಾಂಕರ್ ಮೂಲಕ ನೀರು ಹರಿಸಲು ಮುಂದಾದರು. ಅಲ್ಪ–ಸ್ವಲ್ಪ ನೀರಿರುವ ಕೊಳವೆ ಬಾವಿಗಳನ್ನು ತಡಕಿ ತೋಟಗಳಿಗೆ ನೀರುಣಿಸಿದರು. ಬಿರು ಬೇಸಿಗೆಗೆ ಟ್ಯಾಂಕರ್ ನೀರು ಯಾವುದಕ್ಕೂ ಸಾಲದಾಯಿತು.

ಮೇ ತಿಂಗಳಲ್ಲಿ ವಿವಿಧೆಡೆ ಪೂರ್ವ ಮುಂಗಾರು ಆರಂಭವಾದರೂ ಈ ಹೋಬಳಿಗೆ ಮಳೆ ಹನಿಯಲಿಲ್ಲ. ಶಿವನಿ, ಚೀರನಹಳ್ಳಿ, ದಂದೂರು, ಜಲದೀಹಳ್ಳಿ, ಚಿಕ್ಕಾನವಂಗಲ, ಕಲ್ಲೇನಹಳ್ಳಿ, ಬುಕ್ಕಾಂಬುದಿ ಸುತ್ತಮುತ್ತ ಮೇ 15 ಕಳೆದರೂ ಮಳೆ ಬರಲಿಲ್ಲ. ಇದರಿಂದ ಕಂಗೆಟ್ಟ ರೈತರು ಸುತ್ತಮುತ್ತಲ ದೇವರುಗಳ ಮೊರೆ ಹೋದರು. ಪೂಜೆ, ಪುನಸ್ಕಾರಗಳು ನಡೆಸಿ ಮಳೆಗಾಗಿ ಕೋರಿದರು.

ಅಂತಿಮವಾಗಿ ಗ್ರಾಮದ ದೇವಸ್ಥಾನಗಳಲ್ಲಿ ಅಪ್ಪಣೆ ಕೇಳಿ ಪಂಚಾಯಿತಿ ನಡೆಸಿ, ತೊನ್ನು ಇರುವ ಶವಗಳನ್ನು ಹೊರ ತೆಗೆದು ಸುಡುತ್ತಿದ್ದಾರೆ. ಜಲದಿನ ಹಳ್ಳಿಯ ಸ್ಮಶಾನದಲ್ಲಿ ರಾತ್ರೋರಾತ್ರಿ ಐದಾರು ಶವಗಳನ್ನು ಮೇಲೆತ್ತಿ ಅಗ್ನಿಸ್ಪರ್ಶ ಮಾಡಿದ್ದಾರೆ. ಶಿವನಿ ಗ್ರಾಮದ ಹೊರ ವಲಯದಲ್ಲಿ ಹೂತಿದ್ದ ಮಹಿಳೆಯ ಶವವನ್ನು ಗುರುವಾರ ಹೊರ ತೆಗೆದು ಪಕ್ಕದಲ್ಲೆ ಅಗ್ನಿ ಸ್ಪರ್ಶ ಮಾಡಿದ್ದಾರೆ.

'ತೊನ್ನಿರುವ ವ್ಯಕ್ತಿಯ ಶವ ಹೂತಿದ್ದರೆ ಮಳೆ ಬರುವುದಿಲ್ಲವೆಂಬ ನಂಬಿಕೆ ಬೇರೂರಿದೆ. ಅಂತಹ ಶವ ಹೊರ ತೆಗೆದು ಸುಟ್ಟ ಬಳಿಕ ಮಳೆ ಬಂದಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸ್ಥಳೀಯರು ಹೇಳುತ್ತಾರೆ.

ಕಾಕತಾಳೀಯ ಎಂಬಂತೆ, ತೊನ್ನಿದ್ದ ಶವ ಹೊರತೆಗೆದು ಸುಟ್ಟ ಬಳಿಕ ಮಳೆಯಾಗಿದೆ. ಶಿವನಿಯಲ್ಲಿ ಗುರುವಾರ ಸಂಜೆ ವೇಳೆಗೆ ಮಳೆ ಬಂದಿದೆ.

'ತನಿಖೆ ವೇಳೆ ಮಾತ್ರ ನ್ಯಾಯಾಲಯಗಳ ಅನುಮತಿ ಪಡೆದು ಶವವನ್ನು ಗುಂಡಿಯಿಂದ ಹೊರ ತೆಗೆಯಲು ಅವಕಾಶ ಇದೆ. ಬೇಕೆಂದಾಗ ಶವ ಮೇಲೆತ್ತುವುದು ಅಪರಾಧ' ಎನ್ನುತ್ತಾರೆ ಕಾನೂನು ಪರಿಣತರು.

'ಕೊಲೆ ಹೆಚ್ಚಳ: ವರದಿಗೆ ಸೂಚನೆ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಬೆಂಗಳೂರು: ಹುಬ್ಬಳ್ಳಿ- ಧಾರವಾಡ ನಗರಗಳಲ್ಲಿ ಪದೇ ಪದೇ ಕೊಲೆಗಳು ನಡೆಯುತ್ತಿರುವ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಹುಬ್ಬಳ್ಳಿ- ಧಾರವಾಡ ನಗರಗಳಲ್ಲಿ ಪದೇ ಪದೇ ಇಂತಹ ಘಟನೆಗಳು ಸಂಭವಿಸುತ್ತಿವೆ. ಇದಕ್ಕ ಕಾರಣ ಏನು ಎಂಬುದನ್ನು ಪರಿಶೀಲಿಸಿ ವರದಿ ನೀಡಲು ಸೂಚಿಸಿದ್ದೇನೆ. ಸಾಧ್ಯವಾದರೆ ನಾನೇ ಅಲ್ಲಿಗೆ ಹೋಗಿ ಪರಿಶೀಲನೆ ನಡೆಸುತ್ತೇನೆ' ಎಂದರು.

ಅಂಜಲಿ ಎಂಬ ಯುವತಿಯ ಕೊಲೆ ಪ್ರಕರಣದ ಆರೋಪಿಯನ್ನು ಬಂಧಿಸಲಾಗಿದೆ. ಕಾನೂನು ಪ್ರಕಾರ ಕಠಿಣ ಶಿಕ್ಷೆಯಾಗುವಂತೆ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಲಿದೆ. ಈ ಪ್ರಕರಣದಲ್ಲಿ ಲೋಪ ಎಸಗಿದ ಆರೋಪದ ಮೇಲೆ ಕೆಲವು ಪೊಲೀಸರನ್ನು ಅಮಾನತು ಮಾಡಲಾಗಿದೆ ಎಂದು ಹೇಳಿದರು.

ಯುವತಿಗೆ ಬೆದರಿಕೆ ಇದ್ದ ಕುರಿತು ದೂರು ನೀಡಿದ್ದರೂ ಕ್ರಮ ಕೈಗೊಂಡಿರಲಿಲ್ಲ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಲಿಖಿತ ದೂರು ಸಲ್ಲಿಸಿರಲಿಲ್ಲ, ಮೌಖಿಕವಾಗಿ ತಿಳಿಸಿದ್ದರು ಎಂಬ ಮಾಹಿತಿ ಇದೆ. ಆದರೂ, ಕರ್ತವ್ಯಲೋಪದ ಆರೋಪದಡಿ ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಲಾಗಿದೆ. ತನಿಖಾ ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದರು.

ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ



ಹರ್ಷಿತಾ

ಆನೇಕಲ್: ತಾಲ್ಲೂಕಿನ ಹಿಲೀಲಗೆ ಕಾಲೇಜುವೊಂದರ ವಿದ್ಯಾರ್ಥಿ ನಿಲಯದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿಯೊಬ್ಬರ ಮೃತದೇಹ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಗುರುವಾರ ಸಂಜೆ ಪತ್ತೆಯಾಗಿದೆ.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಕರಡಿಹಳ್ಳಿ ಹರ್ಷಿತಾ (18) ಮೃತ ವಿದ್ಯಾರ್ಥಿನಿ. ಹಿಲೀಲಗೆಯಲ್ಲಿ ಇರುವ ಬೆಂಗಳೂರು ಕಾಲೇಜ್ ಆಫ್ ಎಂಜಿನಿಯರಿಂಗ್ ಟೆಕ್ನಾಲಜಿಯಲ್ಲಿ ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ ಮೊದಲನೇ ವರ್ಷದ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದರು.

ಮಾತಿನ ಚಕಮಕಿ: ಕಾಲೇಜು ಆಡಳಿತ ಮಂಡಳಿ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸಹಪಾಠಿಗಳು ಆರೋಪಿಸಿದ್ದಾರೆ.

ಹರ್ಷಿತಾ ಸಾವು ಖಂಡಿಸಿ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಕೆಲಕಾಲ ವಿದ್ಯಾರ್ಥಿ ನಿಲಯದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ಕೈ ಕೈ ಮಿಲಾಯಿಸುವ ಹಂತ ತಲುಪಿದಾಗ ಸೂರ್ಯಸಿಟಿ ಪೊಲೀಸರು ಮಧ್ಯಪ್ರವೇಶಿಸಿ ವಿದ್ಯಾರ್ಥಿಗಳ ಅಹವಾಲು ಆಲಿಸಿದರು. ಪ್ರಕರಣ ದಾಖಲಾಗಿದೆ.

ಕಾಡು ಹಂದಿ ದಾಳಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ): ತಾಲ್ಲೂಕಿನ ಚಿಕ್ಕಯಗಟಿ ಗ್ರಾಮದ ಬಳಿ ಗುರುವಾರ ಸಂಜೆ ಕಾಡು ಹಂದಿ ದಾಳಿಗೆ ಸಿಕ್ಕಿ ಶಿವ (48) ಎಂಬುವರು ಸ್ಥಳದಲ್ಲೇ ಮೃತಪಟ್ಟರು.

ಅಂದು ಸಂಜೆ ಚಿಕ್ಕಯಗಟಿ ಬಳಿ ಮಂಡ್ಯ- ನಾಗಮಂಗಲ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಅವರ ಮೇಲೆ ಹಂದಿ ದಾಳಿ ಮಾಡಿತ್ತು. ಶಿವ ಅವರು ಕೆಳಗೆ ಬಿದ್ದ ನಂತರವೂ ಅವರ ಎಡ ತೊಡೆ ಮತ್ತು ಮರ್ಮಾಂಗಕ್ಕೆ ಹಂದಿ ಗುದ್ದಿತ್ತು. ಮೃತದೇಹವನ್ನು ಪೊಲೀಸರು ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವು

ಅಂಜಲಿ ಕೊಲೆ ಪ್ರಕರಣ • ಗಾಯಗೊಂಡ ಸ್ಥಿತಿಯಲ್ಲಿದ್ದ ಆರೋಪಿ ಸೆರೆ

ರೈಲಿನಿಂದ ಬಿದ್ದು ಸಿಕ್ಕಿಬಿದ್ದ ಗಿರೀಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ವೀರಾಪುರ ಓಣಿಯಲ್ಲಿ ಅಂಜಲಿ ಅಂಬಿಗೇರ ಎಂಬ ಯುವತಿಯನ್ನು ಕೊಲೆ ಮಾಡಿದ ಆರೋಪಿ ಗಿರೀಶ ಸಾವಂತನನ್ನು ಗುರುವಾರ ತಡರಾತ್ರಿ ದಾವಣಗೆರೆಯಲ್ಲಿ ಸ್ಥಳೀಯ ಪೊಲೀಸರು ವಶಕ್ಕೆ ಪಡೆದರು. ಗಿರೀಶನ ತಲೆ, ಮುಖ ಹಾಗೂ ಬೆನ್ನಿನ ಮೇಲೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಬುಧವಾರ ಬೆಳಿಗ್ಗೆ 5.10ರ ಸುಮಾರಿಗೆ ಗಿರೀಶ, ಅಂಜಲಿ ಮನೆಗೆ ನುಗ್ಗಿ ಚಾಕು ಇರಿದು ಕೊಲೆ ಮಾಡಿ ಗೋಕುಲ ರಸ್ತೆ ಹೊಸ ಬಸ್ ನಿಲ್ದಾಣಕ್ಕೆ ತೆರಳಿದ. ಅಲ್ಲಿಂದ ಬಸ್ ಹತ್ತಿ ಗಬ್ಬೂರು ಕ್ರಾಸ್‌ನಲ್ಲಿ ಇಳಿದು, ನಂತರ ಬೇರೆ ವಾಹನದಲ್ಲಿ ಶಿವಮೊಗ್ಗ ಮತ್ತು ಮೈಸೂರಿಗೆ ಹೋದ. ಅಲ್ಲಿಂದ ಗೋವಾ ಅಥವಾ ಮಹಾರಾಷ್ಟ್ರಕ್ಕೆ ಹೋಗಿ ತಲೆ ಮರೆಸಿಕೊಳ್ಳಲು ಯೋಜನೆ ರೂಪಿಸಿದ್ದ ಎಂಬ ಮಾಹಿತಿ ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಗುರುವಾರ ಮಧ್ಯಾಹ್ನ ಆರೋಪಿ ಮೈಸೂರಿನಿಂದ ವಿಶ್ವಮಾನವ ರೈಲಿನಲ್ಲಿ ಪ್ರಯಾಣಿಸುವಾಗ, ದಾವಣಗೆರೆ ಸಮೀಪದ ಮಾಯಕೊಂಡ ರೈಲ್ವೆ ನಿಲ್ದಾಣದ ಬಳಿ ಮಹಿಳೆಯೊಬ್ಬರ ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಳ್ಳಲು ಪ್ರಯತ್ನಿಸಿದ. ಆಗ ಪ್ರಯಾಣಿಕರು ಅವನನ್ನು ಹಿಡಿದು ಥಳಿಸಿದ್ದಾರೆ. ನಿಧಾನವಾಗಿ ಚಲಿಸುತ್ತಿದ್ದ ರೈಲಿನಿಂದ ತಪ್ಪಿಸಿಕೊಳ್ಳಲೆಂದು ಕೆಳಗೆ ಹಾರಿದಾಗ, ಗಾಯಗೊಂಡ. ರೈಲ್ವೆ ಪೊಲೀಸರ ಮಾಹಿತಿ ಆಧರಿಸಿ ಸ್ಥಳೀಯ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು, ಶುಕ್ರವಾರ ಬೆಳಿಗ್ಗೆ 4.30ರ ಸುಮಾರಿಗೆ ಹುಬ್ಬಳ್ಳಿಗೆ ಕರೆತಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿರುವ ಕೊಲೆ ಆರೋಪಿ ಗಿರೀಶನ ಆರೋಗ್ಯ ಸ್ಥಿತಿ ಬಗ್ಗೆ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ಶುಕ್ರವಾರ ಮಾಹಿತಿ ಪಡೆದರು

'ರೈಲಿನಿಂದ ಬಿದ್ದ ಕಾರಣ ಗಿರೀಶಗೆ ಗಾಯಗಳಾಗಿವೆ. ಮಾತನಾಡುವ ಸ್ಥಿತಿಯಲ್ಲಿಲ್ಲ. ಆರೋಗ್ಯ ಸುಧಾರಣೆಯಾದ ಬಗ್ಗೆ ವೈದ್ಯರು ವರದಿ ನೀಡಿದ ನಂತರ, ಆತನನ್ನು ನ್ಯಾಯಾಲಯಕ್ಕೆ ಒಪ್ಪಿಸುತ್ತೇವೆ. ನಂತರ ಪೊಲೀಸ್ ವಶಕ್ಕೆ ಪಡೆದು ತನಿಖೆ ನಡೆಸುತ್ತೇವೆ' ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಅಂಜಲಿಯನ್ನು ಗಿರೀಶ ಪ್ರೀತಿಸುತ್ತಿದ್ದ. ಆದರೆ, ಆತನ ಮೊಬೈಲ್ ನಂಬರ್ ಆಕೆ ಬ್ಲಾಕ್ ಮಾಡಿದ್ದರ ಬಗ್ಗೆ ಮಾಹಿತಿ ಇದೆ. ಇಬ್ಬರ ಮೊಬೈಲ್ ನಂಬರ್‌ಗಳನ್ನು ಸಿಡಿಆರ್‌ನಲ್ಲಿ ಹಾಕಿ, ಕರೆಗಳ ಮಾಹಿತಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ತನಿಖೆ ನಡೆಸಲಾಗುವುದು' ಎಂದರು.

ಸಾಂತ್ವನ: ಸಿಐಟಿಯು ಹಾಗೂ ಹಮಾಲಿ ಕಾರ್ಮಿಕರ ಸಂಘದ ಮುಖಂಡರ ನಿಯೋಗ ಶುಕ್ರವಾರ ಮೃತ ಅಂಜಲಿ ಮನೆಗೆ ಭೇಟಿ ನೀಡಿ, ಅಜ್ಜಿ, ಇಬ್ಬರು ಸಹೋದರಿಯರು ಮತ್ತು ಸಂಬಂಧಿಕರಿಗೆ ಸಾಂತ್ವನ ಹೇಳಿದೆ. ಶ್ರೀರಾಮ ಸೇನೆ, ಜೈ ಭೀಮ ಸಂಘಟನೆ ಹಾಗೂ ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹಿಸಿದರು.

ಧನ ಸಹಾಯ: ಅಂಜಲಿ ಕುಟುಂಬಕ್ಕೆ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ₹1 ಲಕ್ಷ ಹಾಗೂ ಬಿಜೆಪಿ ಮುಖಂಡ ಅನೂಪ್ ಬಿಜವಾಡ ₹50 ಸಾವಿರ ಸಹಾಯ ನೀಡಿದ್ದಾರೆ.

ಕರ್ನಾಟಕ ಗೂಂಡಾ ರಾಜ್ಯ: ಶೆಟ್ಟರ್

ಹುಬ್ಬಳ್ಳಿ: 'ಮೊದಲಿದ್ದ ಉತ್ತರ ಪ್ರದೇಶ ಮಾದರಿಯಲ್ಲಿ ಕರ್ನಾಟಕ ಗೂಂಡಾ ರಾಜ್ಯವಾಗುತ್ತಿದ್ದು, ಸರ್ಕಾರ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ' ಎಂದು ಬಿಜೆಪಿ ನಾಯಕ ಜಗದೀಶ ಶೆಟ್ಟರ್ ಆರೋಪಿಸಿದರು.

ನಗರದ ವೀರಾಪುರ ಓಣಿಯಲ್ಲಿನ ಅಂಜಲಿ ಅಂಬಿಗೇರ ಮನೆಗೆ ಶುಕ್ರವಾರ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉತ್ತರ ಪ್ರದೇಶ ಮೊದಲು ಗೂಂಡಾ ರಾಜ್ಯವಾಗಿತ್ತು. ಯೋಗಿ ಆದಿತ್ಯನಾಥ ಅವರು ಮುಖ್ಯಮಂತ್ರಿಯಾದ ಬಳಿಕ ಅಲ್ಲಿ ಶಾಂತಿ ನೆಲೆಸಿದೆ. ಅವರು ಕಾನೂನು ಬದಲಾವಣೆ ಮಾಡದೆಯೇ, ಇದ್ದ ಕಾನೂನಿನಲ್ಲಿಯೇ ಎಲ್ಲವನ್ನೂ ನಿಭಾಯಿಸಿ ಶಾಂತಿ ನೆಲೆಸುವಂತೆ ಮಾಡಿದ್ದಾರೆ. ಅಂತಹ ದಿಟ್ಟ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಯಾಕೆ ತೆಗೆದುಕೊಳ್ಳುತ್ತಿಲ್ಲ' ಎಂದು ಪ್ರಶ್ನಿಸಿದರು.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಬಿಬಿಸಿ ಸಾಕ್ಷ್ಯಚಿತ್ರ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): 'ಇಂಡಿಯಾ: ದ ಮೋದಿ ಕ್ವಶ್ಚನ್' ಸಾಕ್ಷ್ಯಚಿತ್ರದ ಮೂಲಕ ಬಿಬಿಸಿ ಸುದ್ದಿ ವಾಹಿನಿಯು ಭಾರತದ ವರ್ಚಸ್ಸಿಗೆ ಧಕ್ಕೆ ತಂದಿದೆ. ಇದರಿಂದಾದ ಆರ್ಥಿಕ ನಷ್ಟ ಭರಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯಿಂದ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಅನೂಪ್ ಜೈರಾಮ್ ಭಂಭಾನಿ ಹಿಂದೆ ಸರಿದಿದ್ದಾರೆ.

ಸಾಕ್ಷ್ಯಚಿತ್ರದಿಂದ ದೇಶದ ವರ್ಚಸ್ಸಿಗೆ ಧಕ್ಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತೀಯ ನ್ಯಾಯಾಂಗ ವ್ಯವಸ್ಥೆ ಕುರಿತಂತೆ ಮಾನಹಾನಿಕರ ಮಾಹಿತಿಗಳನ್ನು ಈ ಮೂಲಕ ನೀಡ ಲಾಗಿದೆ. ಇದರಿಂದಾಗಿರುವ ನಷ್ಟವನ್ನು ಭರಿಸಲು ₹10,000 ಕೋಟಿ ತುಂಬಿಕೊಡಬೇಕು ಎಂದು ಅರ್ಜಿ ಸಲ್ಲಿಸಿದ್ದ ಗುಜರಾತ್ ಮೂಲದ ಎನ್‌ಜಿಒ 'ಜಸ್ಟಿಸ್ ಆನ್ ಟ್ರಯಲ್' ಕೋರಿತ್ತು. ಈಗ ಈ ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿದಿರುವ ನ್ಯಾಯಮೂರ್ತಿ ಅನೂಪ್ ಜೈರಾಮ್ ಭಂಭಾನಿ, ಇದಕ್ಕಾಗಿ ಯಾವುದೇ ನಿರ್ದಿಷ್ಟ ಕಾರಣವನ್ನು ಉಲ್ಲೇಖಿಸಿಲ್ಲ. ಪ್ರಭಾರ ಮುಖ್ಯ ನ್ಯಾಯಮೂರ್ತಿಯವರ ಆದೇಶವನ್ನು ಆಧರಿಸಿ, ಈ ಅರ್ಜಿಯನ್ನು ಮತ್ತೊಂದು ಪೀಠದದಲ್ಲಿ ಮೇ 22ರಂದು ವಿಚಾರಣೆಗೆ ಪಟ್ಟಿ ಮಾಡಬಹುದು ಎಂದು ಸಲಹೆ ಮಾಡಿದ್ದಾರೆ.

ಇನ್‌ಸ್ಪೆಕ್ಟರ್ ಹೆಸರಲ್ಲಿ ಸುಲಿಗೆ ಬೆಸ್ಕಾಂ ಎಇ ಬಂಧನ

ಒಂದನೇ ಪುಟದಿಂದ...

'ತನ್ನ ಕಾರಿನ ಮುಂಭಾಗದಲ್ಲಿ 'ಪೊಲೀಸ್ ಜಾಗೃತ ದಳ' ಎಂಬ ಫಲಕವನ್ನು ಆರೋಪಿ ನೇತು ಹಾಕಿದ್ದರು. ರಾಷ್ಟ್ರೀಯ ಹೆದ್ದಾರಿ ಹಾಗೂ ಇತರೆಡೆ ಸಂಚರಿಸುತ್ತಿದ್ದ ಆರೋಪಿ, ಹಲವರನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದರೆಂಬ ಆರೋಪವಿದೆ' ಎಂದು ತಿಳಿಸಿದರು.

'ಕೆಲ ಪ್ರಕರಣಗಳಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದ ಆರೋಪಿ, ಪ್ರಕರಣ ದಾಖಲಿಸುವುದಾಗಿ ಜನರನ್ನು ಬೆದರಿಸಿ ಹಣ ಸುಲಿಗೆ ಮಾಡಿದ್ದರು. ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ವತಿಯಿಂದ ಪರಿಹಾರ ಕೊಡಿಸುವುದಾಗಿ ಹೇಳಿ ಕೆಲ ರೈತರಿಗೂ ಆರೋಪಿ ವಂಚಿಸಿದ್ದರೆಂಬ ಮಾಹಿತಿ ಇದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ರಾಷ್ಟ್ರೀಯ ಹೆದ್ದಾರಿಯ ಟೋಲ್ ಗೇಟ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಇನ್‌ಸ್ಪೆಕ್ಟರ್ ಗುರುತಿನ ಚೀಟಿ ಬಳಸುತ್ತಿದ್ದೆ' ಎಂದು ಆರೋಪಿ ಹೇಳಿಕೆ ನೀಡಿದ್ದಾರೆ. ಆರೋಪಿ ಹಲವು ವರ್ಷಗಳಿಂದ ವಂಚನೆ ಮಾಡುತ್ತಿರುವ ಬಗ್ಗೆ ಪುರಾವೆಗಳು ಸಿಕ್ಕಿವೆ. ಹೀಗಾಗಿ, ಪ್ರಕರಣದ ತನಿಖೆಯನ್ನು ಸಿಸಿಬಿ ಅಧಿಕಾರಿಗಳು ಮುಂದುವರಿಸಿದ್ದಾರೆ' ಎಂದು ತಿಳಿಸಿದರು.

ಮತ ಪ್ರಮಾಣ ಮಾಹಿತಿ ತಕ್ಷಣ ಬಿಡುಗಡೆ ಕೋರಿ ಅರ್ಜಿ • ಮೇ 24ರಂದು ವಿಚಾರಣೆ

ಚುನಾವಣಾ ಆಯೋಗಕ್ಕೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ಪ್ರತಿ ಹಂತದ ಮತದಾನ ಮುಗಿದ 48 ಗಂಟೆಗಳ ನಂತರ ಮತ ಪ್ರಮಾಣದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯ ಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಸಂಜೀವ್ ಖನ್ನಾ ಅವರು ಇದ್ದ ನ್ಯಾಯಪೀಠ, ಒಂದು ವಾರದ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಆಯೋಗಕ್ಕೆ ಸೂಚಿಸಿದೆ.

ಮೇ 24ರಂದು ಅರ್ಜಿ ವಿಚಾರಣೆ ನಡೆಸುವುದಾಗಿಯೂ ಪೀಠ ಹೇಳಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಎಂಬ ಎನ್‌ಜಿಒ ಈ ಕುರಿತು ಅರ್ಜಿ ಸಲ್ಲಿಸಿದೆ.

ಅರ್ಜಿ ವಿಚಾರಣೆ ವೇಳೆ, 'ಮತ ಪ್ರಮಾಣಕ್ಕೆ ಸಂಬಂಧಿಸಿ ಫಾರ್ಮ್ 17ಸಿ ದತ್ತಾಂಶವನ್ನು ಬಹಿರಂಗಪಡಿಸುವುದಕ್ಕೆ ಇರುವ ನಿರ್ಬಂಧ ಏನು? ಚುನಾವಣಾ ಆಯೋಗ ಈ ಎಲ್ಲ ಮಾಹಿತಿಯನ್ನು ಬಹಿರಂಗಪಡಿಸಬೇಕು' ಎಂದು ಆಯೋಗದ ಪರ ಹಾಜರಿದ್ದ ಹಿರಿಯ ವಕೀಲರಾದ ಮಣಿಂದರ್ ಸಿಂಗ್ ಹಾಗೂ ಅಮಿತ್ ಶರ್ಮಾ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲರು, 'ಈ ವಿಚಾರದಲ್ಲಿ ಯಾವುದೇ ತೊಂದರೆ ಇಲ್ಲ. ಫಾರ್ಮ್ 17ಸಿ ಕ್ರೋಡೀಕರಣ ಸೇರಿದಂತೆ ಇಡೀ ಪ್ರಕ್ರಿಯೆ ಪೂರ್ಣಗೊಳ್ಳಲು ಸಮಯ ಬೇಕಾಗುತ್ತದೆ' ಎಂದು ತಿಳಿಸಿದರು.

ಎಡಿಆರ್ ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್,'ಎಲ್ಲ ಹಂತಗಳಲ್ಲಿ ಮತ ಪ್ರಮಾಣದಲ್ಲಿ ದಿಢೀರ್ ಹೆಚ್ಚಳ ಕಂಡುಬಂದಿದೆ' ಎಂದು ಪೀಠಕ್ಕೆ ತಿಳಿಸಿದರು.

'ಈ ಅರ್ಜಿಯನ್ನು 2019ರಲ್ಲಿ ಸಲ್ಲಿಸಲಾಗಿದ್ದು, ಆಯೋಗಕ್ಕೆ ಇದಕ್ಕೆ ವಿಸ್ತೃತ ಪ್ರತಿಕ್ರಿಯೆಯನ್ನೂ ನೀಡಿದೆ. ಆದರೆ, ಅರ್ಜಿದಾರರು ಮಾತ್ರ ಯಾವುದೇ ಪ್ರತ್ಯುತ್ತರ ನೀಡಿಲ್ಲ' ಎಂದು ಆಯೋಗದ ಪರ ವಕೀಲರು ಹೇಳಿದರು.

'ಮತ ಪ್ರಮಾಣ ಕುರಿತ ಮಾಹಿತಿ ಸಂಗ್ರಹಕ್ಕೆ ಸಮಯ ತಗಲುತ್ತದೆ. ಪ್ರತಿ ಮತಗಟ್ಟೆಯ ಚುನಾವಣಾ ಏಜೆಂಟ್‌ಗೆ ಈ ಮಾಹಿತಿಯ ಪ್ರತಿಯನ್ನು ಒದಗಿಸಲಾಗುತ್ತದೆ. ಒಂದು ವೇಳೆ, ಮತ ಪ್ರಮಾಣದ ಬಗ್ಗೆ ಯಾರಿಗಾದರೂ ತಕರಾರು ಇದ್ದಲ್ಲಿ ಅದು ಅಭ್ಯರ್ಥಿಗೆ ಇರುತ್ತದೆ. ಮತ ಪ್ರಮಾಣದಲ್ಲಿ ವ್ಯತ್ಯಾಸವಿದೆ ಎಂಬುದು ಕಂಡುಬಂದಲ್ಲಿ ಅಭ್ಯರ್ಥಿಗಳೇ ಚುನಾವಣಾ ತಕರಾರು ಅರ್ಜಿ ಸಲ್ಲಿಸುತ್ತಾರೆ' ಎಂದೂ ಹೇಳಿದರು.

'ಮತದಾನ ನಡೆಯುತ್ತಿರುವ ಈ ಹಂತದಲ್ಲಿ ಈ ರೀತಿಯ ಅರ್ಜಿಗಳನ್ನು ಸಲ್ಲಿಸುವುದರಿಂದ ಮೊದಲ ಬಾರಿಗೆ ಮತ ಹಾಕುವವರು ಸೇರಿದಂತೆ ದೊಡ್ಡ ಸಂಖ್ಯೆಯ ಮತದಾರರ ಉತ್ಸಾಹಕ್ಕೆ ತಣ್ಣೀರೆರಚಿದಂತಾಗುತ್ತದೆ' ಎಂದು ಆಯೋಗದ ಪರ ವಕೀಲರು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಈ ಅರ್ಜಿ ಹಲವು ವರ್ಷಗಳಿಂದ ನ್ಯಾಯಾಲಯದಲ್ಲಿ ಬಾಕಿ ಇರುವ ಕಾರಣ, ಪ್ರತಿಕ್ರಿಯೆ ಸಲ್ಲಿಸಲು ಚುನಾವಣಾ ಆಯೋಗಕ್ಕೆ ಅವಕಾಶ ನೀಡಬೇಕಾಗುತ್ತದೆ. ಹೀಗಾಗಿಯೇ ಸಮಯಾವಕಾಶ ನೀಡಲಾಗಿದೆ' ಎಂದು ಹೇಳಿದೆ.

'ಸಂವಿಧಾನ ಪೀಠದ ತೀರ್ಪುಗಳಿಗೆ ಕಡಿಮೆಬಲದ ಪೀಠಗಳು ಬದ್ಧ'

ನವದೆಹಲಿ (ಪಿಟಿಐ): 'ಕಡಿಮೆ ಸದಸ್ಯ ಬಲದ ನ್ಯಾಯಪೀಠಗಳು ಸಂವಿಧಾನ ಪೀಠದ ತೀರ್ಪುಗಳಿಗೆ ಬದ್ಧವಾಗಿರಬೇಕು' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಹರಿಯಾಣದ ಗ್ರಾಮಗಳಲ್ಲಿ ಹಾಡಿಗಳ ನಿವಾಸಿಗಳು ಒಟ್ಟಾಗಿ ಬಳಸುತ್ತಿರುವ ಭೂಮಿಗೆ ಸಂಬಂಧಿಸಿದಂತೆ ಈ ಹಿಂದೆ 2022ರ ಏಪ್ರಿಲ್‌ನಲ್ಲಿ ನೀಡಿದ್ದ ತೀರ್ಪು ಉಲ್ಲೇಖಿಸಿ ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿದೆ.

ಹರಿಯಾಣದ ಕಾನೂನು ಪ್ರಕಾರ, ಗರಿಷ್ಠ ಮಿತಿಯೊಳಗಿನ ಪ್ರಮಾಣದಲ್ಲಿ ಜಮೀನು ಹೊಂದಿದ್ದವರಿಂದ ವಶಕ್ಕೆ ಪಡೆದ ಜಮೀನಿನ ಮೇಲೆ ಗ್ರಾಮ ಪಂಚಾಯಿತಿಯು ಮಾಲೀಕತ್ವದ ಹಕ್ಕು ಸಾಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ 2022ರ ಏಪ್ರಿಲ್ 7ರಂದು ನೀಡಿದ್ದ ಆದೇಶದಲ್ಲಿ ಹೇಳಿತ್ತು.

ವಶಕ್ಕೆ ಪಡೆದ ಭೂಮಿಯನ್ನು ಪಂಚಾಯಿತಿಗಳು ನಿರ್ವಹಣೆ ಹಾಗೂ ನಿಯಂತ್ರಣ ಮಾಡಬಹುದು. ಆದರೆ, ಅವುಗಳ ಮೇಲೆ ಹಕ್ಕು ಪ್ರತಿಪಾದಿಸಲಾಗದು ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿ ತಿಳಿಸಿತ್ತು.

ಹರಿಯಾಣದ ಗ್ರಾಮಗಳ ಸಾಮಾನ್ಯ ಭೂಮಿ (ನಿಯಂತ್ರಣ) ಕಾಯ್ದೆ 1961ರ ಸೆಕ್ಷನ್ 2 (ಜಿ)ಯ ಉಪ ಸೆಕ್ಷನ್ 6ರ ಸಿಂಧುತ್ವ ಕುರಿತು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಪೂರ್ಣಪೀಠದ ತೀರ್ಪು ಪ್ರಶ್ನಿಸಿ, ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳನನ್ನು ಇತ್ಯರ್ಥಪಡಿಸಿದ ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿದೆ.

ಸಂವಿಧಾನ ಪೀಠದ ತೀರ್ಪುಗಳಿಗೆ ಕೆಳಹಂತದ ಪೀಠಗಳು ಬದ್ಧವಾಗಿರುತ್ತವೆ ಎಂಬುದನ್ನು ಉಲ್ಲೇಖಿಸಲು ಯಾವುದೇ ಕಾಯ್ದೆಯ ಅಗತ್ಯವಿಲ್ಲ. ಭಗತ್ ರಾಮ್ ಪ್ರಕರಣವನ್ನು (1966ರ ತೀರ್ಪು) ಐವರು ನ್ಯಾಯಮೂರ್ತಿಗಳಿದ್ದ ಪೀಠ ಇತ್ಯರ್ಥಪಡಿಸಿದೆ. ಇಬ್ಬರು ನ್ಯಾಯ ಮೂರ್ತಿಗಳಿರುವ ಪೀಠವು ಸಂವಿಧಾನ ಪೀಠದ ತೀರ್ಪನ್ನು ತಳ್ಳಿಹಾಕಲಾಗದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು.

ಏಪ್ರಿಲ್ 2022ರಲ್ಲಿ ನೀಡಿದ್ದ ತೀರ್ಪಿನ ಮರುಪರಿಶೀಲನೆ ಕೋರಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸಿತು.

ಸೊರೇನ್ ಅರ್ಜಿ; ಇ.ಡಿ ಪ್ರತಿಕ್ರಿಯೆ ಕೋರಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ಮಧ್ಯಂತರ ಜಾಮೀನು ನೀಡಬೇಕು ಎಂದು ಕೋರಿ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಮೇ 20ರೊಳಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಶುಕ್ರವಾರ ನಿರ್ದೇಶಿಸಿತು.

ಈ ಸಂಬಂಧ ಸಂಕ್ಷಿಪ್ತ ವಿವರಣೆ ನೀಡಬೇಕು ಎಂದು ಸೂಚಿಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು, ಅರ್ಜಿಯ ಮುಂದಿನ ವಿಚಾರಣೆಯನ್ನು ಮೇ 21ಕ್ಕೆ ನಿಗದಿಪಡಿಸಿತು.

ಸೊರೇನ್ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಜಾಮೀನು ದೊರೆತಲ್ಲಿ ಸೊರೇನ್ ಅವರು ಮತ್ತೆ ಜೂನ್ 2ರಂದು ಶರಣಾಗಲಿದ್ದಾರೆ ಎಂದು ಪೀಠಕ್ಕೆ ತಿಳಿಸಿದರು. 'ಈ ಪ್ರಕರಣದಲ್ಲಿ ನನ್ನ ವಿರುದ್ಧ ಯಾವುದೇ ಸಾಕ್ಷ್ಯಗಳು ಇಲ್ಲ. ಈಗ ಜಾಮೀನು ಸಿಗದಿದ್ದಲ್ಲಿ ಚುನಾವಣೆಯೇ ಮುಗಿದುಹೋಗಲಿದೆ' ಎಂದು ಸೊರೇನ್ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ಇ.ಡಿ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, 'ಸೊರೇನ್ ಅವರನ್ನು ಬಹಳ ಹಿಂದೆಯೇ ಬಂಧಿಸಲಾಗಿದೆ. ಸಾಮಾನ್ಯ ಜಾಮೀನು ಅರ್ಜಿ ತಿರಸ್ಕೃತಗೊಂಡಿದ್ದನ್ನೂ ಅವರು ಪ್ರಶ್ನಿಸಿಲ್ಲ' ಎಂದು ತಿಳಿಸಿದರು.

ವ್ಯಕ್ತಿ ಸ್ವಾತಂತ್ರ್ಯ; ಪ್ರತಿದಿನವೂ ಮುಖ್ಯ

'ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಪ್ರತಿಯೊಂದು ದಿನವೂ ಮಹತ್ವದ್ದಾಗಿದೆ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿತು.

ಪ್ರಸ್ತುತ ರದ್ದಾಗಿರುವ ದೆಹಲಿ ಅಬಕಾರಿ ನೀತಿಯ ಭ್ರಷ್ಟಾಚಾರ ಪ್ರಕರಣಕ್ಕೆ ಕುರಿತು ಉದ್ಯಮಿಯೊಬ್ಬರು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಇತ್ಯರ್ಥಪಡಿಸಬೇಕು ಎಂದು ದೆಹಲಿ ಹೈಕೋರ್ಟ್‌ಗೆ ಸೂಚಿಸಿತು.

'ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ 40 ಬಾರಿ ವಿಚಾರಣೆಗೆ ಬಂದಿದೆ. ಈಗ, ಜುಲೈ 8ಕ್ಕೆ ವಿಚಾರಣೆ ಮುಂದೂಡಲಾಗಿದೆ' ಎಂದು ಉದ್ಯಮಿ ಅಮನ್‌ದೀಪ್ ಸಿಂಗ್ ಧಾಲ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಕಪಿಲ್ ಸಿಬಲ್ ಅವರು, ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಸಂದೀಪ್ ಮೆಹ್ತಾ ಅವರಿದ್ದ ಪೀಠದ ಗಮನಕ್ಕೆ ತಂದರು.

'40 ಬಾರಿ ವಿಚಾರಣೆಯ ನಂತರವೂ ಜಾಮೀನು ಕುರಿತು ತೀರ್ಮಾನ ಪ್ರಕಟಿಸಿಲ್ಲ' ಎಂದು ಸಿಬಲ್ ತಿಳಿಸಿದರು. ಇದಕ್ಕೆ, ಕಳೆದ ಜುಲೈನಲ್ಲೇ ಜಾಮೀನು ಅರ್ಜಿ ಸಲ್ಲಿಸಲಾಗಿದೆ ಎಂಬುದನ್ನು ಗಮನಿಸಲಾಗಿದೆ ಎಂದು ಪೀಠ ಪ್ರತಿಕ್ರಿಯಿಸಿತು. 'ಈ ಹಂತದಲ್ಲಿ, ಜನರ ಸ್ವಾತಂತ್ರ್ಯದ ವಿಚಾರದಲ್ಲಿ ಪ್ರತಿ ದಿನವೂ ಮಹತ್ವದ್ದಾಗಿದೆ. ಜಾಮೀನು ಅರ್ಜಿ 11 ತಿಂಗಳಿನಿಂದ ಬಾಕಿ ಉಳಿದಿದೆ ಎಂಬುದನ್ನು ಗಮನಿಸಿದಾಗ, ಅರ್ಜಿದಾರರ ಸ್ವಾತಂತ್ರ್ಯ ಕಸಿಯಲಾಗಿದೆ ಎಂಬುದು ತಿಳಿಯುತ್ತದೆ' ಎಂದು ಪೀಠ ಹೇಳಿತು.

ಬೇಸಿಗೆ ರಜೆ ಅವಧಿ ಆರಂಭವಾಗುವುದರ ಮೊದಲು ಜಾಮೀನು ಅರ್ಜಿ ಕುರಿತು ತೀರ್ಮಾನ ಪ್ರಕಟಿಸಲು ಹೈಕೋರ್ಟ್‌ಗೆ ನಾವು ಮನವಿ ಮಾಡುತ್ತೇವೆ ಎಂದು ಪೀಠ ಹೇಳಿತು. ಹೈಕೋರ್ಟ್‌ನ ಬೇಸಿಗೆ ರಜೆ ಅವಧಿಯು ಜೂನ್ 3ರಂದು ಆರಂಭವಾಗಲಿದೆ. ಮೇ 31 ಸಾಮಾನ್ಯ ಕೆಲಸದ ಕೊನೆಯ ದಿನವಾಗಿದೆ. ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಸಿಬಿಐ ಮತ್ತು ಇ.ಡಿ ದಾಖಲಿಸಿರುವ ಪ್ರತ್ಯೇಕ ಪ್ರಕರಣಗಳಲ್ಲಿ ಧಾಲ್ ಆರೋಪಿಯಾಗಿದ್ದಾರೆ. ಸಿಬಿಐ ದಾಖಲಿಸಿದ್ದ ಪ್ರಕರಣದಲ್ಲಿ ಕೆಳಹಂತದ ಕೋರ್ಟ್ ಈ ಹಿಂದೆ ಜಾಮೀನು ನಿರಾಕರಿಸಿತ್ತು.

ರಾಜ್ಯದ ಹಲವೆಡೆ ಮುಂದುವರಿದ ಮಳೆ ಅಬ್ಬರ

ರಾಯಚೂರು ತಾಲ್ಲೂಕಿನ ಯದ್ಲಾಪುರದಲ್ಲಿ ಮಳೆಯ ಆರ್ಭಟಕ್ಕೆ ಕೊಚ್ಚಿಹೋದ ರಸ್ತೆ

ಮೈಸೂರು/ಕೊಪ್ಪಳ: ರಾಜ್ಯದ ಹಲವು ಭಾಗಗಳಲ್ಲಿ ಶುಕ್ರವಾರ ಕೂಡ ಉತ್ತಮ ಮಳೆಬಿದ್ದಿರುವ ವರದಿಯಾಗಿದೆ. ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಮಳೆಯಾಗಿದೆ.

ಮೈಸೂರು ಭಾಗದ ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಹಾಸನದಲ್ಲಿ ಶುಕ್ರವಾರ ಧಾರಾಕಾರ ಮಳೆ ಸುರಿದಿದ್ದು, ಕೃಷಿ ಚಟುವಟಿಕೆಗಳು ಬಿರುಸುಗೊಂಡಿವೆ.

ಕೊಪ್ಪಳದ ಕನಕಗಿರಿ ತಾಲ್ಲೂಕಿನ ನವಲಿ ಹೋಬಳಿ ವ್ಯಾಪ್ತಿಯ ಮಳೆ ಮಾಪನ ಕೇಂದ್ರದಲ್ಲಿ ಒಂದೇ ದಿನದಲ್ಲಿ 8.94 ಸೆಂ.ಮೀ. ಮಳೆ ದಾಖಲಾಗಿದೆ.

ರಾಯಚೂರು ಜಿಲ್ಲೆಯ ಗಿಲ್ಲೆಸುಗೂರು (8.55 ಸೆಂ.ಮೀ), ರಾಯಚೂರು ನಗರ (5.9 ಸೆಂ.ಮೀ), ದೇವಸುಗೂರು (6 ಸೆಂ.ಮೀ), ಚಂದ್ರಬಂಡಾ (8.12 ಸೆಂ.ಮೀ), ಜೀಗರಕಲ್ (7.7 ಸೆಂ.ಮೀ), ಯರಮರಸ್ (7.72 ಸೆಂ.ಮೀ), ಸಿರವಾರ (6.46 ಸೆಂ.ಮೀ) ಹಾಗೂ ಮಲ್ಲಟದಲ್ಲಿ (7.74 ಸೆಂ.ಮೀ) ಮಳೆ ದಾಖಲಾಗಿದೆ. ಯಾದಗಿರಿ ನಗರ, ಗುರುಮಠಕಲ್ ತಾಲ್ಲೂಕಿನಲ್ಲೂ ಮಳೆಯಾಗಿದೆ.

ದಕ್ಷಿಣ ಕನ್ನಡದ ಪುತ್ತೂರು, ಕೊಡಗಿನ ಭಾಗಮಂಡಲ, ಚಿಕ್ಕಮಗಳೂರಿನ ಕಮ್ಮರಡಿ ಹಾಗೂ ಹಾಸನದ ಕೊಣನೂರಿನಲ್ಲಿ ತಲಾ 7 ಸೆಂ.ಮೀ. ಮಳೆಯಾಗಿದೆ.

ನಾಪೋಕ್ಲು ಸಮೀಪದ ಬೇತು ಗ್ರಾಮದಲ್ಲಿ ಕಾಳುಮೆಣಸಿನ ಬಳ್ಳಿ ಹಬ್ಬಿದ್ದ ಮರವೊಂದು ಶುಕ್ರವಾರ ರಸ್ತೆಗೆ ಅಡ್ಡಲಾಗಿ ಬಿದ್ದಿತ್ತು

ಕೊಪ್ಪಳ ಜಿಲ್ಲೆಯ ಕೊಪ್ಪಳ, ಹನುಮಸಾಗರ, ಮುನಿರಾಬಾದ್, ಕಾರಟಗಿ, ಕನಕಗಿರಿ ಭಾಗದಲ್ಲಿ ಗುರುವಾರ ಮಧ್ಯರಾತ್ರಿ ಹಾಗೂ ಶುಕ್ರವಾರ ನಸುಕಿನಲ್ಲಿ ಉತ್ತಮ ಮಳೆಯಾಗಿದೆ. ಕಾರಟಗಿಯಲ್ಲಿ ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಹಲವು ಕಡೆ ಅಂಗಡಿಯ ಶೆಡ್‌ಗಳು ಗಾಳಿಗೆ ಹಾರಿ ಹೋಗಿವೆ. ರಾಯಚೂರು ತಾಲ್ಲೂಕಿನ ಬಿ.ಯದ್ಲಾಪುರ ಗ್ರಾಮದಲ್ಲಿ ಮಳೆಯ ಆರ್ಭಟಕ್ಕೆ ರಸ್ತೆ ಕೊಚ್ಚಿಹೋಗಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಸುತ್ತಮುತ್ತ 2 ತಾಸಿಗೂ ಹೆಚ್ಚು ಕಾಲ ಭರ್ಜರಿ ಮಳೆಯಾಯಿತು. ಸಂಜೆ 4.45ರ ಹೊತ್ತಿಗೆ ಶುರುವಾದ ಮಳೆಯ ಅಬ್ಬರ ರಾತ್ರಿ ಏಳು ಗಂಟೆಯವರೆಗೂ ಮುಂದುವರಿಯಿತು. ಸಣ್ಣಪುಟ್ಟ ಹಳ್ಳ-ಕೊಳ್ಳಗಳು ತುಂಬಿ ಕೋಡಿ ಬಿದ್ದಿವೆ. ಕೋಡಗಾಪುರ, ಸೋಮಹಳ್ಳಿ, ಹೊರೆಯಾಲ, ಕೋಟೆಕೆರೆ, ಅರೆಪುರ, ಕಮರಹಳ್ಳಿಯಲ್ಲೂ ಮಳೆಯಾಗಿದೆ.

ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತ ಸಾಧಾರಣ ಮಳೆಯಾಗಿದೆ. ಬಿಆರ್‌ಟಿ ಅರಣ್ಯ ವ್ಯಾಪ್ತಿಯಲ್ಲೂ ಮಳೆಯಾಯಿತು.

ಮೈಸೂರು ಹೊರವಲಯದ ಲಿಂಗಾಂಬುಧಿ ಪಾಳ್ಯ, ವಿಜಯನಗರ, ಹುಣಸೂರು ರಸ್ತೆ, ಕೊಡಗು ಜಿಲ್ಲೆಯ ನಾಪೋಕ್ಲು ಹಾಗೂ ವಿರಾಜಪೇಟೆ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡಿನಲ್ಲಿ ಜೋರು ಮಳೆ ಸುರಿದಿದ್ದು, ಮರ, ವಿದ್ಯುತ್ ಕಂಬ, ಮನೆ ಕಾಂಪೌಂಡ್ ಉರುಳಿ ಬಿದ್ದಿವೆ.

ಶಿವಮೊಗ್ಗ ವರದಿ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶುಕ್ರವಾರ ಹದ ಮಳೆಯಾಗಿದೆ. ಗುರುವಾರ ರಾತ್ರಿಯಿಡೀ ಬಿದ್ದಿದ್ದ ವರ್ಷಧಾರೆ ಶುಕ್ರವಾರ ಸಂಜೆ ವೇಳೆಗೆ ಮತ್ತೆ ಸುರಿಯಿತು. ತೀರ್ಥಹಳ್ಳಿ, ಸಾಗರದಲ್ಲಿ ಗುರುವಾರ ರಾತ್ರಿ ಉತ್ತಮ ಮಳೆಯಾಗಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಿರುಗಾಳಿ ಮಳೆಗೆ 70ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ಅಲ್ಲಲ್ಲಿ ಮರಗಳು ಬಿದ್ದಿವೆ. ಕುಂಸಿ, ಶಿಕಾರಿಪುರ, ಹೊಸನಗರದಲ್ಲಿ ಸಾಧಾರಣ ಮಳೆಯಾಗಿದೆ.

ದಾವಣಗೆರೆ ವರದಿ: ಜಿಲ್ಲೆಯ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳಲ್ಲಿ ಗುರುವಾರ ಸರಾಸರಿ 20.3 ಮಿ.ಮೀ ಹಾಗೂ ಹರಿಹರ ತಾಲ್ಲೂಕಿನಲ್ಲಿ ಸರಾಸರಿ 10.65 ಮಿ.ಮೀ ಮಳೆಯಾಗಿದೆ.

ಚಿತ್ರದುರ್ಗ ವರದಿ: ಜಿಲ್ಲೆಯ ಹೊಸದುರ್ಗ ತಾಲ್ಲೂಕು, ಹಿರಿಯೂರು ತಾಲ್ಲೂಕಿನ ಧರ್ಮಪುರ ಮತ್ತು ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರು ಸುತ್ತಮುತ್ತ ಶುಕ್ರವಾರ ಸಂಜೆ ಉತ್ತಮ ಮಳೆ ಸುರಿದಿದೆ.

ಕೋಲಾರ ವರದಿ: ಜಿಲ್ಲೆಯ ವಿವಿಧೆಡೆ ಮಳೆ ಸುರಿಯಿತು. ಮುಳಬಾಗಿಲು ತಾಲ್ಲೂಕಿನ ಮೋತ ಕಪಲ್ಲಿಯಲ್ಲಿ 7.1 ಸೆಂ.ಮೀ.ಮಳೆ ಆಗಿದೆ. ಗುಮ್ಮಕಲ್ಲಿನಲ್ಲಿ 6.4 ಸೆಂ.ಮೀ., ಅಂಗೊಂಡಹಳ್ಳಿಯಲ್ಲಿ 5.9 ಸೆಂ.ಮೀ., ಕೆಜಿಎಫ್‌ನ ಮಾರಿಕುಪ್ಪಂನಲ್ಲಿ 4 ಸೆಂ.ಮೀ. ಮಳೆ ಆಗಿದೆ.

ಬಾಲಕಿ ಸೇರಿ ಇಬ್ಬರ ಸಾವು

ಕೊಪ್ಪಳ/ಮುಧೋಳ (ಬಾಗಲಕೋಟೆ ಜಿಲ್ಲೆ): ಮಳೆ ಸಂಬಂಧಿ ಅವಘಡ ಗಳಿಂದ ಬಾಲಕಿ, ಮಹಿಳೆ ಶುಕ್ರವಾರ ಮೃತಪಟ್ಟ ಪ್ರತ್ಯೇಕ ಘಟನೆಗಳು ವರದಿಯಾಗಿವೆ.

ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಪಟ್ಟಣದ ಐದನೇ ವಾರ್ಡ್‌ನಲ್ಲಿ ಸಾರ್ವಜನಿಕ ಶೌಚಾಲಯದ ಗೋಡೆ ಕುಸಿದು ಶುಕ್ರವಾರ ರಾತ್ರಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಇನ್ನೊಬ್ಬ ಮಹಿಳೆ ಸ್ಥಿತಿ ಗಂಭೀರವಾಗಿದೆ. ಒಂದು ವಾರದಿಂದ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಮಳೆಯಾಗಿದ್ದರಿಂದ ಗೋಡೆ ಸಾಕಷ್ಟು ನೆಂದಿತ್ತು. ಇದರಿಂದ ಅವಘಡ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ.

ಮುಧೋಳ ತಾಲ್ಲೂಕಿನ ಮಲ್ಲಾಪುರ ಪಿ.ಎಲ್.ಗ್ರಾಮದ ವಿದ್ಯಾರ್ಥಿನಿ ಭಾಗ್ಯಶ್ರೀ ಮಲ್ಲಪ್ಪ ಪಡೆಪ್ಪನವರ (17) ಆಡುಗಳಿಗೆ ಮೇವು ತರಲು ತೋಟಕ್ಕೆ ಹೋಗಿದ್ದಾಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮೂರು ದಿನ ಊಟಿಗೆ ಭೇಟಿ ನೀಡದಂತೆ ಮನವಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ರಾಜಧಾನಿ ಚೆನ್ನೈ ಸೇರಿದಂತೆ ಹಲವೆಡೆ ಮಳೆಯಾಗುತ್ತಿದೆ. ವ್ಯಾಪಕ ಮಳೆಯ ಹಿನ್ನೆಲೆಯಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಸ್ವಲ್ಪಮಟ್ಟಿಗೆ ಇಳಿಕೆಯಾಗಿದೆ.

ಕೋರ್ಟ್‌ಅಲ್ಲಂ ನಗರದ ಜಲಪಾತವೊಂದರಲ್ಲಿ ಸ್ನಾನಕ್ಕೆ ಇಳಿದಿದ್ದ 16 ವರ್ಷದ ಬಾಲಕನೊಬ್ಬ ನೀರಿನ ಸೆಳೆತಕ್ಕೆ ಸಿಕ್ಕು ಕೊಚ್ಚಿಕೊಂಡು ಹೋಗಿದ್ದು, ಆತನ ಪತ್ತೆಗೆ ಶೋಧಕಾರ್ಯ ನಡೆದಿದೆ.

ಹವಾಮಾನ ಇಲಾಖೆಯು ನೀಲಗಿರಿ ಜಿಲ್ಲೆಗೆ 'ಯೆಲ್ಲೋ ಅಲರ್ಟ್' ಎಚ್ಚರಿಕೆಯನ್ನು ನೀಡಿದೆ. ಮೂರು ದಿನ ಭಾರಿ ಮಳೆಯಾಗುವ ಸಾಧ್ಯತೆಗಳಿವೆ.

'ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಪ್ರವಾಸಿ ತಾಣ ಊಟಿಗೆ ಮೇ 18ರಿಂದ ಮೂರು ದಿನ ಪ್ರವಾಸಿಗರು ಭೇಟಿ ನೀಡಬಾರದು' ಎಂದು ಜಿಲ್ಲಾಧಿಕಾರಿ ಎಂ.ಅರುಣಾ ಅವರು ಪ್ರವಾಸಿಗರಿಗೆ ಮನವಿ ಮಾಡಿದ್ದಾರೆ.

ಹಲವು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಜನರೂ ಜಾಗ್ರತರಾಗಿರಬೇಕು. ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಪ್ರವಾಸಿಗರು ಬರದಿರುವುದು ಒಳಿತು ಎಂದು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ತಿಳಿಸಿದರು.

ಊಟಿಯಲ್ಲಿ ಏಪ್ರಿಲ್ ಕೊನೆಯ ವಾರದಲ್ಲಿ ಗರಿಷ್ಠ ಅಂದರೆ 29 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ನಾಲ್ಕು ತಿಂಗಳ ಹಿಂದೆ ಅಂದರೆ ಜನವರಿಯಲ್ಲಿ ಬಹುತೇಕ ಶೂನ್ಯ ಉಷ್ಣಾಂಶ ದಾಖಲಾಗಿತ್ತು. ತಾಪಮಾನದಲ್ಲಿ ಗಣನೀಯ ಬದಲಾವಣೆ ಕಂಡುಬರುತ್ತಿದೆ.

ಮಳೆ: ಕೇರಳದ ಎರಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ತಿರುವನಂತಪುರ (ಪಿಟಿಐ): ಕೇರಳದ ಕೆಲವೆಡೆ ಮಳೆ ಮುಂದುವರಿದಿದ್ದು, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಎರಡು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಿದೆ.

ಪಾಲಕ್ಕಾಡ್ ಮತ್ತು ಮಲಪ್ಪುರ ಜಿಲ್ಲೆಗಳಲ್ಲಿ ಶನಿವಾರ, ಪತ್ತನಂತಿಟ್ಟ, ಆಲಪ್ಪುಳ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ಭಾನುವಾರ ಹಾಗೂ ಇತರ 7 ಜಿಲ್ಲೆಗಳಲ್ಲಿ ಸೋಮವಾರ ಮತ್ತು ಮಂಗಳವಾರ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಮಲಪ್ಪುರ ಮತ್ತು ವಯನಾಡ್ ಜಿಲ್ಲೆಗಳಲ್ಲಿ ಶುಕ್ರವಾರ 'ಆರೆಂಜ್ ಅಲರ್ಟ್' ಮತ್ತು ಇತರ 8 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆಯಾಗಿತ್ತು. 'ಮೇ 18ರಿಂದ 20ರವರೆಗೆ ರಾಜ್ಯದಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ' ಎಂದು ಐಎಂಡಿಯು ಗುರುವಾರ ತಿಳಿಸಿತ್ತು.

ಕೇರಳದ ಕೆಲವೆಡೆ ಮೇ 20ರವರೆಗೆ ಗುಡುಗು ಮತ್ತು ಬಿರುಗಾಳಿ ಸಹಿತ ಮಳೆಯಾಗಲಿದ್ದು, ಮೀನುಗಾರರು ಮೇ 18ರಿಂದ 20ರವರೆಗೆ ಮೀನುಗಾರಿಕೆ ನಡೆಸದಂತೆ ಐಎಂಡಿ ಸೂಚನೆ ನೀಡಿದೆ.

ಕೃಪಾಂಕಕ್ಕೆ ಸಿ.ಎಂ ಸಿಟ್ಟು

ಒಂದನೇ ಪುಟದಿಂದ...

'ಕೋವಿಡ್–19 ಅವಧಿಯಲ್ಲಿ ಕೃಪಾಂಕ ನೀಡಿರುವುದನ್ನು ಒಪ್ಪಿಕೊಳ್ಳಬಹುದು. ಆದರೆ, ಈಗ 20 ಅಂಕಗಳನ್ನು ಕೃಪಾಂಕ ರೂಪದಲ್ಲಿ ನೀಡುವ ಅಗತ್ಯ ಏನಿತ್ತು' ಎಂದು ಮುಖ್ಯಮಂತ್ರಿಯವರು ಸಭೆಯಲ್ಲಿದ್ದ ಅಧಿಕಾರಿಗಳನ್ನು ಪ್ರಶ್ನಿಸಿದರು ಎಂಬ ಮಾಹಿತಿ ಲಭ್ಯವಾಗಿದೆ.

ಮೂಲಗಳ ಪ್ರಕಾರ, 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ವೆಬ್ ಕಾಸ್ಟಿಂಗ್‌ನಂತಹ ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಅವೆಲ್ಲವನ್ನೂ ಮಾಡಿದ ಬಳಿಕ ಕೃಪಾಂಕ ನೀಡಿ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿರುವುದು ಒಂದು ರೀತಿಯಲ್ಲಿ ಸಾಮೂಹಿಕ ನಕಲಿನಂತೆಯೇ ಅಲ್ಲವೆ? ಈ ರೀತಿಯ ಧೋರಣೆಯನ್ನು ಒಪ್ಪಿಕೊಳ್ಳಲಾಗದು' ಎಂಬುದಾಗಿ ಕಟುವಾಗಿ ಹೇಳಿದ್ದಾರೆ.

'10, 15 ಅಂಕ ಗಳಿಸಲಾಗದ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿ ತೇರ್ಗಡೆ ಮಾಡುವುದಾದರೆ ಮಂಡಳಿ ಪರೀಕ್ಷೆ ನಡೆಸುವ ಅಗತ್ಯವಾದರೂ ಏನಿದೆ? ಇಲಾಖೆಯ ಇಂತಹ ನಿರ್ಧಾರದಿಂದ ವರ್ಷವಿಡೀ ಶ್ರಮಪಟ್ಟು ಓದಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಮತ್ತು ತೃತೀಯ ಸ್ಥಾನ ಗಳಿಸಿರುವುದನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, 'ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಸುಧಾರಣೆಗೆ ಅವಕಾಶವಿದೆ. ಆ ಕೆಲಸ ಆಗಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಕೃಪಾಂಕ ನೀಡುವುದನ್ನು ಸ್ಥಗಿತಗೊಳಿಸುವಂತೆಯೂ ನಿರ್ದೇಶನ ನೀಡಿದರು ಎಂಬ ಮಾಹಿತಿ ಲಭ್ಯವಾಗಿದೆ.

'ಫಲಿತಾಂಶದಲ್ಲಿ ಸುಧಾರಣೆಗೆ ಪೂರಕವಾಗಿ ಶಾಲೆಗಳಲ್ಲಿ ಬೋಧನೆಯ ಗುಣಮಟ್ಟ ಹೆಚ್ಚಿಸುವ ಗುರಿಯನ್ನು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು' ಎಂದು ಮೂಲಗಳು ಹೇಳಿವೆ.

ಜಲಾಶಯಗಳಲ್ಲಿ ನೀರು ಸಂಗ್ರಹ: ಶೇ 25ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಜಲಾಶಯಗಳಲ್ಲಿ ಅವುಗಳ ಗರಿಷ್ಠ ಸಂಗ್ರಹ ಸಾಮರ್ಥ್ಯದ ಶೇ 25ರಷ್ಟು ಮಾತ್ರ ನೀರು ಲಭ್ಯ ಇದೆ ಎಂದು ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ವಾರದ ಬುಲೆಟಿನ್ ತಿಳಿಸಿದೆ.

ಪ್ರಮುಖ 150 ಜಲಾಶಯಗಳ ಗರಿಷ್ಠ ಸಂಗ್ರಹ ಸಾಮರ್ಥ್ಯ 178.784 ಬಿಸಿಎಂ (ಶತಕೋಟಿ ಘನ ಮೀಟರ್‌ಗಳು) ಇದೆ. ಸದ್ಯ, ಒಟ್ಟು ಸಾಮರ್ಥ್ಯದ ಶೇ 25ರಷ್ಟು ಅಂದರೆ, 45.277 ಬಿಸಿಎಂನಷ್ಟು ನೀರು ಸಂಗ್ರಹ ಇದೆ ಎಂದು ಆಯೋಗ ತಿಳಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಜಲಾಶಯಗಳಲ್ಲಿ 57.993 ಬಿಸಿಎಂನಷ್ಟು ನೀರು ಸಂಗ್ರಹ ಇತ್ತು. ಈ ವರ್ಷ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಸಿಡಬ್ಲ್ಯುಸಿ ಹೇಳಿದೆ.

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು ರಾಜ್ಯಗಳಲ್ಲಿನ 42 ಪ್ರಮುಖ ಜಲಾಶಯಗಳಲ್ಲಿ ಗರಿಷ್ಠ ನೀರಿನ ಸಂಗ್ರಹಣಾ ಸಾಮರ್ಥ್ಯ 53.334 ಬಿಸಿಎಂನಷ್ಟಾಗಿದೆ. ಇವುಗಳಲ್ಲಿ ಪ್ರಸ್ತುತ 7.494 ಬಿಸಿಎಂನಷ್ಟು (ಶೇ 14) ಮಾತ್ರ ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 24ರಷ್ಟು ನೀರಿನ ಸಂಗ್ರಹ ಇತ್ತು ಎಂದು ಆಯೋಗದ ಅಂಕಿ ಅಂಶಗಳು ತಿಳಿಸಿವೆ.

3 ದಿನ 'ಸಾರಥಿ' ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸಾರಥಿ' ತಂತ್ರಾಂಶದ ಮುಖ್ಯ ಸರ್ವರ್‌ನ ನಿರ್ವಹಣೆ ಹಿನ್ನೆಲೆಯಲ್ಲಿ ರಾಜ್ಯದ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಗಳಲ್ಲಿ (ಆರ್‌ಟಿಒ) ವಾಹನ ಚಾಲನೆ ಪರವಾನಗಿ ಹಾಗೂ ನವೀಕರಣ ಸೇವೆ ಗುರುವಾರ ಮಧ್ಯಾಹ್ನದಿಂದ ಸ್ಥಗಿತಗೊಂಡಿದೆ. ಇದು ಮೇ 20ರಂದು ಪುನರ್ ಆರಂಭವಾಗಲಿದೆ.

'ವಾಹನ್' ತಂತ್ರಾಂಶದ ಅಡಿ ನೀಡಲಾಗುತ್ತಿರುವ ಸೇವೆಗಳು ಎಂದಿನಂತೆಯೇ ಇರಲಿವೆ. ಈ ಬಗ್ಗೆ ಸಾರ್ವಜನಿಕರಿಗೂ ಮಾಹಿತಿ ನೀಡಿದ್ದೇವೆ' ಎಂದು ಶಿವಮೊಗ್ಗ ಆರ್‌ಟಿಒ ಕಚೇರಿ ಸೂಪರಿಂಟೆಂಡೆಂಟ್ ರಾಮಚಂದ್ರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ದೆಹಲಿಯಲ್ಲಿನ ಮುಖ್ಯ ಸರ್ವರ್‌ನ ತಾಂತ್ರಿಕ ನಿರ್ವಹಣೆ ನಡೆಯುತ್ತಿದೆ. ಹೀಗಾಗಿ ಮೂರು ದಿನಗಳ ಮಟ್ಟಿಗೆ 'ಸಾರಥಿ' ಸೇವೆ ಸ್ಥಗಿತಗೊಂಡಿದೆ. ಇದರಡಿ ಆನ್‌ಲೈನ್ ಮೂಲಕ ಚಾಲನಾ ಪರವಾನಗಿ ಮಾತ್ರ ನೀಡಲಾಗುತ್ತದೆ. ಅದರೆ 'ವಾಹನ್' ತಂತ್ರಾಂಶದ ಅಡಿ ವಾಹನಗಳ ನೋಂದಣಿ, ವರ್ಗಾವಣೆ ಸೇರಿದಂತೆ 23 ಸೇವೆಗಳನ್ನು ನೀಡಲಾಗುತ್ತಿದೆ. ಅವುಗಳಲ್ಲಿ ಯಾವುದೇ ವ್ಯತ್ಯಯವಿಲ್ಲ' ಎಂದರು.

ಜೆಡಿಎಸ್‌ಗೆ ಬೆಂಬಲ: ನಿಂಗರಾಜ್ ಗೌಡ

ಪ್ರಜಾವಾಣಿ ವಾರ್ತೆ

ಮೈಸೂರು: 'ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಬೆಂಬಲ ನೀಡುವೆ. ಪಕ್ಷದ ವರಿಷ್ಠರ ತೀರ್ಮಾನದಂತೆ ಚುನಾವಣೆಯಿಂದ ಹಿಂದೆ ಸರಿಯುತ್ತಿದ್ದೇನೆ' ಎಂದು ಬಿಜೆಪಿ ಘೋಷಿತ ಅಭ್ಯರ್ಥಿ ಈ.ಸಿ.ನಿಂಗರಾಜ್ ಗೌಡ ಹೇಳಿದರು.

'ಸಂಘ ಪರಿವಾರ ಮತ್ತು ಪಕ್ಷದಲ್ಲಿರುವ ಹಿತೈಷಿಗಳಿಂದ ನನಗೆ ಟಿಕೆಟ್ ಘೋಷಣೆಯಾಗಿತ್ತು. ಈಗ ಮೈತ್ರಿ ಧರ್ಮ ಪಾಲನೆ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಕೈ ಬಲಪಡಿಸುವುದೇ ನನ್ನ ಗುರಿ' ಎಂದು ನಗರದಲ್ಲಿ ಶುಕ್ರವಾರ ಉಭಯ ಪಕ್ಷಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಮಾತನಾಡಿ, 'ಈ ಸುದ್ದಿಗೋಷ್ಠಿಯು ಮೈತ್ರಿಕೂಟದ ಒಗ್ಗಟ್ಟನ್ನು ಸೂಚಿಸಿದೆ. ಮೈತ್ರಿಯನ್ನು ಮುರಿಯಲು ಸದಾ ಪ್ರಯತ್ನಿಸುವ ಕಾಂಗ್ರೆಸ್ ಇದನ್ನು ಗಮನಿಸಬೇಕು. ಪಕ್ಷದ ಮುಖಂಡರಾದ ಕೆ.ಟಿ. ಶ್ರೀಕಂಠೇಗೌಡ, ನಿರಂಜನ ಮೂರ್ತಿಯವರೂ ಸಹಕಾರ ನೀಡಲಿದ್ದು, ವಿವೇಕಾನಂದ ಅವರನ್ನು ಗೆಲ್ಲಿಸಲಿದ್ದಾರೆ' ಎಂದರು.

'ಪ್ರಜ್ವಲ್ ರೇವಣ್ಣ ಪ್ರಕರಣದಿಂದ ನಮಗೆ ಈ ಚುನಾವಣೆಯಲ್ಲಿ ಹಿನ್ನಡೆಯಾಗುವುದಿಲ್ಲ. ರಾಜ್ಯ ಸರ್ಕಾರ ಎಸ್‌ಐಟಿ ರಚಿಸುವ ಮುನ್ನವೇ ನಾವು ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದ್ದು, ಜನ ನಮ್ಮ ತ್ವರಿತ ನಿರ್ಧಾರದ ಬಗ್ಗೆ ಖುಷಿಯಾಗಿದ್ದಾರೆ' ಎಂದರು.

'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಆರು ಕೃತಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನೀಡುವ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಆರು ಕೃತಿಗಳನ್ನು ಆಯ್ಕೆ ಮಾಡಲಾಗಿದೆ.

ಎಚ್.ಎಸ್.ಎಂ. ಪ್ರಕಾಶ್ ಅವರ 'ನಮ್ಮಂಥ ಬಲ್ಲಿದವರು' (ಅನುವಾದ), ಎಚ್.ಟಿ. ಪೋತೆ ಅವರ 'ಬಾಬಾ ಸಾಹೇಬರ ಲಂಡನ್ ಮನೆಯಲ್ಲಿ' (ಪ್ರವಾಸ ಕಥನ), ಫಾತಿಮಾ ರಲಿಯಾ ಅವರ 'ಒಡೆಯಲಾರದ ಒಡಪು' (ಕಥಾ ಸಂಕಲನ), ಸಂತೋಷ ನಾಯಕ ಅವರ 'ಹೊಸ ವಿಳಾಸದ ಹೆಜ್ಜೆಗಳು' (ಕವನ ಸಂಕಲನ), ಇಂದಿರಾ ಕೃಷ್ಣಪ್ಪ ಅವರ 'ಸಾವಿತ್ರಿಬಾ ಫುಲೆ' (ವ್ಯಕ್ತಿ ಚಿತ್ರಣ) ಹಾಗೂ ಎಂ.ಎಸ್. ಮಣಿ ಅವರ 'ಗವಿಮಾರ್ಗ' (ಲೇಖನ ಸಂಕಲನ) ಕೃತಿಯು 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಆಯ್ಕೆಯಾಗಿದೆ.

ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿಗೆ 150 ಕೃತಿಗಳು ಬಂದಿದ್ದವು. ಅವುಗಳಲ್ಲಿ ಅತ್ಯುತ್ತಮವಾದ ಆರು ಕೃತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದೇ 31ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಆಕೆಯ ಆಪ್ತ ತಾಣ...



ಪವಿತ್ರಾ ಭಟ್

ಬ್ಯೂಟಿಪಾರ್ಲರ್, ಮೇಕಪ್ ಅಪ್, ಸ್ವ ಆರೈಕೆ ಎಂದಾಕ್ಷಣ ಕುಹಕವಾಡುವವರೇ ಹೆಚ್ಚು. ಹೆಣ್ಣುಮಕ್ಕಳ ಮೇಕಪ್ ಅಂದರೆ ಎಲ್ಲಿಲ್ಲದ ವ್ಯಂಗ್ಯ, ಕೂರಂಬುಗಳೆಲ್ಲ ಸೇರಿಕೊಂಡು ಮಾತಾಗುತ್ತವೆ. ಆದರೆ, ಬ್ಯೂಟಿಪಾರ್ಲರ್‌ನತ್ತ ಹೆಜ್ಜೆ ಹಾಕುವುದು ಸ್ವಕಾಳಜಿಯ ಮತ್ತೊಂದು ಮುಖವೆಂದರೆ ನಂಬುತ್ತೀರಾ?

ಐಬ್ರೋ ಶೇಪ್, ಬ್ಲೀಚಿಂಗ್, ಫೇಸ್‌ಪ್ಯಾಕ್ ಎಲ್ಲವೂ ಮೇಲ್ಮಧ್ಯಮ ವರ್ಗದವರ ಸ್ವತ್ತಾಗಿದ್ದ ಕಾಲವಿತ್ತು. ಈಗ ಅವೆಲ್ಲವೂ ಎಲ್ಲರಿಗೂ ಲಭ್ಯವಾಗಿರುವಂಥ ಸಂದರ್ಭ. ಆರ್ಥಿಕವಾಗಿ ಸದೃಢರಾಗುತ್ತಿರುವ ಮಹಿಳೆಯರಷ್ಟೆ ಅಲ್ಲ, ಗೃಹಿಣಿಯರು ಸೌಂದರ್ಯದ ಕಾಳಜಿ ಮಾಡಲು ಮೀನಾಮೇಷ ಎಣಿಸಬೇಕಿಲ್ಲ.

ಕೆಲಸದ ಒತ್ತಡವೆಂದರೆ ಒತ್ತಡ. ಅದು ಆಫೀಸಿದ್ದೇ ಇರಲಿ, ಮನೆಯದ್ದೇ ಇರಲಿ. ಎರಡೂ ದೋಣಿಯಲ್ಲಿ ಸಾಗುತ್ತಿರುವ ಮಹಿಳೆಯರಿಗೆ ತುಸು ಬಿಡುವು ಸಿಗುವುದು ಕಡಿಮೆ. ಸಿಕ್ಕರೆ ಯಾವ ಜಂಜಾಟದಲ್ಲಿ ಕಳೆದು ಹೋಗದೇ ಸ್ವ ಆರೈಕೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಹಾಗೆ ಗಂಡ, ಮಕ್ಕಳ ಆರೈಕೆಯಲ್ಲಿ ಕಳೆದು ಹೋಗಿರುವ ಮನೆಯ ದೇಖರೇಖಿ ನೋಡಿಕೊಳ್ಳುವ ಗೃಹಿಣಿಯರ ಆದ್ಯತಾ ಪಟ್ಟಿಯಲ್ಲಿ ಸೌಂದರ್ಯ ಕಾಳಜಿ ಸೇರಿರಲಿ.

> ನಮ್ಮನ್ನು ನಾವು ಹೇಗೆ ಬಿಂಬಿಸಿಕೊಳ್ಳುತ್ತೀವಿ ಎನ್ನುವುದರಲ್ಲಿ ಆತ್ಮವಿಶ್ವಾಸ ಅಡಗಿದೆ. ಪ್ರೀತಿ ಹಂಚುವ, ಇತರರ ಕಾಳಜಿ ಮಾಡುವ, ಇಡೀ ಕುಟುಂಬದ ದೇಖರೇಖಿ ನೋಡಿಕೊಳ್ಳುವ ಹೆಣ್ಣುಮಕ್ಕಳು ಆಗಾಗ್ಗೆ ನಮ್ಮೊಳಗೆ ನಾವು ಇಳಿದು ನೋಡುವ, ಸ್ವಆರೈಕೆ ಮಾಡಿಕೊಳ್ಳುವ ಬಗೆಯನ್ನು ಅರಿತುಕೊಳ್ಳಬೇಕಿದೆ.

ವೃತ್ತಿಪರ ಬ್ಯೂಟಿಷಿಯನ್‌ಗಳನ್ನು ಆಗಾಗ್ಗೆ ಭೇಟಿ ಮಾಡುವುದು ಕೇವಲ ಕೇಶ ವಿನ್ಯಾಸ, ಚರ್ಮದ ಆರೈಕೆಗಷ್ಟೆ ಅಲ್ಲ, ನಮ್ಮನ್ನು ನಾವು ಹೇಗೆ ಬಿಂಬಿಸಿಕೊಳ್ಳುತ್ತೀವಿ, ಹೇಗೆ ಪ್ರಸ್ತುತಪಡಿಸಿಕೊಳ್ಳುತ್ತೀವಿ ಎನ್ನುವುದಕ್ಕೂ ಈ ಸೌಂದರ್ಯ ಕಾಳಜಿ ಮುಖ್ಯವಾಗುತ್ತದೆ.

ಕಚೇರಿ, ಮನೆ, ಗಂಡ, ಮಕ್ಕಳು, ಓದು ಎಂದು ಸದಾ ಬಿಡುವಿಲ್ಲದ ಜೀವನ ಹೆಣ್ಣುಮಕ್ಕಳದ್ದು. ಇದರ ನಡುವೆಯೂ ಸೌಂದರ್ಯ ಕಾಪಾಡಿಕೊಳ್ಳಲು, ತಮಗಾಗಿ ಒಂದಿಷ್ಟು ಸಮಯ ತೆಗೆದಿಡಲು ಈ ಬ್ಯೂಟಿಪಾರ್ಲರ್‌ಗಳು, ಸ್ಪಾಗಳು ಸಹಕಾರಿ. ನಮ್ಮನ್ನು ನಾವೇ ಪ್ರೀತಿಸದಿದ್ದರೆ ಇನ್ನಾರು ಪ್ರೀತಿಸಿಯಾರು? ನಮ್ಮ ದೇಹದ ಆರೈಕೆಗೆ ನಾವೇ ಆದ್ಯತೆ ನೀಡಬೇಕಲ್ಲವೇ? ಆಗಾಗ ಪಾರ್ಲರ್‌ಗಳ ಭೇಟಿಯಿಂದ ಕೈ- ಕಾಲುಗಳಿಗೆ, ಚರ್ಮಕ್ಕೆ, ಕೂದಲಿಗೆ ಅಕ್ಕರೆಯ ಆರೈಕೆಯನ್ನು ಗಡಿಬಿಡಿಯಿಲ್ಲದೆ ಮಾಡಿಕೊಳ್ಳಬಹುದು.

ವಿಶ್ರಾಂತಿಯ ಅನುಭವ

ಬ್ಯೂಟಿಪಾರ್ಲರ್‌ಗಳು ಕೇವಲ ಮೇಕಪ್ ಮಾಡಿಸಿಕೊಳ್ಳಲು ಮಾತ್ರ ಇರುವುದಲ್ಲ. ಪಾರ್ಲರ್ ಹಾಗೂ ಸ್ಪಾಗಳಲ್ಲಿ ಮಾಡುವ ಮಸಾಜ್, ಫೇಶಿಯಲ್‌ಗಳು ಆರಾಮದಾಯಕ ಅನುಭವ ನೀಡುತ್ತದೆ. ಮಾನಸಿಕ ಒತ್ತಡದಿಂದ ಸುಕ್ಕುಗಟ್ಟಿದ ಚರ್ಮಗಳನ್ನು ಮಸಾಜ್‌ನಿಂದ ಸರಿಪಡಿಸಬಹುದು. ದೇಹದಲ್ಲಿ ರಕ್ತಸಂಚಾರ ಸುಗಮವಾಗುತ್ತದೆ. ಚರ್ಮ ಕಾಂತಿಯುತ ಮಾಡುತ್ತದೆ.

ಒಪ್ಪುವ ಪದ್ಧತಿ ಅನುಸರಿಸಿ

ಬ್ಯೂಟಿ ಪಾರ್ಲರ್‌ಗಳಿಗೆ ಹೋಗುವುದರಿಂದ ದೇಹದ ಆಕಾರ, ಚರ್ಮದ ಗುಣಕ್ಕೆ ತಕ್ಕ ರೀತಿಯ ಸೌಂದರ್ಯ ಸಲಹೆಗಳನ್ನೂ ಪಡೆದುಕೊಳ್ಳಬಹುದು. ಎಣ್ಣೆಯುಕ್ತ ಚರ್ಮವನ್ನು ಹೇಗೆ ಆರೈಕೆ ಮಾಡಬೇಕು, ಕೂದಲನ್ನು ಹೇಗೆ ನಿರ್ವಹಿಸಬೇಕು ಹೀಗೆ ಹತ್ತು ಹಲವು ಸಲಹೆಗಳನ್ನು ಪಡೆದುಕೊಂಡು ಅದರಂತೆ ನಡೆಯಲು ಅನುಕೂಲ.

ಎಲ್ಲೇ ಇದ್ದರೂ ನಮ್ಮನ್ನು ನಾವು ಮೊದಲು ಪ್ರೀತಿಸಬೇಕು. ಸ್ವಪ್ರೀತಿ, ಸ್ವಕಾಳಜಿ ಎಲ್ಲವೂ ಆತ್ಮವಿಶ್ವಾಸದ ಸಂಕೇತ. ಸೌಂದರ್ಯ ಅದಕ್ಕೆ ಗರಿಯಷ್ಟೆ. ❖

> ‘ಬ್ಯೂಟಿ ಪಾರ್ಲರ್‌ಗಳಿಗೆ ಹೋದರೆ ಮಾತ್ರ ಸುಂದರವಾಗಿ ಕಾಣುತ್ತಾರಾ? ಸಮಯ, ಹಣ ವ್ಯರ್ಥ ಎನ್ನುವ ಮಾತು ಆಗಾಗ ಕೇಳಿಬರುತ್ತದೆ. ಆದರೆ ಮೇಕ್‌ಓವರ್ ಅಥವಾ ದೇಹದ ಭಾಗಗಳನ್ನು ಪಾರ್ಲರ್‌ಗಳಲ್ಲಿ ಆರೈಕೆ ಮಾಡಿದಷ್ಟು ನಾಜೂಕಾಗಿ, ಪರಿಪೂರ್ಣವಾಗಿ ಮನೆಯಲ್ಲಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಮುಖ್ಯವಾಗಿ ನಾವಿರುವ ರೀತಿ ನಮ್ಮೊಳಗಿನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.’
>
> **ಆಶಾ ಅಮ್ಮೆರಾ,**
> ಮೇಕಪ್ ಆರ್ಟಿಸ್ಟ್

ಆರೈಕೆ

ಏನೆಲ್ಲಾ ಆಯ್ಕೆಗಳಿವೆ?

- ಚರ್ಮದ ಆರೈಕೆಗೆ ಫೇಶಿಯಲ್, ಸ್ಪಾ, ಮಸಾಜ್, ಫೇಸ್ ಪ್ಯಾಕ್‌ಗಳನ್ನು ಹಾಕಿಕೊಳ್ಳಬಹುದು.
- ಉಗುರುಗಳು ಕಳೆಗುಂದದಿರುವಂತೆ ಮಾಡಲು ಕಾಲುಗಳಿಗೆ ಪೆಡಿಕ್ಯೂರ್, ಕೈ ಬೆರಳುಗಳಿಗೆ ಮೆನಿಕ್ಯೂರ್ ಆರೈಕೆ
- ಕೂದಲಿನ ಆರೈಕೆಗೆ ಹೇರ್ ಪ್ಯಾಕ್, ಹೇರ್ ವಾಶ್, ಹೇರ್ ಕಟಿಂಗ್, ಎಣ್ಣೆಯ ಮಸಾಜ್‌ನಂತಹ ವಿಧಾನಗಳಿಂದ ತಲೆಹೊಟ್ಟು, ಸೀಳು ಕೂದಲುಗಳಿಂದ ಮುಕ್ತಿ ಪಡೆಯಬಹುದು.
- ಪಾರ್ಲರ್‌ಗಳಲ್ಲಿ ಮಂದ ಬೆಳಕಿನಲ್ಲಿ ಮಸಾಜ್ ಅಥವಾ ಫೇಶಿಯಲ್‌ಗಳನ್ನು ಮಾಡಿಸುವುದರಿಂದ ಚರ್ಮದ ಮೇಲೆ ಹಿತವಾದ ಒತ್ತಡ ಬೀಳುತ್ತದೆ. ಇದರಿಂದ ರಕ್ತಪರಿಚಲನೆ ಉತ್ತಮವಾಗಿ ಚರ್ಮದ ಆಳದಿಂದ ಹೊಳಪು ಮೂಡುತ್ತದೆ.

ಇವುಗಳನ್ನು ನೆನಪಿಡಿ...

- ಫೇಶಿಯಲ್, ಪೆಡಿಕ್ಯೂರ್, ಮೆನಿಕ್ಯೂರ್ ಮಾಡಿಸುವಾಗ 25 ದಿನಗಳ ಅಂತರವಿರಲಿ.
- ವಿಶ್ವಾಸಾರ್ಹ ಪಾರ್ಲರ್‌ಗಳಿಗೆ ಮಾತ್ರ ಭೇಟಿ ನೀಡಿ.
- ಚರ್ಮಕ್ಕೆ ಯಾವ ಉತ್ಪನ್ನಗಳು ಹಾನಿಕಾರಕವಲ್ಲ ಎನ್ನುವುದನ್ನು ಗೊತ್ತುಪಡಿಸಿಕೊಳ್ಳಿ.
- ಆನ್‌ಲೈನ್ ಸಲಹೆಗಳಿಂದ ಸ್ವ ಆರೈಕೆ ಮಾಡಿಕೊಳ್ಳುವ ಬದಲು ಸೌಂದರ್ಯತಜ್ಞರನ್ನು ಭೇಟಿ ಮಾಡಿ.

ಛತ್ರಿ ಭಿನ್ನವಾಗೈತ್ರಿ

ರೂಪಾ ಕೆ.ಎಂ.

ಮಳೆಗಾಲ ಬಂತು. ತುಂತುರು ಹನಿಯೇ ಇರಲಿ, ಬಿರುಸು ಮಳೆಯೇ ಬರಲಿ ಆಶ್ರಯ ನೀಡುವುದು ಕೊಡೆ/ ಛತ್ರಿಗಳೇ. ಮಳೆಗಾಲದಲ್ಲಿ ಅವಶ್ಯಕ ವಸ್ತುಗಳ ಪಟ್ಟಿಯಲ್ಲಿ ಕೊಡೆಯಂತೂ ಇದ್ದೇ ಇರುತ್ತದೆ. ತೋಯ್ದು ತೊಪ್ಪೆಯಾಗಿ, ಮಳೆಯನ್ನು ಬೈದುಕೊಂಡು ಓಡಾಡುವ ಮೊದಲು ಹೊರಗೆ ಕಾಲಿಡುವ ಮುನ್ನ ಬ್ಯಾಗ್‌ನಲ್ಲಿ ಕೊಡೆಯೊಂದನ್ನು ಇಟ್ಟುಕೊಳ್ಳುವುದನ್ನು ಮರೆಯಬೇಡಿ.

ಕೊಡೆಗೆ ಎಂಥ, ಹೇಗಾದರೂ ಇದ್ದೀತು ಎಂದು ಮೂಗು ಮುರಿಯಬೇಡಿ. ಕೊಡೆಗಳಲ್ಲಿಯೂ ತರಹೇವಾರಿ ಉಂಟು. ಸಂದರ್ಭಕ್ಕೆ ಅನುಸಾರವಾಗಿ ದಿರಿಸಿಗೆ ಹೊಂದಿಕೆಯಾಗುವಂಥ ಕೊಡೆ ಹಿಡಿದರೆ ಅದರ ಗತ್ತು, ಗೈರತ್ತೇ ಬೇರೆ ಎನ್ನಿ. ಮಳೆ ಗಾಳಿಯಲ್ಲಿಯೂ ಬಿರುಸಾಗಿ ನಡೆಯಲು ನೆರವಾಗುವ ಕೊಡೆಗಳ ಬಣ್ಣ, ವಿನ್ಯಾಸ, ಬಾಳಿಕೆಯಲ್ಲಿ ಹಲವು ಬಗೆಯುಂಟು.

ಕ್ಲಾಸಿಕ್

ಈ ಕ್ಲಾಸಿಕ್ ಕೊಡೆಗಳು ಸಹಜವಾಗಿ ಮಡಚುವ, ಮರದ ಉದ್ದ ಹಿಡಿಕೆಯನ್ನು ಹೊಂದಿರುವ ಕೊಡೆಗಳು. ಈಗೀಗ ಮರದ ಹಿಡಿಕೆ ಬದಲು, ಮೆಟಲ್‌ಗಳನ್ನು ಬಳಸಿಯೂ ಮಾಡಲಾಗುತ್ತದೆ. ತುದಿಯು ಮೊನಚಾಗಿದ್ದು, ಎಲ್ಲ ಸಂದರ್ಭಗಳಲ್ಲಿಯೂ ಬಳಸಬಹುದು. ಆದರೆ, ಇದರಲ್ಲಿ ಸಾಮಾನ್ಯವಾಗಿ ಪುಶ್ ಬಟನ್ ಇರುವುದಿಲ್ಲ. ಇದು ಇಂಗ್ಲೆಂಡ್‌ನ ವಾತಾವರಣಕ್ಕೆ ಸೂಕ್ತವಾಗುವಂತೆ ತಯಾರದ ಕೊಡೆಗಳಂತೆ. ಸದ್ಯ ಎಲ್ಲ ಕಡೆಗಳಲ್ಲಿಯೂ ಬಳಕೆಯಾಗುತ್ತಿವೆ.

ತ್ರಿಫೋಲ್ಡ್

ಇವು ಪ್ರಯಾಣಕ್ಕೆ ಹೇಳಿ ಮಾಡಿಸಿದಂಥ ಕೊಡೆಗಳು. ಎಲ್ಲಿಗೆ ಬೇಕಾದರೂ ಸುಲಭವಾಗಿ ಕೊಂಡೊಯ್ಯಲು ಅನುಕೂಲವಾಗುವಂಥ ಕೊಡೆಗಳಿವು. ಮಡಚಿ, ಬ್ಯಾಗಿನಲ್ಲಿ ಇಟ್ಟುಕೊಳ್ಳುವಷ್ಟು ಗಾತ್ರದಲ್ಲಿ ಸಣ್ಣದಿರುತ್ತದೆ. ಜೇಬಿನಲ್ಲಿ ಇಟ್ಟುಕೊಂಡು ಆರಾಮಾಗಿ ನಡೆಯಬಹುದು. ಅಯ್ಯೋ ಕೊಡೆ ಮರೆತೆ! ಎನ್ನುವ ಮರೆಗುಳಿಗಳಿಗೂ ಹೇಳಿಮಾಡಿಸಿದಂಥ ಕೊಡೆ ಇದು.

ಡೋರ್‌ಮನ್

ಇವು ಇತರೆ ಕೊಡೆಗಳಿಂತ ತುಸು ದೊಡ್ಡದಾಗಿರುತ್ತದೆ. ಮಳೆಯಲ್ಲಿ ಇಬ್ಬರೂ ಒಟ್ಟಿಗೆ ಸಾಗಲು ಈ ಕೊಡೆ ಹೆಚ್ಚು ಅನುಕೂಲಕರ. ಆದರೆ, ಗಾತ್ರದಲ್ಲಿ ಸ್ವಲ್ಪ ದೊಡ್ಡದೇ ಆಗಿರುವುದರಿಂದ ಇದನ್ನು ಒಯ್ಯಲು ತುಸು ಕಷ್ಟವಾಗುತ್ತದೆ. ಇದರ ಬೆಲೆಯೂ ತುಸು ದುಬಾರಿ ಇರುತ್ತದೆ. ಮಳೆಯಲ್ಲಿ ಜತೆಯಾಗಿ ನಡೆಯಬೇಕು ಎನ್ನುವ ಆಸೆಯಿದ್ದವರು ತಮ್ಮಿಷ್ಟದ ಜೀವದೊಂದಿಗೆ ಡೋರ್‌ಮನ್ ಕೊಡೆ ಹಿಡಿದು ಸಾಗಬಹುದು.

ಬಬಲ್

ಇದು ಪಾರದರ್ಶಕವಾಗಿರುವ ಕೊಡೆಗಳು. ಮುಗಿಲಿನಿಂದ ಮಳೆ ಹನಿಗಳು ಬೀಳುವ ಖುಷಿ ನೋಡಲು ಈ ಕೊಡೆಗಳನ್ನು ಬಳಸಬಹುದು. ಇವು ಬಬಲ್ ಆಕಾರದಲ್ಲಿರುವುದರಿಂದ ಬಬಲ್ ಕೊಡೆಗಳೆಂದೂ ಕರೆಯುತ್ತಾರೆ. ಈಗೀಗ ಈ ಕೊಡೆಗಳನ್ನು ಫ್ಯಾಷನ್‌ಪ್ರಿಯರು ಹೆಚ್ಚಾಗಿ ಬಳಸುತ್ತಾರೆ. ಉತ್ತಮ ಗುಣಮಟ್ಟದ ಬಬಲ್ ಕೊಡೆಗಳು ಎಂಥ ಬಿರುಸುಮಳೆಯಲ್ಲಿಯೂ ಸುಲಭವಾಗಿ ನಡೆಯುವಂತೆ ಮಾಡುತ್ತವೆ.

ಪ್ಯಾರಸೋಲ್ ಕೊಡೆಗಳು

ಇವು ಸೂರ್ಯನ ಕಿರಣಗಳಿಂದ ರಕ್ಷಣೆ ನೀಡುತ್ತವೆ. ಬೀಚ್ ಕೊಡೆಗಳೆಂದೇ ಹೆಸರು ಪಡೆದಿವೆ. ಇವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಕೊಂಡೊಯ್ಯಲು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಸ್ಥಳದಲ್ಲಿ ಇದನ್ನು ಇಟ್ಟು, ಇದರ ಕೆಳಗೆ ವಿಶ್ರಾಂತಿ ಪಡೆಯಲು ಅನುಕೂಲವಾಗುವಂಥ ಕೊಡೆಗಳಿವು. ಸಾಮಾನ್ಯವಾಗಿ ನದಿ ಹಾಗೂ ಸಮುದ್ರ ತೀರ ಪ್ರದೇಶಗಳಲ್ಲಿ, ನಿಮ್ಮದೇ ಸ್ವಂತ ಉದ್ಯಾನಗಳಲ್ಲಿ ವಿಶ್ರಾಂತಿ ಪಡೆಯುವಾಗ ಬಳಸಲು ಅಡ್ಡಿಯಿಲ್ಲ.

ಬಣ್ಣದ ಬಣ್ಣದ ಹೊಂದಿಕೆಯಾಗುವ ಲೇಸ್‌ಗಳನ್ನು ಬಳಸಿಯೂ ಛತ್ರಿ ಮಾಡಲಾಗುತ್ತದೆ. ಫ್ಯಾಷನೇಬಲ್ ಆಗಿ ಕಾಣಿಸಿಕೊಳ್ಳುವ ಉದ್ದೇಶದಿಂದ ಈ ಕೊಡೆಗಳನ್ನು ಬಳಸಲಾಗುತ್ತದೆ ಹೊರತು ಮಳೆಯಿಂದ ರಕ್ಷಣೆ ಪಡೆಯಲು ಆಗದು.

ಮಕ್ಕಳ ಕೊಡೆಗಳು

ಗಾಢ ಬಣ್ಣದ, ಕಾರ್ಟೂನ್, ಕಾರು, ಬೈಕ್, ಪ್ರಾಣಿಗಳ ಚಿತ್ರಗಳಿರುವ ಮಕ್ಕಳ ಕೊಡೆಗಳಿವು. ಬೇರೆ ಕೊಡೆಗಳಿಗೆ ಹೋಲಿಸಿದರೆ ಮಕ್ಕಳ ಕೋಮಲ ಬೆರಳುಗಳಿಗೆ ಹಾನಿಯಾಗದಂತೆ ಪುಶ್ ಬಟನ್ ಅನ್ನು ವಿನ್ಯಾಸಗೊಳಿಸಿರುವ ಕೊಡೆಗಳಿವು. ❖

ಸ್ಪಂದನ

ಡಾ. ವೀಣಾ ಎಸ್. ಭಟ್

ಸಹಜ ಹೆರಿಗೆ: ಆತಂಕ ಬೇಡ

● ಮದುವೆಯಾಗಿ ಎರಡು ವರ್ಷವಾಗಿದೆ. ನಾಲ್ಕು ತಿಂಗಳ ಗರ್ಭಿಣಿ. ವೈದ್ಯರು ಕಬ್ಬಿಣ ಮತ್ತು ಕ್ಯಾಲ್ಸಿಯಂ ಮಾತ್ರೆ ಬರೆದುಕೊಟ್ಟಿದ್ದಾರೆ. ಈ ಮಾತ್ರೆ ತೆಗೆದುಕೊಂಡರೆ ಮಗುವಿನ ತೂಕ ಹೆಚ್ಚುತ್ತದೆ ಎಂದು ಹೇಳುತ್ತಿದ್ದಾರೆ. ನನಗೆ ಸಹಜವಾಗಿ ಹೆರಿಗೆ ಆಗಬೇಕು ಅಂತಿದೆ. ಆದರೆ ನೋವಿನ ಬಗ್ಗೆ ಭಯವಿದೆ.

ಮಹಾಲಕ್ಷ್ಮಿ, ಮೈಸೂರು

ನೋವಿನ ಭಯವೇ ನಿಜವಾದ ನೋವಿಗಿಂತ ಹೆಚ್ಚು ತೊಂದರೆ ಕೊಡುತ್ತದೆ. ಸಹಜ ಹೆರಿಗೆಯ ಬಗ್ಗೆ, ನೋವಿನ ಅನುಭವಗಳ ಬಗ್ಗೆ ಹೆಚ್ಚು ಚಿಂತಿಸದೆ ಸಹಜ ಹೆರಿಗೆಯಾಗುತ್ತದೆ ಎಂದು ದೃಢವಾಗಿ ನಂಬಿ. ಸಹಜ ಹೆರಿಗೆಯು ಹೆರಿಗೆ ಸಮಯದಲ್ಲಿ ಮಗುವಿನ ತೂಕ ಎಷ್ಟಿದೆ? ಮಗುವಿನ ತಲೆಯ ಭಾಗ ಕಿಳ್ಕುಳಿ (ಪೆಲ್ವಿಸ್) ಒಳಹೋಗಿದೆಯೇ? ಗರ್ಭಕೊರಳು ಅಗಲವಾಗಿದೆಯೇ? ನಿಮ್ಮ ಶ್ರೋಣಿ ವ್ಯಾಸಗಳು ಸರಿಯಾಗಿದೆಯೇ? ಎಂಬುದರ ಮೇಲೆ ಅವಲಂಬನೆಯಾಗಿರುತ್ತದೆ. ಇದರ ಜೊತೆಗೆ ಹೆರಿಗೆ ನೋವಿನ ಸಂದರ್ಭದಲ್ಲಿ ಶ್ರೋಣಿಯ ಸ್ನಾಯುಗಳ ಬಲ ಎಷ್ಟಿದೆ, ನೀವು ಅದಕ್ಕೆ ಎಷ್ಟು ಸಹಕರಿಸುತ್ತೀರಾ? ನಿಮ್ಮಲ್ಲಿಯೇ ಹೆಚ್ಚು ಒತ್ತಡದ ಮನಸ್ಥಿತಿ ಇದ್ದರೆ ಚೆನ್ನಾಗಿ ಹೆರಿಗೆ ನೋವು ಬಂದರೂ ಗರ್ಭಕೊರಳು ಅಗಲವಾಗದೇ ಹೆರಿಗೆ ತಡವಾಗಬಹುದು. ಒತ್ತಡರಹಿತ, ಮನಸ್ಥಿತಿಯು ಹೆರಿಗೆಯ ಮುನ್ನ ಹಾಗೂ ಹೆರಿಗೆಯಾಗುವ ಹಂತದಲ್ಲಿ ಸಹಜ ಹೆರಿಗೆಗೆ ಬಹಳ ಮುಖ್ಯ ಎಂಬುದನ್ನು ಗಮನಿಸಿ.

ಇನ್ನು ಕಬ್ಬಿಣಾಂಶವಿರುವ ಮಾತ್ರೆಗಳು ರಕ್ತಹೀನತೆಯನ್ನು ಸರಿಪಡಿಸುತ್ತದೆ ಹೊರತು ಮಗುವಿನ ತೂಕ ಹೆಚ್ಚಾಗುವುದಿಲ್ಲ. ಕ್ಯಾಲ್ಸಿಯಂ ಮಾತ್ರೆಗಳು ಮೂಳೆ ಹಾಗೂ ಸ್ನಾಯುಗಳಿಗೆ ಬಲ ಕೊಡುತ್ತದೆ. ಈ ಮಾತ್ರೆಗಳನ್ನು ಮುಂದುವರಿಸಿ. ಪ್ರೊಟೀನ್‌ಯುಕ್ತ, ನಾರಿನಾಂಶವುಳ್ಳ ಆಹಾರವನ್ನು ಹೆಚ್ಚು ಸೇವಿಸಿ. ನಿತ್ಯ 40 ನಿಮಿಷ ವಾಕಿಂಗ್ ಮಾಡಿ. ಬದ್ಧಕೋಣಾಸನ, ಸೇತುಬಂಧಾಸನ, ಚಕ್ಕಿಚಲನಾಸನ ಜತೆಗೆ ದೀರ್ಘ ಉಸಿರಾಟ, ನಾಡಿಶೋಧನ, ಭ್ರಮರಿ ಪ್ರಾಣಾಯಾಮಗಳನ್ನು ತಜ್ಞರಿಂದ ಕಲಿತು ಮಾಡಿ. ಸಹಜ ಹೆರಿಗೆಗೆ ಸಹಾಯವಾಗುತ್ತದೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಹಾಲಿನಿಂದ ಸ್ವಾದಿಷ್ಟ ತಿನಿಸುಗಳು

ರಸಾಸ್ವಾದ

ಹಾಲಿನಿಂದ ತಯಾರಿಸಬಹುದಾದ ತಿನಿಸುಗಳ ರೆಸಿಪಿ ನೀಡಿದ್ದಾರೆ **ವೇದಾವತಿ ಎಚ್. ಎಸ್.**

ಹಾಲಿನ ಪುಡಿಯ ಉಂಡೆ.

ಬೇಕಾಗುವ ಸಾಮಗ್ರಿಗಳು: ಹಾಲಿನ ಪುಡಿ 1 ಕಪ್, ಒಣಕೊಬ್ಬರಿ ತುರಿಯ ಬಿಳಿಯ ಭಾಗ ಅಥವಾ ರೆಡಿಮೇಡ್ ಒಣ ಕೊಬ್ಬರಿ ತುರಿ 1/2 ಕಪ್, ಸಕ್ಕರೆ 1/4 ಕಪ್, ತಣ್ಣನೆಯ ಹಾಲು 1/4 ಕಪ್, ಏಲಕ್ಕಿ ಪುಡಿ 1/4 ಟೀ ಚಮಚ, ತುಪ್ಪ 2 ಚಮಚ.

ತಯಾರಿಸುವ ವಿಧಾನ: ದಪ್ಪ ತಳದ ಬಾಣಲೆಯಲ್ಲಿ ತುಪ್ಪ, ಹಾಲು ಮತ್ತು ಹಾಲಿನ ಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಸಣ್ಣ ಉರಿಯಲ್ಲಿ ಒಲೆಯ ಮೇಲಿಟ್ಟು ಗಂಟ್ಟಾಗದ ರೀತಿಯಲ್ಲಿ ಕೈಯಾಡಿಸುತ್ತಾ ಇರಿ. ಒಂದು ನಿಮಿಷಕ್ಕೆ ಮಿಶ್ರಣವು ಗಟ್ಟಿಯಾಗುತ್ತದೆ. ಆಗ ಸಕ್ಕರೆಯನ್ನು ಮಿಕ್ಸಿಯಲ್ಲಿ ಪುಡಿ ಮಾಡಿ ಅದರಲ್ಲಿ ಸೇರಿಸಿ. ಪುಡಿ ಮಾಡಿ ಹಾಕುವುದರಿಂದ ಬೇಗ ಕರಗುತ್ತದೆ. ಸಕ್ಕರೆ ಕರಗಿ ಪಾಕ ಬರುತ್ತದೆ. ಹೀಗಾಗಲು ಒಂದು ನಿಮಿಷ ಸಾಕು. ನಂತರ ಒಣ ಕೊಬ್ಬರಿ ತುರಿಯನ್ನು ಸೇರಿಸಿ. ಒಂದು ನಿಮಿಷ ಮಿಶ್ರಣ ಮಾಡಿ. ಏಲಕ್ಕಿ ಪುಡಿಯನ್ನು ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿ. ಈಗ ಮುಟ್ಟಿದರೆ ಕೈಗೆ ಅಂಟುವುದಿಲ್ಲ. ನಂತರ ಒಲೆಯಿಂದ ಇಳಿಸಿ. ನಿಮಗೆ ಬೇಕಾದ ಗಾತ್ರದಲ್ಲಿ ಉಂಡೆಗಳನ್ನು ಮಾಡಿ ಕೊಬ್ಬರಿ ತುರಿಯಲ್ಲಿ ಉರುಳಿಸಿ. ರುಚಿಯಾದ ಹಾಲಿನ ಪುಡಿಯ ಉಂಡೆಗಳನ್ನು ತಯಾರಿಸಿ ಸವಿಯಿರಿ.

ದಿಡೀರ್ ಸಂದೇಶ್ ರೆಸಿಪಿ

ಬೇಕಾಗುವ ಸಾಮಗ್ರಿಗಳು: ಪನ್ನೀರ್ 400 ಗ್ರಾಂ, ಸಕ್ಕರೆಯ 250 ಗ್ರಾಂ. (ಪುಡಿ ಮಾಡಿ ಕೊಳ್ಳಿ), ಏಲಕ್ಕಿ ಪುಡಿ 1 ಟೀ ಚಮಚ, ಪಿಸ್ತಾ ಚೂರುಗಳು ಸ್ವಲ್ಪ.

ತಯಾರಿಸುವ ವಿಧಾನ: ಮೊದಲು ಪನ್ನೀರ್‌ಅನ್ನು ಕೈಯಲ್ಲಿ ಪುಡಿ ಮಾಡಿಕೊಳ್ಳಿ. ನಂತರ ಅದನ್ನು ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಪುಡಿ ಮಾಡಿದ ಪನ್ನೀರ್‌ಅನ್ನು ಬಾಣಲೆಯಲ್ಲಿ ಹಾಕಿ. ಪುಡಿ ಮಾಡಿಕೊಂಡ ಸಕ್ಕರೆಯನ್ನು ಪನ್ನಿರ್ ಜೊತೆಗೆ ಸೇರಿಸಿ ಕೈಯಲ್ಲಿ ಎರಡನ್ನೂ ಚೆನ್ನಾಗಿ ಸೇರಿಕೊಳ್ಳುವ ರೀತಿಯಲ್ಲಿ ಮಿಶ್ರಣ ಮಾಡಿ. ನಂತರ ಮಧ್ಯಮ ಉರಿಯಲ್ಲಿ ಮಗುಚಿ. ಏಲಕ್ಕಿ ಪುಡಿಯನ್ನು ಸೇರಿಸಿ. ಈಗ ತಯಾರಿಸಿದ ಪನ್ನೀರ್ ಸಕ್ಕರೆಯೊಂದಿಗೆ ಉಂಡೆ ಪಾಕದ ಹದಕ್ಕೆ ಬಂದಾಗ ಒಲೆಯಿಂದ ಇಳಿಸಿ ಒಂದು ತಟ್ಟೆಯಲ್ಲಿ ಹಾಕಿ. ಇದು ಸ್ವಲ್ಪ ತಣ್ಣಗಾದ ನಂತರ ನಿಮಗೆ ಬೇಕಾದ ಗಾತ್ರದಲ್ಲಿ ಉಂಡೆಗಳನ್ನು ಮಾಡಿಕೊಳ್ಳಿ. ನಂತರ ಉಂಡೆಗಳನ್ನು ಬೆರಳಿನಿಂದ ಸ್ವಲ್ಪ ಒತ್ತಿ ಅದರ ಮೇಲೆ ಪಿಸ್ತಾ ಚೂರುಗಳಿಂದ ಅಲಂಕರಿಸಿ. ರುಚಿಕರವಾದ ಬೆಂಗಾಲಿ ಸಿಹಿ ತಿಂಡಿ ಸಂದೇಶ್ ತಯಾರಿಸಿ ಸವಿಯಿರಿ ತಯಾರಿಸಿ ಸವಿಯಿರಿ.

ಮಿಲ್ಕ್ ಕೇಕ್/ ಕಲಾಖಂಡ್.

ಬೇಕಾಗುವ ಸಾಮಗ್ರಿಗಳು: ಕೆನೆಭರಿತ ಗಟ್ಟಿಯಾದ ಹಾಲು 3 ಲೀಟರ್, ಒಂದು ಚಿಕ್ಕ ಗಾತ್ರದ ನಿಂಬೆಹಣ್ಣಿನ ರಸ ಅಥವಾ 1/2 ಟೇಬಲ್ ಚಮಚ ನಿಂಬೆರಸ, ಸಕ್ಕರೆ 400 ಗ್ರಾಂ, ತುಪ್ಪ 80 ಗ್ರಾಂ, ಏಲಕ್ಕಿ ಪುಡಿ 1/ 2ಟೀ ಚಮಚ, ಪಿಸ್ತಾ ಸ್ವಲ್ಪ.

ತಯಾರಿಸುವ ವಿಧಾನ: ಬಾಣಲೆಯಲ್ಲಿ ಹಾಲನ್ನು ಹಾಕಿ ಮಧ್ಯಮ ಉರಿಯಲ್ಲಿ ಕುದಿಸಿ. ಹಾಲು ಅರ್ಧ ಆಗುವರೆಗೆ ಕುದಿಸುತ್ತಾ ಇರಿ. ನಂತರ ನಿಂಬೆರಸ ಸೇರಿಸಿ. ಈಗ ಅದು ಪನ್ನೀರ್ ರೀತಿಯಲ್ಲಿ ತಯಾರಾಗುತ್ತದೆ. ನೀರು ಮತ್ತು ಪನ್ನೀರ್ ಬೇರೆ ಬೇರೆ ಆಗುತ್ತಾ ಬರುವಾಗ ಸ್ವಲ್ಪ ಸ್ವಲ್ಪವೇ ಸಕ್ಕರೆಯನ್ನು ಸೇರಿಸುತ್ತಾ ಬನ್ನಿ. ಚೆನ್ನಾಗಿ ಕೈಯಾಡಿಸುತ್ತಾ ಇರಿ. ಸಕ್ಕರೆ ಕರಗಿ ಪಾಕ ಬರಲು ಪ್ರಾರಂಭವಾದಾಗ ತುಪ್ಪವನ್ನು ಸೇರಿಸಿ. ಮಿಶ್ರಣವು ಗಟ್ಟಿಯಾಗುತ್ತಾ ಬಾಣಲೆಯ ತಳ ಬಿಟ್ಟು ಬರುವಾಗ ತುಪ್ಪ ಸವರಿದ ದುಂಡನೆಯ ಪಾತ್ರೆ ಅಥವಾ ತುಪ್ಪ ಸವರಿದ ತಟ್ಟೆಗೆ ದಪ್ಪವಾಗಿ ಹಾಕಿ. ಇದು ಗಟ್ಟಿಯಾಗಲು 3 ರಿಂದ 4 ಗಂಟೆಯ ಬೇಕಾಗುತ್ತದೆ. ಗಟ್ಟಿಯಾದ ಬಳಿಕ ಕತ್ತರಿಸಿ ಪಿಸ್ತಾದಿಂದ ಅಲಂಕರಿಸಿ. ಈಗ ಮಿಲ್ಕ್ ಕೇಕ್ ಸವಿಯಲು ಸಿದ್ಧ.

ಇನ್‌ಸ್ಟಂಟ್ ಗಿಣ್ಣು.

ಬೇಕಾಗುವ ಸಾಮಾಗ್ರಿಗಳು: ಹಾಲು 2 ಕಪ್, ಹಾಲಿನ ಪುಡಿ 1 ಕಪ್, ಮೊಸರು 2 ಕಪ್, ಕಂಡೆನ್ಸ್ಡ್ ಮಿಲ್ಕ್ 2 ಕಪ್, ಏಲಕ್ಕಿ ಪುಡಿ 1/2 ಟೀ ಚಮಚ.

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ಹಾಲು ಮತ್ತು ಹಾಲಿನ ಪುಡಿಯನ್ನು ಹಾಕಿ ಗಂಟಿಲ್ಲದAತೆ ಮಿಶ್ರಣ ಮಾಡಿ. ಇವುಗಳ ಜೊತೆಗೆ ಮೊಸರು ಮತ್ತು ಕಂಡೆನ್ಸ್ಡ್ ಮಿಲ್ಕ್, ಏಲಕ್ಕಿ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಹಬೆ ಮಡಿಕೆಯ ತಳಕ್ಕೆ ನೀರನ್ನು ಹಾಕಿ ಅದರಲ್ಲಿ ಈ ಮಿಶ್ರಣವನ್ನು ಇಟ್ಟು ಒಂದು ತಟ್ಟೆಯನ್ನು ಮುಚ್ಚಿ ಅರ್ಧ ಗಂಟೆ ಬೇಯಿಸಿ. ಬೆಂದ ನಂತರ ರಿಫ್ರೇಜೇಟರ್ ನಲ್ಲಿ ಒಂದು ಗಂಟೆ ಇಟ್ಟು ನಂತರ ಹೊರಗೆ ತೆಗೆದು ನಿಮಗೆ ಬೇಕಾದ ಆಕಾರದಲ್ಲಿ ಕತ್ತರಿಸಿ. ರುಚಿಕರವಾದ ಇನ್‌ಸ್ಟೆಂಟ್ ಗಿಣ್ಣನ್ನು ಮನೆಯಲ್ಲೇ ತಯಾರಿಸಿ ಸವಿಯಿರಿ.

ಶಾಹಿ ತುಕ್ಡಾ

ಬೇಕಾಗುವ ಸಾಮಗ್ರಿಗಳು: ಬ್ರೆಡ್ ಒಂದು ಪ್ಯಾಕ್, ತುಪ್ಪ 4 ಟೇಬಲ್ ಚಮಚ.

ರಬ್ಡಿ ತಯಾರಿಸಲು: ಹಾಲು 1 ಲೀಟರ್, ಹಾಲಿನ ಪುಡಿ 1/4 ಕಪ್, ಕಂಡೆನ್ಸ್ಡ್ ಮಿಲ್ಕ್ 200 ಗ್ರಾಂ, ಏಲಕ್ಕಿ ಪುಡಿ 1/4 ಟೀ ಚಮಚ, ಕೇಸರಿದಳಗಳು ಸ್ವಲ್ಪ, ಪಿಸ್ತಾ ಸ್ವಲ್ಪ.

ಸಕ್ಕರೆ ಪಾಕ: 1/2 ಕಪ್ ಸಕ್ಕರೆ, 1/2 ಕಪ್ ನೀರು, ಸ್ವಲ್ಪ ಕೇಸರಿ ದಳಗಳು.

ತಯಾರಿಸುವ ವಿಧಾನ: ಬ್ರೆಡ್ ಅನ್ನು ನಿಮಗೆ ಬೇಕಾದ ಆಕಾರದಲ್ಲಿ ಕತ್ತರಿಸಿಕೊಳ್ಳಿ. ಬ್ರೆಡಿನ ಬಿಳಿಯ ಭಾಗ ಮಾತ್ರವಿರಲಿ. ಈ ಬ್ರೆಡ್ ಅನ್ನು ತುಪ್ಪದಲ್ಲಿ ಸಣ್ಣ ಉರಿಯಲ್ಲಿ ಕೆಂಬಣ್ಣ ಬರುವರೆಗೆ ಟೋಸ್ಟ್ ಮಾಡಿ. ಸಕ್ಕರೆಯನ್ನು ಎಳೆ ಪಾಕ ಮಾಡಿಕೊಳ್ಳಿ. ಕೇಸರಿ ದಳಗಳನ್ನು ಸಕ್ಕರೆ ಪಾಕಕ್ಕೆ ಸೇರಿಸಿ. ಬಾಣಲೆಯಲ್ಲಿ ಹಾಲನ್ನು ಹಾಕಿ ಕುದಿಸುತ್ತಾ ಹೋಗಿ. ಆಗ ಹಾಲು ಬಾಣಲೆಯ ಸುತ್ತಲೂ ಕೆನೆ ಕಟ್ಟಲು ಪ್ರಾರಂಭವಾಗುತ್ತದೆ. ಸ್ವಲ್ಪ ಕೇಸರಿದಳಗಳನ್ನು ಕುದಿಯುತ್ತಿರುವ ಹಾಲಿಗೆ ಸೇರಿಸಿ. ಹಾಲು ದಪ್ಪವಾಗಿ ಗಟ್ಟಿಯಾಗುತ್ತ ಬರುವಾಗ ಹಾಲಿನ ಪುಡಿಗೆ ಸ್ವಲ್ಪ ಬಿಸಿ ಹಾಲನ್ನು ಸೇರಿಸಿ ಪೇಸ್ಟ್ ಮಾಡಿ ಗಂಟಾಗದ ರೀತಿಯಲ್ಲಿ ಮಿಶ್ರಣ ಮಾಡಿ. ಪುನಃ ಕುದಿಸಿ. ಈಗ ಕಂಡೆನ್ಸ್ಡ್ ಮಿಲ್ಕ್ ಅನ್ನು ಸೇರಿಸಿ. ಇದು ದಪ್ಪವಾಗಿ ಬರುವಾಗ ಏಲಕ್ಕಿ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ ಒಲೆಯಿಂದ ಇಳಿಸಿ. ಈಗ ರಬ್ಡಿ ರೆಡಿ. ಈ ರಬ್ಡಿಯನ್ನು ಸ್ವಲ್ಪ ಸಮಯ ತಯಾರಿಸಿದ ಫ್ರೀಜ್ನಲ್ಲಿ ತಣ್ಣಗಾಗಲು ಬಿಡಿ. ಬ್ರೆಡ್‌ಅನ್ನು ಸಕ್ಕರೆ ಪಾಕದಲ್ಲಿ ಅದ್ದಿ ಅದನ್ನು ಒಂದು ತಟ್ಟೆಯಲ್ಲಿ ಇಡಿ. ನಂತರ ಒಂದು ಪ್ಲೇಟ್‌ನಲ್ಲಿ ತಯಾರಿಸಿದ ರಬ್ಡಿಯನ್ನು ಬ್ರೆಡ್ ಮೇಲೆ ಹಾಕಿ. ಅಲಂಕಾರ ಮಾಡಲು ಪಿಸ್ತಾವನ್ನು ಅದರ ಮೇಲೆ ಹಾಕಿ. ರುಚಿಕರವಾದ ಶಾಹಿ ತುಕ್ಡಾ ತಯಾರಿಸಿ ಸವಿಯಿರಿ.

ಹಿಮಾಚಲ ಪ್ರದೇಶ: 'ಅತ್ಯಂತ ಹಳೆಯ ಪಕ್ಷ'ಕ್ಕೆ ಅಳಿವು ಉಳಿವಿನ ಹೋರಾಟ

'ಕೈ' ಸರ್ಕಾರ ಉಳಿಯುವುದೇ...

ಉತ್ತರ ಭಾರತದಲ್ಲಿ ಕಾಂಗ್ರೆಸ್‌ನ ಏಕೈಕ ಸರ್ಕಾರ ಇರುವುದು ಹಿಮಾಚಲ ಪ್ರದೇಶದಲ್ಲಿ. ಒಂದು ವೇಳೆ ಇಲ್ಲಿನ ಸರ್ಕಾರ ಪತನಗೊಂಡರೆ ಸ್ವಾತಂತ್ರ್ಯ ನಂತರದಲ್ಲಿ ಮೊದಲ ಬಾರಿಗೆ ಉತ್ತರ ಭಾರತದಲ್ಲಿ ಕಾಂಗ್ರೆಸ್ ಸರ್ಕಾರ ಇಲ್ಲದಂತಾಗುತ್ತದೆ. ಅಗ್ನಿವೀರರ ನೇಮಕಾತಿಗೆ ಪ್ರತಿರೋಧ, ಸೇಬು ಬೆಳೆಗಾರರ ಸಮಸ್ಯೆ, ಅಭಿವೃದ್ಧಿ ಕೆಲಸಗಳು, ನಾಯಕತ್ವದ ವರ್ಚಸ್ಸಿನಂತಹ ಅಂಶಗಳು ವಿಶೇಷವಾಗಿ ಮತದಾನದ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಸಾಮಾನ್ಯ ನಂಬಿಕೆ. ಈ ನಂಬಿಕೆಯನ್ನು ಹುಸಿ ಮಾಡುವ ಯಾವುದೇ ಅಸಾಧಾರಣ ಸಂಗತಿಗಳು ಈ ಚುನಾವಣೆಯಲ್ಲಿ ಕಂಡು ಬರುತ್ತಿಲ್ಲ.

• ಮಂಜುನಾಥ ಹೆಬ್ಬಾರ್

ನವದೆಹಲಿ: ಜೂನ್ 1ರ ಲೋಕಸಭಾ ಹಾಗೂ ವಿಧಾನಸಭಾ ಉಪಚುನಾವಣೆಯ ಮತದಾನಕ್ಕೆ ಸಜ್ಜಾಗುತ್ತಿರುವ ಹಿಮಾಚಲ ಪ್ರದೇಶವು ಪಶ್ಚಿಮ ಹಿಮಾಲಯ ತಪ್ಪಲಿನ ಸಣ್ಣ ರಾಜ್ಯ. ಈ ಚುನಾವಣೆಯ ಫಲಿತಾಂಶವು ರಾಜ್ಯ ಕಾಂಗ್ರೆಸ್ ಸರ್ಕಾರದ ಭವಿಷ್ಯವನ್ನು ನಿರ್ಧರಿಸಲಿದೆ. ಹೀಗಾಗಿ, ಈ ಚುನಾವಣೆಯು 'ಕೈ' ಪಾಳಯಕ್ಕೆ ನಿರ್ಣಾಯಕ.

'ದೇವಭೂಮಿ'ಯೆಂದು ಪ್ರಖ್ಯಾತವಾದ ಈ ರಾಜ್ಯದ ರಾಜಕೀಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯೇ ಪ್ರಮುಖ. ಅವರು ತಪ್ಪಿದರೆ ಇವರು, ಇವರು ತಪ್ಪಿದರೆ ಅವರು ಎಂಬ ಸ್ಥಿತಿ ನಿರ್ಮಾಣವಾಗಿ ದಶಕಗಳು ಉರುಳಿವೆ. ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್– ಬಿಜೆಪಿ ನಡುವೆ ನೇರ ಹಣಾಹಣಿ ನಡೆಯಲಿದೆ. ರಾಜ್ಯದಲ್ಲಿ ಸಂಘಟನೆ ಬಲಪಡಿಸಲು ಆಮ್ ಆದ್ಮಿ ಪಕ್ಷವು (ಎಎಪಿ) ಈ ಹಿಂದೆ ಪ್ರಯತ್ನ ನಡೆಸಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಗಳಿಸಿದ ಮತ ಪ್ರಮಾಣ ಶೇ 1ರಷ್ಟು. ಬಳಿಕ ಪಕ್ಷವು ಸಂಘಟನೆಯ ಪ್ರಯತ್ನವನ್ನು ಕೈಬಿಟ್ಟಿತು.

2014ರ ಲೋಕಸಭಾ ಚುನಾವಣೆಯಲ್ಲಿ ಕಮಲ ಪಾಳಯವು ಎಲ್ಲ ನಾಲ್ಕು ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. 2019ರ ಚುನಾವಣೆಯಲ್ಲೂ ನಾಲ್ಕು ಕ್ಷೇತ್ರಗಳು ಬಿಜೆಪಿ ಪಾಲಾಗಿದ್ದವು. ಪಕ್ಷದ ಮತ ಪ್ರಮಾಣ ಗಣನೀಯವಾಗಿ ಹೆಚ್ಚಾಗಿತ್ತು. 2022ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಶೇ 43.90 ಮತ ಪಡೆದಿದ್ದ ಕೈ ಪಾಳಯವು 40 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಶೇ 40 ಮತ ಗಳಿಸಿದ್ದ ಬಿಜೆಪಿಗೆ ಸಿಕ್ಕಿದ್ದು 25 ಸ್ಥಾನಗಳು.



*ಮಂಡಿಯ ಎರಡು ಬಾರಿಯ ಸಂಸದ ರಾಮ್ ಸ್ವರೂಪ್ ಶರ್ಮಾ 2011ರಲ್ಲಿ ನಿಧನ. ಬಳಿಕ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರತಿಭಾ ಸಿಂಗ್ ಗೆಲುವು

'ಕೈ' ಮೀರಿದ ಭಿನ್ನಮತ

ಈ ವರ್ಷ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಆರು ಶಾಸಕರು ಅಡ್ಡ ಮತದಾನ ಮಾಡಿದ್ದರು. ಇದರಿಂದಾಗಿ, ಕಾಂಗ್ರೆಸ್ ಅಭ್ಯರ್ಥಿ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಸೋಲಾಗಿತ್ತು. ವಿಶ್ವಾಸಮತ ಯಾಚನೆಗೆ ಬಿಜೆಪಿ ಪಟ್ಟು ಹಿಡಿದಿತ್ತು. ಹಣಕಾಸು ಮಸೂದೆ ಪರ ಮತ ಹಾಕದ ಕಾರಣಕ್ಕೆ ಆರು ಭಿನ್ನಮತೀಯ ಶಾಸಕರನ್ನು ವಿಧಾನ ಸಭಾಧ್ಯಕ್ಷರು ಅನರ್ಹಗೊಳಿಸಿದ್ದರು. ಜತೆಗೆ, ಬಿಜೆಪಿಯ 15 ಶಾಸಕರನ್ನು ಸದನದಿಂದ ಅಮಾನತುಗೊಳಿಸಿದ್ದರು. ಹೀಗಾಗಿ, ಸರ್ಕಾರ ಉಳಿದುಕೊಂಡಿತ್ತು. ಈ ನಡುವೆ, ಮೂವರು ಪಕ್ಷೇತರ ಶಾಸಕರು ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಅವರ ರಾಜೀನಾಮೆಯನ್ನು ವಿಧಾನಸಭಾಧ್ಯಕ್ಷರು ಸ್ವೀಕರಿಸಿಲ್ಲ. ಪಕ್ಷಾಂತರ ನಿಷೇಧ ಕಾಯ್ದೆಯಡಿ ಈ ಮೂವರನ್ನು ಅನರ್ಹಗೊಳಿಸಲು ನೋಟಿಸ್ ನೀಡಿದ್ದಾರೆ. ಅನರ್ಹತೆ ಬಗ್ಗೆ ಜೂನ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುವುದಾಗಿ ಸಭಾಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ.

ಶಾಸಕರ ಅನರ್ಹತೆಯ ಬಳಿಕ ವಿಧಾನಸಭೆಯ ಸದಸ್ಯ ಬಲ 68ರಿಂದ 62ಕ್ಕೆ ಇಳಿದಿದೆ. 34 ಸದಸ್ಯರ ಬೆಂಬಲ ಹೊಂದಿರುವ ಕಾಂಗ್ರೆಸ್ ಸರ್ಕಾರಕ್ಕೆ ಸರಳ ಬಹುಮತ ಇದೆ. ಅನರ್ಹರು ಬಿಜೆಪಿ ಟಿಕೆಟ್‌ನಿಂದ ಅಖಾಡಕ್ಕೆ ಇಳಿದಿದ್ದಾರೆ. ವಿಧಾನಸಭಾ ಉಪಚುನಾವಣೆಯಲ್ಲಿ ಆರು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದರೆ ಕಾಂಗ್ರೆಸ್ ಸರ್ಕಾರಕ್ಕೆ ಸಮಸ್ಯೆ ಎದುರಾಗುವುದು ನಿಸ್ಸಂಶಯ. 'ಬೇಲಿ ಮೇಲೆ ಕುಳಿತಿರುವ' ಕಾಂಗ್ರೆಸ್‌ನ ಇನ್ನಷ್ಟು ಶಾಸಕರು ಕೇಸರಿ ಪಾಳಯಕ್ಕೆ ಜಿಗಿಯುವುದು ಖಚಿತ.

ರಾಜ್ಯ ಕಾಂಗ್ರೆಸ್‌ನಲ್ಲಿ ಎರಡು ಗುಂಪುಗಳಿವೆ. ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ನಡುವಿನ ಮನಸ್ತಾಪ ಮೇರೆ ಮೀರಿದೆ. ಅವರ ಪುತ್ರ ವಿಕ್ರಮಾದಿತ್ಯ ಸಿಂಗ್ ಅವರು ಭಿನ್ನಮತೀಯ ಚಟುವಟಿಕೆಯ ಸೂತ್ರಧಾರರಾಗಿದ್ದವರು. ಆದರೆ, ಲೋಕೋಪಯೋಗಿ ಸಚಿವರಾಗಿರುವ ವಿಕ್ರಮಾದಿತ್ಯ ಅವರನ್ನು ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಕಣಕ್ಕಿಳಿಸಿದೆ. ನಟಿ ಕಂಗನಾ ರನೌತ್ ಬಿಜೆಪಿ ಹುರಿಯಾಳು. ಇಲ್ಲಿ ಕಂಗನಾ ಎದುರು ವಿಕ್ರಮಾದಿತ್ಯ ಗೆಲ್ಲಲೇಬೇಕು ಎಂದು ಕಾಂಗ್ರೆಸ್ ನಾಯಕರು ಬಯಸುತ್ತಿದ್ದಾರೆ. ಸೋತರೆ ವಿಕ್ರಮಾದಿತ್ಯ ಅವರು ಸರ್ಕಾರ ಕೆಡವಲು ಪ್ರಯತ್ನ ಆರಂಭಿಸುತ್ತಾರೆ ಎಂಬುದು 'ಕೈ' ನಾಯಕರ ಆತಂಕ.


ವಿಕ್ರಮಾದಿತ್ಯ ಸಿಂಗ್

ಅನುರಾಗ್ ಠಾಕೂರ್

ಮೋದಿ ನಾಮಬಲವೇ ಶಕ್ತಿ

ಸರ್ಕಾರ ಕೆಡವಲು ಶತಪ್ರಯತ್ನ ನಡೆಸುತ್ತಿರುವ ಬಿಜೆಪಿಯು ಭಿನ್ನಮತದಿಂದ ಮುಕ್ತವಾಗಿಲ್ಲ. ಇಲ್ಲಿ ಮಾಜಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಹಾಗೂ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರದ್ದು ಎಣ್ಣೆ ಸೀಗೆಕಾಯಿ ಸಂಬಂಧ. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸೇ ಬಿಜೆಪಿಗೆ ಶಕ್ತಿ. ಮೋದಿ ನಾಮಬಲದಿಂದಲೇ ಎರಡು ಲೋಕಸಭಾ ಚುನಾವಣೆಗಳಲ್ಲೂ ಪಕ್ಷ ಗೆದ್ದಿತ್ತು. ಈ ಸಲವೂ ಅದೇ ಫಲಿತಾಂಶ ಪುನರಾವರ್ತನೆ ಆಗಲಿದೆ ಎಂಬುದು ಬಿಜೆಪಿ ನಾಯಕರ ನಂಬಿಕೆ.

ಉತ್ತರ ಪ್ರದೇಶದ ವಿವಿಧೆಡೆ ಚುನಾವಣಾ ಪ್ರಚಾರ; ವಿರೋಧ ಪಕ್ಷಗಳ ಮೇಲೆ ಪ್ರಧಾನಿ ಮೋದಿ ವಾಗ್ದಾಳಿ

'ರಾಮ ಮಂದಿರದ ಮೇಲೆ ಬುಲ್ಡೋಜರ್'

ಬಾರಾಬಂಕಿ/ಫತೇಪುರ/ಹಮೀರ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದರೆ ರಾಮ ಮಂದಿರದ ಮೇಲೆ ಬುಲ್ಡೋಜರ್ ಹರಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆರೋಪಿಸಿದ್ದಾರೆ. 'ಎಲ್ಲಿ ಬುಲ್ಡೋಜರ್ ಹರಿಸಬೇಕು' ಎಂಬುದನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಂದ ಕಲಿಯುವಂತೆ ಸಲಹೆ ನೀಡಿದ್ದಾರೆ.

ಬಾರಾಬಂಕಿಯಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, 'ಎಸ್‌ಪಿ ಮುಖಂಡರೊಬ್ಬರು ರಾಮ ಮಂದಿರ ನಿಷ್ಪ್ರಯೋಜಕ ಎಂದು ರಾಮ ನವಮಿಯ ದಿನ ಹೇಳಿದ್ದರು. ಅದೇ ಹೊತ್ತಿಗೆ ರಾಮ ಮಂದಿರದ ಬಗೆಗಿನ ಸುಪ್ರೀಂ ಕೋರ್ಟ್ ತೀರ್ಪನ್ನು ಬದಲಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ. ಎಸ್‌ಪಿ–ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅವರು ರಾಮ ಲಲ್ಲಾನನ್ನು ಮತ್ತೆ ಟೆಂಟ್‌ಗೆ ಕಳಿಸುತ್ತಾರೆ ಮತ್ತು ದೇವಸ್ಥಾನದ ಮೇಲೆ ಬುಲ್ಡೋಜರ್ ಹರಿಸುತ್ತಾರೆ' ಎಂದು ಪ್ರತಿಪಾದಿಸಿದರು.

'ಇಂಡಿಯಾ' ಕೂಟವು ಅಸ್ಥಿರತೆ ಮೂಡಿಸುವ ಸಲುವಾಗಿ ಕಣದಲ್ಲಿದ್ದು, ಚುನಾವಣೆ ಮುಗಿಯುತ್ತಿದ್ದಂತೆಯೇ ಕುಸಿದು ಬೀಳಲಿದೆ' ಎಂದು ಅಭಿಪ್ರಾಯಪಟ್ಟರು.

'ಎಸ್‌ಪಿ–ಕಾಂಗ್ರೆಸ್ ಓಲೈಕೆಗೆ ಶರಣಾಗಿವೆ. ದೇಶಕ್ಕೆ ಸತ್ಯ ಏನು ಎನ್ನುವುದನ್ನು ಮೋದಿ ಹೇಳುತ್ತಿದ್ದರೆ, ಹಿಂದೂ–ಮುಸ್ಲಿಂ ವಿಭಜನೆ ಮಾಡುತ್ತಿರುವುದಾಗಿ ಆರೋಪಿಸುತ್ತಾರೆ. ಇವರು ಓಲೈಸಲು ಪ್ರಯತ್ನಿಸುತ್ತಿದ್ದ ಮತಬ್ಯಾಂಕ್ ಕೂಡ ಸತ್ಯವನ್ನು ಅರ್ಥಮಾಡಿಕೊಳ್ಳಲು ಆರಂಭಿಸಿದೆ. ನಮ್ಮ ತಾಯಂದಿರು ಮತ್ತು ಸಹೋದರಿಯರಿಗೆ ತ್ರಿವಳಿ ತಲಾಖ್ ಕುರಿತ ಕಾನೂನಿನಿಂದ ಖುಷಿಯಾಗಿದ್ದು, ನಿರಂತರವಾಗಿ ಬಿಜೆಪಿಯನ್ನು ಆಶೀರ್ವದಿಸುತ್ತಿದ್ದಾರೆ' ಎಂದು ಹೇಳಿದರು.

ಅಖಿಲೇಶ್ ಯಾದವ್ ಬಗ್ಗೆ ಲೇವಡಿ ಮಾಡಿದ ಮೋದಿ, 'ರಾಯ್‌ಬರೇಲಿಯ ಜನ ಪ್ರಧಾನಿಯನ್ನು ಆಯ್ಕೆ ಮಾಡಲಿದ್ದಾರೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ಅದನ್ನು ಕೇಳಿ ಸಮಾಜವಾದಿ ರಾಜಕುಮಾರನ ಹೃದಯ ಒಡೆದುಹೋಗಿದೆ. ಕಣ್ಣೀರು ಬಂದಿಲ್ಲ. ಆದರೆ, ಅವರ ಹೃದಯದ ಎಲ್ಲ ಆಸೆಗಳೂ ಕೊಚ್ಚಿಕೊಂಡುಹೋಗಿವೆ' ಎಂದಿದ್ದಾರೆ.

ಫತೇಪುರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಮೋದಿ, 'ರಾಹುಲ್ ಗಾಂಧಿ ಅಮೇಠಿಯಿಂದ ಸ್ಪರ್ಧಿಸುವುದಿಲ್ಲ ಎಂದು ನಾನು ಭವಿಷ್ಯ ನುಡಿದಿದ್ದೆ. ಈಗ ಅದು ನಿಜವಾಗಿದೆ. ಮುಂದಿನ ಸುದ್ದಿ ಏನು ಅಂದರೆ, ತನ್ನ ಮಾನ ಉಳಿಸಿಕೊಳ್ಳಲು ಕಾಂಗ್ರೆಸ್ 'ಮಿಷನ್ 50' ಆರಂಭಿಸಿದೆ. ಇಡೀ ದೇಶದಲ್ಲಿ ಹೇಗಾದರೂ ಮಾಡಿ 50 ಸ್ಥಾನಗಳನ್ನು ಗೆಲ್ಲುವುದು ಕಾಂಗ್ರೆಸ್ ಗುರಿಯಾಗಿದೆ' ಎಂದು ಹೇಳಿದರು.

ನಂತರ ಹಮೀರ್‌ಪುರದಲ್ಲಿ ಮಾತನಾಡಿದ ಪ್ರಧಾನಿ, 'ಜನರ ಮತಗಳ ಮೂಲಕ ಅಧಿಕಾರಕ್ಕೆ ಬರುವ ಎಸ್‌ಪಿ–ಕಾಂಗ್ರೆಸ್ ಜನರ ಆಸ್ತಿಯ ಒಂದು ಪಾಲನ್ನು ವೋಟ್ ಜಿಹಾದ್ ಮಾಡಿದವರಿಗೆ ಕೊಡುಗೆಯಾಗಿ ನೀಡಲಿವೆ' ಎಂದು ಆರೋಪಿಸಿದರು.

ತಾನು ಎಸ್‌ಪಿ ಮತ್ತು ಕಾಂಗ್ರೆಸ್ ವಿರುದ್ಧ ಎಚ್ಚರಿಕೆ ನೀಡಲು ಇಲ್ಲಿಗೆ ಬಂದಿದ್ದೇನೆ ಎಂದು ತಿಳಿಸಿದರು.

ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತ್ರಿಶೂಲವನ್ನು ಎತ್ತಿ ತೋರಿಸಿದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೂ ಪಾಲ್ಗೊಂಡರು– ಪಿಟಿಐ ಚಿತ್ರ

'ದಲಿತರ, ಹಿಂದುಳಿದವರ ಮೇಲೆ ಬುಲ್ಡೋಜರ್'

ನವದೆಹಲಿ (ಪಿಟಿಐ): 'ಎಲ್ಲಿ ಬುಲ್ಡೋಜರ್ ಹರಿಸಬೇಕು ಎಂಬುದನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಂದ ಕಲಿಯಿರಿ' ಎಂದು ಪ್ರಧಾನಿ ಮೋದಿ ನೀಡಿದ್ದ ಸಲಹೆಗೆ ಕಾಂಗ್ರೆಸ್ ತಿರುಗೇಟು ಕೊಟ್ಟಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿಯ ಬುಲ್ಡೋಜರ್ ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ವರ್ಗಗಳ ಮೇಲೆ ಹರಿಯುತ್ತಿದೆ ಎಂದಿದೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್, ಯೋಗಿ ಆದಿತ್ಯನಾಥ ಅವರ ವೆಬ್‌ಸೈಟ್‌ನಲ್ಲಿರುವ ಲೇಖನವೊಂದನ್ನು ಉಲ್ಲೇಖಿಸಿ, ಅದು ಆರ್‌ಎಸ್‌ಎಸ್‌ನ ಮೀಸಲಾತಿ ವಿರೋಧಿ ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆ ಎಂದು ಆರೋಪಿಸಿದ್ದಾರೆ. 'ಮೀಸಲಾತಿ ಕುರಿತ ಆದಿತ್ಯನಾಥ ಅವರ ನಿಲುವುಗಳಿಂದಾಗಿ ಅವರನ್ನು ಬೆಂಬಲಿಸುತ್ತಿದ್ದೇನೆ ಎಂದು ಪ್ರಧಾನಿ ಸ್ಪಷ್ಟವಾಗಿ ಹೇಳಲಿ. ಇದೇ ಅವರ 'ಚಾರ್ ಸೌ ಪಾರ್' ಎನ್ನುವ ಘೋಷಣೆಯ ಹಿಂದಿನ ರಹಸ್ಯ. 400 ಸ್ಥಾನಗಳ ಬಹುಮತದೊಂದಿಗೆ ಅವರು ಸಂಸತ್ತಿನಲ್ಲಿ ಬಾಬಾ ಸಾಹೇಬರ ಸಂವಿಧಾನವನ್ನು ತಿದ್ದುಪಡಿ ಮಾಡಬಹುದಾಗಿದ್ದು, ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳ ಮೀಸಲಾತಿ ಹಕ್ಕನ್ನು ಕಸಿಯಬಹುದಾಗಿದೆ' ಎಂದು ಪ್ರತಿಪಾದಿಸಿದ್ದಾರೆ. 'ಅಂಬೇಡ್ಕರ್ ಅವರ ಸಂವಿಧಾನ ಅಂತ್ಯಗೊಳಿಸಿ, 'ಮನುವಾದಿ ಚಿಂತನೆ'ಯ ಆಧಾರದಲ್ಲಿ ಹೊಸ ಸಂವಿಧಾನವನ್ನು ರೂಪಿಸುವ ದಶಕಗಳ ಹಿಂದಿನ ಆರ್‌ಎಸ್‌ಎಸ್ ಪಿತೂರಿಯನ್ನು ಬಿಜೆಪಿಯು ಜಾರಿ ಮಾಡಲು ಹೊರಟಿದೆ' ಎಂದು ಆರೋಪಿಸಿದ್ದಾರೆ.

'ಅನುದಾನ ರದ್ದುಪಡಿಸಿದ್ದು ಏಕೆ?'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಹಿಂದುಳಿದ ಪ್ರದೇಶಗಳ ಅನುದಾನ ನಿಧಿಯನ್ನು 2015ರಲ್ಲಿ ರದ್ದುಪಡಿಸಿದ್ದು ಏಕೆ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ಹಿಂದಿನ ಯುಪಿಎ ಸರ್ಕಾರದ ದೂರದೃಷ್ಟಿಯ ಯೋಜನೆಯನ್ನು ಅತ್ಯಂತ ನಿರ್ದಯವಾಗಿ ಅಂತ್ಯಗೊಳಿಸಿದ್ದು ಏಕೆ ಎನ್ನುವುದನ್ನು ವಿವರಿಸಬೇಕು ಎಂದು ಒತ್ತಾಯಿಸಿದೆ. 'ಭಾರತದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗಾಗಿ ಜಾರಿಗೆ ತರಲಾಗಿದ್ದ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯನ್ನು ಮೋದಿ ಸರ್ಕಾರವು ರದ್ದು ಮಾಡಿದ್ದು ಏಕೆ? ಬಿಜೆಪಿಯು ಉತ್ತರ ಪ್ರದೇಶದ ಮೆಂತೆ ಬೆಳೆಯುವ ರೈತರನ್ನು ನಿರ್ಲಕ್ಷಿಸಿದ್ದೇಕೆ? ಬುಧ್ವಾಲ್ ಸಕ್ಕರೆ ಮಿಲ್ ಅನ್ನು ಪುನರಾರಂಭಿಸುವ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸುಳ್ಳು ಹೇಳಿದ್ದು ಏಕೆ?' ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತ್ ಸ್ವಾಭಿಮಾನ್ ಆಂದೋಲನ'ದ ಕಾರ್ಯಕರ್ತರೊಬ್ಬರು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಮೊಳೆಗಳ ಮೇಲೆ ಕೂರುವ ಮೂಲಕ ಮತದಾನದ ಬಗ್ಗೆ ವಿಭಿನ್ನವಾಗಿ ಜಾಗೃತಿ ಮೂಡಿಸಿದರು –ಪಿಟಿಐ ಚಿತ್ರ

'ಭರವಸೆ ಈಡೇರಿಸದ ಬಿಜೆಪಿ'

ಲೇಹ್ (ಪಿಟಿಐ): ಲಡಾಖ್‌ಗೆ ರಾಜ್ಯದ ಸ್ಥಾನಮಾನ ಸಿಗಬೇಕೆಂದು ಅಲ್ಲಿನ ಜನ ಬಯಸಿದ್ದರು. ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜನರ ಬಯಕೆಯನ್ನು ಈಡೇರಿಸಲಿಲ್ಲ ಎಂದು ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಅಸಮಾಧಾನ ವ್ಯಕ್ತಪಡಿಸಿದರು. 2019ರ ಚುನಾವಣೆಯ ವೇಳೆ ಬಿಜೆಪಿಯು ಆರನೇ ಪರಿಚ್ಛೇದವನ್ನು ಉಳಿಸುವ ಭರವಸೆ ನೀಡಿತ್ತು. ನಮ್ಮ ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಸುತ್ತೇವೆ ಎಂದರು.

ರಾಯ್‌ಬರೇಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಭಾವುಕ ಮಾತು

'ಮಗನನ್ನು ಕ್ಷೇತ್ರದ ಜನರಿಗೆ ಕೊಟ್ಟಿದ್ದೇನೆ'

ರಾಯ್‌ಬರೇಲಿ (ಪಿಟಿಐ): ನನ್ನ ಮಗ ರಾಹುಲ್ ಗಾಂಧಿಯನ್ನು ನಾನು ರಾಯ್‌ಬರೇಲಿ ಜನರಿಗೆ ನೀಡುತ್ತಿದ್ದು, ಅವರು ನಿಮ್ಮನ್ನು ನಿರಾಸೆಪಡಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಶುಕ್ರವಾರ ಕ್ಷೇತ್ರದ ಜನರಿಗೆ ಭರವಸೆ ನೀಡಿದರು.

ಮಗ ರಾಹುಲ್ ಹಾಗೂ ಮಗಳು ಪ್ರಿಯಾಂಕಾ ಅವರೊಂದಿಗೆ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ನೀವು ನನಗೆ ಎಲ್ಲವನ್ನೂ ಕೊಟ್ಟಿದ್ದೀರಿ. ಆದ್ದರಿಂದ, ಸೋದರ ಸೋದರಿಯರೇ, ನಾನು ನನ್ನ ಮಗನನ್ನು ನಿಮಗೆ ನೀಡುತ್ತಿದ್ದೇನೆ. ನೀವು ಅವರನ್ನೂ ನಿಮ್ಮವರೆಂದು ಪರಿಗಣಿಸಿ' ಎಂದು ಭಾವುಕವಾಗಿ ಮಾತನಾಡಿದರು.


ಸೋನಿಯಾ ಗಾಂಧಿ

'ಇಂದಿರಾ ಗಾಂಧಿ ಮತ್ತು ರಾಯ್‌ಬರೇಲಿಯ ಜನ ನನಗೆ ಕಲಿಸಿದ ಪಾಠಗಳನ್ನೇ ನಾನು ರಾಹುಲ್ ಹಾಗೂ ಪ್ರಿಯಾಂಕಾ ಅವರಿಗೆ ಕಲಿಸಿದ್ದೇನೆ. ಎಲ್ಲರನ್ನೂ ಗೌರವಿಸಬೇಕು, ದುರ್ಬಲರನ್ನು ರಕ್ಷಿಸಬೇಕು, ಜನರ ಹಕ್ಕುಗಳಿಗಾಗಿ ಅನ್ಯಾಯದ ವಿರುದ್ಧ ಹೋರಾಡಬೇಕು, ಹೋರಾಟದ ನಿಮ್ಮ ಬೇರು ಮತ್ತು ಪರಂಪರೆ ತುಂಬಾ ಆಳವಾಗಿರುವುದರಿಂದ, ಹೆದರಬೇಡಿ' ಎಂದು ಹೇಳಿದರು.

'20 ವರ್ಷಗಳ ಕಾಲ ಸಂಸದರಾಗಿ ಸೇವೆ ಸಲ್ಲಿಸಲು ನೀವು ನನಗೆ ಅವಕಾಶ ನೀಡಿದಿರಿ. ಇದು ನನ್ನ ಜೀವನದ ಅತಿ ದೊಡ್ಡ ಆಸ್ತಿ' ಎಂದು ತಿಳಿಸಿದರು.

'ರಾಯ್‌ಬರೇಲಿ ಕುಟುಂಬದ ಕ್ಷೇತ್ರವಲ್ಲ'

ರಾಯ್‌ಬರೇಲಿ ಕುರಿತು ಪ್ರಿಯಾಂಕಾ ಗಾಂಧಿ 'ಕುಟುಂಬದ ಕ್ಷೇತ್ರ' ಎಂದಿರುವುದನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಟೀಕಿಸಿದ್ದು, ಅದು ಯಾವುದೇ ಕುಟುಂಬದ ಕ್ಷೇತ್ರವಲ್ಲ, ಜನರ ಕ್ಷೇತ್ರ ಎಂದು ಹೇಳಿದರು.

ಉತ್ತರ ಪ್ರದೇಶದ ದೌಲತ್‌ಪುರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ಅವರು (ಪ್ರಿಯಾಂಕಾ) ರಾಯ್‌ಬರೇಲಿ ಮತ್ತು ಅಮೇಠಿ ನಮ್ಮ 'ಕುಟುಂಬದ ಕ್ಷೇತ್ರ'ಗಳು ಎಂದಿದ್ದಾರೆ. ನಾನು ಹೇಳುತ್ತೇನೆ, ಅವು ಯಾವುದೇ ಕುಟುಂಬಕ್ಕೆ ಸೇರಿದ ಕ್ಷೇತ್ರಗಳಲ್ಲ. ಅವು ಎರಡೂ ಜಿಲ್ಲೆಗಳ ಬಡ ಯುವಕರ ಕ್ಷೇತ್ರಗಳು. ರಾಯ್‌ಬರೇಲಿ ಮತ್ತು ಅಮೇಠಿಯ ಜನರಿಗೆ ಯಾರು ಬೇಕೋ ಅವರು, ಸಂಸತ್ತಿಗೆ ಹೋಗುತ್ತಾರೆ. ಇದು ಪ್ರಜಾಪ್ರಭುತ್ವ' ಎಂದು ತಿಳಿಸಿದರು.

'ರಾಯ್‌ಬರೇಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ದಿನೇಶ್ ಪ್ರತಾಪ್ ಸಿಂಗ್ ಅವರು ನಿಮ್ಮ ಒಳ್ಳೆಯದಕ್ಕೆ ಅಥವಾ ಕೆಟ್ಟದಕ್ಕೆ ಸ್ಪಂದಿಸದಿದ್ದರೆ, ಅದು ನನ್ನ ಜವಾಬ್ದಾರಿ, ನನ್ನ ಗ್ಯಾರಂಟಿ' ಎಂದು ಭರವಸೆ ನೀಡಿದರು.

ರಾಯ್‌ಬರೇಲಿ, ಅಮೇಠಿಗೆ ಸಮಾನ ಪ್ರಾತಿನಿಧ್ಯ

(ಅಮೇಠಿ ವರದಿ): ಪಕ್ಷವು ಅಧಿಕಾರಕ್ಕೆ ಬಂದರೆ, ಅಭಿವೃದ್ಧಿಯ ದೃಷ್ಟಿಯಿಂದ ಅಮೇಠಿ ಮತ್ತು ರಾಯ್‌ಬರೇಲಿಯನ್ನು ಸಮಾನವಾಗಿ ಕಾಣಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದರು.

ಅಮೇಠಿಯಲ್ಲಿ ಅಖಿಲೇಶ್ ಯಾದವ್ ಜತೆ ಜಂಟಿ ಪ್ರಚಾರ ಕಾರ್ಯ ನಡೆಸಿದ ಅವರು, 'ರಾಯ್‌ಬರೇಲಿಯಲ್ಲಿ ಅಭಿವೃದ್ಧಿಗಾಗಿ ₹10 ವ್ಯಯಿಸಿದರೆ, ಅಮೇಠಿಯಲ್ಲೂ ಅಷ್ಟೇ ಖರ್ಚು ಮಾಡಲಾಗುವುದು. ಇದು ನನ್ನ ಭರವಸೆ' ಎಂದು ತಿಳಿಸಿದರು.

ಕ್ಷೇತ್ರದ ಏಳಿಗೆಗಾಗಿ 40 ವರ್ಷ 'ಸ್ವಾರ್ಥರಹಿತ'ವಾಗಿ ದುಡಿದ ಪಕ್ಷದ ಅಭ್ಯರ್ಥಿ ಕೆ.ಎಲ್.ಶರ್ಮಾ ಅವರಿಗೆ ರಾಹುಲ್ ಧನ್ಯವಾದ ಅರ್ಪಿಸಿದರು.

ಮೂರು ಬಾರಿ ಅಮೇಠಿ ಕ್ಷೇತ್ರದ ಸಂಸದರಾಗಿದ್ದ ರಾಹುಲ್, 2019ರಲ್ಲಿ ಸ್ಮೃತಿ ಇರಾನಿ ಎದುರು ಪರಾಭವಗೊಂಡಿದ್ದರು. ಸದ್ಯ ಅವರು ರಾಯ್‌ಬರೇಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.

ಚುಟುಕು

ಬಿಜೆಪಿ: ಇಬ್ಬರು ಉಚ್ಚಾಟನೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಮಾಜಿ ಸಚಿವ ಸೇರಿದಂತೆ ಇಬ್ಬರು ಮುಖಂಡರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಬಿಜೆಪಿ ಆರು ವರ್ಷಗಳ ಅವಧಿಗೆ ಉಚ್ಚಾಟನೆ ಮಾಡಿದೆ.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿರುವ ಮಾಜಿ ಸಚಿವ ಲಾಲ್ ಮಾರ್ಕಂಡ ಹಾಗೂ ರಾಕೇಶ್ ಚೌಧರಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಬಿಂದಲ್ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಮಪತ್ರ ವಾಪಸ್ ಪಡೆಯುವಂತೆ ಪಕ್ಷವು ಇಬ್ಬರ ಮನ ಒಲಿಕೆಗೆ ಪ್ರಯತ್ನ ನಡೆಸಿತ್ತು. ಆದರೆ, ಕೊನೆಯ ದಿನವಾದ ಮೇ 17ರಂದು ಕೂಡ ಅವರು ನಾಮಪತ್ರ ವಾಪಸ್ ಪಡೆಯಲಿಲ್ಲ. ಹೀಗಾಗಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಫೆಬ್ರುವರಿಯಲ್ಲಿ ನಡೆದಿದ್ದ ರಾಜ್ಯಸಭಾ ಚುನಾವಣೆಯಲ್ಲಿ 6 ಮಂದಿ ಕಾಂಗ್ರೆಸ್ ಶಾಸಕರು ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಿದ್ದರು. ಎರಡು ದಿನಗಳ ನಂತರ ಅವರನ್ನು ಅನರ್ಹಗೊಳಿಸಲಾಗಿತ್ತು. ನಂತರ ಅವರು ಬಿಜೆಪಿ ಸೇರಿದ್ದರು. ಹಾಲಿ ವಿಧಾನಸಭಾ ಉಪಚುನಾವಣೆಯಲ್ಲಿ ಅವರಿಗೆ ಬಿಜೆಪಿಯಿಂದ ಟಿಕೆಟ್ ನೀಡಲಾಗಿದೆ. ಕ್ಷೇತ್ರದಲ್ಲಿ ಈ ಹಿಂದೆ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ಸೋತಿದ್ದವರು ಬಿಜೆಪಿ ವಿರುದ್ಧ ಬಂಡಾಯವೆದ್ದು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದಾರೆ. ಈಗ ಉಚ್ಚಾಟನೆಗೊಂಡಿರುವ ಇಬ್ಬರು ಮುಖಂಡರು ಕೂಡ ಹಾಗೆ ಪಕ್ಷದ ವಿರುದ್ಧ ಬಂಡೆದ್ದಿದ್ದವರು.

'ರಾಮ ಮಂದಿರದಿಂದ ಲಾಭವಾಗದು'

ಅಯೋಧ್ಯೆ (ಪಿಟಿಐ): ರಾಮ ಮಂದಿರ ನಿರ್ಮಾಣ ಮಾಡಿರುವುದರಿಂದ ಬಿಜೆಪಿಗೆ ಯಾವುದೇ ಲಾಭವಾಗದು ಎಂದು ಉತ್ತರ ಪ್ರದೇಶದ ಫೈಜಾಬಾದ್ ಲೋಕಸಭಾ ಕ್ಷೇತ್ರದ ಸಮಾಜವಾದಿ ಪಕ್ಷದ ಅಭ್ಯರ್ಥಿ ಅವಧೇಶ್ ಪ್ರಸಾದ್ ಶುಕ್ರವಾರ ಹೇಳಿದರು.

'ನಾನು ಇಲ್ಲೇ ಹುಟ್ಟಿ ಬೆಳೆದವ. ಈ ಲೋಕಸಭಾ ಚುನಾವಣೆಯಲ್ಲಿ ಶ್ರೀರಾಮನ ಅನುಗ್ರಹ ನನ್ನ ಮೇಲಿದೆ. ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆಯಲ್ಲಿ ರೋಡ್ ಶೋ ನಡೆಸಿದರೂ ಅವರ ಭೇಟಿಯ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ' ಎಂದರು.

'ಇಂಡಿಯಾ' ಒಕ್ಕೂಟವು ಬಲಿಷ್ಠವಾಗಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ನನಗೆ ಸಂಪೂರ್ಣ ಬೆಂಬಲ ನೀಡಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗಾಗಿ ನಾವು ಬಿಜೆಪಿಯನ್ನು ಸೋಲಿಸಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೋದಿ ರೋಡ್ ಶೋ: ಟೀಕೆ

ನರೇಂದ್ರ ಮೋದಿ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರು ಮುಂಬೈನ ಘಾಟ್‌ಕೋಪರ್‌ನಲ್ಲಿ ನಡೆಸಿರುವ ರೋಡ್ ಶೋ ವಿರೋಧ ಪಕ್ಷಗಳ ಟೀಕೆಗೆ ಗುರಿಯಾಗಿದೆ.

ಜಾಹೀರಾತು ಫಲಕ ಕುಸಿದು 16 ಮಂದಿ ಮೃತಪಟ್ಟಿರುವ ಪ್ರದೇಶದಲ್ಲೇ ರೋಡ್ ಶೋ ಹಮ್ಮಿಕೊಳ್ಳುವ ಮೂಲಕ ಜನರಿಗೆ ತೊಂದರೆ ನೀಡಲಾಗಿದೆ ಎಂದು ವಿರೋಧ ಪಕ್ಷಗಳು ಬಿಜೆಪಿ ವಿರುದ್ಧ ಹರಿಹಾಯ್ದಿವೆ. ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್, ಶಿವಸೇನಾ ಉದ್ಧವ್ ಠಾಕ್ರೆ ಬಣದ ಮುಖಂಡ ಸಂಜಯ್ ರಾವುತ್ ಅವರು ಬಿಜೆಪಿ ನಡೆಯನ್ನು ಟೀಕಿಸಿದ್ದಾರೆ.

'ಮುಂಬೈನಲ್ಲಿ ರೋಡ್ ಶೋ ನಡೆಸುವುದು ಸರಿಯಲ್ಲ' ಎಂದು ಶರದ್ ಪವಾರ್ ಹೇಳಿದ್ದಾರೆ. ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟಕ್ಕೆ ಸೋಲಿನ ಭೀತಿ ಎದುರಾಗಿದೆ ಎಂದಿರುವ ಸಂಜಯ್ ರಾವುತ್, 'ಬಿಜೆಪಿಯು ಎಷ್ಟು ಸಂವೇದನಾರಹಿತವಾಗಿದೆ ಎಂಬುದು ಬಹಿರಂಗಗೊಂಡಿದೆ' ಎಂದಿದ್ದಾರೆ. 'ಜಾಹೀರಾತು ಫಲಕ ಕುಸಿದು ಮೃತಪಟ್ಟವರ ಕುಟುಂಬದವರ ಗಾಯಕ್ಕೆ ಬಿಜೆಪಿಯು ಉಪ್ಪು ಸವರಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಚಿನ್ ಸಾವಂತ್ ಆರೋಪಿಸಿದ್ದಾರೆ. 'ಮೃತರ ಕುಟುಂಬದವರು ರೋದಿಸುತ್ತಿದ್ದಾಗ, ಬಿಜೆಪಿ ಮುಖಂಡರು ರೋಡ್ ಶೋ ನಡೆಸಿದ್ದಾರೆ. ಮೆಟ್ರೊ ರೈಲು, ರೈಲು ಮತ್ತು ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸುವ ಮೂಲಕ ಮುಂಬೈನ ಜನರಿಗೆ ತೊಂದರೆ ಉಂಟುಮಾಡಲಾಗಿದೆ' ಎಂದು ಎನ್‌ಸಿಪಿ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಟೀಕಿಸಿದ್ದಾರೆ.

'ಬಿಜೆಪಿ ಅದಾನಿ ಯೋಜನೆ ಏಕೆ ಪ್ರಾಯೋಜಿಸುತ್ತಿದೆ?': ಕಾಂಗ್ರೆಸ್

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಅವರ ಧಾರಾವಿ ಭೂ ಪುನರಾಭಿವೃದ್ಧಿ ಯೋಜನೆಯನ್ನು ಬಿಜೆಪಿ ಯಾಕೆ ಪ್ರಾಯೋಜಿಸುತ್ತಿದೆ, ಕಳೆದ ಕೆಲವು ವರ್ಷಗಳಲ್ಲಿ ಹಲವು ಬೃಹತ್ ಯೋಜನೆಗಳನ್ನು ಮುಂಬೈ ಯಾಕೆ ಕಳೆದುಕೊಂಡಿತು ಮತ್ತು ಅವು ಯಾಕೆ ಗುಜರಾತ್ ಪಾಲಾಯಿತು ಎಂಬುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಿಸಬೇಕೆಂದು ಕಾಂಗ್ರೆಸ್ ಶುಕ್ರವಾರ ಆಗ್ರಹಿಸಿದೆ. ನಿರ್ಗಮಿಸಲಿರುವ ಪ್ರಧಾನಿ ಅವರ ಮುಂಬೈ ರೋಡ್ ಶೋ ಅನ್ನು ಯಾಕೆ 'ನಿಷ್ಠುರವಾಗಿ ಮತ್ತು ಅಜಾಗರೂಕತೆ'ಯಿಂದ ಹಮ್ಮಿಕೊಳ್ಳಲಾಗಿತ್ತು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

ಎಂಥಾ ಮಾತು!

ಮುಂದಿನ ಪೀಳಿಗೆಗೆ ದಾರಿ ಮಾಡಿಕೊಡುವ ಬದಲು, ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗಲು ಉತ್ಸುಕರಾಗಿದ್ದಾರೆ. ಈ ಚುನಾವಣೆಯು ನಿಷ್ಠೆ ಮತ್ತು ದ್ರೋಹದ ನಡುವಿನ ಹೋರಾಟವಾಗಿದೆ. ಏಕ ಪಕ್ಷದ ಆಡಳಿತಕ್ಕಿಂತ ಮೈತ್ರಿಕೂಟದ ಆಡಳಿತವು ಅತ್ಯಂತ ಯಶಸ್ವಿಯಾಗಿದೆ

ಉದ್ಧವ್ ಠಾಕ್ರೆ, ಶಿವಸೇನಾ (ಯುಬಿಟಿ) ಮುಖ್ಯಸ್ಥ

ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಂತೆ ಇಟಲಿಯವರಲ್ಲ. ಸೋನಿಯಾ ಅವರಿಗೆ ಹಿಂದಿ ಗೊತ್ತಿಲ್ಲ. ಮೋದಿ ಅವರು ಮಣ್ಣಿನ ಮಗನಾಗಿದ್ದು, ದೇಶದ ಪ್ರಗತಿಗಾಗಿ ಕಾರ್ಯಪ್ರವೃತ್ತರಾಗಿದ್ದಾರೆ. ಮೋದಿ ಅವರು ಉತ್ತಮ ಆಡಳಿತದ ಸಂಕೇತವಾಗಿದ್ದು, ಹಲವು ಭಾಷೆಗಳನ್ನು ಬಲ್ಲವರಾಗಿದ್ದಾರೆ

ಕಂಗನಾ ರನೌತ್, ಬಿಜೆಪಿ ಅಭ್ಯರ್ಥಿ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ದಿಂಡೋರಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಎನ್‌ಸಿಪಿಯ (ಶರದ್ ಪವಾರ್ ಬಣ) ಪ್ರಬಲ ಅಭ್ಯರ್ಥಿಗಳ ನಡುವಿನ ಸೆಣಸಾಟಕ್ಕೆ ವೇದಿಕೆ ಸಿದ್ಧವಾಗಿದೆ. ಬಿಜೆಪಿಯು ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪವಾರ್ ಅವರನ್ನು ಕಣಕ್ಕಿಳಿಸಿದರೆ, ಎನ್‌ಸಿಪಿಯು ಭಾಸ್ಕರ್ ಭಾಗರೆ ಅವರನ್ನು ಅಖಾಡಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಭಾರತಿ ಅವರು 1,98,779 ಮತಗಳ ಅಂತರದಿಂದ ಎನ್‌ಸಿಪಿಯ ಧನರಾಜ್ ಮಹಾಲೆ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿ ಎನ್‌ಸಿಪಿ ಶರದ್ ಪವಾರ್ ಬಣವು 'ಇಂಡಿಯಾ' ಒಕ್ಕೂಟದಲ್ಲಿರುವುದು ಭಾಸ್ಕರ್ ಅವರ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ. 2014ರಲ್ಲಿ ಜಿಲ್ಲಾ ಪರಿಷತ್ ಸದಸ್ಯೆಯಾಗಿ ಎನ್‌ಸಿಪಿಯಿಂದ ಆಯ್ಕೆಯಾಗುವ ಮೂಲಕ ಭಾರತಿ ಅವರು ರಾಜಕೀಯ ಕ್ಷೇತ್ರ ಪ್ರವೇಶಿಸಿದ್ದರು. 2019ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 'ಮಹಾಯುತಿ' ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಈ ಬಾರಿಯೂ ಅವರು ಗೆಲ್ಲುತ್ತಾರೆಂಬ ವಿಶ್ವಾಸದಲ್ಲಿ ಬಿಜೆಪಿ ಮುಖಂಡರಿದ್ದಾರೆ. ರೈತರ ಸಮಸ್ಯೆಗಳನ್ನು ಮತ್ತು ಕೇಂದ್ರ ಸರ್ಕಾರದ ವೈಫಲ್ಯಗಳನ್ನೇ ಪ್ರಮುಖ ಪ್ರಚಾರ ವಿಚಾರವಾಗಿಸಿ ಭಾಸ್ಕರ್ ಅವರು ಮತ ಯಾಚಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಹಾಗೂ ಮಹತ್ವದ ನಿರ್ಧಾರಗಳನ್ನು ಮುಂದಿರಿಸಿ ಭಾರತಿ ಅವರು ಜನರ ಬಳಿಗೆ ತೆರಳುತ್ತಿದ್ದಾರೆ. ಎನ್‌ಸಿಪಿಯು ಇಬ್ಭಾಗವಾದಾಗ ಭಾಸ್ಕರ್ ಅವರು ಶರದ್ ಪವಾರ್ ಜತೆಗೆ ನಿಂತು ನಿಷ್ಠೆ ಮೆರೆದಿದ್ದರು. ಇದೇ ಕಾರಣಕ್ಕೆ ಅವರಿಗೆ ಪಕ್ಷವು ಟಿಕೆಟ್ ನೀಡಿದೆ.

ಸುಭಾಷಿತ

ಸಾಲ ಪಡೆಯುವ ಪ್ರಕ್ರಿಯೆ ಎಲ್ಲಿ ಪ್ರಾರಂಭವಾಗುವುದೋ ಅಲ್ಲಿ ಸ್ನೇಹಸಂಬಂಧಕ್ಕೆ ಪೂರ್ಣ ವಿರಾಮ ಹಾಕಿದಂತೆಯೇ ಸರಿ.

–ಸ್ವಾಮಿ ವಿವೇಕಾನಂದ

ಯುವಸಮುದಾಯಕ್ಕೆ ಪ್ರೇರಣೆಯಾದ ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ

ಭಾರತದ ನವಪೀಳಿಗೆಯಲ್ಲಿ ಫುಟ್‌ಬಾಲ್ ಅಭಿರುಚಿಯನ್ನು ಬೆಳೆಸಿದ ಆಟಗಾರರಲ್ಲಿ ಅಗ್ರಗಣ್ಯರಾದ ಸುನಿಲ್ ಚೆಟ್ರಿ ಅವರು ಅಂತರರಾಷ್ಟ್ರೀಯ ಕ್ರೀಡಾ ಬದುಕಿಗೆ ನಿವೃತ್ತಿ ಘೋಷಿಸಿದ್ದಾರೆ. ಮುಂದಿನ ತಿಂಗಳು ಕೋಲ್ಕತ್ತದಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಕುವೈತ್ ವಿರುದ್ಧ ನಡೆಯುವ ಪಂದ್ಯ ಅವರಿಗೆ ಕೊನೆಯದಾಗಲಿದೆ. 19 ವರ್ಷಗಳಿಂದ ಸ್ಟ್ರೈಕರ್ ಆಗಿ, ನಾಯಕನಾಗಿ ಅವರು ದೇಶಕ್ಕೆ ನೀಡಿದ ಕೊಡುಗೆ ಅಮೋಘವಾದದ್ದು. ಏಕೆಂದರೆ ಈ ಅವಧಿಯಲ್ಲಿಯೇ ಪ್ರವರ್ಧಮಾನಕ್ಕೆ ಬಂದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಭರಾಟೆ ಯುವಸಮುದಾಯವನ್ನು ಮರುಳುಗೊಳಿಸಿತ್ತು. ಇದರಿಂದಾಗಿ ಬೇರೆ ಕ್ರೀಡೆಗಳ ಬೆಳವಣಿಗೆಯ ಬಗ್ಗೆ ಚಿಂತೆ ಮೂಡಿದ್ದು ಕೂಡ ಹೌದು. ಆದರೆ ಬೇರೆ ಕ್ರೀಡೆಗಳಲ್ಲಿ ಮಿನುಗುತಾರೆಗಳು ಬೆಳಗಿದ್ದು ಕೂಡ ಇದೇ ಕಾಲಘಟ್ಟದಲ್ಲಿ ಎಂಬುದು ಆಶಾದಾಯಕ ಬೆಳವಣಿಗೆ. ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ. ಸಿಂಧು, ಸೈನಾ ನೆಹ್ವಾಲ್, ಕೆ. ಶ್ರೀಕಾಂತ್, ಬಾಕ್ಸಿಂಗ್‌ನಲ್ಲಿ ಮೇರಿ ಕೋಮ್, ಕುಸ್ತಿಯಲ್ಲಿ ಗೀತಾ ಫೋಗಾಟ್, ವಿನೇಶಾ ಫೋಗಾಟ್, ಸುಶೀಲ್‌ಕುಮಾರ್, ಯೋಗೇಶ್ವರ್ ದತ್, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್, ಹಾಕಿಯಲ್ಲಿ ಪಿ.ಆರ್. ಶ್ರೀಜೇಶ್, ಶೂಟಿಂಗ್‌ನಲ್ಲಿ ಅಭಿನವ್ ಬಿಂದ್ರಾ ಅವರು ಪ್ರಮುಖರು. ಇವರ ಸಾಲಿಗೆ ಸುನಿಲ್ ಚೆಟ್ರಿ ಸೇರುತ್ತಾರೆ. ಫಿಫಾ ರ‍್ಯಾಂಕಿಂಗ್‌ನಲ್ಲಿ ಅಗ್ರ ನೂರರೊಳಗೆ ಭಾರತ ತಂಡಕ್ಕೆ ಸ್ಥಾನ ದೊರಕಿಸಿಕೊಟ್ಟ ಶ್ರೇಯ ಚೆಟ್ರಿ ನಾಯಕತ್ವಕ್ಕೆ ಸಲ್ಲಬೇಕು. 13 ವರ್ಷಗಳ ಹಿಂದೆ ಬೈಚುಂಗ್ ಭುಟಿಯಾ ಅವರು ನಿವೃತ್ತಿಯಾದಾಗ ಉತ್ತರಾಧಿಕಾರಿಯಾಗಿ ಬಂದ ಸುನಿಲ್ ಮಾಡಿದ ಸಾಧನೆಗಳು ಅನನ್ಯ. 150 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಒಟ್ಟು 94 ಗೋಲು ಗಳಿಸಿರುವ ಭಾರತದ ಮೊದಲ ಫುಟ್‌ಬಾಲ್ ಆಟಗಾರ ಅವರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಪೋರ್ಚುಗಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ, ಇರಾನಿನ ಅಲಿ ದಾಯಿ ಹಾಗೂ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ನಂತರದ ಸ್ಥಾನ ಚೆಟ್ರಿಯವರದ್ದು. 2005ರಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಅವರು ಪದಾರ್ಪಣೆ ಮಾಡಿದರು. ಅವರ ಆಟ ಹಾಗೂ ನಾಯಕತ್ವದ ಬಲದಿಂದ ಭಾರತ ತಂಡವು ಒಂದು ಸಲ ಎಎಫ್‌ಸಿ ಚಾಲೆಂಜ್ ಕಪ್, ನಾಲ್ಕು ಬಾರಿ ಸ್ಯಾಫ್ ಕಪ್ ಜಯಿಸಿದೆ. ಏಷ್ಯಾ ಖಂಡದ ಬಲಿಷ್ಠ ತಂಡಗಳಿಗೆ ಸರಿಸಾಟಿಯಾಗಿ ಬೆಳೆಯುವತ್ತ ಹೆಜ್ಜೆ ಇಟ್ಟಿತು.

ಚೆಟ್ರಿ ಅವರ ಬದ್ಧತೆ, ಸಮರ್ಪಣಾ ಮನೋಭಾವ ಮತ್ತು ಕೌಶಲವು ಯುವ ಆಟಗಾರರಿಗೆ ಮಾದರಿಯಾದರೆ ಫುಟ್‌ಬಾಲ್ ಕ್ರೀಡೆ ಭಾರತದಲ್ಲಿ ಇನ್ನಷ್ಟು ಎತ್ತರಕ್ಕೆ ಏರಬಹುದು

ಆಟದಿಂದಾಚೆಯೂ ತಮ್ಮ ಸಜ್ಜನಿಕೆ, ಶಾಂತಚಿತ್ತ ಹಾಗೂ ಸಮಚಿತ್ತದ ವ್ಯಕ್ತಿತ್ವದ ಮೂಲಕ ಯುವ ಸಮುದಾಯವನ್ನು ಪ್ರಭಾವಿಸಿದವರು ಚೆಟ್ರಿ. ಭಾರತೀಯ ಸೇನೆಯ ಅಧಿಕಾರಿಯಾಗಿದ್ದ ತಂದೆ ಕೆ.ಬಿ. ಚೆಟ್ರಿ ಅವರ ಶಿಸ್ತು ಹಾಗೂ ನೇಪಾಳ ಮಹಿಳಾ ಫುಟ್‌ಬಾಲ್ ತಂಡದಲ್ಲಿ ಆಡಿದ್ದ ತಾಯಿ ಸುಶೀಲಾ ಅವರ ಗುಣಗಳು ಸುನಿಲ್ ಅವರನ್ನು ಯಶಸ್ವಿ ಕ್ರೀಡಾಪಟುವನ್ನಾಗಿ ರೂಪಿಸಿದವು. ಸಿಕಂದರಾಬಾದ್‌ನಲ್ಲಿ ಜನಿಸಿದ ಚೆಟ್ರಿ ಹೈದರಾಬಾದ್, ಕೋಲ್ಕತ್ತ ಮತ್ತು ಬೆಂಗಳೂರಿನಲ್ಲಿ ಫುಟ್‌ಬಾಲ್ ಕಲಿತವರು. ಐಎಸ್‌ಎಲ್ (ಇಂಡಿಯನ್ ಸೂಪರ್ ಲೀಗ್) ಆರಂಭವಾದಾಗಿನಿಂದಲೂ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದಲ್ಲಿದ್ದಾರೆ. ಆ ಮೂಲಕ ಉದ್ಯಾನನಗರಿಯ ಫುಟ್‌ಬಾಲ್ ಪ್ರೇಮಿಗಳ ಕಣ್ಮಣಿಯಾಗಿದ್ದಾರೆ. ಬೆಂಗಳೂರನ್ನೇ ತಮ್ಮ ತವರು ಎಂದು ಹೇಳಿಕೊಳ್ಳುವ ಚೆಟ್ರಿ, ಇಲ್ಲಿಯ ಯುವ ಆಟಗಾರರ ಮೇಲೆ ಅಗಾಧ ಪ್ರಭಾವ ಬೀರಿದ್ದಾರೆ. ತಮ್ಮ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು, ಸಂದೇಶ ಜಿಂಗಾನ್, ಉದಾಂತ ಸಿಂಗ್ ಅವರ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಚೆಟ್ರಿ ಯಶಸ್ವಿಯಾದರು. ಭಾರತ ತಂಡವು ಚೆಟ್ರಿ ನೇತೃತ್ವದಲ್ಲಿ ಫಿಫಾ ವಿಶ್ವಕಪ್ ಹಾಗೂ ಒಲಿಂಪಿಕ್ ಕೂಟದಲ್ಲಿ ಆಡುವುದನ್ನು ನೋಡುವ ಭಾರತೀಯರ ಕನಸು ನನಸಾಗಲಿಲ್ಲ. ಚೆಟ್ರಿ ಅವರ ಬದ್ಧತೆ, ಸಮರ್ಪಣಾ ಮನೋಭಾವ ಮತ್ತು ಕೌಶಲವು ಯುವ ಆಟಗಾರರಿಗೆ ಮಾದರಿಯಾದರೆ ಫುಟ್‌ಬಾಲ್ ಕ್ರೀಡೆ ಭಾರತದಲ್ಲಿ ಇನ್ನಷ್ಟು ಎತ್ತರಕ್ಕೆ ಏರಬಹುದು.

ದಿನದ ಟ್ವೀಟ್

ನಿರ್ಲಕ್ಷ್ಯದ ಪರಮಾವಧಿ

ಕೇರಳದಲ್ಲಿ ಆರನೇ ಬೆರಳನ್ನು ತೆಗೆಸಲು ಆಸ್ಪತ್ರೆಗೆ ದಾಖಲಿಸಲಾಗಿದ್ದ ಮಗುವಿನ ನಾಲಿಗೆಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ... ಭಾರತದ ಆರೋಗ್ಯ ಕ್ಷೇತ್ರದಲ್ಲಿ ನಡೆದಿರುವ ಇಂದಿನ ಭಯಾನಕ ಕತೆ ಇದು.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ



ರಾಜ್ಯದಲ್ಲಿ ಹೆಣ್ಣುಮಕ್ಕಳ ಸರಣಿ ಕೊಲೆಗಳು, ಅನುಮಾನಾಸ್ಪದ ಸಾವುಗಳು, ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದುಬಿದ್ದಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 18-5-1999

● **ಸೋನಿಯಾ ರಾಜೀನಾಮೆ: ಕಾಂಗ್ರೆಸ್ ಕಾರ್ಯಕಾರಿಣಿ ತಿರಸ್ಕಾರ**

ನವದೆಹಲಿ, ಮೇ 17 (ಪಿಟಿಐ)– ತಮ್ಮ ವಿದೇಶಿ ಮೂಲದ ಪ್ರಶ್ನೆಯನ್ನು ಪಕ್ಷದ ಹಿರಿಯ ಮುಖಂಡರಾದ ಶರದ್ ಪವಾರ್, ಸಂಗ್ಮ ಮತ್ತು ತಾರಿಖ್ ಅನ್ವರ್ ಎತ್ತಿರುವ ಕಾರಣದಿಂದ, ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸೋನಿಯಾ ಗಾಂಧಿ ಅವರು ಇಂದು ರಾತ್ರಿ ರಾಜೀನಾಮೆ ನೀಡಿದರು.

ಆದರೆ, ಅವರ ರಾಜೀನಾಮೆಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸರ್ವಾನುಮತದಿಂದ ತಿರಸ್ಕರಿಸಿದೆ.

ಪಕ್ಷದ ಅಧ್ಯಕ್ಷರಾಗಿಯೇ ಮುಂದುವರಿಯುವಂತೆ ಸಮಿತಿ ನಿರ್ಣಯ ಅಂಗೀಕರಿಸಿ, ಸೋನಿಯಾ ಗಾಂಧಿ ಅವರನ್ನು ಕೋರಿಕೊಂಡಿದೆ.

● **ಸೋನಿಯಾ ಅಧ್ಯಕ್ಷತೆ ಬಿಡಲು ಕೋರಿಲ್ಲ: ಶರದ್ ಪವಾರ್ ಸ್ಪಷ್ಟನೆ**

ನವದೆಹಲಿ, ಮೇ 17 (ಪಿಟಿಐ)– ಸೋನಿಯಾ ಗಾಂಧಿ ಅವರು, ಅವರ ವಿದೇಶಿ ಮೂಲದಿಂದಾಗಿ ದೇಶದ ಪ್ರಧಾನಿ ಆಗುವುದರ ವಿರುದ್ಧ ಧ್ವನಿ ಎತ್ತಿರುವ ಶರದ್ ಪವಾರ್, 'ಸೋನಿಯಾ ಪಕ್ಷದ ಅಧ್ಯಕ್ಷೆ ಆಗಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ' ಎಂದು ಇಂದು ರಾತ್ರಿ ಇಲ್ಲಿ ತಿಳಿಸಿದ್ದಾರೆ.

'ಸೋನಿಯಾ ಅವರು ಪಕ್ಷದ ಅಧ್ಯಕ್ಷೆಯಾಗಿ ತಮ್ಮ ಜವಾಬ್ದಾರಿ ನಿರ್ವಹಿಸುವುದರ ಬಗ್ಗೆ ನಾವು (ಶರದ್ ಪವಾರ್, ಮಾಜಿ ಸ್ಪೀಕರ್ ಸಂಗ್ಮ ಮತ್ತು ತಾರಿಖ್ ಅನ್ವರ್) ಅಪಸ್ವರ ಎತ್ತಿಲ್ಲ. ನಮ್ಮ ಪತ್ರದಲ್ಲಿ ಅಧ್ಯಕ್ಷರಾಗಿ ಅವರು ಪಕ್ಷ ಬಲಪಡಿಸಿದ್ದನ್ನು ನಾವು ಮುಕ್ತಕಂಠದಿಂದ ಹೊಗಳಿದ್ದೇವೆ' ಎಂದು 'ಆಜ್‌ತಕ್' ಟಿವಿ ಸಂದರ್ಶನದಲ್ಲಿ ತಿಳಿಸಿದ್ದಾರೆ.

● **ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗಕ್ಕೆ ಪ್ರಧಾನಿ ಶಿಲಾನ್ಯಾಸ**

ಹುಬ್ಬಳ್ಳಿ, ಮೇ 17– ಉತ್ತರ ಕರ್ನಾಟಕದ ಒಂದು ಶತಮಾನದ ಕನಸಾಗಿರುವ 615 ಕೋಟಿ ರೂಪಾಯಿ ಅಂದಾಜು ವೆಚ್ಚದ ಹುಬ್ಬಳ್ಳಿ–ಅಂಕೋಲಾ ಬ್ರಾಡ್‌ಗೇಜ್ ರೈಲು ಮಾರ್ಗಕ್ಕೆ ಇಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಜನರ ಹರ್ಷೋದ್ಗಾರದ ಮಧ್ಯೆ ಶಿಲಾನ್ಯಾಸ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜಕೀಯಕ್ಕೆ ಒಂದು ಮಿತಿ ಇದೆ. ಜನರು ಚುನಾವಣೆಯಲ್ಲಿ ಮತ ಹಾಕಿ, ಜನಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಈ ಪ್ರತಿನಿಧಿಗಳು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬೇಕೆಂಬುದು ಅವರ ಆಶಯ. ಆದರೆ, ಜನಪ್ರತಿನಿಧಿಗಳು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವುದನ್ನು ಬಿಟ್ಟು ರಾಜಕೀಯವನ್ನೇ ಮಾಡಿದರೆ, ದೇಶ ಪ್ರಗತಿಯಾಗಲಾರದು ಎಂದರು.

50 ವರ್ಷಗಳ ಹಿಂದೆ

ಶನಿವಾರ, 18-5-1974

● **ಗಿರಿ, ಜೆ.ಪಿ. ಸಲಹೆಗಳ ವಿಮರ್ಶೆ ನಂತರವೂ ಸರ್ಕಾರದ ನಿಲುವು ಅಚಲ**

ನವದೆಹಲಿ, ಮೇ 17– ರೈಲು ಮುಷ್ಕರದ ಹತ್ತನೇ ದಿನವಾದ ಇಂದು ಕೂಡ ಸಂಧಾನದಿಂದ ಮುಷ್ಕರ ಮುಕ್ತಾಯಗೊಳ್ಳುವ ಯಾವುದೇ ಸೂಚನೆಯೂ ಕಂಡುಬರಲಿಲ್ಲ.

ಮುಷ್ಕರ ರದ್ದುಪಡಿಸದೆಯೇ ರೈಲು ಕಾರ್ಮಿಕ ನಾಯಕರ ಜೊತೆ ಸಂಧಾನ ಸಾಧ್ಯವೇ ಇಲ್ಲ ಎಂಬ ನೀತಿಯನ್ನು ಸರ್ಕಾರ ಇಂದು ಮತ್ತೆ ಸಾರಿ ಹೇಳಿತು.

ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸಂಪುಟದ ರಾಜಕೀಯ ವ್ಯವಹಾರ ಸಮಿತಿ ಸಭೆಯಲ್ಲಿ ಇಂದು ನಡೆಸಿದ ದೀರ್ಘ ಚರ್ಚೆ ನಂತರ ಸರ್ಕಾರದ ಹಿಂದಿನ ದೃಢ ನಿರ್ಧಾರವನ್ನು ಮತ್ತೆ ಸ್ಪಷ್ಟಪಡಿಸಲಾಯಿತು.

● **ರಾಜ್ಯದಲ್ಲಿ ಇನ್ನೂ 2, 3 ತಿಂಗಳು ಸಿಮೆಂಟ್ ಕೊರತೆ**

ಬೆಂಗಳೂರು, ಮೇ 17– ರಾಜ್ಯದಲ್ಲಿ ಸಿಮೆಂಟ್ ಕೊರತೆ ಇನ್ನೂ ಎರಡು–ಮೂರು ತಿಂಗಳು ಮುಂದುವರಿಯುವುದೆಂದು ಕೈಗಾರಿಕೆ ಸಚಿವ ಎಸ್.ಎಂ. ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಟಿ.ಆರ್. ಶಾಮಣ್ಣ ಅವರ ಗಮನ ಸೆಳೆಯುವ ಸೂಚನೆಗೆ ಹೇಳಿಕೆ ನೀಡಿದ ಅವರು, ದೊರೆಯುವ ಸಿಮೆಂಟನ್ನು ಸಮಾನವಾಗಿ ಹಂಚಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಗೊತ್ತಾದ ದರಗಳಿಗಿಂತ ಹೆಚ್ಚಿನ ದರಕ್ಕೆ ಸಿಮೆಂಟನ್ನು ಮಾರುತ್ತಿದ್ದ 96 ಮಂದಿ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಅವರಲ್ಲಿ 46 ಮಂದಿಗೆ ಶಿಕ್ಷೆಯಾಗಿದೆ ಎಂದೂ ಹೇಳಿದರು.

'ಚಿಪ್ಕೊ' ಚಳವಳಿಗೆ ನಾಂದಿ ಹಾಡಿದ ರೇಣಿಯ ಜನರಿಗೀಗ ಪುನರ್ವಸತಿಯದೇ ಚಿಂತೆ

ಹೋರಾಟದ ನೆಲದಲ್ಲಿ ಬದುಕಿಗಾಗಿ ಹೋರಾಟ!

ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ನಮ್ಮ ದೇಶದ ಪರಿಸರ ಮತ್ತು ಅರಣ್ಯ ಸಂರಕ್ಷಣ ಚಳವಳಿಗಳ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿರುವ 'ರೇಣಿ', ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯಲ್ಲಿರುವ ಒಂದು ಹಳ್ಳಿ. 50 ವರ್ಷಗಳ ಹಿಂದೆ, ಅರಣ್ಯದಲ್ಲಿನ ಮರಗಳನ್ನು ಸಂರಕ್ಷಿಸಿ, ಅರಣ್ಯ ಸಂಪನ್ಮೂಲಗಳ ಮೇಲೆ ಸ್ಥಳೀಯ ಸಮುದಾಯದ ಹಕ್ಕನ್ನು ಸ್ಥಾಪಿಸಲು, ಮಹಿಳೆಯರ ಮುಂಚೂಣಿಯಲ್ಲಿದ್ದ ಅಹಿಂಸಾತ್ಮಕ 'ಚಿಪ್ಕೊ' ಚಳವಳಿ ಪ್ರಾರಂಭವಾದದ್ದು ಈ ಹಳ್ಳಿಯಿಂದಲೇ.

1974ರ ಮಾರ್ಚ್ 26ರಂದು, ಮರ ಕಡಿಯಲು ಬಂದ ಗುತ್ತಿಗೆದಾರರು ಮತ್ತು ಮರಕಟುಕರನ್ನು ಎದುರಿಸಿ, ಮರಗಳನ್ನು ತಬ್ಬಿ ನಿಂತು, ಅವರೆಲ್ಲರೂ ಅಲ್ಲಿಂದ ಕಾಲ್ಕಿತ್ತುವಂತೆ ಮಾಡಿದ ಮಹಿಳಾ ಪ್ರತಿಭಟನಾಕಾರರ ನೇತೃತ್ವ ವಹಿಸಿದ್ದವರು 50 ವರ್ಷದ ಮಹಿಳೆ ಗೌರಾದೇವಿ. ಚಾಂಡಿಪ್ರಸಾದ್ ಭಟ್, ಸುಂದರಲಾಲ್ ಬಹುಗುಣ ಅವರಂತಹ ಖ್ಯಾತನಾಮರ ಅವಿರತ ಶ್ರಮದಿಂದಾಗಿ ಚಿಪ್ಕೊ ಆಂದೋಲನ ಇಡೀ ದೇಶಕ್ಕೆ ಸ್ಫೂರ್ತಿಯಾಯಿತು. ಆದರೆ ಹಿಂದಿನ 50 ವರ್ಷಗಳಲ್ಲಿ, ಉತ್ತರಾಖಂಡದ ಹಿಮಾಲಯದ ಶ್ರೇಣಿಯಲ್ಲಿ ಆಗುತ್ತಿರುವ ತ್ವರಿತಗತಿಯ ಬೆಳವಣಿಗೆಗಳ ಪರಿಣಾಮವಾಗಿ ತನ್ನೆಲ್ಲಾ ಮಹತ್ವವನ್ನು ಕಳೆದುಕೊಂಡಿರುವ ರೇಣಿಯಲ್ಲಿ ಇಂದು ಒಂದು ರೀತಿ ಅನಾಥಪ್ರಜ್ಞೆ ಆವರಿಸಿಕೊಂಡಿದೆ.

ಹಿಮಾಲಯದ ಆಂತರಿಕ ರಚನೆ, ಅಸ್ಥಿರತೆ ಮತ್ತು ನಿರಂತರ ಸ್ಥಿತ್ಯಂತರಗಳಿಂದಾಗಿ, 12,200 ಅಡಿಗಳ ಎತ್ತರದಲ್ಲಿ ಋಷಿಗಂಗಾ ಮತ್ತು ಧೌಲಿಗಂಗಾ ನದಿಗಳ ಸಂಗಮದ ತುದಿಯಲ್ಲಿರುವ ರೇಣಿ ಹಳ್ಳಿಗೆ ಭೂಕಂಪನ, ಭೂಕುಸಿತದಂತಹ ಅಪಾಯಗಳು ಅಪರಿಮಿತವಾಗಿವೆ. ಉತ್ತರಾಖಂಡದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಜಲವಿದ್ಯುತ್ ಯೋಜನೆಗಳು, ಮೂಲ ಸೌಕರ್ಯ ನಿರ್ಮಾಣದಂತಹ ಪರಿಸರ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಮತ್ತಷ್ಟು ಅನಾಹುತಗಳಿಗೆ ಕಾರಣವಾಗುತ್ತಿವೆ. ಆದರೆ ಹಿಂದಿನ ಒಂದು ದಶಕದಲ್ಲಿ ಇವುಗಳ ಜೊತೆಗೆ ಬದಲಾಗುತ್ತಿರುವ ವಾಯುಗುಣದ ಪರಿಣಾಮವೂ ಸೇರಿ, ಅವಘಡಗಳ ತೀವ್ರತೆ ಗಣನೀಯವಾಗಿ ಹೆಚ್ಚುತ್ತಿದೆ.

2021ರ ಫೆಬ್ರುವರಿಯಲ್ಲಿ, ಹಿಮನದಿಯೊಂದರ ಬಿರಿತದಿಂದ ಉಂಟಾದ ದಿಢೀರ್ ಪ್ರವಾಹದಿಂದ, ರೇಣಿ ಸೇರಿದಂತೆ ಚಮೋಲಿ ಜಿಲ್ಲೆಯಲ್ಲಿ 80 ಜನ ಸಾವಿಗೀಡಾದರು, 200 ಮಂದಿ ಕಣ್ಮರೆಯಾದರು. ಅದೇ ವರ್ಷ ಜೂನ್‌ನಲ್ಲಿ 5 ದಿನಗಳ ಕಾಲ ಎಡೆಬಿಡದೆ ಸುರಿದ ಧಾರಾಕಾರ ಮಳೆಯಿಂದ, ರೇಣಿಯ ಕೆಳಭಾಗದ ಇಳಿಜಾರಿನಲ್ಲಿದ್ದ 14 ಮನೆಗಳು ಕೊಚ್ಚಿಹೋದವು. ಮನೆಗಳ ನೆಲ, ಗೋಡೆ, ಚಾವಣಿಗಳ ಜೊತೆಗೆ ರಸ್ತೆ, ಕೃಷಿ ಭೂಮಿಯಲ್ಲಿ ಬಿರುಕುಗಳುಂಟಾದವು.

ಈ ಅವಘಡಗಳ ಅಧ್ಯಯನ ನಡೆಸಿದ 'ಉತ್ತರಾಖಂಡ್ ಡಿಸಾಸ್ಟರ್ ರಿಕವರಿ ಇನಿಶಿಯೇಟಿವ್' ಯೋಜನೆಯಡಿ ಭೂವೈಜ್ಞಾನಿಕ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. 'ರೇಣಿ ಹಳ್ಳಿಯಿರುವುದು ಸಡಿಲವಾದ ಮಣ್ಣಿನ ಇಳಿಜಾರಿನ ನೆಲದ ಮೇಲೆ. ಈ ಮಣ್ಣಿಗೆ ಹೆಚ್ಚಿನ ಧಾರಣಾ ಸಾಮರ್ಥ್ಯ ಇಲ್ಲದಿರುವುದರಿಂದ ಭೂಕುಸಿತ ಉಂಟಾಗುತ್ತದೆ. ಋಷಿಗಂಗಾ ನದಿಯ ನೀರು ರೇಣಿಯ ಕೆಳಗಿನ ಮಣ್ಣನ್ನು ಕೊಚ್ಚಿ ಇಳಿಜಾರಿನ ಅಸ್ಥಿರತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇಡೀ ಹಳ್ಳಿಯನ್ನು ಆದ್ಯತೆಯ ಮೇರೆಗೆ ಬೇರೆಡೆಗೆ ಸ್ಥಳಾಂತರಿಸಬೇಕು' ಎಂದು ಶಿಫಾರಸು ಮಾಡಿತು.

ಈ ವರದಿಯನ್ನು ಪರಿಶೀಲಿಸಿದ ಸರ್ಕಾರ, ರೇಣಿ ಹಳ್ಳಿಯ ಇಳಿಜಾರಿನಲ್ಲಿದ್ದ 55 ಕುಟುಂಬಗಳನ್ನು ಅಲ್ಲಿಂದ ದಕ್ಷಿಣಕ್ಕೆ, ರೇಣಿಗಿಂತ ಕೆಳಗಿರುವ ಸುಭಾಯ್ ಎಂಬ ಹಳ್ಳಿಗೆ ಸ್ಥಳಾಂತರಿಸಲು ನಿರ್ಧರಿಸಿತು. ಆದರೆ ಆ ವೇಳೆಗಾಗಲೇ ಬೇರೆಡೆಯಿಂದ 60 ಕುಟುಂಬಗಳನ್ನು ಸುಭಾಯ್‌ಗೆ ಸ್ಥಳಾಂತರಿಸಿದ್ದರಿಂದ, ಮತ್ತೆ 55 ಕುಟುಂಬಗಳಿಗೆ ಅಲ್ಲಿ ಪುನರ್ವಸತಿ ಕಲ್ಪಿಸುವುದನ್ನು ಸುಭಾಯ್‌ನ ಸ್ಥಳೀಯರು ತೀವ್ರವಾಗಿ ವಿರೋಧಿಸಿದರು. ಪರ್ವತ ಪ್ರದೇಶದ ಹಳ್ಳಿಗಳಲ್ಲಿ ಸೀಮಿತ ಪ್ರಮಾಣದಲ್ಲಿರುವ ಉರುವಲು ಸೌದೆ, ಬೇಲಿ ನಾರು, ಹುಲ್ಲು, ಜಾನುವಾರುಗಳಿಗೆ ಮೇವು, ವ್ಯವಸಾಯಕ್ಕೆ ಕೃಷಿ ಭೂಮಿಯಂತಹವುಗಳನ್ನು ಹೊರಗಿನಿಂದ ಬಂದ ಮತ್ತಷ್ಟು ಜನರೊಂದಿಗೆ ಹಂಚಿಕೊಳ್ಳುವುದು ಸಾಧ್ಯವಿರಲಿಲ್ಲ. ಅಲ್ಲದೆ ಬೇರೆಯ ಹಳ್ಳಿಗಳಲ್ಲೂ ರೇಣಿ ನಿವಾಸಿಗಳ ದನಕರುಗಳಿಗೆ ಮತ್ತು ಕೃಷಿಗೆ ಜಾಗದ ಕೊರತೆಯಿದೆ. ಪುನರ್ವಸತಿಗಾಗಿ ಸೂಕ್ತ ಸ್ಥಳವನ್ನು ಹುಡುಕುವವರೆಗೂ ತಾತ್ಕಾಲಿಕವಾಗಿ ಬೇರೆ ಹಳ್ಳಿಗಳಲ್ಲಿ ಅವಕಾಶ ಕಲ್ಪಿಸುವ ಪ್ರಯತ್ನವೂ ನಡೆಯಿತು. ಆದರೆ ಈ ಹಿಂದೆ ಬೇರೆ ಹಳ್ಳಿಗಳ ಶಾಲೆಯ ಕೊಠಡಿಗಳಲ್ಲಿ ತಾತ್ಕಾಲಿಕವಾಗಿ ಆಶ್ರಯ ಪಡೆದಿದ್ದ ಕುಟುಂಬಗಳು ನಾಲ್ಕೈದು ವರ್ಷಗಳ ನಂತರವೂ ಅಲ್ಲೇ ಉಳಿದಿರುವ ಉದಾಹರಣೆಗಳಿರುವುದರಿಂದ ಆ ಪ್ರಸ್ತಾವವನ್ನು ರೇಣಿಯ ನಿವಾಸಿಗಳು ಒಪ್ಪಲಿಲ್ಲ.

ಉತ್ತರಾಖಂಡ ಸರ್ಕಾರದ ಪುನರ್ವಸತಿ ನೀತಿಯಂತೆ, ಸ್ಥಳಾಂತರಗೊಂಡ ಪ್ರತಿ ಕುಟುಂಬಕ್ಕೂ ₹ 3.6 ಲಕ್ಷ ಪರಿಹಾರಧನ ಮತ್ತು 100 ಚದರ ಅಡಿಗಳಷ್ಟು ಜಾಗ ದೊರೆಯುತ್ತದೆ. ಈ ಎರಡರ ಬಗೆಗೂ ಜನರಲ್ಲಿ ತೀವ್ರ ಅಸಮಾಧಾನವಿದೆ. ಸ್ಥಳೀಯ ನಿವಾಸಿಗಳ ಬದುಕಿಗೆ ಆಸರೆಯಾದ ದನಕರುಗಳಿಗೆ, ಕೃಷಿಭೂಮಿಗೆ ಪರಿಹಾರದ ಪ್ಯಾಕೇಜಿನಲ್ಲಿ ಅವಕಾಶವೇ ಇಲ್ಲ. ದನಕರುಗಳನ್ನು ಬಿಟ್ಟು ಇಲ್ಲಿಯ ಜನ ಬೇರೆಡೆಗೆ ಹೋಗಲು ಸಿದ್ಧರಿಲ್ಲ. ಪರ್ವತ ಪ್ರದೇಶದಲ್ಲಿ ಪುನರ್ವಸತಿ ಕಲ್ಪಿಸಲು ಅಗತ್ಯವಾದ ಜಾಗದ ತೀವ್ರ ಕೊರತೆಯಿರುವುದರಿಂದ ಸರ್ಕಾರದ ಪಾಲಿಗೆ ದೊಡ್ಡ ಸಮಸ್ಯೆಯಾಗಿದೆ.

ರೇಣಿಯ ಸಮೀಪದಲ್ಲೇ 300ರಿಂದ 500 ಮೀಟರ್ ಸುತ್ತಳತೆಯಲ್ಲಿ ಪುನರ್ವಸತಿ ಕಲ್ಪಿಸಲು ಸಾಧ್ಯವಾದರೆ, ಜನ ಮಾತ್ರ ಹೊಸ ಸ್ಥಳದಲ್ಲಿದ್ದು ದನಕರುಗಳನ್ನು ಈಗಿರುವ ಜಾಗದಲ್ಲಿಯೇ ಉಳಿಸಿಕೊಳ್ಳಬಹುದೆಂಬ ಯೋಚನೆಯಿದೆ. ಉತ್ತರಾಖಂಡದ ಗ್ರಾಮೀಣ ಅಭಿವೃದ್ಧಿ ಮತ್ತು ವಲಸೆ ಆಯೋಗದ ಮೂಲಗಳಂತೆ, 2011- 17ರ ಅವಧಿಯಲ್ಲಿ ಆ ರಾಜ್ಯದ 734 ಹಳ್ಳಿಗಳನ್ನು ಅಲ್ಲಿನ ಜನ ವಿವಿಧ ಕಾರಣಗಳಿಂದಾಗಿ ಸಂಪೂರ್ಣವಾಗಿ ತೊರೆದುಹೋಗಿದ್ದಾರೆ. 535 ಹಳ್ಳಿಗಳಲ್ಲಿ ಜನಸಂಖ್ಯೆ ಶೇ 50ರಷ್ಟು ಕಡಿಮೆಯಾಗಿದೆ. ಇಂತಹ ಸುಮಾರು 1,000 ಹಳ್ಳಿಗಳಲ್ಲಿ ಮನೆಗಳು, ಕೃಷಿಭೂಮಿ ಮತ್ತು ದನಕರುಗಳಿಗೆ ಮೇವಿನತಾಣವನ್ನು ಒದಗಿಸಬಹುದೆಂಬ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಚಿಪ್ಕೊ ಚಳವಳಿಯ ಜನ್ಮಸ್ಥಾನವಾದ ಕಾರಣ ರೇಣಿಗೆ ವಿಶೇಷ ಸ್ಥಾನವಿದ್ದು, ಪುನರ್ವಸತಿಯ ಸಂದರ್ಭದಲ್ಲಿ ತಮಗೆ ಆದ್ಯತೆ ದೊರೆಯಲಿದೆಯೆಂಬ ಭಾವನೆ ಅಲ್ಲಿಯ ಜನರಲ್ಲಿತ್ತು. ಆದರೆ ಅಂತಹ ನಿರೀಕ್ಷೆಗೆ ಯಾವ ಆಧಾರವೂ ಇಲ್ಲವೆಂಬುದು ಈಗ ಸಾಬೀತಾಗಿದೆ. ಉತ್ತರಾಖಂಡದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮೂಲಗಳಂತೆ, 2021ರ ಜೂನ್‌ವರೆಗೆ 465 ಹಳ್ಳಿಗಳನ್ನು ಸ್ಥಳಾಂತರಕ್ಕಾಗಿ ಗುರುತಿಸಲಾಗಿದೆ. ಈ ಹಳ್ಳಿಗಳ ಪೈಕಿ 302 ಹಳ್ಳಿಗಳು ಪಿಥೋರ್‌ಗಢ, ಚಮೋಲಿ ಮತ್ತು ಉತ್ತರಕಾಶಿ ಜಿಲ್ಲೆಗಳ ವ್ಯಾಪ್ತಿಗೆ ಒಳಪಡುತ್ತವೆ. ಈ ಮೂರು ಜಿಲ್ಲೆಗಳಲ್ಲಿ 30 ಕಾರ್ಯನಿರತ ಜಲವಿದ್ಯುತ್ ಸ್ಥಾವರಗಳಿದ್ದು, 2016-21ರ ನಡುವೆ ಸಂಭವಿಸಿರುವ ಅವಘಡಗಳಲ್ಲಿ ಶೇ 50ಕ್ಕೂ ಹೆಚ್ಚು ಈ ಮೂರು ಜಿಲ್ಲೆಗಳಲ್ಲಾಗಿವೆ. 302 ಹಳ್ಳಿಗಳಲ್ಲಿ 70 ಹಳ್ಳಿಗಳನ್ನು ಅತಿ ಸೂಕ್ಷ್ಮವೆಂದು ಗುರುತಿಸಲಾಗಿದ್ದು ಅವುಗಳನ್ನು ತಕ್ಷಣವೇ ಸ್ಥಳಾಂತರಿಸಬೇಕಾಗಿದೆ. 2021ರ ನಂತರ ರೇಣಿಯಲ್ಲಿ ಸಂಭವಿಸಿದ ಅವಘಡಗಳಿಂದ ಇದು ಸಹ ಈ ಅತಿಸೂಕ್ಷ್ಮ ವರ್ಗಕ್ಕೆ ಸೇರಿದೆ.

ಇಂದು ರೇಣಿಯಲ್ಲಿ ಬರೀ 135 ಜನ ವಾಸಿಸುತ್ತಿದ್ದಾರೆ. ಅವರಲ್ಲಿ 1974ರಲ್ಲಿ ಗೌರಾದೇವಿಯೊಡನೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕೆಲವು ಮಹಿಳೆಯರೂ ಇದ್ದಾರೆ. ಯುವಜನರೆಲ್ಲ ಉದ್ಯೋಗ ಅರಸಿ ರೇಣಿಯಿಂದ ದೂರಹೋಗಿದ್ದಾರೆ. ವಾಯುಗುಣ ಬದಲಾವಣೆಯ ಪರಿಣಾಮಗಳು ಎದ್ದು ಕಾಣುತ್ತಿವೆ. ಚಳಿಗಾಲದ ಅವಧಿ ಕಡಿಮೆಯಾಗಿ ತೀವ್ರತೆ ಹೆಚ್ಚುತ್ತಿದೆ. ಬೇಸಿಗೆಯ ಅವಧಿ ಹೆಚ್ಚಿ ಬಿಸಿಲು ಪ್ರಖರವಾಗುತ್ತಿದೆ. ಅನಿರೀಕ್ಷಿತ ಮಳೆ, ಮೇಘ ಸಿಡಿತದ ಪ್ರಕರಣಗಳು ಏರುತ್ತಿವೆ. ಕಾಲ ಕೆಳಗಿನ ನೆಲ ಸರಿದಂತೆ ಭಾಸವಾಗಿ ಬಿರುಕುಗಳು ಕಾಣುತ್ತಿವೆ. ಮಳೆಗಾಲ ಹತ್ತಿರವಾದಂತೆ 2021ರ ಅವಘಡಗಳ ಕರಾಳ ನೆನಪು ಇಲ್ಲಿನ ನಿವಾಸಿಗಳನ್ನು ಕಾಡುತ್ತದೆ. ಆದಷ್ಟು ಬೇಗ ಸುರಕ್ಷಿತ ಸ್ಥಳದಲ್ಲಿ ತಮಗೆ ಪುನರ್ವಸತಿ ಕಲ್ಪಿಸಬೇಕೆಂದು ಸರ್ಕಾರವನ್ನು ಈ ಜನ ಒತ್ತಾಯಿಸುತ್ತಿದ್ದಾರೆ.

ನಮ್ಮ ದೇಶದ ಮೊದಲ 'ಎಕೊ ಫೆಮಿನಿಸ್ಟ್ ಮೂವ್‌ಮೆಂಟ್' ಎಂಬ ಹೆಗ್ಗಳಿಕೆಯಿರುವ ಚಿಪ್ಕೊ ಆಂದೋಲನವನ್ನು ಮುನ್ನಡೆಸಿದ ನಾಯಕಿ ಗೌರಾದೇವಿಯ ಪುತ್ಥಳಿ ಈಗ ರೇಣಿಯಲ್ಲಿಲ್ಲ. 2021ರಲ್ಲಿ ಅದನ್ನು ಜೋಶಿಮಠಕ್ಕೆ ಸ್ಥಳಾಂತರಿಸಲಾಯಿತು. ಚಿಪ್ಕೊ ಚಳವಳಿಯನ್ನು ನೆನಪಿಸುವ ರೇಣಿಯಲ್ಲಿರುವ ಏಕಮಾತ್ರ ಸ್ಮಾರಕವೆಂದರೆ ಅಲ್ಲಿನ ಉದ್ಯಾನದಲ್ಲಿರುವ, ಗೌರಾದೇವಿ ಮತ್ತು ಇತರ ಮಹಿಳೆಯರು ಮರಗಳನ್ನು ತಬ್ಬಿನಿಂತ ಪ್ರತಿಮೆ. ಆದಷ್ಟು ಬೇಗ ರೇಣಿಯಿಂದ ಹೊರಟು, ಸುರಕ್ಷಿತ ಸ್ಥಾನದಲ್ಲಿ ಹೊಸ ಬದುಕು ಕಟ್ಟಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುವ ಅಳಿದುಳಿದ ನಿವಾಸಿಗಳಿಗೆ, ಅನಾಥವಾಗಿ ನಿಂತಿರುವ ಈ ಪ್ರತಿಮೆಯ ಬಗ್ಗೆ ಅಂತಹ ವಿಶೇಷ ಕಾಳಜಿಯೇನಿಲ್ಲ.

ಚುರುಮುರಿ



ಕಾರ್ನರ್ ನೋಟಿಸ್!

● ತುರುವೇಕೆರೆ ಪ್ರಸಾದ್

'ಸಾಮಾನ್ಯವಾಗಿ ವ್ಯವಸ್ಥೇಲಿ ಸಾಮಾನ್ಯರು ಕಾರ್ನರ್ ಆಗ್ತಾರೆ. ಆದ್ರೆ ಇತ್ತೀಚೆಗೆ ದೊಡ್ಡ ಮನುಷ್ಯರೆಲ್ಲಾ ಬ್ಲೂ, ಯೆಲ್ಲೋ ಕಾರ್ನರ್ ನೋಟಿಸ್ ತಗೊಳ್ಳೋ ಮಟ್ಟಕ್ಕೆ ಹೋಗವ್ರೆ' ಎಂದ ಹರಟೆಕಟ್ಟೇಲಿ ಮಾಲಿಂಗ.

'ಹಂಗೇನಿಲ್ಲಪ್ಪ, ನಮಗೂ ಅವಾಗವಾಗ ಕಾರ್ನರ್ (ಮೂಲೆಗುಂಪು) ಮಾಡಿರೋ ನೋಟಿಸ್ ಬರ್ತಾನೇ ಇರುತ್ತೆ' ಎಂದ ಗುದ್ಲಿಂಗ.

'ನಿನಗೂ ಕಾರ್ನರ್ ನೋಟಿಸ್? ನೀನು ಯಾವ ಪೆನ್‌ಡ್ರೈವ್ ಮಾಡಿದ್ಯಲೇ!' ಎಂದ ಕಲ್ಲೇಶಿ.

'ಪೆನ್‌ಡ್ರೈವ್ ಅಲ್ಲಲೇ, ಮನೇಲಿರೋ ಹೆಂಡ್ತಿ ಅನ್ನೋ ಗನ್‌ಡ್ರೈವೇ ದಿನಕ್ಕೊಂಥರಾ ಕಾರ್ನರ್ ನೋಟಿಸ್ ಕೊಡ್ತಿರ್ತಾಳೆ. ಈಗ ನೋಡು ಬ್ಲೂ ಕಾರ್ನರ್ ನೋಟಿಸ್ ಅಂದ್ರೆ ನೈರುತ್ಯ ಮೂಲೇಲಿರೋ ವಾಷಿಂಗ್ ಮೆಶೀನ್ಗೆ ಬಟ್ಟೆ ಹಾಕಿ ಒಗೆದು ನೀಲಿ ಹಾಕಿ ಇಡ್ಬೇಕು ಅಂತ'.

'ಓಹೋ ಇದಾ? ಇದು ನಮ್ಮನೇಲೂ ಜಾರೀಲಿದೆ ಬಿಡು. ಗ್ರೀನ್ ಕಾರ್ನರ್ ನೋಟಿಸ್ ಅಂದ್ರೆ ಉತ್ತರಕ್ಕಿರೋ ಕೈತೋಟಕ್ಕೆ ನೀರು ಬಿಡ್ಬೇಕು. ಆರೆಂಜ್ ಕಾರ್ನರ್ ಅಂದ್ರೆ ಪಶ್ಚಿಮದ ಮೂಲೇಲಿರೋ ಕಸದಬುಟ್ಟೀನ ಖಾಲಿ ಮಾಡಿ ಕಾರ್ಪೊರೇಷನ್ ತೊಟ್ಟಿಗೆ ಹಾಕ್ಬೇಕು ಅಂತ ತಾನೆ?'

'ಎಕ್ಸಾಕ್ಟ್ಲೀ! ಪರ್ಪಲ್ ಕಾರ್ನರ್ ಅಂದ್ರೆ ವಾಯವ್ಯ ಮೂಲೇಲಿರೋ ಟಾಯ್ಲೆಟ್‌ಗೆ ಪರ್ಪಲ್ ಕಲರ್ ಕ್ಲೀನರ್ ಹಾಕಿ ಲಕ ಲಕ ಅಂತ ಮುಖ ಕಾಣೊ ಹಂಗೆ ಚಕಚಕ ತೊಳೀಬೇಕು ಅಂತ'.

'ರೆಡ್ ಕಾರ್ನರ್ ನೋಟಿಸ್ ಅಂದ್ರೆ ಏನು?'

'ಅದು ಕೊಡೋದೇ ಬೇಕಿಲ್ಲ, ನೋಡುದ್ರೆ ಗೊತ್ತಾಗುತ್ತೆ. ಕಿಚನ್ ಆಗ್ನೇಯ ಮೂಲೇಲಿ ಸ್ಟೌಗಿಂತ ಜೋರಾಗಿ ಹೆಂಡ್ತಿ ಮುಖ ಧಗಧಗ ಉರೀತಿದೆ ಅಂದ್ರೆ ರೆಡ್ ಕಾರ್ನರ್ ಜಾರಿಯಾಗಿದೆ ಅಂತ'.

'ಈ ಯೆಲ್ಲೋ ಕಾರ್ನರ್ ನೋಟಿಸೇ ಸ್ವಲ್ಪ ಡೇಂಜರ್! ಯಾಕಂದ್ರೆ ಹೆಂಡ್ತಿಗೆ ಗಂಡ ಎಲ್ಲೋ ಏನೋ ಎಡವಟ್ಟು ಮಾಡ್ತಾನೆ ಅನ್ನೋ 'ಯೆಲ್ಲೋ' ಡೌಟ್ ಇದ್ದೇ ಇರುತ್ತೆ. ಪೂರ್ವದ ಬಾಲ್ಕನಿ ಕಿಟಕಿ ಹತ್ರ ಹೂಕುಂಡ ಬಂತು ಅಂದ್ರೆ ಯೆಲ್ಲೋ ಕಾರ್ನರ್ ನೋಟಿಸ್ ಜಾರಿಯಾಗಿದೆ ಅಂತ ಅರ್ಥ'.

'ಮೊಬೈಲ್ ಕಿತ್ಕೊಂಡು ನಮ್ಮ ಸೀಕ್ರೆಟ್ ನಂಬರ್ ಎಲ್ಲಾ ಬ್ಲಾಕ್ ಮಾಡಿ, ಹೆಂಡ್ತಿ ವಾರ ಮೂಲೆಗೆ ತಳ್ತಾಳಲ್ಲ ಆ ಬ್ಲಾಕ್ ಕಾರ್ನರ್ ನೋಟಿಸೇ ಎಲ್ಲಕ್ಕಿಂತ ಡೇಂಜರು' ಎಂದ ಪರ್ಮೇಶಿ.

ಎಲ್ಲಾ ಮುಖ ಹುಳ್ಳಗೆ ಮಾಡಿಕೊಂಡು ಹೌದ್ಹೌದು ಎಂದು ತಲೆಯಾಡಿಸಿದರು.

ಸಂಗತ

ರಾಜಕಾರಣಕ್ಕೆ ಆಗಲಿ ನೀತಿಯ ದೀಕ್ಷೆ

ರಾಜಕಾರಣದ ನೈತಿಕ ಅಧಃಪತನವು ಜನಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ

● ರಾಜಕುಮಾರ ಕುಲಕರ್ಣಿ

ರಾಜಕಾರಣಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ನೈತಿಕ ಅಧಃಪತನ ಸಮಾಜದಲ್ಲಿ ಆತಂಕದ ವಾತಾವರಣವನ್ನು ಸೃಷ್ಟಿಸಿದೆ. ದಿನಬೆಳಗಾದರೆ ಪತ್ರಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ರಾಜಕಾರಣಿಗಳ ಕಳಂಕಿತ ಚಾರಿತ್ರ್ಯದ ಸುದ್ದಿಗಳು ಸಾರ್ವಜನಿಕರಲ್ಲಿ ಜುಗುಪ್ಸೆ ಮೂಡಿಸಿವೆ. ರಾಜಕಾರಣಿಗಳ ನಡೆ ಮತ್ತು ನುಡಿ ಬಹು ಚರ್ಚಿತ ಸಂಗತಿಗಳಾಗಿವೆ. ಕಳಂಕಿತ ರಾಜಕಾರಣಿಗಳನ್ನು ನಮ್ಮ ಶಾಸಕರು ಮತ್ತು ಸಂಸದರು ಎಂದು ಹೇಳಿಕೊಳ್ಳಲು ಮುಜುಗರಕ್ಕೆ ಒಳಗಾಗುವ ಅಸಹಾಯಕ ಸ್ಥಿತಿಯಲ್ಲಿ ಶ್ರೀಸಾಮಾನ್ಯ ಇದ್ದಾನೆ.

ರಾಜಕಾರಣಿಗಳ ಅಧಿಕಾರಲಾಲಸೆ, ಕುಟುಂಬ ಪ್ರೇಮ, ಅಡ್ಡಾದಿಡ್ಡಿ ಮಾತು, ಲೈಂಗಿಕ ಹಗರಣಗಳು ಜನರಲ್ಲಿ ರೇಜಿಗೆ ಹುಟ್ಟಿಸಿವೆ. ರಾಜಕಾರಣದಲ್ಲಿ ನಿರ್ಲಜ್ಜ ವ್ಯವಸ್ಥೆಯೊಂದು ರೂಪುಗೊಳ್ಳುತ್ತಿದೆ ಎಂಬ ಅಭಿಪ್ರಾಯವನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ.

ರಾಜಕಾರಣವು ಸಮಾಜಸೇವೆ ಎನ್ನುವುದಕ್ಕಿಂತ ಅದು ಹಣ ಗಳಿಕೆಯ ಮೂಲ ಎನ್ನುವ ಭಾವನೆ ಬಲವಾಗುತ್ತಿದೆ. ಈ ಮಾತಿಗೆ ಪುಷ್ಟಿ ನೀಡುವಂತೆ, ಚುನಾವಣೆಯಿಂದ ಚುನಾವಣೆಗೆ ರಾಜಕಾರಣಿಗಳ ಸಂಪತ್ತಿನಲ್ಲಿ ಗಮನಾರ್ಹವಾದ ಹೆಚ್ಚಳ ಕಂಡುಬರುತ್ತಿದೆ. ಕಾನೂನಿನಕಣ್ಣಿಗೆ ಮಣ್ಣೆರಚಿ ಅಕ್ರಮವಾಗಿ ಹಣ ಗಳಿಸುತ್ತಿದ್ದಾರೆ ಎಂಬ ಆರೋಪ ಅವರ ಮೇಲಿದೆ. ಚುನಾವಣೆಯಲ್ಲಿ ಅಭ್ಯರ್ಥಿಗಳಿಂದ ಹಣದ ಹೊಳೆ ಹರಿಯುತ್ತದೆ. ರಾಜಕಾರಣವು ಬಂಡವಾಳ ಹೂಡಿ ಲಾಭ ಗಳಿಸುವ ಕ್ಷೇತ್ರವಾಗಿದೆ. ಲಾಭ ಮತ್ತು ನಷ್ಟದ ಸಂಗತಿಗಳು ಪರಿಗಣನೆಗೆ ಬಂದಾಗ ಸಮಾಜಸೇವೆ ಹಿಂದೆ ಸರಿಯುತ್ತದೆ.

ರಾಜಕಾರಣದ ಮೇಲಿರುವ ಇನ್ನೊಂದು ಗುರುತರವಾದ ಆರೋಪವೆಂದರೆ ಅದು ಅವರ ಕುಟುಂಬಪ್ರೇಮ. ಇಂದಿನ ಕುಟುಂಬ ರಾಜಕಾರಣವನ್ನು ನೋಡಿದರೆ, ಆಳರಸರ ರಾಜಪ್ರಭುತ್ವದ ವ್ಯವಸ್ಥೆ ಮರುಕಳಿಸುತ್ತಿರುವಂತೆ ಭಾಸವಾಗುತ್ತಿದೆ. ರಾಜಕಾರಣಿಗಳು ತಮ್ಮ ಮಕ್ಕಳನ್ನು ಭವಿಷ್ಯದ ನೇತಾರರನ್ನಾಗಿ ತಯಾರು ಮಾಡುತ್ತಿದ್ದಾರೆ. ಮತಕ್ಷೇತ್ರಗಳು ಅಪ್ಪನಿಂದ ಮಕ್ಕಳಿಗೆ ಸಲೀಸಾಗಿ ಉಡುಗೊರೆಯ ರೂಪದಲ್ಲಿ ಬಳುವಳಿಯಾಗಿ ದೊರೆಯುತ್ತಿವೆ. ಯಾವುದೇ ರಾಜಕೀಯ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತರಿಗೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ದೊರೆಯುವುದು ಬಹಳ ವಿರಳ. ಒಂದರ್ಥದಲ್ಲಿ ರಾಜಕಾರಣ ಎನ್ನುವುದು ಕುಟುಂಬದ ಪಿತ್ರಾರ್ಜಿತ ಆಸ್ತಿಯಂತಾಗಿದೆ. ಪಕ್ಷದ ಏಳ್ಗೆಗಾಗಿ ಒಂದು ಹನಿ ಬೆವರನ್ನೂ ಹರಿಸದ ರಾಜಕಾರಣಿಗಳ ಸಂತಾನ ಅಧಿಕಾರದ ಗದ್ದುಗೆ ಏರುತ್ತಿದೆ.

ಅಧಿಕಾರಪ್ರಾಪ್ತಿಯು ರಾಜಕಾರಣದ ಮೂಲ ಧ್ಯೇಯವಾಗಿದೆ. ಅಧಿಕಾರಕ್ಕಾಗಿ ಚುನಾವಣೆಯ ಸಂದರ್ಭದಲ್ಲಿ ರಾಜಕಾರಣಿಗಳು ಪಕ್ಷದಿಂದ ಪಕ್ಷಕ್ಕೆ ವಲಸೆ ಹೋಗುತ್ತಾರೆ. ಬೇರೆ ಬೇರೆ ಪಕ್ಷಗಳಲ್ಲಿದ್ದು ಒಬ್ಬರನ್ನೊಬ್ಬರು ವಾಚಾಮಗೋಚರವಾಗಿ ಬೈದುಕೊಂಡವರು ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಒಂದೇ ಪಕ್ಷದವರಾಗಿ ಆತ್ಮೀಯರಾಗುತ್ತಾರೆ. ಯಾರನ್ನು ನಂಬುವುದೆಂದು ಮತದಾರ ಗೊಂದಲಕ್ಕೆ ಒಳಗಾಗುತ್ತಾನೆ. ಈ ಮೂಲಕ ರಾಜಕಾರಣಿಗಳು ಮತದಾರರ ಮತಗಳನ್ನು ಅಪಮೌಲ್ಯಗೊಳಿಸುತ್ತಿದ್ದಾರೆ. ಮೌಲ್ಯ ಮತ್ತು ಸಿದ್ಧಾಂತ ಹಿನ್ನೆಲೆಗೆ ಸರಿದು ಅಧಿಕಾರ, ಹಣ ಮುನ್ನೆಲೆಗೆ ಬರುತ್ತಿವೆ. ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ನ್ಯಾಯಸಮ್ಮತ ಎನ್ನುವುದು ರಾಜಕಾರಣಕ್ಕೂ ಅನ್ವಯಿಸುತ್ತಿದೆ.

ಇಂಥ ಕೆಟ್ಟ ಸ್ಥಿತಿಯಲ್ಲೂ ರಾಜಕಾರಣಿಗಳ ಸಂಪರ್ಕಕ್ಕೆ ಹಾತೊರೆಯುವ ಪ್ರವೃತ್ತಿ ಕಡಿಮೆಯಾಗದಿರುವುದು ಚಿಂತೆಗೀಡು ಮಾಡುವಂಥ ಸಂಗತಿ.

ಯೇಟ್ಸ್ ಹೇಳಿದ ಮಾತು ಹೀಗಿದೆ- 'ಬೇರೆಯವರ ಜೊತೆ ಜಗಳವಾಡುವವನು ರಾಜಕಾರಣಿ ಆಗುತ್ತಾನೆ. ತನ್ನ ಜೊತೆಗೇ ಜಗಳ ಮಾಡಿಕೊಳ್ಳುವವನು ಕವಿ ಆಗುತ್ತಾನೆ'. ತನ್ನೊಂದಿಗೇ ಜಗಳ ಮಾಡುವುದೆಂದರೆ ಆತ್ಮವಿಶ್ಲೇಷಣೆಗೆ, ಆತ್ಮವಿಮರ್ಶೆಗೆ ಒಳಗಾಗುವುದು ಎಂದರ್ಥ. ಯೇಟ್ಸ್ ಪ್ರಕಾರ, ರಾಜಕಾರಣಿ ಎಂದಿಗೂ ಆತ್ಮವಿಮರ್ಶೆಗೆ ಇಳಿಯಲಾರ. ಸದಾಕಾಲ ಲೋಕಾಂತವನ್ನೇ ನೆಚ್ಚಿಕೊಂಡವರಿಗೆ ಏಕಾಂತವನ್ನು ಪ್ರವೇಶಿಸುವ ಎದೆಗಾರಿಕೆ ಇರುವುದಾದರೂ ಹೇಗೆ ಸಾಧ್ಯ? ಆತ್ಮವಿಮರ್ಶೆ ಮಾಡಿಕೊಳ್ಳದ ರಾಜಕಾರಣಿಗೆ ಸರಿ ಮತ್ತು ತಪ್ಪುಗಳ ನಡುವಿನ ವ್ಯತ್ಯಾಸದ ಅರಿವಾಗಲಾರದು. ಆಗ ನೈತಿಕತೆ ಮೂಲೆಗುಂಪಾಗಿ ಅನೈತಿಕತೆ ವಿಜೃಂಭಿಸುತ್ತದೆ.

ರಾಜಕಾರಣದಲ್ಲಿ ನೈತಿಕತೆಯನ್ನು ವ್ರತದಂತೆ ಪಾಲಿಸಿಕೊಂಡು ಬಂದ ಅನೇಕರು ಇದ್ದಾರೆ. ಲಾಲ್‌ಬಹದ್ದೂರ್ ಶಾಸ್ತ್ರಿ, ಜಯಪ್ರಕಾಶ ನಾರಾಯಣ, ಲೋಹಿಯಾ, ಬಿ.ಸಿ. ರಾಯ್, ಜಾರ್ಜ್ ಫರ್ನಾಂಡಿಸ್, ಕರ್ಪೂರಿ ಠಾಕೂರ್, ವಾಜಪೇಯಿ, ಎಸ್.ನಿಜಲಿಂಗಪ್ಪ, ಶಾಂತವೇರಿ ಗೋಪಾಲಗೌಡರಂತಹವರು ರಾಜಕಾರಣಕ್ಕೆ ಒಂದು ಘನತೆ ತಂದುಕೊಟ್ಟರು. ಕುಟುಂಬವರ್ಗವನ್ನು ರಾಜಕಾರಣದಿಂದ ದೂರವೇ ಇಟ್ಟಿದ್ದ ಈ ಮಹನೀಯರು ಸದಾಕಾಲ ಪ್ರಾತಃಸ್ಮರಣೀಯರಾಗಿ ಸಾರ್ವಜನಿಕರ ಸ್ಮರಣೆಯಲ್ಲಿ ಉಳಿದಿದ್ದಾರೆ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಇಂಥ ರಾಜಕಾರಣಿಗಳ ಸಂಖ್ಯೆ ಸಾರ್ವಜನಿಕರು ಆತಂಕಪಡುವಷ್ಟು ಮಟ್ಟದಲ್ಲಿ ಕ್ಷೀಣಿಸಿದೆ.

'ಪ್ರಕೃತಿ ಸೃಷ್ಟಿಸಿದ ಜೀವಿಗಳಲ್ಲೆಲ್ಲಾ ಅತ್ಯಂತ ನೀಚನೆಂದರೆ ಮನುಷ್ಯ. ಮನುಷ್ಯನಾಗಿಯೇ ಈ ಮಾತು ಹೇಳಬೇಕಾಗಿ ಬಂದಿರುವುದು ಇನ್ನೂ ದೊಡ್ಡ ನೀಚತನ ಅನ್ನಿಸುತ್ತಿದೆ' ಎಂದು ದಾಸ್ತೋವಸ್ಕಿ ಅಂದಿರುವ ಮಾತು ಇಂದಿನ ರಾಜಕಾರಣವನ್ನು ಕುರಿತೇ ಹೇಳಿದಂತಿದೆ. ನೀತಿ ಇಲ್ಲದ ರಾಜಕಾರಣವನ್ನು ಗಾಂಧೀಜಿ ಸಾಮಾಜಿಕ ಪಾಪ ಎಂದಿದ್ದಾರೆ.

ರಾಜಕಾರಣದ ಕುರಿತು ಸಾರ್ವಜನಿಕರಲ್ಲಿ ಮನೆಮಾಡಿರುವ ಭ್ರಮನಿರಸನ ಮತ್ತು ಅಸಹ್ಯ ಭಾವನೆಯನ್ನು ತೊಡೆದುಹಾಕಲು ರಾಜಕಾರಣಕ್ಕೆ ನೀತಿಯ ದೀಕ್ಷೆ ನೀಡುವುದು ಸದ್ಯದ ತುರ್ತು ಅಗತ್ಯವಾಗಿದೆ. ಆದರೆ ಸಮಸ್ಯೆ ಇರುವುದು ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು ಎನ್ನುವುದರಲ್ಲಿ.

ವಾಚಕರ ವಾಣಿ

ಯೋಗ್ಯರಾಗಿರಲಿ ಶಿಕ್ಷಕರ ಜನಪ್ರತಿನಿಧಿ

ಶಾಸಕ ಮತ್ತು ಸಂಸದ ಸ್ಥಾನಕ್ಕೆ ಇತ್ತೀಚೆಗೆ ಬಹುಕೋಟಿ ಒಡೆಯರು ಆಯ್ಕೆಯಾಗುತ್ತಿರುವುದು ವಾಡಿಕೆಯಾಗಿದೆ. ಆದರೆ ಮೇಲ್ಮನೆ ಎನಿಸಿಕೊಂಡಿರುವ, ವಿವಿಧ ಕ್ಷೇತ್ರಗಳ ಪರಿಣತರು, ಗಣ್ಯರಿಂದ ಕೂಡಿರಬೇಕಾಗಿದ್ದ ವಿಧಾನ ಪರಿಷತ್ತಿಗೂ ಬಹುಕೋಟಿ ಒಡೆಯರೇ ಲಗ್ಗೆ ಇಡುತ್ತಿರುವುದು ದುರದೃಷ್ಟಕರ. ಶಾಸಕ ಮತ್ತು ಸಂಸದರಿಗೆ ಮತ ಚಲಾಯಿಸುವವರ ಪೈಕಿ ಗಣನೀಯ ಸಂಖ್ಯೆಯ ಮತದಾರರನ್ನು ಹಣ, ಆಮಿಷಗಳಿಗೆ ಬಲಿಯಾಗುವಂತೆ ಮಾಡಲಾಗಿದೆ. ಈ ಮತದಾರರ ಮನಃಸ್ಥಿತಿ ಹೇಗಿದೆ ಎಂದರೆ, ಹಣ ಅಥವಾ ಆಮಿಷ ಒಡ್ಡಿದ ವಸ್ತು ಹಂಚಿಕೆಯಾಗದಿದ್ದಲ್ಲಿ ಮತ ಚಲಾಯಿಸಲು ಬಾರದೇ ಇರುವಂಥ ವಾತಾವರಣ ಸೃಷ್ಟಿಯಾಗಿದೆ. ಇದು ಬಹುಕೋಟಿ ಒಡೆಯರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಸಮಾಜದಲ್ಲಿ ವಿದ್ಯಾವಂತ ನಾಗರಿಕರನ್ನು ಸೃಷ್ಟಿ ಮಾಡುವ ಶಿಕ್ಷಕರೇ ಆಯ್ಕೆ ಮಾಡುವ ಜನಪ್ರತಿನಿಧಿ ಕೂಡ ಇಂತಹದೇ ಲಕ್ಷಣಗಳನ್ನು ಹೊಂದಿದ್ದಾರೆ ಎಂಬುದು ಆತಂಕಕ್ಕೆ ಎಡೆ ಮಾಡುತ್ತದೆ. ಹೀಗೆ ಆಯ್ಕೆಯಾಗುವವರಿಗೆ ಸಾಮಾನ್ಯ ಶಿಕ್ಷಕರ ಸಮಸ್ಯೆಗಳ ಅರಿವು ಹೇಗೆ ತಾನೇ ಆಗುತ್ತದೆ?

ತಿಮ್ಮೇಶ ಮುಸ್ಟೂರು, ಜಗಳೂರು

ಮುಖಂಡರ ಹೇಳಿಕೆ: ಬೇಕು ಔಚಿತ್ಯಪ್ರಜ್ಞೆ

'ಬಿಜೆಪಿ ನಾಯಕರು ಇದುವರೆಗೂ ಹಾಸನದ ಸಂತ್ರಸ್ತೆಯರ ಮನೆಗಳಿಗೆ ಭೇಟಿ ನೀಡಿಲ್ಲ, ಒಂದು ವೇಳೆ ಅಮಿತ್ ಶಾ, ಜೆ.ಪಿ. ನಡ್ಡಾ ಅವರು ಹಾಸನಕ್ಕೆ ಭೇಟಿ ನೀಡಿದ್ದೇ ಆದಲ್ಲಿ, ಪ್ರಜ್ವಲ್ ಪ್ರಕರಣದ ನಂತರವೂ ಜೆಡಿಎಸ್ ಜತೆ ಮೈತ್ರಿ ಮುಂದುವರಿಸಿದ್ದಕ್ಕಾಗಿ ಜನ ಅವರ ಮೇಲೆ ಕಲ್ಲು ಎಸೆಯುತ್ತಾರೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿರುವುದು ಸರಿಯಲ್ಲ. ಪ್ರಿಯಾಂಕ್ ಅವರ ಈ ಹೇಳಿಯಲ್ಲಿ ಎರಡು ಅಪಾಯಗಳಿವೆ. ಒಂದು, ಕಲ್ಲೇಟು ನೀಡುವ ಕ್ರಿಯೆಗೆ ಪರೋಕ್ಷವಾಗಿ ಜನರನ್ನು ಪ್ರೇರೇಪಿಸುವ ಸಾಧ್ಯತೆ. ಎರಡು, ಶಾ ಮತ್ತು ನಡ್ಡಾ ಅವರ ಸಾಂತ್ವನದ ಭೇಟಿಯಿಂದ ಸಂತ್ರಸ್ತೆಯರು ಇವರೇ ಎನ್ನುವುದು ಸಾರ್ವಜನಿಕವಾಗಿ ಪ್ರಚಾರವಾಗುವ ಸಂಭವ. ಇದು, ಸಂತ್ರಸ್ತೆಯರು ಇನ್ನಷ್ಟು ಮುಜುಗರಕ್ಕೆ ಒಳಗಾಗಲು ಕಾರಣವಾಗುತ್ತದೆ.

ಕಾಂಗ್ರೆಸ್ ಪಕ್ಷದ ಮುಖಂಡರು ಈವರೆಗೆ ಸಂತ್ರಸ್ತೆಯರನ್ನು ಭೇಟಿ ಮಾಡಿದ್ದಾರೆಯೇ? ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಹೇಳಿಕೆ ನೀಡುವಾಗ ಔಚಿತ್ಯಪ್ರಜ್ಞೆ ಹೊಂದಿರಬೇಕು. ಪ್ರಚೋದನೆ ನೀಡುವ ರೀತಿಯ ಮಾತುಗಳು ಸೂಚ್ಯವಾಗಿ ಸಹ ಯಾವ ಕಾರಣಕ್ಕೂ ಯಾವ ಮುಖಂಡರಿಂದಲೂ ಬರಬಾರದು.

ಸಾಮಗ ದತ್ತಾತ್ರಿ, ಬೆಂಗಳೂರು

ಪರೀಕ್ಷಾ ತಯಾರಿ: ಲೆಕ್ಕಾಚಾರ ಸರಿಯಲ್ಲ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 30ರಷ್ಟು ಮಕ್ಕಳು ಅನುತ್ತೀರ್ಣರಾಗಿದ್ದು, ಅವರಿಗೆ ಜೂನ್- ಜುಲೈನಲ್ಲಿ ಪರೀಕ್ಷೆ- 2ಕ್ಕೆ ನೋಂದಾಯಿಸಲು ಅವಕಾಶ ಕಲ್ಪಿಸಿರುವುದು ಸರಿಯಷ್ಟೆ. ಈ ಪರೀಕ್ಷೆಯಲ್ಲಿ ಮಕ್ಕಳ ಸಾಧನೆ ಉತ್ತಮಪಡಿಸುವ ದಿಸೆಯಲ್ಲಿ ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಸಂಬಂಧಪಟ್ಟ ಶಾಲೆಯ ಸಂಬಂಧಿಸಿದ ವಿಷಯ ಶಿಕ್ಷಕರಿಗೆ ಇದೇ 15ರಿಂದ ಜೂನ್ 5ರವರೆಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವಂತೆ ಆದೇಶ ನೀಡಿದೆ. ಆದರೆ ಇವರಲ್ಲಿ ಕೆಲವು ಶಿಕ್ಷಕರು ತಮ್ಮ ಬೇಸಿಗೆ ರಜೆ ಅವಧಿ ಕಡಿತವಾಯಿತು, ಇದು ಸೇವಾ ನಿಯಮಕ್ಕೆ ವಿರುದ್ಧ ಎಂದು ಆಕ್ಷೇಪಿಸುತ್ತಿದ್ದಾರೆ. ಹಾಗಿದ್ದರೆ ಇವರು ವರ್ಷವಿಡೀ ಮಕ್ಕಳ ಫಲಿತಾಂಶದ ಬಗ್ಗೆ ಏಕೆ ಕಾಳಜಿ ವಹಿಸಲಿಲ್ಲ? ಸರ್ಕಾರಿ ಶಾಲೆಗಳನ್ನೇ ನಂಬಿ ಬಂದ ಮಕ್ಕಳಿಗೆ ಅವರು ಸರಿಯಾಗಿ ಪರೀಕ್ಷಾ ತಯಾರಿ ಮಾಡಿಸಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ ಅಲ್ಲವೇ? ಮಕ್ಕಳ ಭವಿಷ್ಯದ ಪ್ರಶ್ನೆ ಎದುರಾದಾಗಲೂ ಶಿಕ್ಷಕರಾದವರು ಇಷ್ಟೊಂದು ಲೆಕ್ಕಾಚಾರ ಹಾಕುವುದು ಸರಿಯೇ?

ಸುರೇಂದ್ರ ಪೈ, ಭಟ್ಕಳ

ಕೃಷಿ ಚಟುವಟಿಕೆ: ನಡೆಯಲಿ ಪೂರ್ವತಯಾರಿ

ಈ ವರ್ಷದ ಮೊದಲ ವರ್ಷಧಾರೆ ರಾಜ್ಯದ ಎಲ್ಲೆಡೆ ಆಗಿದ್ದು, ಇದು ರೈತಾಪಿ ವರ್ಗಕ್ಕೆ ಹರ್ಷ ತಂದಿದೆ. ಇಷ್ಟು ದಿನ ಬಿರು ಬಿಸಿಲಿನಿಂದ ಬೆಂದಿದ್ದ ಭೂತಾಯಿಗೆ ತಂಪೆರೆದಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿವೆ. ಈ ಚಟುವಟಿಕೆಗಳು ಭರದಿಂದ ಸಾಗಲು ಪೂರಕವಾದ ಪ್ರಮುಖ ವಸ್ತುಗಳಾದ ರಾಸಾಯನಿಕ ಗೊಬ್ಬರ, ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ಔಷಧಿ ಮತ್ತು ಕೃಷಿ ಯಂತ್ರೋಪಕರಣಗಳನ್ನು ಕೃಷಿ ಇಲಾಖೆಯು ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಸೂಕ್ತವಾಗಿ ದಾಸ್ತಾನು ಮಾಡಿಕೊಂಡಿರಬೇಕು. ಇವುಗಳು ಕೊರತೆಯಾದ ಬಗ್ಗೆ ರೈತರಿಂದ ಕೂಗು ಬರದಂತೆ ಸರಿಯಾದ ಸಮಯಕ್ಕೆ ಅವರಿಗೆ ಪೂರೈಕೆ ಮಾಡಲು ಸಂಬಂಧಪಟ್ಟ ಇಲಾಖೆ ಗಮನಹರಿಸಬೇಕು.

ಮಲ್ಲಿಕಾರ್ಜುನ್ ತೇಲಿ ಗೋಠೆ, ಜಮಖಂಡಿ

'ಒಳಚರಂಡಿ ರಾಕ್ಷಸ'ನಿಂದ ನದಿ ಮಾಲಿನ್ಯ

ಗಂಗಾ ನದಿಯ ಶುದ್ಧೀಕರಣ ಕಾರ್ಯ ಕುಂಟುತ್ತಲೇ ಸಾಗಿರುವ ಕುರಿತ ವರದಿ (ಆಳ–ಅಗಲ, ಪ್ರ.ವಾ., ಮೇ 15) ವಾಸ್ತವ ಸಂಗತಿಯನ್ನು ಎತ್ತಿಹಿಡಿದಿದೆ. ಗಂಗೆ ಸೇರಿದಂತೆ ದೇಶದ ಹಲವಾರು ನದಿಗಳು 'ಒಳಚರಂಡಿ ರಾಕ್ಷಸ'ನಿಂದ ಮಲಿನವಾಗುತ್ತಿರುವ ಕುರಿತು ಕೇಂದ್ರ ಜಲಶಕ್ತಿ ಸಚಿವಾಲಯ ವರದಿ ನೀಡಿದೆ. ಒಳಚರಂಡಿಯಿಂದ ಪ್ರತಿದಿನ ಗಂಗಾ ನದಿಗೆ ಕೋಟ್ಯಂತರ ಜನರ ಮಲ, ಮೂತ್ರವಲ್ಲದೆ ಕಾರ್ಖಾನೆ ತ್ಯಾಜ್ಯವೂ ಸೇರುತ್ತಿರುವುದು ದೇಶದ ಬುದ್ಧಿಜೀವಿಗಳು, ವಿಜ್ಞಾನಿಗಳಿಗೆ ತಿಳಿದಿಲ್ಲವೇ? ಹಾಗಿದ್ದರೂ ಈ ನದಿಯ ಶುದ್ಧೀಕರಣದ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿ ತೆರಿಗೆ ಹಣವನ್ನು ವ್ಯರ್ಥ ಮಾಡುತ್ತಿರುವುದು ಎಷ್ಟು ಸರಿ?

ಮನೆಗೆ ಎರಡು ಗುಂಡಿಗಳ ವ್ಯವಸ್ಥೆ ರೂಪಿಸಿ 'ಒಳಚರಂಡಿ ರಾಕ್ಷಸ'ನನ್ನು ನಿರ್ನಾಮ ಮಾಡಿದಾಗ ಮಾತ್ರ ನದಿ ಮಾಲಿನ್ಯ ತಪ್ಪಿಸಲು ಸಾಧ್ಯ ಎಂದು ಮಹಾತ್ಮ ಗಾಂಧಿ ಸಲಹೆ ಇತ್ತಿದ್ದರು. ವೃಷಭಾವತಿ ನದಿಯ ಅವಸಾನಕ್ಕೆ ಬೆಂಗಳೂರಿನ ಒಳಚರಂಡಿ ಮಾಲಿನ್ಯವೇ ಕಾರಣ ಎಂಬುದನ್ನು ನಾವು ಮರೆಯಬಾರದು.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಮಳೆ ಮಾರುತಗಳ ಪ್ರಭಾವಿಸುವ

ಪೆಸಿಫಿಕ್ ಸಾಗರದ ಆಗುಹೋಗುಗಳು

ಆಧಾರ: ಅಮೆರಿಕದ ರಾಷ್ಟ್ರೀಯ ಸಾಗರ ವಾತಾವರಣ ಆಡಳಿತ ಕೇಂದ್ರದ ಪ್ರಕಟಣೆಗಳು, ಭಾರತೀಯ ಹವಾಮಾನ ಇಲಾಖೆಯ 'ಭಾರತದ ಮಳೆ ಮಾರುತಗಳ ಮೇಲೆ ಎಲ್ ನಿನೊ ಪ್ರಭಾವ' ಅಧ್ಯಯನ ವರದಿ, ಭಾರತದ ಮೇಲೆ ಲಾ ನಿನೊ ಪ್ರಭಾವ ಅಧ್ಯಯನ ವರದಿ, ಬಿಬಿಸಿ, ಪಿಟಿಐ

● ಜಯಸಿಂಹ ಆರ್.

ಈ ಬಾರಿ ಭಾರತದಲ್ಲಿ ಮುಂಗಾರು ಮಳೆ ಉತ್ತಮವಾಗಿರಲಿದೆ ಎಂದು ಹವಾಮಾನ ಇಲಾಖೆಯು ಹೇಳಿದೆ. ಭಾರತಕ್ಕೆ ಮುಂಗಾರು ತರುವ ನೈರುತ್ಯ ಮಾರುತಗಳು ರೂಪುಗೊಳ್ಳುವುದು ಹಿಂದೂ ಮಹಾಸಾಗರದಲ್ಲಿ. ಈಗ ಅಲ್ಲಿ ಸಾಮಾನ್ಯ ವಾತಾವರಣವೇ ಇದೆ. ಹೀಗಾಗಿ ಮುಂಗಾರು ಮಳೆ ಚೆನ್ನಾಗಿ ಆಗಲಿದೆ ಎಂದು ನಿರೀಕ್ಷಿಸಲಾಗಿದೆ. ಆದರೆ ಆಗಸ್ಟ್ ವೇಳೆಗೆ ಲಾ ನಿನೊ ಪರಿಸ್ಥಿತಿ ತೀವ್ರವಾಗುವುದರಿಂದ, ವಾಡಿಕೆಗಿಂತಲೂ ಹೆಚ್ಚು ಮಳೆಯಾಗಲಿದೆ ಎಂದೂ ಲೆಕ್ಕ ಹಾಕಲಾಗಿದೆ.

ಈಗ ತೀವ್ರ ಬರಕ್ಕೆ ಕಾರಣವಾಗಿದ್ದ ಎಲ್ ನಿನೊ ಮತ್ತು ಮುಂದಿನ ದಿನಗಳಲ್ಲಿ ತೀವ್ರ ಮಳೆ ತರಲಿದೆ ಎಂದು ಅಂದಾಜಿಸಿರುವ ಲಾ ನಿನೊ, ಎರಡೂ ಪರಿಸ್ಥಿತಿಗಳು ಸಾಮಾನ್ಯವಾದುವಲ್ಲ. ಬದಲಿಗೆ ಸಮುದ್ರದಲ್ಲಿನ ಬಿಸಿನೀರಿನ ಪ್ರವಾಹ ಮತ್ತು ತಣ್ಣೀರಿನ ಪ್ರವಾಹದಲ್ಲಿ, ಸಮುದ್ರದ ಮೇಲೆ ಬೀಸುವ ಮಾರುತಗಳಲ್ಲಿ ಆಗುವ ಏರುಪೇರಿನಿಂದ ಉಂಟಾಗುವ ಅಸಾಧಾರಣ ವಾತಾವರಣ ಸ್ಥಿತಿಗಳಿವು. ಇವು ಕೆಲವೆಡೆ ತೀವ್ರ ಮಳೆ ತಂದರೆ, ಕೆಲವೆಡೆ ತೀವ್ರ ಬರಕ್ಕೆ ಕಾರಣವಾಗುತ್ತವೆ. ಅಂತಹ ಒಂದು ಸ್ಥಿತಿಯಿಂದ (ಎಲ್ ನಿನೊ) ಮತ್ತೊಂದು ಸ್ಥಿತಿಗೆ (ಲಾ ನಿನೊ) ಬದಲಾಗುತ್ತಿರುವ ಕಾಲಘಟ್ಟದಲ್ಲಿ ಈಗ ನಾವಿದ್ದೇವೆ.

ಎಲ್ ನಿನೊ ಮತ್ತು ಲಾ ನಿನೊ ಎಂಬಂತಹ ಸ್ಥಿತಿಗಳನ್ನು ಮೊದಲು ದಾಖಲಿಸಿದ್ದು 15ನೇ ಶತಮಾನದಲ್ಲಿ. ಆಗ ಎಲ್ ನಿನೊ 4–8 ವರ್ಷಗಳಿಗೆ ಒಮ್ಮೆ ಸಂಭವಿಸುತ್ತಿತ್ತು ಎಂದು ದಾಖಲಾಗಿದೆ. ಕೈಗಾರಿಕಾ ಕ್ರಾಂತಿಯ ನಂತರ ಜಾಗತಿಕ ತಾಪಮಾನವು ಏರಿಕೆಯಾಗಿದೆ. ಇದು ಪ್ರಾಕೃತಿಕ ವಿದ್ಯಮಾನಗಳನ್ನು ತೀವ್ರವಾಗಿ ಪ್ರಭಾವಿಸಿವೆ. ಎಲ್ ನಿನೊವನ್ನೂ ಇದು ಪ್ರಭಾವಿಸಿದೆ. 20ನೇ ಶತಮಾನದ ವೇಳೆಗೆ ಎಲ್ ನಿನೊ ತಲೆದೋರುವ ಕಾಲವು 2–7 ವರ್ಷಗಳಿಗೆ ಕುಸಿದಿದೆ. ಅಂದರೆ ಒಂದು ಎಲ್ ನಿನೊವಿನಿಂದ ಮತ್ತೊಂದು ಎಲ್ ನಿನೊ ಸಂಭವಿಸುವ ನಡುವಿನ ಅಂತರ ಕುಸಿಯುತ್ತಿದೆ. ಮುಂದಿನ ದಶಕಗಳಲ್ಲಿ ಎರಡು ಎಲ್ ನಿನೊಗಳ ನಡುವಣ ಅಂತರವು 1–3 ವರ್ಷಕ್ಕೆ ಕುಸಿಯುವ ಅಪಾಯವೂ ಇದೆ. ಪರಿಣಾಮವಾಗಿ ಭೂಮಿಯು ಪದೇ-ಪದೇ ತೀವ್ರ ಬರವನ್ನು ಎದುರಿಸಬೇಕಾಗುತ್ತದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಲಾ ನಿನೊ ಪರಿಸ್ಥಿತಿಯೂ ಇದೇ ರೀತಿ ಇದೆ. 2021–22ರಲ್ಲಷ್ಟೇ ಲಾ ನಿನೊ ಸಂಭವಿಸಿತ್ತು. ಈಗ ಮತ್ತೆ 2024ರಲ್ಲಿ ಲಾ ನಿನೊ ಸಂಭವಿಸುತ್ತಿದೆ. ಲಾ ನಿನೊ ಮಳೆ ಪ್ರಮಾಣವನ್ನು ಉತ್ತಮಪಡಿಸಿದರೂ, ಹಲವೆಡೆ ವಿಧ್ವಂಸಕವಾಗಿ ಪರಿಣಮಿಸುತ್ತದೆ. ಈ ಕಾರಣದಿಂದ ಲಾ ನಿನೊ ಸಹ ಪದೇ-ಪದೇ ಸಂಭವಿಸುವುದು ಅಪಾಯಕಾರಿಯೇ ಹೌದು ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಜಾಗತಿಕ ತಾಪಮಾನ ಏರಿಕೆಯನ್ನು ನಿಯಂತ್ರಿಸುವ ಮೂಲಕ, ಹವಾಮಾನ ವೈಪರೀತ್ಯವನ್ನು ತಡೆಗಟ್ಟಬೇಕು. ಇಲ್ಲದಿದ್ದಲ್ಲಿ ಇಂತಹ ಅಸಾಧಾರಣ ಹವಾಮಾನ ವಿದ್ಯಮಾನಗಳಿಗೆ ಪದೇ-ಪದೇ ಗುರಿಯಾಗಬೇಕಾಗುತ್ತದೆ ಎಂಬುದು ವಿಜ್ಞಾನಿಗಳ ಎಚ್ಚರಿಕೆ.

ದೇಶದಲ್ಲಿ ಮಳೆ ಹೆಚ್ಚಿಸಿದ್ದ ಲಾ ನಿನೊ, ಬರ ತಂದಿದ್ದ ಎಲ್ ನಿನೊ

ಎಲ್ ನಿನೊ ಮತ್ತು ಲಾ ನಿನೊ ಪರಿಸ್ಥಿತಿಗಳು ಅಮೆರಿಕ ಖಂಡಗಳ ಸಮೀಪ ಪೆಸಿಫಿಕ್ ಸಾಗರದಲ್ಲಿ ತಲೆದೋರಿದರೂ, ಭಾರತದ ಮಳೆ ಮಾರುತಗಳನ್ನು ತೀವ್ರವಾಗಿ ಪ್ರಭಾವಿಸುತ್ತವೆ. ಎಲ್ ನಿನೊ ಸಂಭವಿಸಿದಾಗ ಭಾರತದಲ್ಲಿ ತೀವ್ರ ಬರದ ಸ್ಥಿತಿ ಎದುರಾಗುತ್ತದೆ. ಮತ್ತು ಬಿಸಿಗಾಳಿಯೂ ತಲೆದೋರುತ್ತದೆ. 2022ರ ಡಿಸೆಂಬರ್‌ನಲ್ಲಿ ಆರಂಭವಾಗಿದ್ದ ಎಲ್ ನಿನೊ ಪರಿಸ್ಥಿತಿ ಈವರೆಗೂ ಸಕ್ರಿಯವಾಗಿಯೇ ಇತ್ತು. ಈ ಕಾರಣದಿಂದಲೇ ಭಾರತವು 2023ರಲ್ಲಿ ತೀವ್ರ ಬರವನ್ನು ಎದುರಿಸಬೇಕಾಯಿತು. ಜತೆಗೆ 2024ರಲ್ಲಿ ಬಿರುಬೇಸಿಗೆಯನ್ನೂ ಎದುರಿಸಬೇಕಾಯಿತು.

2021ರ ನವೆಂಬರ್‌ನಿಂದ 2022ರ ಅಂತ್ಯದವರೆಗೂ ಭಾರತದ ಹಲವೆಡೆ ತೀವ್ರ ಮಳೆಯಾಗಿತ್ತು. ಅದರಲ್ಲೂ ಭಾರತದ ಪೂರ್ವ ಕರಾವಳಿ, ಪಶ್ಚಿಮ ಕರಾವಳಿ ಮತ್ತು ದಕ್ಷಿಣದ ಒಳನಾಡಿನಲ್ಲಿ ವಾಡಿಕೆಗಿಂತ ಒಂದು ಪಟ್ಟು ಹೆಚ್ಚು ಮಳೆಯಾಗಿತ್ತು. ಹಲವೆಡೆ ಪ್ರವಾಹದ ಸ್ಥಿತಿ ತಲೆದೋರಿತ್ತು. ಆ ಸಂದರ್ಭದಲ್ಲಿ ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಲಾ ನಿನೊ ಸ್ಥಿತಿ ಸಕ್ರಿಯವಾಗಿತ್ತು. ಈ ಕಾರಣದಿಂದಲೇ ಭಾರತವು ಆಗ ವಾಡಿಕೆಗಿಂತ ಹೆಚ್ಚು ಮಳೆಗೆ ಸಾಕ್ಷಿಯಾಗಿತ್ತು. ಈಗ ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಲಾ ನಿನೊ ರೂಪುಗೊಳ್ಳುತ್ತಿದೆ. ಆಗಸ್ಟ್–ಸೆಪ್ಟೆಂಬರ್ ವೇಳೆಗೆ ಅದು ಪೂರ್ಣ ರೂಪ ಪಡೆದುಕೊಳ್ಳಲಿದೆ ಎಂದು ಅಂದಾಜಿಸಲಾಗಿದೆ. ಈ ಅಂದಾಜು ನಿಜವೇ ಆದರೆ ಭಾರತದಲ್ಲಿ ಮುಂಗಾರು ಚುರುಕುಗೊಳ್ಳಲಿದೆ. ಮತ್ತು ಹಿಂಗಾರು ತೀವ್ರ ಸ್ವರೂಪಕ್ಕೆ ತಿರುಗಲಿದೆ. ಒಟ್ಟಾರೆ ಉತ್ತಮ ಮಳೆಯಾಗುವ ಸಾಧ್ಯತೆ ದಟ್ಟವಾಗಿದೆ ಎಂಬುದು ಹವಾಮಾನ ತಜ್ಞರ ಮುನ್ಸೂಚನೆ.



ಪದೇ ಪದೇ ಕಾಡುವ ಎಲ್ ನಿನೊ

ಇದು ಸ್ಪ್ಯಾನಿಷ್ ಪದ. ಇದರರ್ಥ 'ಪುಟ್ಟ ಹುಡುಗ' ಎಂದು. ಎಲ್ ನಿನೊ ಪರಿಸ್ಥಿತಿ ಉಂಟಾದಾಗ ದಕ್ಷಿಣ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ಮತ್ತು ಸುತ್ತಲಿನ ಫೆಸಿಫಿಕ್ ಸಾಗರದಲ್ಲಿನ ನೀರಿನ ಉಷ್ಣಾಂಶ ವಾಡಿಕೆಗಿಂತ ಹೆಚ್ಚಾಗುತ್ತದೆ. ಇದು ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳಿಗೆ ಮಳೆ ತರುವ ಧ್ರುವೀಯ ಶೀತ ಮಾರುತಗಳ ದಿಕ್ಕನ್ನು ಬದಲಿಸುತ್ತದೆ. ಪರಿಣಾಮವಾಗಿ ಅಮೆರಿಕದ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ, ಕೆನಡಾದಲ್ಲಿ, ದಕ್ಷಿಣ ಅಮೆರಿಕದ ದಕ್ಷಿಣ ಭಾಗದಲ್ಲಿ ಮಳೆ ಕೊರತೆಯಾಗುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಪೆಸಿಫಿಕ್ ಸಾಗರದಾಳದಲ್ಲಿನ ತಣ್ಣನೆಯ ನೀರು ದಕ್ಷಿಣ ಅಮೆರಿಕದ ಪೂರ್ವ ಕರಾವಳಿ ಪ್ರದೇಶದಲ್ಲಿ ಮೇಲ್ಮೈಗೆ ಬರುತ್ತದೆ. ಈ ನೀರು ಸಾಗರದಾಳದಲ್ಲಿನ ಪೋಷಕಾಂಶಗಳನ್ನು ಮೇಲಕ್ಕೆ ತರುತ್ತದೆ. ಇದರಿಂದ ಮೀನು ಮತ್ತಿತರ ಜಲಚರಗಳ ಬೆಳವಣಿಗೆ ಮತ್ತು ವೃದ್ಧಿ ವೇಗವಾಗಿ ಆಗುತ್ತದೆ.

ಆದರೆ ಎಲ್ ನಿನೊ ಸಂದರ್ಭದಲ್ಲಿ ಇದು ಸಂಭವಿಸುವುದಿಲ್ಲ. ಪೋಷಕಾಂಶಗಳ ಕೊರತೆಯಿಂದ ಮೀನಿನ ಬೆಳವಣಿಗೆ ಕುಂಠಿತವಾಗುತ್ತದೆ. ಮೀನುಗಾರರು ಮೀನುಗಾರಿಕೆಯನ್ನೇ ನಿಲ್ಲಿಸಬೇಕಾದ ಸ್ಥಿತಿ ಎದುರಾಗುತ್ತದೆ. 15ನೇ ಶತಮಾನದ ವೇಳೆಗೆ ಇಂತಹ ಸ್ಥಿತಿ 7–8 ವರ್ಷಗಳಿಗೆ ಒಮ್ಮೆ ಸಂಭವಿಸುತ್ತಿತ್ತು. ಆಗಾಗ್ಗೆ ಬಂದುಹೋಗುತ್ತಿದ್ದ ಈ ಸ್ಥಿತಿಯನ್ನು ದಕ್ಷಿಣ ಅಮೆರಿಕದಲ್ಲಿನ ಸ್ಪ್ಯಾನಿಷ್ ಜನರು 'ಪುಟ್ಟ ಹುಡುಗ- ಎಲ್ ನಿನೊ' ಎಂದು ಕರೆದರು.



ಪ್ರಜಾವಾಣಿ ಗ್ರಾಫಿಕ್ಸ್: ಕಣಕಾಲಮಠ



ಅಪರೂಪಕ್ಕೆ ಬರುವ ಲಾ ನಿನೊ

ಇದೂ ಸಹ ಸ್ಪ್ಯಾನಿಷ್ ಮೀನುಗಾರರು ಕೊಟ್ಟ ಪದ. 'ಪುಟ್ಟ ಹುಡುಗಿ' ಎಂಬುದು ಇದರರ್ಥ. ಇದು ತಲೆದೋರಿದಾಗ ದಕ್ಷಿಣ ಅಮೆರಿಕದ ಪಶ್ಚಿಮ ಕರಾವಳಿಯಿಂದ ಆಸ್ಟ್ರೇಲಿಯಾದತ್ತ ಬೀಸುವ ಮಾರುತಗಳು ತೀವ್ರವಾಗುತ್ತದೆ. ಈ ಮಾರುತಗಳು ಸಮುದ್ರದ ಮೇಲ್ಮೈನಲ್ಲಿನ ಬಿಸಿಗಾಳಿಯನ್ನು ಆಸ್ಟ್ರೇಲಿಯಾ, ಇಂಡೊನೇಷ್ಯಾದತ್ತ ಸೆಳೆದೊಯ್ಯುತ್ತವೆ. ಪರಿಣಾಮವಾಗಿ ಅಮೆರಿಕ ಖಂಡಗಳ ಪಶ್ಚಿಮದ ಕರಾವಳಿಯಲ್ಲಿ ಶೀತದ ಸ್ಥಿತಿ ನಿರ್ಮಾಣವಾಗುತ್ತದೆ. ಈ ವೇಳೆ ಪೆಸಿಫಿಕ್ ಸಾಗರದಾಳದಲ್ಲಿನ ತಣ್ಣನೆಯ ನೀರು ಹೆಚ್ಚಿನ ಪ್ರಮಾಣದಲ್ಲಿ ಸಮುದ್ರದ ಮೇಲ್ಮೈಗೆ ಬರುತ್ತದೆ. ಜತೆಗೆ ಸಾಗರದಾಳದಲ್ಲಿನ ಪೋಷಕಾಂಶಗಳನ್ನು ಯಥೇಚ್ಛವಾಗಿ ಮೇಲ್ಮೈಗೆ ತರುತ್ತವೆ. ಪರಿಣಾಮವಾಗಿ ಜಲಚರಗಳ ಬೆಳವಣಿಗೆ ವೇಗವಾಗಿ ಆಗುತ್ತದೆ. ಸ್ಪ್ಯಾನಿಷ್ ಮೀನುಗಾರರಿಗೆ ಇದು ಸಮೃದ್ಧಿ ತರುವ ಕಾಲ. ಹೀಗಾಗಿಯೇ ಅವರು ಇದನ್ನು 'ಪುಟ್ಟ ಹುಡುಗಿ' ಎಂದು ಕರೆದರು. ಎಲ್ ನಿನೊ ಆಗಾಗ್ಗೆ ಸಂಭವಿಸುತ್ತದೆಯಾದರೂ, ಲಾ ನಿನೊ (ಲಾ ನಿನಾ ಎಂದೂ ಕರೆಯಲಾಗುತ್ತದೆ) ಅಪರೂಪಕ್ಕೆ ಸಂಭವಿಸುತ್ತದೆ. ಹೀಗಾಗಿ ಇದನ್ನು ಅಪರೂಪಕ್ಕೆ ಬರುವ 'ಹಳೇ ಮುದುಕ- ಎಲ್ ವಿಜೊ' ಎಂದೂ ಕರೆಯುತ್ತಾರೆ.

ಎಲ್ ನಿನೊವನ್ನು ವಿಧ್ವಂಸಕ ವಿದ್ಯಮಾನ ಎಂದು ಪರಿಗಣಿಸಿದರೆ, ಲಾ ನಿನೊವನ್ನು ಸಮೃದ್ಧಿಯ ವಾಹಕ ಎಂದು ಸಂಭ್ರಮಿಸಲಾಗುತ್ತದೆ. ಆದರೆ ಇದರ ತೀವ್ರತೆ ಹೆಚ್ಚಾದರೆ, ಇದೂ ವಿಧ್ವಂಸಕವಾಗಿಯೇ ಪರಿವರ್ತಿತವಾಗುತ್ತದೆ. ಅಮೆರಿಕ, ಕೆನಡಾ ಮತ್ತು ದಕ್ಷಿಣ ಅಮೆರಿಕದ ದೇಶಗಳಲ್ಲಿ ಚಂಡಮಾರುತಗಳನ್ನು ಇದು ಸೃಷ್ಟಿಸುತ್ತದೆ.

ಸಿನಿಬಿಟ್ಸ್

'ಕರಾವಳಿ'ಯ ಮತ್ತೊಂದು ಕಥೆ 'ಅಧಿಪತ್ರ'

'ಕಾಂತಾರ' ಸಿನಿಮಾ ಬಳಿಕ ಕರಾವಳಿಯ ಸಂಸ್ಕೃತಿಯನ್ನು ಆಧರಿಸಿಕೊಂಡು ಕಥೆಹೆಣೆಯಲಾಗಿರುವ ಸಿನಿಮಾಗಳ ಸಂಖ್ಯೆ ಹೆಚ್ಚಾಗುತ್ತಿದ್ದು, 'ಅಧಿಪತ್ರ' ಇದಕ್ಕೆ ಹೊಸ ಸೇರ್ಪಡೆ.

'ಬಿಗ್‌ಬಾಸ್' ಖ್ಯಾತಿಯ ರೂಪೇಶ್ ಶೆಟ್ಟಿ ನಟನೆಯ 'ಅಧಿಪತ್ರ' ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಇದರ ತುಣುಕುಗಳಲ್ಲಿ ಕರಾವಳಿ ಭಾಗದ ವಿಶೇಷ ಆಚರಣೆ ಆಟಿ ಕಳಂಜಾ, ಯಕ್ಷಗಾನ, ಹುಲಿ ಕುಣಿತದ ದೃಶ್ಯಗಳಿವೆ. ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿರುವ ಈ ಸಿನಿಮಾದ ಕಥೆಯಿದೆ. ಪೊಲೀಸ್ ಅಧಿಕಾರಿಯಾಗಿ ರೂಪೇಶ್ ಶೆಟ್ಟಿ ನಟಿಸಿದ್ದಾರೆ. ಚಯನ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾ ಇದೇ ಮುಂಗಾರಿನಲ್ಲಿ ತೆರೆಗೆ ಬರಲಿದೆ.

'ಕಾಂತಾರ' ಖ್ಯಾತಿಯ ಪ್ರಕಾಶ್ ತುಮಿನಾಡು, ಎಂ.ಕೆ. ಮಠ, ರಘು ಪಾಂಡೇಶ್ವರ್, ದೀಪಕ್ ರೈ, ಕಾರ್ತಿಕ್ ಭಟ್, ಅನಿಲ್, ಪ್ರಶಾಂತ್ ತಾರಾಬಳಗದಲ್ಲಿದ್ದು, 'ಗಿಚ್ಚಿ ಗಿಲಿಗಿಲಿ' ಖ್ಯಾತಿಯ ನಿರೂಪಕಿ ಜಾಹ್ನವಿ ಚಿತ್ರದಲ್ಲಿ ನಾಯಕಿಯಾಗಿದ್ದಾರೆ. ಶೂಟಿಂಗ್ ಪೂರ್ಣಗೊಳಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿದೆ. ಕೆಲವೇ ದಿನಗಳಲ್ಲಿ ಬಿಡುಗಡೆ ದಿನಾಂಕವನ್ನು ಘೋಷಿಸಲಿದೆ.

ಮದರ್ ತೆರೇಸಾ ಕುರಿತು ವೆಬ್‌ಸಿರೀಸ್



ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಮದರ್ ತೆರೇಸಾ ಅವರ ಜೀವನಗಾಥೆ ಇದೀಗ ವೆಬ್ ಸರಣಿಯಾಗಿ ಮೂಡಿಬರಲಿದೆ. ಸಾಹಿತಿ, ಚಿತ್ರಕಥೆಗಾರ ದಿ. ಜಾನ್ ಪಾಲ್ ಪುತ್ತುಸ್ಸೆರಿ ಹಾಗೂ ನಿರ್ದೇಶಕ ಪಿ. ಚಂದ್ರಕುಮಾರ್ ಈ ಸರಣಿಯನ್ನು ನಿರ್ಮಿಸುತ್ತಿದ್ದಾರೆ. ಇತ್ತೀಚೆಗಷ್ಟೇ ವೆಬ್ ಸರಣಿಯ ಶೀರ್ಷಿಕೆಯನ್ನು ಅನಾವರಣಗೊಳಿಸಲಾಯಿತು.

'ಹಿಂದಿ,ಕನ್ನಡ ಸೇರಿದಂತೆ ಬಹುಭಾಷೆಗಳಲ್ಲಿ ತಯಾರಾಗಲಿರುವ ಈ ಪ್ಯಾನ್ ಇಂಡಿಯಾ ವೆಬ್ ಸಿರೀಸ್ ಅನ್ನು ಸುಮಾರು ₹30 ಕೋಟಿ ಬಜೆಟ್‌ನಲ್ಲಿ ನಿರ್ಮಾಣ ಮಾಡುತ್ತಿದ್ದೇವೆ. ಹಿರಿಯನಟ ಮಿಥುನ್ ಚಕ್ರವರ್ತಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತೆರೇಸಾ ಹರೆಯದ ಪಾತ್ರಕ್ಕಾಗಿ ಹೊಸ ಪ್ರತಿಭೆಗಳ ಹುಡುಕಾಟ ನಡೆಯುತ್ತಿದ್ದು, ರಾಜ್ಯದಲ್ಲೂ ಆಡಿಶನ್ ಮಾಡಲಾಗುತ್ತದೆ. ತೆರೇಸಾ ಅವರ ಬಾಲ್ಯ, ಹರೆಯದ ಜೀವನ ಹೇಗಿತ್ತು ಎಂಬುದರಿಂದ ಅವರ ಸೇವೆವರೆಗಿನ ಎಲ್ಲ ಅಂಶಗಳು ಇದರಲ್ಲಿರಲಿದೆ' ಎಂದರು ನಿರ್ದೇಶಕ ಚಂದ್ರಶೇಖರ್.

ಪಿ.ಸುಕುಮಾರ್ ಅವರ ಛಾಯಾಚಿತ್ರಗ್ರಹಣ, ಜರೀ ಅಮರದೇವ ಅವರ ಸಂಗೀತ ಇದ್ದು, ಅನಿತಾ ಮೆನ್ನನ್, ತನಿಮಾ ಮೆನ್ನನ್, ಸಾಪಿಕೌರ್, ಜೋಷಿ ಜೋಸೆಫ್ ಪ್ರಮುಖ ತಾರಾಗಣದಲ್ಲಿದ್ದಾರೆ. ಒಟಿಟಿ ವಾಹಿನಿಯೊಂದರಲ್ಲಿ ಈ ಸರಣಿ ಬಿತ್ತರಗೊಳ್ಳಲಿದೆ ಎಂದು ತಂಡ ಹೇಳಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

ಪದಬಂಧ 5684

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಭಾವಚಿತ್ರವನ್ನು ತೆಗೆಯುವವನು (4)
3.ಈ ಪರಿ ಎಲ್ಲವನ್ನೂ ಬಿಟ್ಟುಬಿಡುವಿಕೆ! (4)
5.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
6.ಜ್ಞಾನವತಿಯ ಹತ್ತಿರವಿರುವ ದಾಯಾದಿ (2)
7.ನೆನಪಲ್ಲೇ ಇರುವ ಕಾರಣ (2)
9.ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುವವನು (2)
11.ಏಳು ದಿನಗಳ ಅವಧಿ (2)
12.ಮಾವನಲ್ಲಿ ಕೋಮಲತೆ ಕಾಣುತ್ತಿದೆಯೇ? (3)
14.ಒಳ್ಳೆಯ ಶಿಕ್ಷಣಪಡೆದವನು (4)
15.ರಾತ್ರಿ ವೇಳೆ ಸಂಚರಿಸುವ ಕಳ್ಳ ದೆವ್ವ ಇತ್ಯಾದಿ (4)

ಮೇಲಿಂದ ಕೆಳಕ್ಕೆ

1.ಅಚ್ಚು ಮಾಡುವ ಸ್ಥಳ (4)
2.ಹಿತಚಿಂತಕ ಇಲ್ಲಿದ್ದಾನೆ (3)
3.ಈ ಪರಿ ಓಡಿ ಹೋಗುವಿಕೆ! (3)
4.ಗರ ಬಡಿದಂತಿರುವ ಈಕೆ ಪತಿವ್ರತೆ (3)
6.ಗ್ರಹಣ ಶಕ್ತಿಯನ್ನುಳ್ಳ ಇಂದ್ರಿಯ (4)
8.ಕರ ಕೊನೆಗಿಟ್ಟಾಗ ಕಾಣಿಸಿದ ಸಾಮಾನು (4)
10.ಕಡೆಗಣನೆಯನ್ನು ಹೀಗೆನ್ನಿ (4)
11.ವಾರದ ಪ್ರಾರಂಭಕ್ಕೆ ಒಡೆತನ ದೊರಕಿದೆಯಲ್ಲಾ! (3)
12.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
13.ವನದಲ್ಲಿರುವ ಉಡುಗೆ (3)

5683ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5. ವರ್ಗಮೂಲ
6. ಬಡನಡು 7. ಹರವಿ 9. ಮಸಣ
10. ಜ್ಞಾತಿಕಲಹ 11. ಪಾವನ
12. ಲುಬ್ಧಕ 16. ಪರಿಚಯ 17. ಪ್ರಭಾವಳಿ

ಮೇಲಿಂದ ಕೆಳಕ್ಕೆ:
1. ಅವರೋಹ
2. ಜಾಲರಿ 3. ಸಿಂಬಳ 4.ಕಡುಜಾಣ
8. ವಿಜ್ಞಾನ 9. ಮಹಲು
11. ಪಾರುಪತ್ಯ 13. ಕವಳಿಗೆ 14. ಗಾಯಕ 15. ಸಂಪ್ರತಿ

ಸುಡೊಕು 6069

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6068 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮೇ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದಶಮಿ ಗಂ. 11-23 **ನಕ್ಷತ್ರ:** ಉತ್ತರಫಲ್ಗುನಿ ಗಂ. 24-23 **ಯೋಗ:** ಹರ್ಷಣ ಗಂ. 10-25 **ಕರಣ:** ಗರ ಗಂ. 11-23, ವೃಷಭ ಮಾಸದ ನೇ 05 ದಿನ,
ಮಳೆನಕ್ಷತ್ರ: ಕೃತ್ತಿಕಾ 3.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-07 **ಸೂರ್ಯಾಸ್ತ :** 06-46
ಮುಸ್ಲಿಂ ದಿನಾಂಕ : 09 ಜುಲ್ಖಾಯದ್ **ಅದೃಷ್ಟ ಸಂಖ್ಯೆ :** 3, 5

ಮೇಷ: ನಿಮ್ಮಿಂದ ಸಹಾಯ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವ ಲಕ್ಷಣಗಳು ಗೋಚರಿಸಲಿವೆ. ಶಿಕ್ಷಣ ಹಾಗೂ ಸೌಕರ್ಯ ಎಂಬ ಆಯ್ಕೆಗಳು ನಿಮ್ಮ ಮುಂದೆ ಬಂದಾಗ ಬುದ್ಧಿವಂತಿಕೆಯಿಂದ ಒಂದನ್ನು ಆರಿಸಿಕೊಳ್ಳಿ.

ವೃಷಭ: ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ಸನ್ಮಾನ ಅಥವಾ ವಿಶೇಷ ಗೌರವ ಲಭಿಸಲಿದೆ. ನೆರೆ ಹೊರೆಯರಿಗೆ ನೀವು ಕೊಡುವ ಅತಿಯಾದ ಸಲುಗೆಯು ದುರುಪಯೋಗ ಆಗುವ ಸಾಧ್ಯತೆ ಇದೆ.

ಮಿಥುನ: ವೃತ್ತಿರಂಗದಲ್ಲಿ ಅನಿವಾರ್ಯವಾಗಿ ಮೋಸ ಮಾಡಬೇಕಾದ ಸಂದರ್ಭ ಎದುರಾಗಲಿದೆ. ನೀವು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರೂ, ನಿಮ್ಮ ಊರು, ಮನೆಯವರ ವಿಶ್ವಾಸ ಉಳಿಸಿಕೊಳ್ಳುವುದು ಮುಖ್ಯ.

ಕರ್ಕಾಟಕ: ಉದ್ಯೋಗದಲ್ಲಿ ಬದಲಾವಣೆಯ ಆಲೋಚನೆ ಹೊಂದಿದ್ದರೆ, ಸದ್ಯಕ್ಕೆ ಆ ಯೋಚನೆ ಬಿಡುವುದು ಒಳ್ಳೆಯದು. ಕೆಲವು ಕೆಲಸಗಳು ನೀವು ಬೇಡವೆಂದುಕೊಂಡರೂ, ನಿಮ್ಮದೆ ಹೆಗಲೇರುವ ಸಾಧ್ಯತೆ ಇದೆ.

ಸಿಂಹ: ನಿಮಗೆ ತಿಳಿಯದೆ ನಿಮ್ಮ ಬಗ್ಗೆ ಆಗುತ್ತಿರುಲವ ಅಪಪ್ರಚಾರವು ಸದ್ಯದಲ್ಲೇ ನಿಮ್ಮ ಗಮನಕ್ಕೆ ಬರಲಿದೆ. ಹೆಚ್ಚಿನ ಕೆಲಸದ ಕಾರಣ ಕಾರ್ಮಿಕರಿಗೆ ಸಾಂಸಾರಿಕ ಜವಾಬ್ದಾರಿ ನಿಭಾಯಿಸುವುದು ಕಷ್ಟವಾಗಲಿದೆ.

ಕನ್ಯಾ: ನಂಬಿಕೆ ಹಾಗು ದೃಢ ನಿರ್ಧಾರದಿಂದ ಮಾಡಿದ ಕೆಲಸಗಳು ನಿಸ್ಸಂಶಯವಾಗಿ ನಿಮ್ಮ ನಿರೀಕ್ಷೆ ತಲುಪಲಿವೆ. ಮನೆಯಲ್ಲಿನ ಮನಸ್ತಾಪಗಳು ಸರಿಯಾಗದ ಹೊರತು ನಿಮ್ಮ ಅಭಿವೃದ್ಧಿಗೆ ತೊಡಕು ಉಂಟಾಗಬಹುದು

ತುಲಾ: ವೈದ್ಯರ ಸಲಹೆಯಂತೆ ಆರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗಲಿದೆ. ಗಿರವಿ ಇಟ್ಟ ಆಭರಣಗಳನ್ನು ಆದಷ್ಟು ಬೇಗ ಬಿಡಿಸಿಕೊಳ್ಳುವ ಯೋಜನೆ ಮಾಡುವುದು ಸೂಕ್ತ.

ವೃಶ್ಚಿಕ: ಕಾರಣವಿಲ್ಲದೆ ನಡೆಸಿಕೊಂಡು ಬರುತ್ತಿರುವ ಪದ್ಧತಿ ಎಂದು ನೀವು ಭಾವಿಸಿದ ಆಚರಣೆಗೆ ಇಂದು ಕಾರಣ ಸಿಗಲಿದೆ. ಸಮಸ್ಯೆಗಳಿಂದ ನಿದ್ರಾಹೀನತೆ ಕಾಡಬಹುದು. ವನ ವಿಹಾರದಿಂದ ಮನಸ್ಸಿಗೆ ಮುದ ಸಿಗಲಿದೆ.

ಧನು: ಸಹೋದ್ಯೋಗಿಗಳೊಂದಿಗೆ ಹೊಂದಿಕೊಂಡು ಹೋಗುವ ಗುಣ ಸ್ವಭಾವಗಳನ್ನು ಅಳವಡಿಸಿಕೊಳ್ಳುವುದು ಒಳ್ಳೆಯದು. ನಿಮ್ಮಲಿನ ಆತ್ಮವಿಶ್ವಾಸದಿಂದಾಗಿ ಕೆಲಸ–ಕಾರ್ಯಗಳಲ್ಲಿ ಉತ್ತಮ ಯಶಸ್ಸು ಹೊಂದುವಿರಿ.

ಮಕರ: ಸಾಮಾಜಿಕ ಚಟುವಟಿಕೆಗಳು ಹೆಚ್ಚಲಿದೆ. ಪರಿಸ್ಥಿತಿ ಅವಲೋಕಿಸಿ ಮುಂದಿನ ಹೆಜ್ಜೆ ಇಡಿ. ಪಾಲುದಾರರಲ್ಲಿ ಒಮ್ಮತ ಮೂಡಿಸುವಲ್ಲಿ ಯಶಸ್ವಿ ಆಗಲಿದ್ದೀರಿ. ಕಬ್ಬಿಣ ಕೆಲಸ ಮಾಡುವವರು ಜಾಗ್ರತೆ ವಹಿಸಿ.

ಕುಂಭ: ನಿಮ್ಮ ವೃತ್ತಿ ಜೀವನಕ್ಕಾಗಿ ಬಹಳ ಅವಶ್ಯಕ ನಿರ್ಧಾರವೊಂದನ್ನು ಇಂದು ತೆಗೆದುಕೊಳ್ಳುವಿರಿ. ಹೊಟ್ಟೆಗೆ ಸಂಬಂಧಿಸಿದ ಅನಾರೋಗ್ಯವನ್ನು ನಿರ್ಲಕ್ಷ್ಯ ಬೇಡ. ಆಗಬೇಕಾದ ಅಪಾಯವು ಕೂದಲೆಳೆಯ ಅಂತರದಲ್ಲಿ ತಪ್ಪಲಿದೆ.

ಮೀನ: ಪ್ರಾಪಂಚಿಕ ಅನುಭವಕ್ಕಾಗಿ ಕಾನೂನಿನ ಬಗ್ಗೆ ಅಧ್ಯಯನ ಮಾಡುವ ಮನಸ್ಸಾಗಲಿದೆ. ಕೆಲವು ವಿಚಾರಗಳಲ್ಲಿನ ನಿಮ್ಮ ಭಾವ ಶೂನ್ಯತೆ ನಿಮ್ಮ ಕುಟುಂಬದವರಿಗೆ ನುಂಗಲಾರದ ತುತ್ತಿನಂತೆ ಕಾಣುತ್ತದೆ.

ಷೇರುಪೇಟೆ ವಹಿವಾಟು 253



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,403
ಇಂದಿನ ಅಂತ್ಯ	22,466
▲	62
ದಿನದ ಗರಿಷ್ಠ	22,471

ವಿನಿಮಯ ದರ

$ ಡಾಲರ್	83.30
£ ಪೌಂಡ್	105.50
€ ಯುರೊ	90.40
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹920 (917)
ಸೂರ್ಯಕಾಂತ (ರಿಫೈನ್ಡ್)	₹920 (915)
ಪಾಮೋಲಿನ್	₹882 (882)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14400
ಎಸಿ	₹8540
ಆರ್‌ಪಿ	₹14900
ಆರ್‌ಸಿ	₹8820

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹9550-9550
ತಿಪಟೂರು	₹8600-9300
ಅರಸೀಕೆರೆ	₹8000-8810

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177.50
ಆರ್‌ಎಸ್‌ಎಸ್-5	₹170.50
ಗುಡ್ ಲಾಟ್	₹160.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಬ)	₹286-501
ದ್ವಿತಳಿ (ಬಿ.ವಿ)	₹371-631

ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕಾರ್ಕಳ	
ಹೊಸತು	25000-38000
ಹಳತು	30000-46500
ಪುತ್ತೂರು	
ಹೊಸತು	26500-38000
ಕುಮಟ	
ಚಿಪ್ಪು	27059-30569
ಕೋಕ	14019-26019
ಫ್ಯಾಕ್ಟರಿ	11569-20829
ಹಳೆಚಾಲಿ	38569-40499
ಹೊಸಚಾಲಿ	34699-37529
ಶಿವಮೊಗ್ಗ	
ಗೊರಬಲು	20000-35272
ರಾಶಿ	33080-54099
ಸರಕು	54099-75009
ಸಿದ್ದಾಪುರ	
ಬಿಳಿಗೋಟು	28789-32509
ಕೋಕ	26219-30909
ಕೆಂಪುಗೋಟು	24289-33699
ರಾಶಿ	28800-29399
ತಟ್ಟಿಬೆಟ್ಟೆ	37600-47559
ಶಿರಸಿ	
ಬೆಟ್ಟೆ	35299-46001
ಬಿಳಿಗೋಟು	23109-31572
ಚಾಲಿ	34708-39111
ರಾಶಿ	45599-49489
ಯಲ್ಲಾಪುರ	
ಬಿಳಿಗೋಟು	21081-33350
ಕೋಕ	13899-31299
ಕೆಂಪುಗೋಟು	24899-34799
ರಾಶಿ	44899-54619
ತಟ್ಟಿಬೆಟ್ಟೆ	35100-44520

ಭಾರತ– ರಷ್ಯಾ ನಡುವೆ ವೀಸಾ ಮುಕ್ತ ಗುಂಪು ಪ್ರವಾಸ

ಮಾಸ್ಕೊ (ಪಿಟಿಐ): 'ರಷ್ಯಾ ಮತ್ತು ಭಾರತ ನಡುವೆ ಸರಾಗ ಪ್ರಯಾಣದ ದ್ವಿಪಕ್ಷೀಯ ಒಪ್ಪಂದಕ್ಕಾಗಿ ಜೂನ್‌ನಲ್ಲಿ ಮಾತುಕತೆ ಪ್ರಾರಂಭವಾಗಲಿದೆ. ಉಭಯ ರಾಷ್ಟ್ರಗಳು ವೀಸಾ ಮುಕ್ತ ಗುಂಪು ಪ್ರವಾಸ ವಿನಿಮಯ ಪ್ರಾರಂಭಿಸುವ ಮೂಲಕ ತಮ್ಮ ಪ್ರವಾಸೋದ್ಯಮ ಸಂಬಂಧವನ್ನೂ ಬಲಪಡಿಸಲು ಸಜ್ಜಾಗಿವೆ' ಎಂದು ರಷ್ಯಾದ ಸಚಿವರೊಬ್ಬರು ತಿಳಿಸಿದರು.

'ಈ ನಿಟ್ಟಿನಲ್ಲಿ ಭಾರತ ಸರ್ಕಾರದ ಆಂತರಿಕ ಸಮನ್ವಯತೆ ಅಂತಿಮ ಹಂತದಲ್ಲಿದೆ' ಎಂದು ರಷ್ಯಾದ ಆರ್ಥಿಕ ಅಭಿವೃದ್ಧಿ ಸಚಿವಾಲಯದ ಬಹುಪಕ್ಷೀಯ ಆರ್ಥಿಕ ಸಹಕಾರ ಮತ್ತು ವಿಶೇಷ ಯೋಜನೆಗಳ ವಿಭಾಗದ ನಿರ್ದೇಶಕರೂ ಆದ ನಿಕಿಟ ಕೊಂಡ್ರಾಟ್ಯೆವ್ ಬುಧವಾರ ಹೇಳಿರುವುದಾಗಿ 'ಆರ್‌ಟಿ ನ್ಯೂಸ್' ವರದಿ ಮಾಡಿದೆ.

ಕಜಾನ್‌ನಲ್ಲಿ ನಡೆದ 'ರಷ್ಯಾ - ಇಸ್ಲಾಮಿಕ್ ವರ್ಲ್ಡ್: ಕಜನ್‌ಫೋರಮ್ 2024' ಸಮಾವೇಶದ ವೇಳೆ ಮಾತನಾಡಿದ ಸಚಿವರು, ಉಭಯ ರಾಷ್ಟ್ರಗಳು ವೀಸಾ-ಮುಕ್ತ ಗುಂಪು ಪ್ರವಾಸಿ ವಿನಿಮಯ ಕೇಂದ್ರಗಳನ್ನು ಪ್ರಾರಂಭಿಸಲು ಸಜ್ಜಾಗುತ್ತಿವೆ. ಕರಡು ಒಪ್ಪಂದದ ಕುರಿತು ಮೊದಲ ಚರ್ಚೆಯನ್ನು ಜೂನ್‌ನಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ವರ್ಷಾಂತ್ಯದ ವೇಳೆಗೆ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ ಎಂದು ಹೇಳಿದರು.

ಚೀನಾ ಮತ್ತು ಇರಾನ್‌ನೊಂದಿಗೆ ಆರಂಭಿಸಿರುವ ವೀಸಾ-ಮುಕ್ತ ಪ್ರವಾಸಿ ವಿನಿಮಯ ಯಶಸ್ಸು ಕಂಡಿದ್ದು ಭಾರತದ ಜತೆಗೂ ಆರಂಭಿಸಲು ರಷ್ಯಾ ಯೋಜಿಸಿದೆ ಎಂದರು.

ಹೆಚ್ಚಿದ ಇಳುವರಿ: ಬೆಳೆಗಾರರಿಗೆ ಶೇ 97ರಷ್ಟು ಹಣ ಪಾವತಿ

ಬರದಲ್ಲೂ ಕೈ ಹಿಡಿದ ಕಬ್ಬು

• ಸಂತೋಷ ಈ. ಚಿನಗುಡಿ

ಬೆಳಗಾವಿ: ಈ ಬಾರಿ ಬರಗಾಲದ ನಡುವೆಯೂ ಕಬ್ಬು ರೈತರ ಕೈ ಹಿಡಿದಿದೆ. ಇಳುವರಿಯೂ ಹೆಚ್ಚಳವಾಗಿದೆ. ಎಫ್‌ಆರ್‌ಪಿ ಕೂಡ ಏರಿಕೆಯಾಗಿದ್ದರಿಂದ ಬೆಳೆಗಾರರ ಜೇಬು ಭರ್ತಿಯಾಗಿದೆ.

ರಾಜ್ಯದಲ್ಲಿ ಈ ಹಂಗಾಮಿನಲ್ಲಿ 76 ಕಾರ್ಖಾನೆಗಳು ಕಬ್ಬು ನುರಿಸಿವೆ. ಏಪ್ರಿಲ್ 30ರ ವರೆಗೆ 586 ಲಕ್ಷ ಟನ್ ಕಬ್ಬು ನುರಿಸಲಾಗಿದೆ. ಒಟ್ಟು 52.91 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಲಾಗಿದ್ದು, 9.04 ರಿಕವರಿ ಬಂದಿದೆ.

2023ರಲ್ಲಿ 600 ಲಕ್ಷ ಮೆಟ್ರಿಕ್ ಟನ್ ಮತ್ತು 2022ರಲ್ಲಿ 600 ಲಕ್ಷ ಟನ್ ಕಬ್ಬು ನುರಿಸಲಾಗಿತ್ತು.

'ಹೆಚ್ಚು ಪ್ರಮಾಣದಲ್ಲಿ ಕಬ್ಬು ಬೆಳೆಯುವ ಬೆಳಗಾವಿ, ಬಾಗಲಕೋಟೆ, ಬೀದರ್, ಮಂಡ್ಯ, ವಿಜಯಪುರ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಕೈ ಹಿಡಿದಿದೆ. ಬರಗಾಲಕ್ಕೂ ಮುಂಚೆಯೇ ಕಬ್ಬಿನಲ್ಲಿ ಸಕ್ಕರೆ ಅಂಶ ಕಟ್ಟಿತ್ತು. ಹಾಗಾಗಿ, ಬರ ಕಾಣಿಸಿಕೊಂಡರೂ ಇಳುವರಿ ಕುಸಿದಿಲ್ಲ. ಇದು ನಮಗೆ ಅಚ್ಚರಿ ಮೂಡಿಸಿದೆ' ಎಂದು ಸಕ್ಕರೆ ಆಯುಕ್ತ ಎಂ.ಆರ್. ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾರ್ಖಾನೆಗಳು ರೈತರಿಗೆ ಒಟ್ಟು ₹19,899.14 ಕೋಟಿ ಪಾವತಿಸಬೇಕಿದೆ. ಈ ಪೈಕಿ ಮೇ 15ರ ವರೆಗೆ ₹19,294.78 ಕೋಟಿ (ಶೇ 97ರಷ್ಟು) ಪಾವತಿಸಲಾಗಿದೆ. ಇನ್ನೂ ₹604.36 ಕೋಟಿ ಬಾಕಿ ಇದೆ. 15 ದಿನಗಳಲ್ಲಿ ಪಾವತಿ ಆಗುವ ನಿರೀಕ್ಷೆಯಿದೆ. ವಿಳಂಬ ಮಾಡುವ ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗುವುದು' ಎಂದರು.

> **ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಮೊದಲ ಕಂತಿನ ಪೂರ್ಣ ಹಣ ನೀಡಿದೆ. ಫೆಬ್ರುವರಿ ಬಳಿಕ ಸಾಗಿಸಿದ ಕಬ್ಬಿನ ಬಾಕಿ ಬರಬೇಕಿದೆ**
> – ಶ್ರೀಕಾಂತ ಗುಡೆಣ್ಣವರ, ರೈತ, ಎಂ.ಕೆ. ಹುಬ್ಬಳ್ಳಿ

ಹೆಚ್ಚು ಕಬ್ಬು ನುರಿಸಿದ ಜಿಲ್ಲೆಗಳು: ಬೆಳಗಾವಿ ಜಿಲ್ಲೆಯಲ್ಲಿ 28 ಕಾರ್ಖಾನೆಗಳಿದ್ದು 2.06 ಕೋಟಿ ಟನ್ ಕಬ್ಬು ನುರಿಸಿವೆ. 19.70 ಲಕ್ಷ ಟನ್ ಉತ್ಪಾದನೆ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ 13 ಕಾರ್ಖಾನೆಗಳಿವೆ. 1.73 ಕೋಟಿ ಟನ್ ಕಬ್ಬು ನುರಿಸಿದ್ದು, 15.41 ಲಕ್ಷ ಟನ್ ಉತ್ಪಾದಿಸಿವೆ. ಈ ಎರಡೂ ಜಿಲ್ಲೆಗಳಲ್ಲಿ ಶೇ 97ರಷ್ಟು ಹಣ ಪಾವತಿಯಾಗಿದೆ.

ವಿಜಯಪುರ ಜಿಲ್ಲೆಯಲ್ಲಿರುವ 9 ಕಾರ್ಖಾನೆಗಳು, 58.10 ಲಕ್ಷ ಟನ್ ಕಬ್ಬು ನುರಿಸಿವೆ. 5.27 ಲಕ್ಷ ಟನ್ ಉತ್ಪಾದಿಸಿದ್ದು, ಶೇ 91ರಷ್ಟು ಹಣ ಪಾವತಿಸಿವೆ.

ಮಂಡ್ಯ ಜಿಲ್ಲೆಯಲ್ಲಿ 5 ಕಾರ್ಖಾನೆಗಳಿವೆ. 30.90 ಲಕ್ಷ ಟನ್ ಕಬ್ಬು ನುರಿಸಿದ್ದು, 2.71 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡಿವೆ. ಶೇ 100ರಷ್ಟು ಹಣ ಪಾವತಿಸಿವೆ.

ಬೀದರ್ ಜಿಲ್ಲೆಯಲ್ಲಿರುವ 5 ಕಾರ್ಖಾನೆಗಳು, 17.81 ಲಕ್ಷ ಟನ್ ಕಬ್ಬು ನುರಿಸಿವೆ. 1.61 ಲಕ್ಷ ಟನ್ ಉತ್ಪಾದಿಸಿವೆ. ಕಲಬುರಗಿ ಜಿಲ್ಲೆಯ 4 ಕಾರ್ಖಾನೆಗಳು 33.42 ಲಕ್ಷ ಟನ್ ಕಬ್ಬು ನುರಿಸಿದ್ದು, 2.74 ಲಕ್ಷ ಟನ್ ಉತ್ಪಾದನೆ ಮಾಡಿವೆ.

ತಗ್ಗಿದ ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು

ಸೆನ್ಸೆಕ್ಸ್ 253 ಅಂಶ ಏರಿಕೆ

2ನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವಾದ ಶುಕ್ರವಾರವೂ ಗೂಳಿ ಓಟ ಮುಂದುವರಿಯಿತು.

ಮಹೀಂದ್ರ ಆ್ಯಂಡ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್, ಐಟಿಸಿ ಷೇರುಗಳ ಖರೀದಿಯು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಬೆಳಿಗ್ಗಿನ ವಹಿವಾಟಿನಲ್ಲಿ ಇಳಿಕೆ ದಾಖಲಿಸಿದ್ದ ಸೂಚ್ಯಂಕಗಳು ಬಳಿಕ ಚೇತರಿಕೆಯ ಹಳಿಗೆ ಮರಳಿದವು. ವಿದೇಶಿ ಸಾಂಸ್ಥಿಕ ಬಂಡವಾಳದ ಹೊರಹರಿವಿನ ಪ್ರಮಾಣವು ತಗ್ಗಿದ್ದು, ದೇಶೀಯ ಕಂಪನಿಗಳಲ್ಲಿ ಹೂಡಿಕೆ ಹೆಚ್ಚಳಕ್ಕೆ ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 253 ಅಂಶ ಏರಿಕೆ (ಶೇ 0.34ರಷ್ಟು) ಕಂಡು 73,917 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 62 ಅಂಶ ಹೆಚ್ಚಳ ಆಗಿದ್ದು, (ಶೇ0.28ರಷ್ಟು) 22,466 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯ ಶೇ 5.97ರಷ್ಟು ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಶೇ 0.73ರಷ್ಟು ಹೆಚ್ಚಳವಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್, ಅಲ್ಟ್ರಾ ಸಿಮೆಂಟ್, ಕೋಟಕ್ ಮಹೀಂದ್ರ ಬ್ಯಾಂಕ್, ಐಟಿಸಿ ಹಾಗೂ ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿಯೂ ಏರಿಕೆಯಾಗಿದೆ.

ಟಿಸಿಎಸ್, ಎಚ್‌ಸಿಎಲ್, ಎಚ್‌ಯುಎಲ್, ನೆಸ್ಲೆ ಇಂಡಿಯಾ, ಬಜಾಜ್ ಫಿನ್‌ಸರ್ವ್, ವಿಪ್ರೊ ಹಾಗೂ ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

'ಜಾಗತಿಕ ವಿದ್ಯಮಾನಗಳ ಮಿಶ್ರ ಬೆಳವಣಿಗೆ ಹಾಗೂ ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತದ ಅನಿಶ್ಚಿತತೆಯ ನಡುವೆಯೂ ದೇಶದ ಷೇರುಪೇಟೆಗಳು ಚೇತರಿಸಿಕೊಂಡಿವೆ. ಮಾರ್ಚ್ ತ್ರೈಮಾಸಿಕದಲ್ಲಿ ಲಾರ್ಜ್ ಕ್ಯಾಪ್ ಕಂಪನಿಗಳ ಲಾಭದಲ್ಲಿ ಏರಿಕೆಯಾಗಿರುವುದು ಕೂಡ ಇದಕ್ಕೆ ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.18ರಷ್ಟು ಹಾಗೂ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.39ರಷ್ಟು ಏರಿಕೆ ಕಂಡಿದೆ. ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹776 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

> **ಮುಖ್ಯಾಂಶಗಳು**
> - ಬೆಳಿಗ್ಗಿನ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ಸೂಚ್ಯಂಕಗಳು
> - ₹3.12 ಲಕ್ಷ ಕೋಟಿ ದಾಟಿದ ಮಹೀಂದ್ರ ಕಂಪನಿ ಎಂ–ಕ್ಯಾಪ್
> - ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತದ ಅನಿಶ್ಚಿತತೆ

ಜಿಡಿಪಿ ಶೇ 6.9ರಷ್ಟು ಪ್ರಗತಿ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಸಾರ್ವಜನಿಕ ವಲಯದಲ್ಲಿ ಹೂಡಿಕೆ ಹೆಚ್ಚಳ ಸೇರಿದಂತೆ ಸರಕು ಮತ್ತು ಸೇವೆಯಲ್ಲಿನ ಸದೃಢ ಬೆಳವಣಿಗೆಯಿಂದಾಗಿ 2024ರಲ್ಲಿ ಭಾರತದ ಜಿಡಿಪಿಯು ಶೇ 6.9ರಷ್ಟು ಪ್ರಗತಿ ಕಾಣಲಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ.

2025ರಲ್ಲಿ ಶೇ 6.6ರಷ್ಟು ಪ್ರಗತಿ ಕಾಣಲಿದೆ ಎಂದು ಗುರುವಾರ ಬಿಡುಗಡೆಗೊಳಿಸಿರುವ 'ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ವರದಿ'ಯಲ್ಲಿ ಹೇಳಿದೆ.

ಸರಕು ರಫ್ತು ಪ್ರಮಾಣವು ಹೆಚ್ಚಳ ಆಗಲಿದೆ. ಅದರಲ್ಲೂ ಔಷಧ ಮತ್ತು ರಾಸಾಯನಿಕ ವಸ್ತುಗಳ ರಫ್ತು ಸದೃಢವಾಗಿರಲಿದೆ. ಇದು ಆರ್ಥಿಕತೆಯ ಬೆಳವಣಿಗೆಗೆ ನೆರವಾಗಲಿದೆ ಎಂದು ತಿಳಿಸಿದೆ.

ಜನವರಿಯಲ್ಲಿ ಬಿಡುಗಡೆ ಮಾಡಿದ್ದ ವರದಿಯಲ್ಲಿ ಜಿಡಿಪಿಯು ಶೇ 6.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿತ್ತು. ದೇಶೀಯ ಬೇಡಿಕೆ ಹೆಚ್ಚಳ ಸೇರಿದಂತೆ ತಯಾರಿಕಾ ಮತ್ತು ಸೇವಾ ವಲಯದಲ್ಲಿನ ಸದೃಢ ಬೆಳವಣಿಗೆಯಿಂದ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಹೇಳಿತ್ತು.

'2023ರಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಶೇ 5.6ರಷ್ಟು ದಾಖಲಾಗಲಿದೆ. 2024ರಲ್ಲಿ ಶೇ 4.5ರಷ್ಟು ಇರಲಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿರುವ ಶೇ 2ರಿಂದ 6ರ ತಾಳಿಕೆಯ ನಡುವೆಯೇ ಇರಲಿದೆ' ಎಂದು ಹೇಳಿದೆ.

ಸುದ್ದಿ 2 ನಿಮಿಷ

ಜೆಎಸ್‌ಡಬ್ಲ್ಯು ಸ್ಟೀಲ್ ಲಾಭ ಇಳಿಕೆ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು, ₹1,322 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹3,741 ಕೋಟಿ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 65ರಷ್ಟು ಇಳಿಕೆಯಾಗಿದೆ ಎಂದು ಕಂಪನಿಯು, ಶುಕ್ರವಾರ ಷೇರುಪೇಟೆಗೆ ತಿಳಿಸಿದೆ. ಮಾರ್ಚ್ ತ್ರೈಮಾಸಿಕದಲ್ಲಿ ವರಮಾನವು ಕುಸಿತವಾಗಿದ್ದು, ₹46,511 ಕೋಟಿ ಗಳಿಸಿದೆ. ವೆಚ್ಚವು ₹43,170 ಕೋಟಿಯಿಂದ ₹44,401 ಕೋಟಿಗೆ ಏರಿಕೆಯಾಗಿದೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ನಿವ್ವಳ ಲಾಭವು ₹4,139 ಕೋಟಿಯಿಂದ ₹8,973 ಕೋಟಿಗೆ ಏರಿಕೆಯಾಗಿದೆ. ವರಮಾನವು ₹1.66 ಲಕ್ಷ ಕೋಟಿಯಿಂದ ₹1.76 ಲಕ್ಷ ಕೋಟಿಗೆ ತಲುಪಿದೆ. ಪ್ರತಿ ಷೇರಿಗೆ ₹7.30 ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

3 ತಿಂಗಳಲ್ಲಿ 9 ಕೋಟಿ ಜನ ವಿಮಾನ ಪ್ರಯಾಣ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ದೇಶದ ವಿಮಾನ ನಿಲ್ದಾಣಗಳ ಮೂಲಕ 9.7 ಕೋಟಿ ಪ್ರಯಾಣಿಕರು ಸಂಚರಿಸಿದ್ದಾರೆ ಎಂದು ಮಾಸ್ಟರ್‌ಕಾರ್ಡ್ ಎಕನಾಮಿಕ್ಸ್ ಇನ್‌ಸ್ಟಿಟ್ಯೂಟ್ ವರದಿ ತಿಳಿಸಿದೆ.

ಅಂತರರಾಷ್ಟ್ರೀಯ ಹಾಗೂ ದೇಶೀಯ ಮಾರ್ಗದಲ್ಲಿ ಹಿಂದೆಂದೂ ಇಷ್ಟು ಸಂಖ್ಯೆಯಲ್ಲಿ ಪ್ರಯಾಣಿಕರು ಸಂಚರಿಸಿಲ್ಲ ಎಂದು ಹೇಳಿದೆ. ಪ್ರವಾಸೋದ್ಯಮಕ್ಕೆ ಮೀಸಲಾದ ಏಷ್ಯಾ-ಪೆಸಿಫಿಕ್ ಪ್ರದೇಶದಲ್ಲಿರುವ 13 ಪ್ರವಾಸಿ ಮಾರುಕಟ್ಟೆಗಳು ಸೇರಿದಂತೆ ವಿಶ್ವ 74 ಮಾರುಕಟ್ಟೆಗಳ ವಿಸ್ತಾರಕ್ಕೆ ಇದರಿಂದ ನೆರವಾಗಲಿದೆ ಎಂದು ಹೇಳಿದೆ.

'ಒಂದು ದಶಕದ ಹಿಂದೆ ವರ್ಷವೊಂದರಲ್ಲಿ ಇಷ್ಟು ಸಂಖ್ಯೆಯ ಪ್ರಯಾಣಿಕರು ವಿಮಾನಗಳಲ್ಲಿ ಸಂಚರಿಸುತ್ತಿದ್ದರು. ಸದ್ಯ ಒಂದು ತ್ರೈಮಾಸಿಕದಲ್ಲೇ ದಾಖಲೆಯ ಸಂಖ್ಯೆಯಲ್ಲಿ ಪಯಣಿಸಿದ್ದಾರೆ' ಎಂದು ವರದಿ ವಿವರಿಸಿದೆ.

'ಉದ್ಯಮಿಗಳೆಂದರೇ ಭಾರತದಲ್ಲಿ ಪ್ರಗತಿ; ಪಾಕಿಸ್ತಾನದಲ್ಲಿ ಕಳ್ಳರು'

ಲಾಹೋರ್ (ಪಿಟಿಐ): 'ಭಾರತದಲ್ಲಿ ಉದ್ಯಮಿಗಳನ್ನು ಬೆಂಬಲಿಸುತ್ತಿರುವುದರಿಂದಲೇ ಆ ದೇಶದ ಪ್ರಗತಿ ಸಾಧ್ಯವಾಗಿದೆ. ಆದರೆ, ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ರಾಷ್ಟ್ರಗಳಲ್ಲಿ ಕಳ್ಳರಂತೆ ಕಾಣಲಾಗುತ್ತಿದೆ' ಎಂದು ಪಾಕಿಸ್ತಾನದ ಗೃಹ ಸಚಿವ ಮೊಹಸಿನ್ ನಖ್ವಿ ಬೇಸರ ವ್ಯಕ್ತಪಡಿಸಿದ್ದಾರೆ. 'ಉದ್ಯಮಿಗಳನ್ನು ಪ್ರೋತ್ಸಾಹಿಸುವ ಜೊತೆಗೆ ಸೂಕ್ತವಾಗಿ ಗೌರವಿಸುತ್ತಿರುವುದರಿಂದಲೇ ಭಾರತವು ಪ್ರಗತಿ ಹೊಂದಿದೆ. ಆದರೆ ಪಾಕಿಸ್ತಾನದ ಸ್ಥಿತಿಯೇ ಭಿನ್ನ. ಇಲ್ಲಿ ಸ್ವಲ್ಪ ಅಭಿವೃದ್ಧಿ ಹೊಂದುತ್ತಿದ್ದಂತೆ ಕಳ್ಳರ ಹಣೆಪಟ್ಟಿ ಅಂಟಿಸಲಾಗುತ್ತಿದೆ' ಎಂದು ಗುರುವಾರ ಪತ್ರಕರ್ತರಿಗೆ ತಿಳಿಸಿದರು.

'ಉದ್ಯಮಿಯಾಗಿ ನನ್ನ ಹಣವನ್ನು ನನ್ನಿಷ್ಟದ ಜಾಗದಲ್ಲಿ ಹೂಡಿಕೆ ಮಾಡುವೆ. ನನ್ನ ಪತ್ನಿಗೆ ಲಂಡನ್‌ನಲ್ಲೂ ಆಸ್ತಿಯಿದೆ. ಆಕೆಯ ವಿದೇಶದಲ್ಲಿನ ಆಸ್ತಿಗೆ ತೆರಿಗೆಯನ್ನು ಪಾವತಿಸಲಾಗಿದೆ. ವಿದೇಶದಲ್ಲಿ ಹೂಡಿಕೆ ಮಾಡುವುದರಲ್ಲಿ ಯಾವುದೇ ಅಕ್ರಮ ಇಲ್ಲ. ಫೆಡರಲ್ ತನಿಖಾ ಸಂಸ್ಥೆಯು (ಎಫ್‌ಐಎ) ಅಕ್ರಮವಾಗಿ ಕಡಲಾಚೆ ಆಸ್ತಿ ಹೊಂದಿರುವವರ ಬಗ್ಗೆ ತನಿಖೆ ನಡೆಸಬೇಕು. ಅನೇಕ ಮಾಧ್ಯಮ ಸಂಸ್ಥೆಗಳು ದುಬೈನಲ್ಲಿ ಆಸ್ತಿ ಹೊಂದಿವೆ' ಎಂದು ಅವರು ಹೇಳಿದರು.

ಕೋರೆ ಕೆಎಲ್‌ಇ ಕಾರ್ಯಾಧ್ಯಕ್ಷರಾಗಿ 40 ವರ್ಷ

'ಅಷ್ಟಮ ಋಷಿ'ಯ ಸಾರ್ಥಕ ಪಯಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಪ್ರಭಾಕರ ಕೋರೆ ಅಧಿಕಾರ ಸ್ವೀಕರಿಸಿ 40 ವರ್ಷ ಪೂರ್ಣಗೊಂಡಿವೆ. ಈ ಹಿನ್ನೆಲೆಯಲ್ಲಿ ಮೇ 18ರಂದು ಸಂಜೆ 5.30ಕ್ಕೆ ಜವಾಹರಲಾಲ್ ನೆಹರೂ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1984ರ ಮೇ 16ರಂದು ಪ್ರಭಾಕರ ಕೋರೆ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ ನೊಗ ಹೊತ್ತರು. ಆಗ ಅವರಿಗೆ 38 ವರ್ಷ. ತಮ್ಮಲ್ಲಿನ ನಾಯಕತ್ವ ಗುಣದಿಂದಾಗಿಯೇ ಅವರು ದೊಡ್ಡ ಸಂಸ್ಥೆಯ ಜವಾಬ್ದಾರಿ ಹೊತ್ತರು. ನಾಲ್ಕು ದಶಕಗಳಿಂದಲೂ ಕೋರೆ ಅವರೇ ಕಾರ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುತ್ತ ಬಂದಿದ್ದಾರೆ. ಶಿಕ್ಷಣ ಸಂಸ್ಥೆಯ ಸೇವೆಯನ್ನು ಆರೋಗ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಿಗೂ ವಿಸ್ತರಿಸಿದ್ದಾರೆ.

1984ರಲ್ಲಿ 38 ಅಂಗ ಸಂಸ್ಥೆಗಳು ಇದ್ದವು. ಈಗ ಅವುಗಳ ಸಂಖ್ಯೆ 310ಕ್ಕೇರಿದೆ. ಆಗ ₹9 ಕೋಟಿ ವಾರ್ಷಿಕ ಬಜೆಟ್ ರೂಪಿಸಲಾಗುತ್ತಿತ್ತು. ಈಗ ₹3,000 ಕೋಟಿ ದಾಟಿದೆ. ಶಿಕ್ಷಣ ಸಂಸ್ಥೆಯನ್ನು ಆರ್ಥಿಕವಾಗಿ ಸದೃಢಗೊಳಿಸಿದ್ದು ಪ್ರಭಾಕರ ಕೋರೆ ಅವರು ಎಂಬ ಹೆಮ್ಮೆ ವ್ಯಕ್ತಪಡಿಸುತ್ತಾರೆ ಸಂಸ್ಥೆಯ ನಿರ್ದೇಶಕರು.

ಕೋರೆ ಅವರ ನಾಯಕತ್ವದಲ್ಲಿ ದೇಶ–ವಿದೇಶಗಳಲ್ಲಿ ಶಾಲೆ– ಕಾಲೇಜು ಆರಂಭಿಸಲಾಗಿದೆ.



ಪ್ರಭಾಕರ ಕೋರೆ

ಅತ್ಯಾಧುನಿಕ ಸೌಲಭ್ಯ ಹೊಂದಿದ ಬೃಹತ್ ಆಸ್ಪತ್ರೆಗಳು ಮತ್ತು ಸಂಶೋಧನಾ ಸಂಸ್ಥೆಗಳು ಕ್ರಿಯಾಶೀಲವಾಗಿವೆ.

ಶೈಕ್ಷಣಿಕ ಕ ಕೋರೆ ಅವರ ಸೇವೆ ಪರಿಗಣಿಸಿ ಅಮೆರಿಕದ ಥಾಮಸ್ ಜಾಫರ್‌ಸನ್ ಯೂನಿವರ್ಸಿಟಿ ಗೌರವ ಡಾಕ್ಟರೇಟ್ ನೀಡಿದೆ. ಈ ಗೌರವ ಪಡೆದ ಮೊದಲ ಕನ್ನಡಿಗ ಅವರು. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ.

ಮರಾಠಿಮಯವಾಗಿದ್ದ ಬೆಳಗಾವಿಯಲ್ಲಿ ಕನ್ನಡತ್ವದ ಬೇರು ಗಟ್ಟಿಗೊಳಿಸುವಲ್ಲಿಯೂ ಕೋರೆ ಅವರು ಆಸ್ಥೆ ವಹಿಸಿದರು. ಕೆಎಲ್‌ಇ ಸ್ವಾಯತ್ತ ವಿಶ್ವವಿದ್ಯಾಲಯ, ಕೆಎಲ್‌ಇ ಟೆಕ್ನಿಕಲ್ ಯೂನಿವರ್ಸಿಟಿ, ಕೆಎಲ್‌ಇ– ಯುಎಸ್‌ಎಂ ಯೂನಿವರ್ಸಿಟಿಗಳನ್ನು ಸ್ಥಾಪಿಸಿದ್ದಾರೆ.

2006ರಲ್ಲಿ ಅವರ ಮೇಲೆ ಗುಂಡಿನ ದಾಳಿ ನಡೆಯಿತು. ಸಾವನ್ನೂ ಗೆದ್ದು ಬಂದ ಅವರು ಮೊದಲಿಗಿಂತಲೂ ಹೆಚ್ಚು ಕ್ರಿಯಾಶೀಲವಾದರು. ಇದಾಗಿ 18 ವರ್ಷ ಕಳೆದರೂ ಕಾರ್ಯಾಧ್ಯಕ್ಷ ಸ್ಥಾನದ ದಕ್ಷತೆಗೆ ಧಕ್ಕೆ ಬರದಂತೆ ನೋಡಿಕೊಂಡಿದ್ದಾರೆ.

ಅವರ ಶೈಕ್ಷಣಿಕ ಸೇವೆ ಹಾಗೂ ಸಾಮಾಜಿಕ ಬದ್ಧತೆ ಪರಿಗಣಿಸಿ ಸಂಸ್ಥೆಯವರು 'ಅಷ್ಟಮ ಋಷಿ' ಎಂದೇ ಅವರನ್ನು ಕರೆಯುತ್ತಾರೆ.

ನೇಪಾಳ: 20ಕ್ಕೆ ವಿಶ್ವಾಸಮತ ಯಾಚನೆ

ಕಠ್ಮಂಡು (ಪಿಟಿಐ): ನೇಪಾಳದ ಪ್ರಧಾನಮಂತ್ರಿ ಪುಷ್ಪಕಮಲ್ ದಹಲ್ ಪ್ರಚಂಡ ಅವರು ಇದೇ 20ರಂದು ಸಂಸತ್‌ನಲ್ಲಿ ವಿಶ್ವಾಸಮತ ಸಾಬೀತುಪಡಿಸಬೇಕಾಗಿದೆ. ಪ್ರಚಂಡ ಅವರು ಅಧಿಕಾರ ವಹಿಸಿಕೊಂಡ 18 ತಿಂಗಳಲ್ಲಿ ಇದು ನಾಲ್ಕನೇ ಬಾರಿ ವಿಶ್ವಾಸ ಮತದ ಪರೀಕ್ಷೆ ಎದುರಿಸುತ್ತಿದ್ದಾರೆ.

ಪ್ರಚಂಡ ಅವರು ಪ್ರತಿನಿಧಿಸುವ ನೇಪಾಳದ ಕಮ್ಯುನಿಸ್ಟ್ ಪಕ್ಷವು (ಮಾವೋವಾದಿ ಕೇಂದ್ರ) ದೇಶದ ಸಂಸತ್‌ನಲ್ಲಿ (ಎಚ್‌ಒಆರ್) ಮೂರನೇ ಅತಿ ದೊಡ್ಡ ಪಕ್ಷವಾಗಿದೆ.

ಉಪೇಂದ್ರ ಯಾದವ್ ನೇತೃತ್ವದ ಜನತಾ ಸಮಾಜವಾದಿ ಪಕ್ಷವು (ಜೆಎಸ್‌ಪಿ) ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮೇ 13ರಂದು ಹಿಂಪಡೆದಿದೆ. ಯಾದವ್ ಅವರು ಉಪ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ಪಕ್ಷವು ಸರ್ಕಾರದಿಂದ ಹೊರಬಂದಿದೆ. ಜತೆಗೆ, ಗೃಹ ಸಚಿವ ರಬಿ ಲಾಮಿಚಾನೆ ಸಹಕಾರಿ ನಿಧಿಯ ದುರುಪಯೋಗದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ತನಿಖೆಯ ಕುರಿತು ಸದನದಲ್ಲಿ ಸಂಸದರು ಧ್ವನಿ ಎತ್ತಿರುವಾಗ ಪ್ರಧಾನಿ ಪ್ರಚಂಡ ಅವರು ವಿಶ್ವಾಸಮತ ಸಾಬೀತುಪಡಿಸಬೇಕಾದ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಪ್ರಧಾನಿ ಪ್ರತಿನಿಧಿಸುವ ಪಕ್ಷ ಒಡೆದರೆ ಅಥವಾ ಸಮ್ಮಿಶ್ರ ಸರ್ಕಾರದ ಸದಸ್ಯರು ಬೆಂಬಲ ಹಿಂತೆಗೆದುಕೊಂಡರೆ 30 ದಿನಗಳೊಳಗೆ ಪ್ರಧಾನಿ ವಿಶ್ವಾಸ ಮತವನ್ನು ಸಾಬೀತುಪಡಿಸಬೇಕಾಗುತ್ತದೆ. ಸಮ್ಮಿಶ್ರ ಸರ್ಕಾರವನ್ನು ತ್ಯಜಿಸುವ ಸಂದರ್ಭದಲ್ಲಿ ಜನತಾ ಸಮಾಜವಾದಿ ಪಕ್ಷ (ಜೆಎಸ್‌ಪಿ) ಕಳೆದ ವಾರ ತನ್ನ ಬೆಂಬಲ ಹಿಂಪಡೆದಿತ್ತು. ಪ್ರಧಾನಿ ಪ್ರಚಂಡ ಅವರು 2022ರ ಡಿಸೆಂಬರ್ 25ರಂದು ಅಧಿಕಾರ ವಹಿಸಿಕೊಂಡ ನಂತರ, ಒಂದೂವರೆ ವರ್ಷಗಳಲ್ಲಿ ನಾಲ್ಕನೇ ಬಾರಿಗೆ ವಿಶ್ವಾಸ ಮತ ಯಾಚಿಸುತ್ತಿದ್ದಾರೆ. ಮಾರ್ಚ್ 13ರಂದು ಪ್ರಚಂಡ ಅವರು ಮೂರನೇ ಬಾರಿಗೆ ವಿಶ್ವಾಸ ಮತ ಸಾಬೀತುಪಡಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬಸ್ ಚಾಲಕರು ಬೇಕಾಗಿದ್ದಾರೆ
ಅರ್ಹತೆ:
• ಹೆವಿ ಮೋಟಾರ್ ವಾಹನ ಚಾಲಕರಾಗಿ 2 ವರ್ಷಗಳ ಅನುಭವ ಹೊಂದಿರಬೇಕು/ ಕರ್ನಾಟಕದ ಮಾನ್ಯತೆ ಪಡೆದಿರುವ ಸರಕು ವಾಹನ ಬ್ಯಾಡ್ಜ್ ಹೊಂದಿರಬೇಕು.
• 7ನೇ ತರಗತಿ ಉತ್ತೀರ್ಣರಾಗಿರಬೇಕು.
• ವೇತನ: ರೂ.23,000/– (ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯವಿರುತ್ತದೆ).
ಸಂಪರ್ಕಿಸಬೇಕಾದ ದೂರವಾಣಿ:
ಚಿಕ್ಕಬಳ್ಳಾಪುರ: 77952 24245, ತುಮಕೂರು: 95388 66744
ಶಿವಮೊಗ್ಗ: 84949 00181
ಮಂಡ್ಯ, ರಾಮನಗರ, ಮೈಸೂರು, ಚಾಮರಾಜನಗರ: 80509 80889, 86188 76846

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

ಭವಿಷ್ಯ

Astrology

★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನೀತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

★॥ಸ್ತ್ರೀಪುರುಷ ವಶೀಕರಣ॥★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಪ್ರವಾಸ

Travel

19.06.2024 09.07.2024 18.09.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 07.06.2024 06.07.2024 ನೇಪಾಳ 9 ದಿನಗಳು. 07.06.2024 ಅಸ್ಸಾಂ,ಮೇಘಾಲಯ 9 ದಿನಗಳು. 13.10.2024 24.11.202407.12.2024 ರಾಜಸ್ತಾನ 10 ದಿನಗಳು. 17.10.2024 26.11.202410.12.2024 ಗುಜರಾತ ಓಂಕಾರೇಶ್ವರ ಉಜ್ಜಯಿನಿ 8/12 ದಿನಗಳು. 5.10.2024 04.11.2024 07.12. 2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. 17.10.2024 26.11.202410.12.2024 ಮಧ್ಯಪ್ರದೇಶ 9 ದಿನಗಳು. ರೈಲಿನಲ್ಲಿ ಪ್ರಯಾಣಿಸುವವರು 120 ದಿನಗಳ ಮುಂಚಿತವಾಗಿ ತಮ್ಮ ಸೀಟುಗಳನ್ನು ಕಾಯ್ದಿರಿಸಬೇಕು. ಇದಲ್ಲದೇ ಫಾಮಿಲಿ ಪ್ರವಾಸಿಗಳಿಗೆ ವಿಚಾರಿಸಿರಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ ಹರಿದ್ವಾರ್, 09.06.2024 23.06.2024 ರಿಂದ 14 ದಿನಗಳು. ಅಯೋಧ್ಯ,ಪ್ರಯಾಗ್ ಕಾಶಿ,ಗಯಾ,ಬೈಧ್ಯನಾಥಧಾಮ್ 03.06.2024 ರಿಂದ 8 ದಿನಗಳು. ಸ್ವಯಂಭೂ ಅಮರನಾಥ್ ಕಾಶ್ಮೀರ್ ಅಮೃತಸರ್ ಕುರುಕ್ಷೇತ್ರ 14 ದಿನಗಳು. ಮತ್ತು ನೇಪಾಳ ಮುಕ್ತಿನಾಥ, ಜನಕಪುರ್ ಬೈಧ್ಯನಾಥಧಾಮ್ 11 ದಿನಗಳು 03.07.2024 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್ ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080-22429289 9448119290 9019301300

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 30.06.2024 ರಿಂದ 12 ದಿನಗಳ ಅಮರನಾಥ್ ಯಾತ್ರೆ. 11.06.2024 13.09.2024 25.09.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 09.09.2024 14.10.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ 05.10.2024 17.10.2024 ರಿಂದ 8/12 ದಿನಗಳ ಸಿಮ್ಲಾ,ಮನಾಲಿ. 09.09.2024 02.10.2024 ರಿಂದ 11 ದಿನಗಳ ಅಯೋಧ್ಯ ಮುಕ್ತಿನಾಥ ನೇಪಾಳ ಕಾಶಿ 17.10.2024 26.11.2024 07.12.2024 ರಿಂದ 11 ದಿನಗಳ ಮಧ್ಯಪ್ರದೇಶ. 14.10.2024 07.11.2024 26.11.2024 ರಿಂದ 8/11 ದಿನಗಳ ಗುಜರಾತ್ ರಾಜಸ್ತಾನ. 21.07.2024 25.09.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ಪ್ರವಾಸಗಳು.ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಸುವರ್ಣ ಯಾತ್ರ ಚಾರ್ಧಾಮ ಯಾತ್ರ, ಕೇದಾರನಾಥ ಬದ್ರಿನಾಥ್, ಗಂಗೋತ್ರಿ ಯಮುನೋತ್ರಿ, ದೆಹಲಿ ಹರಿದ್ವಾರ ಋಷಿಕೇಶ್. 13 ದಿನಗಳು 7/6/2023. 9019462508 8660233673

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 5/6/24 ಕಾಶಿ ಪ್ರವಾಸ ಗಯಾ, ಅಯೋಧ್ಯೆ ಪ್ರಯಾಗ್ರಾಜ್. 12/6/24 ನೇಪಾಳ ಮುಕ್ತಿನಾಥ್, ಪಶುಪತಿನಾ ಅಯೋಧ್ಯೆ. 9964527782, 9591017782

Visa/ Passport

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/11 ದಿನಗಳು. 07.06.2024 ರಾಮೇಶ್ವರ ಕನ್ಯಾಕುಮಾರಿ ಮಧುರೈ 10 ಕ್ಷೇತ್ರಗಳು. 26.06.2024 ತಂಜಾವೂರು ಕುಂಬಕೋಣಂ ಚಿದಂಬರಂ ನವಗ್ರಹ ದರ್ಶನ 18 ಕ್ಷೇತ್ರಗಳು. 11.07.2024 ಸಮಗ್ರ ಕೇರಳ ಕನ್ಯಾಕುಮಾರಿ ಪಳನಿ 17.09.2024 ವೈಷ್ಣೋದೇವಿ-ಯಾತ್ರೆ. 9448390735 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

14ನೇ ವರ್ಷದ ಚಿರಸ್ಮರಣೆ

ಶ್ರೀ ಎಂ. ಅನಿಲ್ ಕುಮಾರ್
ಮಾಜಿ ನಿರ್ದೇಶಕರು, ಬೆಂಗಳೂರು ಡೈರಿ
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷ ಕಳೆದರೂ ನಿಮ್ಮ ಸೌಜನ್ಯ ಮತ್ತು ನಿಮ್ಮ ಆದರ್ಶಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವ
ದುಃಖತಪ್ತರು : ಕುಟುಂಬ ವರ್ಗದವರು ಮತ್ತು ಪದ್ಮ ಬಾರ್ & ರೆಸ್ಟೋರೆಂಟ್, ಪದ್ಮಶ್ರೀ ಸರ್ವೀಸ್ ಸ್ಟೇಷನ್, ಬೊಳಾರೆ

3ನೇ ವರ್ಷದ ಪುಣ್ಯ ಸ್ಮರಣೆ
18–05–2023



ಶ್ರೀ ಮುನಿಕಾಮಯ್ಯ, (ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್)
ನಿಮ್ಮ ಜೀವನವೇ ನಮಗೆ ಸ್ಫೂರ್ತಿ
ನಿಮ್ಮ ನೆನಪಿನೊಂದಿಗೆ ನಮ್ಮ ಜೀವನ
ಸದಾ ನಿಮ್ಮನ್ನು ಸ್ಮರಿಸುವ: ಕುಟುಂಬದವರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

10 ವರ್ಷ ಉಭಯ ರಾಜ್ಯಗಳ ರಾಜಧಾನಿಯಾಗಿದ್ದ ಮುತ್ತಿನ ನಗರಿ; ಜೂನ್ 2ರಿಂದ ಜಾರಿ

ತೆಲಂಗಾಣಕ್ಕೆ ಮಾತ್ರ ಹೈದರಾಬಾದ್ ರಾಜಧಾನಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮುತ್ತಿನ ನಗರಿ ಹೈದರಾಬಾದ್ ಜೂನ್ 2ರ ನಂತರ, ತೆಲಂಗಾಣ ಹಾಗೂ ಆಂಧ್ರ-ಪ್ರದೇಶದ ಜಂಟಿ ರಾಜಧಾನಿಯಾಗಿ ಮುಂದುವರಿಯುವುದಿಲ್ಲ. ಆನಂತರ, ಅದು ತೆಲಂಗಾಣದ ರಾಜಧಾನಿಯಾಗಿ ಮಾತ್ರ ಇರಲಿದೆ.

'ಹೈದರಾಬಾದ್ ನಗರವು, 10 ವರ್ಷ ಮೀರದಂತೆ ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ರಾಜಧಾನಿಯಾಗಿರಲಿದೆ. ಈ ವ್ಯವಸ್ಥೆ, ರಾಜ್ಯ ವಿಭಜನೆಯಾದ 2014ರ ಜೂನ್ 2ರಿಂದ ಜಾರಿಗೆ ಬರಲಿದೆ' ಎಂದು ಆಂಧ್ರಪ್ರದೇಶ ಪುನರ್ ರಚನೆ ಕಾಯ್ದೆ, 2014 ಸೆಕ್ಷನ್ 5ರಲ್ಲಿ ಹೇಳಲಾಗಿದೆ.

'10 ವರ್ಷದ ನಂತರ, ಹೈದರಾಬಾದ್ ನಗರವು ತೆಲಂಗಾಣದ ರಾಜಧಾನಿಯಾಗಿರಲಿದೆ' ಎಂದು ಇದೇ ಸೆಕ್ಷನ್ 5ರಲ್ಲಿ ಉಲ್ಲೇಖಿಸಲಾಗಿದೆ.

ಹೈದರಾಬಾದ್‌ನಲ್ಲಿರುವ ಲೇಕ್ ವ್ಯೂ ಗೆಸ್ಟ್ ಹೌಸ್ ಸೇರಿದಂತೆ ಪ್ರಮುಖ ಕಟ್ಟಡಗಳನ್ನು ಸುಪರ್ದಿಗೆ ಪಡೆಯುವಂತೆ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಈಚೆಗೆ ನಿರ್ದೇಶನ ನೀಡಿದ್ದರು. ನಗರದ ಪ್ರಮುಖ ಕಟ್ಟಡಗಳನ್ನು ಆಗ ನೂತನವಾಗಿ ಅಸ್ತಿತ್ವಕ್ಕೆ ಬಂದಿದ್ದ ಆಂಧ್ರಪ್ರದೇಶ ರಾಜ್ಯದ ಕಚೇರಿಗಳಿಗಾಗಿ 10 ವರ್ಷದ ಅವಧಿಗೆ ಹಂಚಿಕೆ ಮಾಡಲಾಗಿತ್ತು.

ಉಭಯ ರಾಜ್ಯಗಳ ನಡುವೆ ಬಗೆಹರಿಯದಿರುವ ವಿಷಯ ಕುರಿತು ವರದಿ ಸಲ್ಲಿಸುವಂತೆಯೂ ಮುಖ್ಯಮಂತ್ರಿ ರೇವಂತ ರೆಡ್ಡಿ ಸೂಚನೆ ನೀಡಿದ್ದರು.

'ಜೂನ್ 2ರ ಒಳಗಾಗಿ, ಉಭಯ ರಾಜ್ಯಗಳ ನಡುವಿನ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಕಟ್ಟಡಗಳನ್ನು ಸುಪರ್ದಿಗೆ ತೆಗೆದುಕೊಳ್ಳಲು ತೆಲಂಗಾಣ ಮುಖಮಂತ್ರಿ ಯಾಕಿಷ್ಟು ಉತ್ಸಾಹ ತೋರುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ' ಎಂದು ಹಿರಿಯ ಪತ್ರಕರ್ತ ತೇಲಕಪಲ್ಲಿ ರವಿ 'ಪ್ರಜಾವಾಣಿ'ಗೆ ಹೇಳಿದ್ದಾರೆ.

'ವಿಧಾನಸಭೆ ಚುನಾವಣೆ ಫಲಿತಾಂಶ ಜೂನ್ 4ರಂದು ಪ್ರಕಟವಾಗಲಿದೆ. ಆಂಧ್ರದಲ್ಲಿ ಪೂರ್ಣ ಪ್ರಮಾಣದ ಸರ್ಕಾರ ರಚನೆ ಆಗಿರುವುದಿಲ್ಲ. ಸುಸಜ್ಜಿತ ಕಟ್ಟಡಗಳನ್ನು ಹೊಂದಿ, ಆಡಳಿತ ನಡೆಸಲು ನೂತನ ಸರ್ಕಾರಕ್ಕೆ ಸಮಯ ಬೇಕಾಗುತ್ತದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ತೆಲಂಗಾಣ ಸಚಿವ ಸಂಪುಟ ಸಭೆ ಇಂದು

ಹೈದರಾಬಾದ್ ನಗರವು ಜೂನ್ 2ರಿಂದ ಅನ್ವಯವಾಗುವಂತೆ ತೆಲಂಗಾಣದ ರಾಜಧಾನಿಯಾಗಿ ಮುಂದುವರಿಯುವುದಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಚರ್ಚಿಸಲು ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರು ಶನಿವಾರ ಸಂಪುಟ ಸಭೆ ಕರೆದಿದ್ದಾರೆ.

ಇದೇ ವಿಚಾರವಾಗಿ ಅವರು ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆಯನ್ನು ಇತ್ತೀಚೆಗೆ ನಡೆಸಿದ್ದರು.

ಆಸ್ತಿಗಳನ್ನು ಭಾಗ ಮಾಡುವುದು, ವಿಭಜನೆ ನಂತರ ಉಭಯ ರಾಜ್ಯಗಳಿಗೆ ಸಂಬಂಧಿಸಿ ಬಾಕಿ ಇರುವ ಸಾಲ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಸಿದ್ದರು.

ಉಭಯ ರಾಜ್ಯಗಳ ನಡುವಿನ ಬಾಕಿ ವಿಷಯಗಳನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕು ಹಾಗೂ ತೆಲಂಗಾಣದ ಹಿತಾಸಕ್ತಿ ಕಾಪಾಡುವುದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದ್ದರು.

ಬಲವಾಗಿ ಒದ್ದು ಹಿಂಸೆ: ಮಾಲಿವಾಲ್

ಒಂದನೇ ಪುಟದಿಂದ...

'ನಾನು ಕೇಜ್ರಿವಾಲ್ ಅವರನ್ನು ಭೇಟಿಯಾಗಲು ಅವರ ಅಧಿಕೃತ ನಿವಾಸಕ್ಕೆ ಹೋಗಿದ್ದೆ. ಕೊಠಡಿಯಲ್ಲಿ ಕುಳಿತು, ನಾನು ಬಂದಿರುವ ಬಗ್ಗೆ ಮುಖ್ಯಮಂತ್ರಿಗೆ ತಿಳಿಸುವಂತೆ ಹೇಳಿದ್ದೆ. ಅಷ್ಟರಲ್ಲಿಯೇ ಕೊಠಡಿಗೆ ನುಗ್ಗಿದ ಕುಮಾರ್ ನನ್ನನ್ನು ನಿಂದಿಸಿ, ಹಿಗ್ಗಾಮಗ್ಗ ಥಳಿಸಿದ. ನನಗೆ ಋತುಸ್ರಾವದ ಸಮಯವಾಗಿದ್ದು, ನೋವಿನಿಂದ ಬಳಲುತ್ತಿ-ದ್ದೇನೆ ಎಂದು ಹೇಳಿದರೂ ಕರುಣೆ ತೋರದೆ, ಥಳಿಸಿದ್ದಾನೆ' ಎಂದು ಅವರು ವಿವರಿಸಿದ್ದಾರೆ.

'ನಮ್ಮ ಮಾತನ್ನು ನೀನು ಏಕೆ ಕೇಳುವುದಿಲ್ಲ? ನಮಗೆ ಬೇಡ ಎನ್ನಲ್ಲು ನಿನಗೆಷ್ಟು ಧೈರ್ಯ? ನಿನ್ನ ಬಗ್ಗೆ ನೀನು ಏನೆಂದುಕೊಂಡಿದ್ದೀಯಾ? ನಿನಗೆ ಸರಿಯಾದ ಪಾಠ ಕಲಿಸುತ್ತೇವೆ' ಎಂದು ಕುಮಾರ್ ಹೇಳಿದ್ದಾಗಿ ಸ್ವಾತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕ್ರೂರವಾಗಿ ನನ್ನನ್ನು ಎಳೆದಾಡಿದ ಆತ, ಉದ್ದೇಶಪೂರ್ವಕವಾಗಿ ನನ್ನ ಶರ್ಟ್ ಅನ್ನು ಮೇಲಕ್ಕೆ ಎಳೆದ. ಈ ವೇಳೆ ಶರ್ಟಿನ ಬಟನ್ ತೆರೆದು ಶರ್ಟ್ ಮೇಲಕ್ಕೆ ಬಂದಿತು. ಅಲ್ಲಿದ್ದ ಮೇಜಿಗೆ ನನ್ನ ತಲೆಯನ್ನು ಆತ ಹೊಡೆದ' ಎಂದು ಅವರು ಘಟನೆಯನ್ನು ವಿವರಿಸಿದ್ದಾರೆ.

ಈ ಕುರಿತು ಕಠಿಣ ಕ್ರಮ ತೆಗೆದುಕೊಳ್ಳುವಂತೆ ಅವರು ಕೋರಿದ್ದಾರೆ.

ಹೇಳಿಕೆ ದಾಖಲು: ಸ್ವಾತಿ ಅವರು ಪ್ರಕರಣ ಸಂಬಂಧ ಇಲ್ಲಿನ ತೀಸ್ ಹಜಾರಿ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ತಮ್ಮ ಹೇಳಿಕೆ ದಾಖಲಿಸಿದರು.

ತನಿಖೆಯ ಭಾಗವಾಗಿ ಅಪರಾಧದ ದೃಶ್ಯವನ್ನು ಮರು ಸೃಷ್ಟಿಸಲು, ದೆಹಲಿ ಪೊಲೀಸರು ಸ್ವಾತಿ ಅವರನ್ನು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸಕ್ಕೆ ಕರೆದೊಯ್ದು ತಪಾಸಣೆ ನಡೆಸಿದರು.

ಆಯೋಗದ ಮುಂದೆ ಹಾಜರಾಗದ ಬಿಭವ್

ಸ್ವಾತಿ ಮಾಲಿವಾಲ್ ಅವರ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿ ಬಿಭವ್ ಕುಮಾರ್ ಶುಕ್ರವಾರ ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಮುಂದೆ ಹಾಜರಾಗಲಿಲ್ಲ.

ಕುಮಾರ್ ಅವರಿಗೆ ಬೆಳಿಗ್ಗೆ 11 ಗಂಟೆಗೆ ಹಾಜರಾಗುವಂತೆ ಎನ್‌ಸಿಡಬ್ಲ್ಯು ಸಮನ್ಸ್ ನೀಡಿತ್ತು.

'ಆಯೋಗದ ತಂಡವು ಕುಮಾರ್ ಅವರಿಗೆ ನೋಟಿಸ್ ನೀಡಲು ಗುರುವಾರ ಅವರ ನಿವಾಸಕ್ಕೆ ಹೋಗಿತ್ತು. ಆದರೆ ಅವರು ಮನೆಯಲ್ಲಿ ಇರಲಿಲ್ಲ. ಅವರ ಪತ್ನಿ ನೋಟಿಸ್ ಸ್ವೀಕರಿಸಲು ನಿರಾಕರಿಸಿದರು. ಆಯೋಗದ ತಂಡ ಶುಕ್ರವಾರ ಮತ್ತೆ ಪೊಲೀಸರ ಜತೆಗೆ ಅವರ ನಿವಾಸಕ್ಕೆ ಹೋಗಿತ್ತು. ಅವರು ಶನಿವಾರದೊಳಗೆ ಆಯೋಗದ ಮುಂದೆ ಹಾಜರಾಗದಿದ್ದರೆ, ನಾವೇ ವೈಯಕ್ತಿಕವಾಗಿ ಅವರ ವಿಚಾರಣೆಗೆ ಹೋಗುತ್ತೇವೆ' ಎಂದು ಎನ್‌ಸಿಡಬ್ಲ್ಯು ಮುಖ್ಯಸ್ಥೆ ರೇಖಾ ಶರ್ಮಾ ಸುದ್ದಿಗಾರರಿಗೆ ತಿಳಿಸಿದರು.

ಕೇಜ್ರಿವಾಲ್ ಕ್ಷಮೆ ಕೋರಬೇಕು: ನಿರ್ಮಲಾ

ನವದೆಹಲಿ (ಪಿಟಿಐ): ಸಂಸದೆ ಸ್ವಾತಿ ಮಾಲಿವಾಲ್ ಅವರ ಮೇಲಿನ ದಾಳಿಯ ಕುರಿತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮೌನವಾಗಿರುವುದನ್ನು ಪ್ರಶ್ನಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, 'ಈ ಪ್ರಕರಣ ಕುರಿತು ಕೇಜ್ರಿವಾಲ್ ಅವರು ಸ್ವಾತಿ ಅವರ ಕ್ಷಮೆ ಕೋರಬೇಕು' ಎಂದು ಆಗ್ರಹಿಸಿದರು.

ವಾಗ್ವಾದದ ವಿಡಿಯೊ ಬಿಡುಗಡೆ: ಇದೆಲ್ಲದರ ನಡುವೆ, ಮುಖ್ಯಮಂತ್ರಿ ನಿವಾಸದಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ಮಾಲಿವಾಲ್ ಅವರು ವಾಗ್ವಾದ ನಡೆಸುತ್ತಿರುವ ಸುಮಾರು 52 ಸೆಕೆಂಡುಗಳ ವಿಡಿಯೊ ಶುಕ್ರವಾರ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಯಾಗಿದ್ದು, ವ್ಯಾಪಕವಾಗಿ ಹಂಚಿಕೆಯಾಗಿದೆ.

ವಿಡಿಯೊ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಸ್ವಾತಿ ಅವರು, ಪ್ರತಿ ಬಾರಿಯಂತೆ ಈ ಬಾರಿಯೂ 'ರಾಜಕೀಯ ಗೂಂಡಾ' ತನ್ನನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು ಪ್ರಾರಂಭಿಸಿ-ದ್ದಾನೆ. ಈ ರೀತಿಯ ವಿಡಿಯೊವನ್ನು ತನ್ನ ಬೆಂಬಲಿಗರಿಂದ ಹಂಚಿಕೊಳ್ಳುವ ಮೂಲಕ ಅಪರಾಧದಿಂದ ತಪ್ಪಿಸಿಕೊಳ್ಳಬಹುದು ಎಂದು ಆತ ಭಾವಿಸಿದಂತಿದೆ. ಯಾರನ್ನಾದರೂ ಥಳಿಸುವಾಗ, ಯಾರಾದರೂ ವಿಡಿಯೊ ಮಾಡುತ್ತಾರೆಯೇ? ಮುಖ್ಯಮಂತ್ರಿಯವರ ಮನೆ ಮತ್ತು ಕೊಠಡಿಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದರೆ ಎಲ್ಲ ಸತ್ಯ ಬಹಿರಂಗವಾಗುತ್ತದೆ ಎಂದು ಹೇಳಿದ್ದಾರೆ.

ಈ ವಿಡಿಯೊದಲ್ಲಿ ಏನಿದೆ?: 'ನಾನು ಪೊಲೀಸರಿಗೆ ಕರೆ ಮಾಡಿದ್ದು, ಅವರು ಬರುವವರೆಗೆ ಕಾಯುತ್ತೇನೆ' ಎಂದು ಸ್ವಾತಿ ಹೇಳಿರುವುದು ವಿಡಿಯೊದಲ್ಲಿದೆ.

'ನಾನು (ನಿಮಗೆ) ಎಲ್ಲವನ್ನೂ ಹೇಳುತ್ತೇನೆ. ನಿಮ್ಮ ಡಿಸಿಪಿ ಜತೆ ಮಾತನಾಡುತ್ತೇನೆ. ಆತ ನನ್ನನ್ನು ಮುಟ್ಟಿದರೆ ಆತನನ್ನು ವಜಾಗೊಳಿಸಬೇಕಾಗುತ್ತದೆ' ಎಂದು ಭದ್ರತಾ ಸಿಬ್ಬಂದಿಗೆ ಸ್ವಾತಿ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ ಸಿಬ್ಬಂದಿಯೊಬ್ಬರ ವಿರುದ್ಧ ನಿಂದನೀಯ ಪದವನ್ನೂ ಅವರು ಬಳಸಿದ್ದಾರೆ. ಈ ವಿಡಿಯೊ ದೃಶ್ಯಾವಳಿಯ ಸತ್ಯಾಸತ್ಯತೆಯನ್ನು ಪೊಲೀಸರು ಇನ್ನೂ ಪರಿಶೀಲಿಸಿಲ್ಲ.

ಬಿಜೆಪಿ ಪಿತೂರಿ ಎಎಪಿ

ಒಂದನೇ ಪುಟದಿಂದ

ಈ ಕುರಿತು ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಎಎಪಿ ಸಚಿವೆ ಆತಿಶಿ, 'ಸಿ.ಎಂ ಜತೆ ಭೇಟಿಗೆ ಯಾವುದೇ ಸಮಯ ನಿಗದಿಯಾಗದಿದ್ದರೂ, ಸ್ವಾತಿ ಅವರು ಮುಖ್ಯಮಂತ್ರಿ ನಿವಾಸಕ್ಕೆ ಬಂದಿದ್ದರು. ಕೇಜ್ರಿವಾಲ್ ವಿರುದ್ಧ ಆರೋಪ ಮಾಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು' ಎಂದು ಆರೋಪಿಸಿದರು.

'ಮಾಲಿವಾಲ್ ಅವರು ಸುಳ್ಳು ಹೇಳಿರುವುದು ಬಹಿರಂಗವಾಗಿರುವ ವಿಡಿಯೊದಲ್ಲಿ ಸಾಬೀತಾಗಿದೆ. ತನ್ನ ಶರ್ಟ್ ಬಟನ್‌ಗಳನ್ನು ಹರಿದು ಹಾಕಲಾಗಿದೆ ಎಂದೆಲ್ಲ ಅವರು ಆರೋಪಿಸಿರುವುದು ಎಫ್‌ಐಆರ್‌ನಲ್ಲಿ ದಾಖಲಾಗಿದೆ. ಆದರೆ ಈ ವಿಡಿಯೊ ಸಂಪೂರ್ಣ ವಿಭಿನ್ನವಾದ ಚಿತ್ರಣವನ್ನೇ ನೀಡುತ್ತದೆ' ಎಂದು ಅವರು ಹೇಳಿದರು.

4 ತಿಂಗಳು; 430 ಕೊಲೆ, 198 ಅತ್ಯಾಚಾರ

ಒಂದನೇ ಪುಟದಿಂದ...

ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಪ್ರಕರಣಗಳೂ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಯುವ ಸಮೂಹ, ಡ್ರಗ್ಸ್ ವ್ಯಸನಿಗಳಾಗಿ ಅಪರಾಧ ಎಸಗುತ್ತಿರುವ ಬಗ್ಗೆಯೂ ಪೊಲೀಸರಿಗೆ ಮಾಹಿತಿಯಿದೆ. ಪೊಲೀಸರು, ನಿರಂತರವಾಗಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಸಾಗಾಟಗಾರರು ಹಾಗೂ ಮಾರಾಟಗಾರರನ್ನು ಬಂಧಿಸುತ್ತಿದ್ದಾರೆ. ಅಷ್ಟಾದರೂ, ಡ್ರಗ್ಸ್ ಜಾಲವನ್ನು ಸಂಪೂರ್ಣವಾಗಿ ಮಟ್ಟಹಾಕಲು ಪೊಲೀಸರಿಂದ ಸಾಧ್ಯವಾಗಿಲ್ಲ.

ಮಾಹಿತಿ ಇದ್ದರೂ ನಿರ್ಲಕ್ಷ್ಯ: 'ಕೆಲ ಅಪರಾಧಗಳ ಬಗ್ಗೆ ಪೊಲೀಸರಿಗೆ ಪೂರ್ವ ಮಾಹಿತಿ ಲಭ್ಯವಾಗಿರುತ್ತದೆ. ಇಂಥ ಪ್ರಕರಣಗಳಲ್ಲಿ ಪೊಲೀಸರು ನಿರ್ಲಕ್ಷ್ಯ ವಹಿಸುತ್ತಿದ್ದು, ಇದರಿಂದಾಗಿ ಅಪರಾಧಗಳು ಘಟಿಸುತ್ತಿವೆ. ಪೂರ್ವ ಮಾಹಿತಿಯನ್ನು ನಿರ್ಲಕ್ಷಿಸುವ ಅಧಿಕಾರಿಗಳ ಮೇಲೆ ಕಠಿಣ ಕ್ರಮಗಳನ್ನು ಜರುಗಿಸಿದರೆ ಮಾತ್ರ ಕೆಲ ಅಪರಾಧಗಳನ್ನು ನಿಯಂತ್ರಿಸಬಹುದು' ಎಂದು ಪೊಲೀಸ್ ನಿವೃತ್ತ ಅಧಿಕಾರಿಯೊಬ್ಬರು ಹೇಳಿದರು.

ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಅವರಿಗೆ ಆರೋಪಿ ಕಿರುಕುಳ ನೀಡುತ್ತಿದ್ದ ಬಗ್ಗೆ ಪೋಷಕರು ಠಾಣೆಗೆ ಮಾಹಿತಿ ನೀಡಿದ್ದರು. ಆದರೆ, ಪೊಲೀಸರು ಯಾವುದೇ ಕ್ರಮ ಜರುಗಿಸಿರಲಿಲ್ಲವೆಂಬ ಆರೋಪವಿದೆ. ಇದೇ ಕಾರಣಕ್ಕೆ, ಠಾಣೆ ಇನ್‌ಸ್ಪೆಕ್ಟರ್ ಚಂದ್ರಶೇಖರ ಚಿಕ್ಕೋಡಿ ಹಾಗೂ ಹೆಡ್ ಕಾನ್‌ಸ್ಟೆಬಲ್ ರೇಖಾ ಅವರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ. ಕರ್ತವ್ಯಲೋಪದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆಯೂ ಗೃಹ ಸಚಿವ ಜಿ. ಪರಮೇಶ್ವರ ಅವರು ಹುಬ್ಬಳ್ಳಿ-ಧಾರವಾಡ ಕಮಿಷನರ್ ಅವರಿಗೆ ಸೂಚನೆ ನೀಡಿದ್ದಾರೆ.

'ಪೊಲೀಸರ ಅಸಡ್ಡೆ'

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಯಥಾಪ್ರಕಾರವಿದೆ. ಸಿಬ್ಬಂದಿ ಕೊರತೆ ಇದ್ದರೂ ಪೊಲೀಸರು, ದಿನದ 24 ಗಂಟೆಯೂ ಕೆಲಸ ಮಾಡುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಚಿಕ್ಕಮಗಳೂರು ಹಾಗೂ ರಾಮನ-ಗರದಲ್ಲಿ ವಕೀಲರು ಹಾಗೂ ಪೊಲೀಸರ ನಡುವೆ ಇತ್ತೀಚೆಗೆ ಗಲಾಟೆಗಳು ನಡೆದಿದ್ದವು. ಪೊಲೀಸರ ಮೇಲೆಯೇ ಪ್ರಕರಣಗಳು ದಾಖಲಾಗಿದ್ದವು. ಸಂತ್ರಸ್ತ ಪೊಲೀಸರು ದೂರು ನೀಡಿದರೂ ಹಿರಿಯ ಅಧಿಕಾರಿಗಳು ಕ್ರಮ ಜರುಗಿ-ಸಿರಲಿಲ್ಲ. ಈ ಘಟನೆಯಿಂದ ಬಹುತೇಕ ಪೊಲೀಸರು ನೊಂದಿದ್ದಾರೆ. 'ನಮ್ಮ ಮೇಲೆ ಆದ ಅನ್ಯಾಯಕ್ಕೆ ನ್ಯಾಯ ಸಿಗಲಿಲ್ಲ. ಹೆಚ್ಚು ಕೆಲಸ ಮಾಡಿ ಏನು ಮಾಡುವುದು. ಸಂಬಳ ಬಂದರೆ, ಸಾಕು' ಎಂಬ ಮನಃಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆಯೇ ವಾಟ್ಸ್‌ಆ್ಯಪ್ ಹಾಗೂ ಇತರೆಡೆ ನಿತ್ಯವೂ ಚರ್ಚೆ ನಡೆಯುತ್ತಿದೆ' ಎಂದು ಪೊಲೀಸ್ ಇಲಾಖೆಯ ಕೆಲ ಸಿಬ್ಬಂದಿ ಹೇಳಿದರು.

'ಯುವತಿಯರೇ ಗುರಿ: ಪೋಷಕರಲ್ಲಿ ಆತಂಕ'

ಇತ್ತೀಚಿನ ದಿನಗಳಲ್ಲಿ ಯುವತಿಯರನ್ನು ಗುರಿಯಾಗಿಸಿಕೊಂಡು ಕೊಲೆ ಹಾಗೂ ಹಲ್ಲೆಯಂಥ ಘಟನೆಗಳು ನಡೆಯುತ್ತಿದ್ದು, ಇದರಿಂದ ಪೋಷಕರು ಆತಂಕಗೊಂಡಿರುವ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ.

'ನೇಹಾ ಹಿರೇಮಠ, ಅಂಜಲಿ ಅಂಬಿಗೇರ, ಬಾಲಕಿ ಮೀನಾ ಸಾವಿಗೆ ಕಾರಣರಾದವರಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂಬ ಆಗ್ರಹಗಳು ವ್ಯಕ್ತವಾಗಿವೆ. ಬೆಂಗಳೂರಿನ ಸುಬ್ರಹ್ಮಣ್ಯಪುರದಲ್ಲಿ ವಿದ್ಯಾರ್ಥಿನಿ ಪ್ರಭುದ್ಯಾ (21) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಇದೊಂದು ಕೊಲೆ ಎಂಬುದಾಗಿ ಹಲವರು ಆರೋಪಿಸುತ್ತಿದ್ದಾರೆ.

'ಹೆಣ್ಣು ಮಕ್ಕಳ ಮೇಲೆ ಮೇಲಿಂದ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಹೆಣ್ಣು ಮಕ್ಕಳನ್ನು ಸಂವೇದನಾಶೀಲರನ್ನಾಗಿಸಬೇಕಿದೆ. ಜೊತೆಗೆ, ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯದ ಮುಖದ ಬಗ್ಗೆ ತಿಳಿವಳಿಕೆ ಮೂಡಿಸಬೇಕಿದೆ. ಆತ್ಮರಕ್ಷಣಾ ಕಲೆಗಳನ್ನು ಕಲಿಸಬೇಕಿದೆ' ಎಂದು ಕೆಲವರು ಸಲಹೆ ನೀಡುತ್ತಿದ್ದಾರೆ.

'ಹೆಡೆ ಬಿಚ್ಚಿದ ಪಾತಕ – ಭೂಗತ ಲೋಕ'

ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ, ಸಿಬ್ಬಂದಿ ಮೈ ಮೇಲೆ ಬಾಡಿವೋರ್ನ್ ಕ್ಯಾಮೆರಾ ಹಾಗೂ ಆರೋಪಿಗಳಿಗೆ ಹೊಡೆದರೆ ನೂರೆಂಟು ತನಿಖೆಗಳು... ಇಂಥ ಸನ್ನಿವೇಶದಲ್ಲಿ-ರುವ ಪೊಲೀಸರು ತಮ್ಮತನವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ದಂಡ ಪ್ರಯೋಗವನ್ನೇ ಕೈಬಿಟ್ಟಿದ್ದಾರೆ. ಇದರಿಂದಲೇ, ಪಾತಕ-ಭೂಗತ ಲೋಕ ಹೆಡೆ ಬಿಚ್ಚುತ್ತಿದೆ. ಪೊಲೀಸರು ಎಂದರೆ, ಕವಡೆ ಕಾಸಿನ ಕಿಮ್ಮತ್ತಿಲ್ಲ. ಲಾಭದಾಯಕ ಹುದ್ದೆ ಕೊಡಿಸಿದ ರಾಜಕಾರಣಿಗಳಿಗೆ ಸಲಾಂ ಎನ್ನುತ್ತಿದ್ದಾರೆ. ಹಿರಿಯ ಅಧಿಕಾರಿಗಳ ಮಾತು ಕೇಳುತ್ತಿಲ್ಲ. ಇದು ಹೀಗೆ ಮುಂದುವರಿದರೆ, ಕಾನೂನು ಸುವ್ಯವಸ್ಥೆ ಅಧೋಗತಿಗೆ ಹೋಗಲಿದೆ.

ಎಸ್.ಕೆ. ಉಮೇಶ್, ನಿವೃತ್ತ ಎಸ್‌ಪಿ

ಅಯೋಧ್ಯೆ: ಭಕ್ತರ ಸಂಖ್ಯೆ ವಿರಳ

ಒಂದನೇ ಪುಟದಿಂದ

ಹಿಂದೆ, ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಲಾಲೂ ಸಿಂಗ್ ಅವರು ಸಮಾಜವಾದಿ ಪಕ್ಷದ ಅಭ್ಯರ್ಥಿ ಆನಂದ್ ಸೇನ್ ಯಾದವ್ ಅವರನ್ನು 65 ಸಾವಿರ ಮತಗಳಿಂದ ಪರಾಭವಗೊಳಿಸಿದ್ದರು. ಕಾಂಗ್ರೆಸ್ ಅಭ್ಯರ್ಥಿ ನಿರ್ಮಲ್ ಖಾತ್ರಿ ಅವರು 53 ಸಾವಿರ ಮತಗಳನ್ನು ಪಡೆದಿದ್ದರು. ಈಗ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಮೈತ್ರಿಯಾಗಿದ್ದು, ಬಿಜೆಪಿಯಲ್ಲಿ ತುಸು ಆತಂಕ ಮೂಡಿಸಿದೆ.

ಇದರ ಜೊತೆಗೆ ಕ್ಷೇತ್ರದಲ್ಲಿ ಜಾತಿ ಸಮೀಕರಣದ ಲೆಕ್ಕಾಚಾರವು ನಡೆದಿದೆ. ಯಾದವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಸುಮಾರು 1.5 ಲಕ್ಷ ಮುಸಲ್ಮಾ-ನರಿದ್ದರೆ, ಪರಿಶಿಷ್ಟರ ಸಂಖ್ಯೆ ಸುಮಾರು 4.5 ಲಕ್ಷ.

ರಾಜಕೀಯ ಪರಿಣತರ ಪ್ರಕಾರ, ಒಬಿಸಿ ಮತಗಳು ಮುಖ್ಯವಾಗಿ ಯಾದವ ಮತಗಳು ಕ್ಷೇತ್ರದ ಫಲಿತಾಂಶದಲ್ಲಿ ನಿರ್ಣಾಯಕವಾಗಿವೆ. ಕ್ಷೇತ್ರದಲ್ಲಿ 5ನೇ ಹಂತದಲ್ಲಿ ಮೇ 20ರಂದು ಮತದಾನ ನಡೆಯಲಿದೆ. ರಾಮಮಂದಿರ ವಿವಾದ ಮತದಾರರ ಮೇಲೆ ಪರಿಣಾಮ ಬೀರಿದೆಯಾ ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ಜೂನ್ 4ರವರೆಗೆ ಕಾಯಬೇಕು.

ತುರ್ತು ಭೂಸ್ಪರ್ಶ

ಪಣಜಿ (ಪಿಟಿಐ): ಭಾರತೀಯ ನೌಕಾಪಡೆಯ ವಿಮಾನವೊಂದು ಶುಕ್ರವಾರ ಗೋವಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ ಕಾರಣ, ಇಲ್ಲಿ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಗೋವಾ ವಿಮಾನನಿಲ್ದಾಣದ ನಿರ್ದೇಶಕ ಎಸ್‌ವಿಟಿ ಧನಂಜಯ ರಾವ್, 'ಸಂಜೆ 4.50ರಿಂದ 6.30ರವರೆಗೆ ರನ್‌ವೇ ಮುಚ್ಚಲಾಗಿತ್ತು. ಇದರಿಂದ ಮೂರು ವಿಮಾನಗಳ ಮಾರ್ಗ ಬದಲಾಯಿಸಲಾಯಿತು' ಎಂದು ತಿಳಿಸಿದರು.

'ಮದ್ದು ಅರೆಯಲು' ಮುಂದಾದ ಎಎಫ್‌ಐ

ಡೋಪಿಂಗ್ ಪ್ರಕರಣ ಸಾಬೀತಾದಲ್ಲಿ ಅಥ್ಲೀಟ್ ಜೊತೆ ಕೋಚ್‌ಗೂ ದಂಡ

